ಶುಕ್ರವಾರ, ಜುಲೈ 12, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜನಸಂಖ್ಯಾ ದಿನ

‘ವಿಶ್ವ ಜನಸಂಖ್ಯಾ ದಿನ’ವಾದ ಗುರುವಾರ ಮುಂಬೈನ ವಾಡಿಯಾ ಆಸ್ಪತ್ರೆಯಲ್ಲಿ ಜನಿಸಿದ ಕಂದಮ್ಮಗಳು

ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಹಗರಣ: ತನಿಖೆಗೆ ನೀಡಿದ ಅವಧಿ ಎರಡು ವಾರವೋ? ನಾಲ್ಕು ವಾರವೋ?

ಅಧಿವೇಶನದಲ್ಲೇ 'ಕೈ' ಸೇರುತ್ತಾ ತನಿಖಾ ವರದಿ?

• ಆರ್. ಜಿತೇಂದ್ರ

ಮೈಸೂರು: ಮುಡಾದಲ್ಲಿ ನಡೆದಿರುವ ನಿವೇಶನಗಳ ಅಕ್ರಮ ಹಂಚಿಕೆಯ ತನಿಖೆಗಾಗಿ ಸರ್ಕಾರವು ರಚಿಸಿರುವ ನಾಲ್ವರು ತಜ್ಞರ ಸಮಿತಿಯ ವರದಿಯು ವಿಧಾನ ಮಂಡಲ ಅಧಿವೇಶನದ ಸಂದರ್ಭದಲ್ಲೇ ಸರ್ಕಾರದ ಕೈ ಸೇರುತ್ತದೆಯೇ ಅಥವಾ ಸಮಿತಿಗೆ ನೀಡಿರುವ ಗಡುವು ಇನ್ನೆರಡು ವಾರ ವಿಸ್ತರಣೆಯಾಗಲಿದೆಯೇ ಎಂಬ ಕುತೂಹಲ ಮೂಡಿದೆ.

ನಗರಾಭಿವೃದ್ಧಿ ಇಲಾಖೆಯು ಜುಲೈ 1ರಂದು ಸಮಿತಿ ರಚಿಸಿ, 15 ದಿನದೊಳಗೆ ವರದಿ ನೀಡುವಂತೆ ಸೂಚಿಸಿತ್ತು. ಜುಲೈ 15ರಂದು ವಿಧಾನಮಂಡಲ ಅಧಿವೇಶನ ಆರಂಭವಾಗಲಿದ್ದು, ಅಂದೇ ಸರ್ಕಾರವು ಸಮಿತಿಗೆ ನೀಡಿರುವ ಕಾಲಾವಧಿಯು ಪೂರ್ಣಗೊಳ್ಳಲಿದೆ.

'ತನಿಖೆಗಾಗಿ ಸಮಿತಿಗೆ ನಾಲ್ಕು ವಾರ ಕಾಲಾವಕಾಶ ನೀಡಿದ್ದೇವೆ' ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಹೇಳಿದ್ದರು. ಆದರೆ ಸರ್ಕಾರಿ ಆದೇಶದಲ್ಲಿ, '15 ದಿನಗಳ ಒಳಗೆ ವರದಿ ನೀಡಬೇಕು' ಎಂದು ಸೂಚಿಸಲಾಗಿದೆ.

ತನಿಖೆ ಪ್ರಗತಿಯಲ್ಲಿ: ಇಲಾಖೆಯ ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಹಾಗೂ ಗ್ರಾಮಾಂತರ ಯೋಜನಾ ವಿಭಾಗದ ಆಯುಕ್ತ ಆರ್. ವೆಂಕಟಾಚಲಪತಿ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಹೆಚ್ಚುವರಿ ನಿರ್ದೇಶಕ ಎಂ.ಸಿ. ಶಶಿಕುಮಾರ್, ಜಂಟಿ ನಿರ್ದೇಶಕಿ ಶಾಂತಲಾ ಹಾಗೂ ಉಪ ನಿರ್ದೇಶಕ ಪ್ರಕಾಶ್ ಅವರನ್ನು ಒಳಗೊಂಡ ಸಮಿತಿಯು ತನಿಖೆ ನಡೆಸುತ್ತಿದೆ. ಈ ಹಿಂದೆ ಬಿಜೆಪಿ ಸರ್ಕಾರವು ಮುಡಾ ಅಕ್ರಮಗಳ ತನಿಖೆಗಾಗಿ ಟಿ.ವಿ. ಮುರಳಿ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿಯಲ್ಲಿಯೂ ಶಾಂತಲಾ ಸದಸ್ಯರಾಗಿದ್ದರು.

ಜುಲೈ 3ರಿಂದ ನಗರದಲ್ಲೇ ಬೀಡುಬಿಟ್ಟಿರುವ ಸಮಿತಿ ಸದಸ್ಯರು, ಮುಡಾದ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಬೆವರಿಳಿಸತೊಡಗಿದ್ದಾರೆ. ದಾಖಲೆಗಳ ಪರಿಶೀಲನೆ ತೀವ್ರಗೊಂಡಿದೆ. ಮುಡಾದ ಕಾಯಂ ಸಿಬ್ಬಂದಿ ಜೊತೆಗೆ ಗುತ್ತಿಗೆ ಸಿಬ್ಬಂದಿಯನ್ನೂ ವಿಚಾರಣೆಗೆ ಗುರಿಪಡಿಸಿದೆ.

ವರ್ಷದಲ್ಲಿ ಐವರಿಗೆ 3.37 ಲಕ್ಷ ಚ.ಅಡಿ ಜಾಗ– ಶಾಸಕ ಶ್ರೀವತ್ಸ

ಪ್ರಜಾವಾಣಿ ವಾರ್ತೆ

ಮೈಸೂರು: '2023ರ ಮಾರ್ಚ್‌ನಿಂದ ಈವರೆಗೆ ಒಟ್ಟು 3.37 ಲಕ್ಷ ಚದರ ಅಡಿ ಜಾಗವನ್ನು ಕೇವಲ ಐವರಿಗೆ ಮುಡಾ ನೀಡಿದೆ' ಎಂದು ಶಾಸಕ ಟಿ.ಎಸ್.ಶ್ರೀವತ್ಸ ಆರೋಪಿಸಿದರು.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿ, 'ಕ್ರಮವಾಗಿ ಶಾಂತಮ್ಮ 81 ಸಾವಿರ, ನಾಗರಾಜು 98 ಸಾವಿರ, ಪಾಪಣ್ಣ 33 ಸಾವಿರ, ಅಬ್ದುಲ್ ವಾಹಿದ್ 55ಸಾವಿರ ಹಾಗೂ ಮತ್ತೊಬ್ಬರಿಗೆ 70 ಸಾವಿರ ಚದರ ಅಡಿ ಜಾಗವನ್ನು ಕೊಡಲಾಗಿದೆ. ಅವುಗಳನ್ನೇ (20X30 ಅಡಿ) ನಿವೇಶನ ಮಾಡಿದ್ದರೆ 545 ಬಡವರಿಗೆ ನೀಡಬಹುದಾ-ಗಿತ್ತು' ಎಂದು ಪ್ರತಿಪಾದಿಸಿದರು.

'1969ರಲ್ಲಿ ಭೂಸ್ವಾಧೀನ ಪಡಿಸಿಕೊಂಡ ಪ್ರಕರಣದಲ್ಲಿ ಈಗ ಭೂಪರಿಹಾರ ನೀಡಲಾಗುತ್ತಿದೆ ಎಂದು ತೋರಿಸಿದ ಉದಾಹರಣೆಯೂ ಇದೆ. 1978ರಲ್ಲಿ ಗೋಕುಲಂ ಬಡಾವಣೆಯಲ್ಲಿ ಪಡೆದಿದ್ದಕ್ಕೆ ಈಗ ಜಾಗ ಕೊಡಲಾಗಿದೆ ಎಂದು ತಿಳಿಸಿದ್ದಾರೆ.

ಟಿ.ಎಸ್.ಶ್ರೀವತ್ಸ

ಆ ಹಗರಣವೀಗ ಮುಖ್ಯಮಂತ್ರಿ ಮನೆಯ ಬಾಗಿಲಿನವರೆಗೂ ಬಂದಿದೆ. ಮುಖ್ಯಮಂತ್ರಿಯವರು ₹ 62 ಕೋಟಿ ಹಣ ಕೇಳುತ್ತಿದ್ದಾರೆ. ಮೈಸೂರಿನಲ್ಲಿ ಒಂದು ಎಕರೆಗೆ ₹20 ಕೋಟಿ ಮೌಲ್ಯ ಎಲ್ಲಿದೆ' ಎಂದು ಕೇಳಿದರು. 'ಮುಡಾ ಅಕ್ರಮಕ್ಕೆ ಸಂಬಂಧಿಸಿ 2023ರ ನವೆಂಬರ್‌ನಲ್ಲೇ ತಾಂತ್ರಿಕ ಸಮಿತಿಯು ವರದಿ ಸಲ್ಲಿಸಿದ್ದರೂ, ಸರ್ಕಾರ ಕ್ರಮವನ್ನೇ ಜರುಗಿಸಿಲ್ಲ' ಎಂದು ದೂರಿದರು.

'ಮುಡಾದಲ್ಲಿ ನಡೆದಿರುವ ಹಗರಣಗಳ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿ ಜುಲೈ 12ರಂದು ಬೆಳಿಗ್ಗೆ 10.30ಕ್ಕೆ ಮಹಾರಾಜ ಕಾಲೇಜು ಮೈದಾನದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿದಂತೆ ರಾಜ್ಯದ ನಾಯಕರು ಪಾಲ್ಗೊಳ್ಳಲಿದ್ದಾರೆ. ಮೈಸೂರು, ಚಾಮರಾಜನಗರ ಹಾಗೂ ಮಂಡ್ಯದಿಂದ 10ಸಾವಿರ ಕಾರ್ಯಕರ್ತರು ಬರಲಿದ್ದಾರೆ' ಎಂದರು.'ಮುಖ್ಯಮಂತ್ರಿ ಸಿದ್ದರಾಮಯ್ಯ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನಾ ಸಭೆ ಹಮ್ಮಿಕೊಳ್ಳಲಾಗಿದೆ' ಎಂದು ಪಕ್ಷದ ನಗರ ಘಟಕದ ಅಧ್ಯಕ್ಷ ಎಲ್. ನಾಗೇಂದ್ರ ತಿಳಿಸಿದರು.

ನಿಯಮ ಉಲ್ಲಂಘಿಸಿ ₹250 ಕೋಟಿ ಠೇವಣಿ

ಮೈಸೂರು: ಮುಡಾ ಖಾತೆಯಲ್ಲಿದ್ದ ₹250 ಕೋಟಿ ಠೇವಣಿಯನ್ನು ಅಧಿಕಾರಿಗಳು ನಿಯಮ ಉಲ್ಲಂಘಿಸಿ ಬ್ಯಾಂಕ್‌ವೊಂದರಲ್ಲಿ ನಿಶ್ಚಿತ ಠೇವಣಿ ಇಡಲು ಮುಂದಾಗಿ, ನಂತರ ವಾಪಸ್ ಪಡೆದಿದ್ದನ್ನು ಟಿ.ವಿ. ಮುರಳಿ ನೇತೃತ್ವದ ತಾಂತ್ರಿಕ ಸಮಿತಿಯು ವರದಿಯಲ್ಲಿ ಉಲ್ಲೇಖಿಸಿದೆ. ವರದಿಯ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

2022ರ ಮಾರ್ಚ್ 2ರಂದು ಅಂದಿನ ಆಯುಕ್ತರು ಹಣವನ್ನು ಎಸ್‌ಬಿಐನ ಲಕ್ಷ್ಮಿಪುರಂ ಶಾಖೆಯಲ್ಲಿ ಖಾತೆ ತೆರೆದು ಒಂದು ವರ್ಷದ ಅವಧಿಗೆ ಶೇ 3.75 ಬಡ್ಡಿದರದಂತೆ ಠೇವಣಿ ಇಡಲು ಕೋರಿ ಚೆಕ್ ಕಳುಹಿಸಿದ್ದರು. ಅದಕ್ಕೆ ಅಂದಿನ ಅಧ್ಯಕ್ಷ ಎಚ್‌.ವಿ. ರಾಜೀವ್ ಆಕ್ಷೇಪಿಸಿದ್ದರು. ನಂತರ ಆಯುಕ್ತರು ಚೆಕ್ ಹಿಂಪಡೆದಿದ್ದರು. ಈ ಕುರಿತು ತಾಂತ್ರಿಕ ಸಮಿತಿ ಎದುರು ದೂರು ದಾಖಲಾಗಿತ್ತು.

'ಪ್ರಾಧಿಕಾರದ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇಡಲು ಮಾರ್ಗಸೂಚಿ ಇದೆ. ಮೊದಲಿಗೆ ಆಂತರಿಕ ಹೂಡಿಕೆ ಉಪ ಸಮಿತಿಯನ್ನು ರಚಿಸಿ, ಅಲ್ಲಿ ವಿಷಯ ಮಂಡಿಸಿ ಅನುಮತಿ ಪಡೆಯಬೇಕು. ಸರ್ಕಾರದ ಇ–ಪೋರ್ಟಲ್ ಮೂಲಕ ಬಿಡ್ ಆಹ್ವಾನಿಸಿ ಗರಿಷ್ಠ ಬಿಡ್ ಪಡೆದ ಬ್ಯಾಂಕಿನಲ್ಲಿ ಠೇವಣಿ ಇಡಬೇಕಿತ್ತು. ಆದರೆ ಆಯುಕ್ತರು ಸರ್ಕಾರದ ಸುತ್ತೋಲೆಗಳಿಗೆ ವ್ಯತಿರಿಕ್ತವಾಗಿ ಕೆಳ ಹಂತದ ಅಧಿಕಾರಿಗಳಿಗೆ ಸೂಚಿಸಿ ಠೇವಣಿ ಇರಿಸಿದ್ದಾರೆ' ಎಂದು ಸಮಿತಿಯು ಸರ್ಕಾರಕ್ಕೆ ವರದಿ ನೀಡಿತ್ತು.

'ಪ್ರಕರಣ ಬೆಳಕಿಗೆ ಬರುತ್ತಲೇ ಠೇವಣಿ ಆದೇಶ ಹಿಂಪಡೆಯುವಂತೆ ಆಯುಕ್ತರಿಗೆ ಸೂಚಿಸಿದ್ದೆ. ನಂತರ ಅಧಿಕಾರಿಗಳು ಬ್ಯಾಂಕ್‌ಗೆ ನೀಡಿದ್ದ ₹250 ಕೋಟಿ ಮೊತ್ತದ ಚೆಕ್ ಹಿಂಪಡೆದಿದ್ದರು' ಎಂದು ಎಚ್‌.ವಿ. ರಾಜೀವ್ 'ಪ್ರಜಾವಾಣಿ'ಗೆ ತಿಳಿಸಿದರು.

ಮಾಹಿತಿಯೇ ಇಲ್ಲ: ಮುಡಾ ಅಕ್ರಮ ಕುರಿತು ಟಿ.ವಿ. ಮುರಳಿ ನೇತೃತ್ವದ ಸಮಿತಿಯು ತನಿಖೆ ನಡೆಸಿ ಸರ್ಕಾರಕ್ಕೆ ವರದಿ ನೀಡಿದ ಕುರಿತು ಮುಡಾ ಸಮಿತಿಯ ಕೆಲವು ಸದಸ್ಯರಿಗೇ ಮಾಹಿತಿಯೇ ಇಲ್ಲ. 'ಅಂತಹದ್ದೊಂದು ಸಮಿತಿ ರಚನೆ ಆಗಿದ್ದೇ ಗೊತ್ತಿಲ್ಲ. ಆ ವರದಿಗಳ ಬಗ್ಗೆ ಮಾಹಿತಿ ಇಲ್ಲ' ಎಂದು ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ಮರಿಗೌಡ ವಿರುದ್ಧ ಮುಖ್ಯಮಂತ್ರಿ ಗರಂ

ಮುಡಾದ ಈಚಿನ ಬೆಳವಣಿಗೆಗಳ ಕುರಿತು ಅಧ್ಯಕ್ಷ ಕೆ. ಮರಿಗೌಡ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಗರಂ ಆಗಿದ್ದು, ಮೈಸೂರು ಪ್ರವಾಸದ ವೇಳೆ ಅಧ್ಯಕ್ಷರನ್ನು ತೀವ್ರ ತರಾಟೆಗೆ ತೆಗೆದುಕೊಂಡರು ಎನ್ನಲಾಗಿದೆ.

ಮುಡಾ ಹಗರಣಕ್ಕೆ ಸಂಬಂಧಿಸಿ ಅಧ್ಯಕ್ಷರ ಪತ್ರ ವ್ಯವಹಾರಗಳು ಹಾಗೂ ನಂತರದ ಬೆಳವಣಿಗೆಗಳು ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್‌ಗೆ ಮುಜುಗರ ಉಂಟುಮಾಡಿವೆ. ಈ ಹಿನ್ನೆಲೆಯಲ್ಲಿ ಮರಿಗೌಡರನ್ನು ಸಿದ್ದರಾಮಯ್ಯ ಪ್ರಶ್ನಿಸಿದರು. ಕಾಂಗ್ರೆಸ್ ಒಳಗಿನ ಗುಂಪುಗಾರಿಕೆ ವಿರುದ್ಧವೂ ಆಕ್ಷೇಪ ವ್ಯಕ್ತಪಡಿಸಿದರು ಎಂದು ತಿಳಿದುಬಂದಿದೆ.

ಅಧಿಕಾರಿಗಳೇ ಹೊಣೆ: ಜಿಟಿಡಿ

ಮೈಸೂರು: 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ನಿವೇಶನಗಳ ಹಂಚಿಕೆ ಅಕ್ರಮಗಳಿಗೆ ಅಧಿಕಾರಿಗಳೇ ಹೊಣೆ. ಶಾಸಕರ ಪಾತ್ರವಿಲ್ಲ' ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಪ್ರತಿಪಾದಿಸಿದರು.

'ಅಕ್ರಮ ಎನ್ನಲಾಗಿರುವ ಪ್ರಕರಣಗಳು ಪ್ರಾಧಿಕಾರದ ಸಭೆಯಲ್ಲಿ ಚರ್ಚೆಗೆ ಬಂದಿಲ್ಲ. ಅರ್ಜಿಗಳನ್ನು ಪರಿಶೀಲಿಸಿ ನಿವೇಶನ ನೀಡುವುದು ಅಧಿಕಾರಿಗಳ ಕರ್ತವ್ಯ. ಶಾಸಕರೇ ಶಿಫಾರಸು ಮಾಡಿದರೂ ಅಧಿಕಾರಿಗಳು ಪರಿಶೀಲಿಸಿ ತೀರ್ಮಾನಿಸಬೇಕು. ಅವರ ಲೋಪದಿಂದಲೇ ಇಷ್ಟೆಲ್ಲ ಸುದ್ದಿಯಾಗುತ್ತಿದೆ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

'50:50 ಅನುಪಾತದಲ್ಲಿ ಈ ಹಿಂದೆಯೂ ಅರ್ಹರಿಗೆ ಬದಲಿ ನಿವೇಶನ ನೀಡಲಾಗಿದೆ. ಆದರೆ, ಲೋಕಸಭೆ ಚುನಾವಣೆ ನೀತಿಸಂಹಿತೆ ಅವಧಿಯ ಮೂರು ತಿಂಗಳಲ್ಲಿ ಅತಿಹೆಚ್ಚು ಬದಲಿ ನಿವೇಶನ ಮಂಜೂರಾಗಿದೆ. ಕಾಂಗ್ರೆಸ್ ಅವಧಿಯಲ್ಲಿಯೇ ಹೆಚ್ಚು ಬದಲಿ ನಿವೇಶನ ನೀಡಿದ್ದು, ಆಯುಕ್ತರೇ ಹೊಣೆ' ಎಂದರು.

'ನನ್ನ ಬಳಿಯೂ ಮುಡಾದ ನೂರಕ್ಕೂ ಹೆಚ್ಚು ನಿವೇಶನಗಳಿವೆ ಎಂದು ಕೆಲವರು ಆರೋಪಿಸಿದ್ದಾರೆ. ಅಂತಹ ಒಂದು ನಿವೇಶನ ತೋರಿಸಿದರೂ ಅವರ ಹೆಸರಿಗೇ ಬರೆದುಕೊಡುತ್ತೇನೆ' ಎಂದು ಸವಾಲು ಹಾಕಿದರು.

'ಶಾಸಕರೇ ಫೈಲ್ ಹಿಡಿದು ಬರುತ್ತಾರೆ' ಎಂಬ ಮಾಜಿ ಸಚಿವ ಎಸ್‌.ಟಿ. ಸೋಮಶೇಖರ್ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, 'ಯಾವ ಶಾಸಕರೂ ಸೈಟು ಕೇಳಲು ಹೋಗಿಲ್ಲ. ಆಗ ಅವರದ್ದೇ ಸರ್ಕಾರ ಇತ್ತು. ಯಾಕೆ ಕ್ರಮ ಕೈಗೊಳ್ಳಲಿಲ್ಲ' ಎಂದು ಪ್ರಶ್ನಿಸಿದರು.

'ಮುಡಾ ಸಮಿತಿಯಿಂದ ಶಾಸಕರನ್ನು ಕೈ ಬಿಡುವ ಕುರಿತು ಪ್ರತಿಕ್ರಿಯಿಸಿ ' ಈಗ ಅಕ್ರಮ ಎಸಗಿರುವುದು ಅಧಿಕಾರಿಗಳಾ ಅಥವಾ ಶಾಸಕರಾ' ಎಂದು ಮರು ಪ್ರಶ್ನಿಸಿದರು.

ಸುದ್ದಿ 2 ನಿಮಿಷ

ಸಿಬಿಐ ತನಿಖೆ ಕೋರಿ ಸಿಜೆಗೆ ಶಾಸಕ ಯತ್ನಾಳ ಪತ್ರ

ಬೆಂಗಳೂರು: 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ-ದಲ್ಲಿ (ಮುಡಾ) ನಡೆದಿರುವ ನಿವೇಶನಗಳ ಅಕ್ರಮ ಹಂಚಿಕೆಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿದ್ದು ಹಗರಣವನ್ನು ಕೂಡಲೇ ಸಿಬಿಐ ತನಿಖೆಗೆ ವಹಿಸಬೇಕು' ಎಂದು ಕೋರಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೈಕೋರ್ಟ್ ಮುಖ್ಯ ನ್ಯಾಯ ಮೂರ್ತಿಯವರಿಗೆ ಪತ್ರ ಬರೆದಿದ್ದಾರೆ.

ಈ ಸಂಬಂಧ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯ ಮೂರ್ತಿಯವರಿಗೆ (ಸಿ.ಜೆ) ಬುಧವಾರ ಎರಡು ಪುಟಗಳ ಪತ್ರ ಬರೆದಿರುವ ಅವರು, 'ಈ ಹಗರಣದಲ್ಲಿ ಮುಖ್ಯಮಂತ್ರಿ ಪತ್ನಿ ಪಾರ್ವತಿ ಅವರಿಗೆ ಒಟ್ಟು 14 ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿರುವುದು ಮಾಧ್ಯಮಗಳ ಮುಖಾಂತರ ಬೆಳಕಿಗೆ ಬರುತ್ತಿದ್ದಂತೆಯೇ ರಾಜ್ಯದ ಸಂಪುಟ ದರ್ಜೆ ಸಚಿವರೊಬ್ಬರು ಮುಡಾದಲ್ಲಿದ್ದ ಕಡತಗಳನ್ನು ಬೆಂಗಳೂರಿಗೆ ತರಿಸಿಕೊಂಡಿ-ದ್ದಾರೆ. ಇದು ಭಾರಿ ಭ್ರಷ್ಟಾಚಾರ ಮುಚ್ಚಿಹಾಕುವ ಪ್ರಯತ್ನ' ಎಂದು ಪತ್ರದಲ್ಲಿ ದೂರಲಾಗಿದೆ.

'ಹಗರಣದ ಗಾಂಭೀರ್ಯವನ್ನು ಪರಿಗಣಿಸಿ ತಾವು ಇದನ್ನು ಸ್ವಯಂ ಪ್ರೇರಿತವಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನಾಗಿ ದಾಖಲಿಸಿಕೊಂಡು; ಸಿಬಿಐ ತನಿಖೆಗೆ ಒಪ್ಪಿಸಬೇಕು. ತನಿಖೆಯು ಹೈಕೋರ್ಟ್ ನಿಗಾದಲ್ಲಿ ನಡೆ-ಯುವಂತಾಗಬೇಕು' ಎಂದು ಕೋರಿದ್ದಾರೆ.

ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿಕಾರ ಮೊಟಕು

ಮೈಸೂರು: ಮುಡಾ ಹಗರಣದ ಬೆನ್ನಲ್ಲೇ, ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ ಇದ್ದ ಅಧಿಕಾರವನ್ನು ನಗರಾಭಿವೃದ್ಧಿ ಇಲಾಖೆಯು ಮೊಟಕುಗೊಳಿಸಿದೆ. ಅದನ್ನು ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದ ಆಯುಕ್ತರಿಗೆ ವರ್ಗಾಯಿಸಿದೆ.

ಈ ಕುರಿತು ಜುಲೈ 8ರಂದು ಆದೇಶ ಹೊರಡಿಸಿದ್ದು, ಎಲ್ಲ ನಗರಾಭಿ ವೃದ್ಧಿ ಪ್ರಾಧಿಕಾರಗಳ ಬಜೆಟ್ ಪರಿಶೀಲನೆ ಮತ್ತು ಅನುಮೋದನೆ, ಆಡಿಟ್ ವರದಿಗಳ ಪರಿಶೀಲನೆಯನ್ನು ಆಯುಕ್ತಾಲಯದ ಆಯುಕ್ತರೇ ಮಾಡಲಿದ್ದಾರೆ. ಪ್ರಾಧಿಕಾರಗಳ ಸಭೆಗಳ ನಡಾವಳಿಗಳನ್ನು ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡುವ ಮತ್ತು ₹1 ಕೋಟಿ ಮೇಲ್ಪಟ್ಟ ಹಣಕಾಸಿನ ವ್ಯವಹಾರಗಳ ನಿರ್ವಹಣೆಯ ಜವಾಬ್ದಾರಿಯನ್ನೂ ನಿರ್ವಹಿಸಲಿದ್ದಾರೆ.

ಪ್ರಾಧಿಕಾರಗಳ ಚಟುವಟಿಕೆಗಳು, ಸಿಬ್ಬಂದಿ ಮೇಲೆ ನಿಗಾ ಇಡುವ ಜವಾಬ್ದಾರಿಯನ್ನೂ ಈ ಆಯುಕ್ತರಿಗೆ ನೀಡಲಾಗಿದೆ. ಪ್ರಾಧಿಕಾರಗಳ ಮೂಲಕ ಸರ್ಕಾರಕ್ಕೆ ಸಲ್ಲಿಕೆ ಆಗುವ ಎಲ್ಲ ದಾಖಲೆಗಳೂ ಇದೇ ಆಯುಕ್ತರ ಮುಖಾಂತರ ಹೋಗಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಪ್ರಜ್ವಲ್ ರೇವಣ್ಣ ಅರ್ಜಿ: ಎಸ್‌ಐಟಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಪ್ರಜ್ವಲ್ ರೇವಣ್ಣ

ಬೆಂಗಳೂರು: ಮಹಿಳೆಯೊಬ್ಬರ ಬೆತ್ತಲೆ ವಿಡಿಯೊ ಮಾಡಿಕೊಂಡು ಅವರನ್ನು ಬ್ಲ್ಯಾಕ್‌ಮೇಲ್ ಮಾಡಿದ ಆರೋಪ ಎದುರಿಸುತ್ತಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ನಿರೀಕ್ಷಣಾ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಎಸ್‌ಐಟಿಗೆ ನೋಟಿಸ್ ಜಾರಿಗೊಳಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಈ ಸಂಬಂಧ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸ-ಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ (ಸಿಸಿಎಚ್-82) ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ವಿಚಾರಣೆ ನಡೆಸಿದರು.

ಎಸ್‌ಐಟಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಾಲಯ ವಿಚಾರಣೆಯನ್ನು ಇದೇ 12 ಕ್ಕೆ ಮುಂದೂಡಿದೆ.

'ಮಗುವಿನ ಶಾಲಾ ಶುಲ್ಕ ತುಂಬಲು ಸಹಾಯ ಮಾಡುವ ಭರವಸೆ ನೀಡಿ ಮಹಿಳೆಯ ಮೊಬೈಲ್ ನಂಬರ್ ಸಂಗ್ರಹಿಸಿ ನಂತರ ಆಕೆಯ ಬೆತ್ತಲೆ ವಿಡಿಯೊ ಮಾಡಿಕೊಂಡು ಬ್ಲ್ಯಾಕ್‌ಮೇಲ್ ಮಾಡಿದ್ದಾರೆ' ಎಂಬ ಆರೋಪವನ್ನು ಪ್ರಜ್ವಲ್ ಎದುರಿಸುತ್ತಿದ್ದಾರೆ.

ಹೊಸಕುಂದವಾಡ: 24 ಗಂಟೆಯಲ್ಲಿ 7 ಸಾವು

ಸ್ಮಶಾನ ಜಾಗಕ್ಕೆ ಒತ್ತಾಯಿಸಿ ಗ್ರಾಮಸ್ಥರ ಪ್ರತಿಭಟನೆ; ತಹಶೀಲ್ದಾರ್ ಮಧ್ಯಸ್ಥಿಕೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ತಾಲ್ಲೂಕಿನ ಹೊಸ ಕುಂದವಾಡ ಗ್ರಾಮದಲ್ಲಿ 3 ದಿನಗಳ ಹಸುಗೂಸು ಸೇರಿ 7 ಜನರು 24 ಗಂಟೆಗಳ ಅವಧಿಯಲ್ಲಿ ಮೃತಪಟ್ಟಿದ್ದಾರೆ.

ವಯೋಸಹಜ ಅನಾರೋಗ್ಯ, ಕಾಯಿಲೆ ಮತ್ತಿತರ ಕಾರಣಗಳಿಂದ 6 ಜನ ಗುರುವಾರ ಬೆಳಿಗ್ಗೆ ಹಾಗೂ ವೃದ್ಧೆಯೊಬ್ಬರು ಬುಧವಾರ ರಾತ್ರಿ ಮೃತ-ಪಟ್ಟಿದ್ದರಿಂದ ಗ್ರಾಮದ ಜನರಲ್ಲಿ ಆತಂಕ ಉಂಟಾಗಿತ್ತು.

ಎನ್‌.ಮಾರಮ್ಮ (70), ಈರಮ್ಮ (60), ಶಾಂತಮ್ಮ (65) ಭೀಮವ್ವ (70) ವಯೋಸಹಜ ಅನಾರೋಗ್ಯದಿಂದ ಬಳಲಿ ಮೃತಪಟ್ಟಿದ್ದಾರೆ. ಸಂತೋಷ (30), ಸುನೀಲ್ (25) ಹಾಗೂ ಮೂರು ದಿನದ ನವಜಾತ ಶಿಶು ಅನಾರೋಗ್ಯ ಕಾರಣ ಮೃತಪಟ್ಟಿದ್ದಾರೆ.

24 ಗಂಟೆ ಅವಧಿಯಲ್ಲಿ ಏಳು ಜನರು ಮೃತಪಟ್ಟ ಕಾರಣ ಅಂತ್ಯಕ್ರಿಯೆ ನಡೆಸಲು ಸ್ಮಶಾನ ಇಲ್ಲ ಎಂದು ದೂರಿ ಗ್ರಾಮಸ್ಥರು ಗುರುವಾರ ಮಧ್ಯಾಹ್ನ ಪ್ರತಿಭಟನೆ ನಡೆಸಿದರು.

ಇದುವರೆಗೂ ಪಕ್ಕದ ಹಳೆಕುಂದ ವಾಡ ಗ್ರಾಮದಲ್ಲಿ ಗ್ರಾಮಸ್ಥರು ಶವಸಂಸ್ಕಾರ ಮಾಡುತ್ತಿದ್ದರು. ಆದರೆ ಮಾರಿ ಜಾತ್ರೆ ಮಾಡುವ ವಿಚಾರದಲ್ಲಿ ಎರಡೂ ಗ್ರಾಮಗಳ ಜನರ ಮಧ್ಯೆ ಮನಸ್ತಾಪವಾಗಿತ್ತು. ಈ ಕಾರಣ ಹಳೆಕುಂದವಾಡದ ಜನರು ಪಕ್ಕದ ಊರಿನವರು ಸತ್ತಾಗ ಶವಸಂಸ್ಕಾರಕ್ಕೆ ಅವಕಾಶ ನಿರಾಕರಿಸಿದ್ದರು.

ಪ್ರತಿಭಟನೆ ಹಿನ್ನೆಲೆಯಲ್ಲಿ ಸ್ಥಳಕ್ಕೆ ತಹಶೀಲ್ದಾರ್ ಹಾಗೂ ಅಧಿಕಾರಿಗಳು ಭೇಟಿ ನೀಡಿ ಜನರ ಸಮಸ್ಯೆ ಆಲಿಸಿದರು.

'7000ಕ್ಕೂ ಅಧಿಕ ಜನಸಂಖ್ಯೆ ಇರುವ ಗ್ರಾಮದಲ್ಲಿ ಸ್ಮಶಾನ ಇಲ್ಲ. ಗ್ರಾಮದಲ್ಲಿ ಸ್ಮಶಾನಕ್ಕಾಗಿ 3 ಎಕರೆ ಸ್ಥಳ ಗುರುತಿಸಲಾಗಿದೆ. ಅಲ್ಲಿ ಸ್ಮಶಾನ ಮಂಜೂರು ಮಾಡಬೇಕು ಎಂದು ಒತ್ತಾಯಿಸಿ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಆದರೂ ಅಧಿಕಾರಿಗಳು, ಜನಪ್ರತಿನಿಧಿಗಳು ಕ್ರಮ ಕೈಗೊಂಡಿಲ್ಲ' ಎಂದು ಗ್ರಾಮದ ಮುಖಂಡ ಮಹೇಶಣ್ಣ ಜಿ., ಅಣ್ಣಪ್ಪ ಬಿ., ಶಿವಕುಮಾರ್ ದೂರಿದರು.

'ಕುಂದವಾಡ ಗ್ರಾಮಕ್ಕೆ ಹಳೆಕುಂದ-ವಾಡದಲ್ಲಿ ಈಗಾಗಲೇ 3 ಎಕರೆ ಸ್ಮಶಾನ ಭೂಮಿ ಇದೆ. ಗ್ರಾಮಸ್ಥರು ಹೆಚ್ಚುವರಿ ಸ್ಮಶಾನ ಜಾಗಕ್ಕಾಗಿ ಮನವಿ ಸಲ್ಲಿಸಿದ್ದಾರೆ. ಅದಕ್ಕೆ ಇನ್ನೊಂದು ಇಲಾಖೆಯ ಅನುಮತಿ ಬೇಕಿದೆ. ಅನುಮತಿ ಪಡೆಯುವ ಪ್ರಕ್ರಿಯೆ ನಡೆಯುತ್ತಿದೆ. ಗ್ರಾಮದಲ್ಲಿ ಶವ ಸಂಸ್ಕಾರಕ್ಕೆ ಯಾವುದೇತೊಂದರೆ ಇಲ್ಲ. ಅಂತ್ಯಸಂಸ್ಕಾರಕ್ಕೆ ಯಾರಾದರೂ ಅಡ್ಡಿಪಡಿಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಎಂ.ಬಿ. ಅಶ್ವಥ್ ಎಚ್ಚರಿಸಿದರು.

ಬಳಿಕ ಗ್ರಾಮಸ್ಥರು ಪಕ್ಕದ ಹಳೆಕುಂದವಾಡ ಗ್ರಾಮದ ಸ್ಮಶಾನದಲ್ಲಿ ಸಾಮೂಹಿಕ ಅಂತ್ಯಕ್ರಿಯೆ ನಡೆಸಿದರು.

'ಗ್ರಾಮದ ಎಲ್ಲ ಏಳು ಜನ ಅನಾರೋಗ್ಯದಿಂದ ಸಾವಿಗೀಡಾಗಿದ್ದಾರೆ. ಬೇರೆ ಕಾರಣ ಇಲ್ಲ' ಎಂದು ಡಿಎಚ್‌ಒ ಡಾ.ಎಸ್. ಷಣ್ಮುಖಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಮುರುಘಾ ಸ್ವಾಮೀಜಿಯ ಬೆಳ್ಳಿ ಪುತ್ಥಳಿ ಕಳ್ಳತನ

ಚಿತ್ರದುರ್ಗ: ನಗರದ ಮುರುಘಾ ಮಠದ ದರ್ಬಾರ್ ಹಾಲ್‌ನಲ್ಲಿದ್ದ 22 ಕೆ.ಜಿ. ತೂಕದ ಶಿವಮೂರ್ತಿ ಮುರುಘಾ ಸ್ವಾಮೀಜಿಯವರ ಬೆಳ್ಳಿ ಪುತ್ಥಳಿ ಕಳ್ಳತನವಾಗಿದೆ.

ಈ ಕುರಿತು ಮಠದ ಆಡಳಿತ ಮಂಡಳಿ ಸದಸ್ಯ ಬಸವಕುಮಾರ ಸ್ವಾಮೀಜಿ ಗುರುವಾರ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮಠದ ಸಿಬ್ಬಂದಿಯೊಬ್ಬರು ಬುಧವಾರ ದರ್ಬಾರ್ ಹಾಲ್‌ಗೆ ತೆರಳಿದಾಗ ಪುತ್ಥಳಿ ಕಳ್ಳತನ ಆಗಿರುವುದು ಪತ್ತೆಯಾಗಿದೆ. ಜುಲೈ 4ರಂದು ಕಡೆಯದಾಗಿ ಪ್ರತಿಮೆ ನೋಡಿದ್ದಾಗಿ ಅವರು ತಿಳಿಸಿದ್ದಾರೆ. ಮಠದಲ್ಲಿ ಆಂತರಿಕ ತನಿಖೆ ನಡೆಸಿದಾಗ ಪುತ್ಥಳಿ ಕುರಿತ ಯಾವುದೇ ಮಾಹಿತಿ ಲಭ್ಯವಾಗಿಲ್ಲ.

21 ಇಂಚು ಎತ್ತರದ ಪುತ್ಥಳಿಯು ₹ 16 ಲಕ್ಷ ಮೌಲ್ಯ ಹೊಂದಿದೆ. ಮುರುಘಾ ಮಠದ ಟ್ರಸ್ಟ್ ಮತ್ತು ಎಸ್‌ಜೆಎಂ ವಿದ್ಯಾಪೀಠದ ಆಡಳಿತ ನಿರ್ವಹಣಾ ಸಮಿತಿ ಅಧ್ಯಕ್ಷ ಶಿವಯೋಗಿ ಸಿ. ಕಳಸದ ಅವರ ಮೌಖಿಕ ಸೂಚನೆ ಮೇರೆಗೆ ದೂರು ನೀಡಲಾಗುತ್ತಿದೆ ಎಂದು ಅವರು ಬಸವಕುಮಾರ ಸ್ವಾಮೀಜಿ ತಿಳಿಸಿದ್ದಾರೆ.

ಶಿವಮೂರ್ತಿ ಮುರುಘಾ ಸ್ವಾಮೀಜಿ ಪೀಠಾರೋಹಣದ ರಜತೋತ್ಸವ ಆಚರಣೆ ಸಂದರ್ಭದಲ್ಲಿ ವಿವಿಧ ಮಠಾಧೀಶರು ಬೆಳ್ಳಿ ಪುತ್ಥಳಿ ಅರ್ಪಿಸಿದ್ದರು. ಸದ್ಯ ಶಿವಮೂರ್ತಿ ಸ್ವಾಮೀಜಿ ಪೋಕ್ಸೊ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರ ಬಂಧನದ ನಂತರ ಮಠದಲ್ಲಿದ್ದ ಕೆಲ ಛಾಯಾ ಚಿತ್ರಗಳು ಕೂಡ ಕಾಣೆಯಾಗಿದ್ದವು. ಈ ಬಗ್ಗೆಯೂ ದೂರು ದಾಖಲಾಗಿತ್ತು.

ರೈತನಿಗೆ ಕನ್ಯೆಯ ಮಾಹಿತಿ ನೀಡಿದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಕನಕಗಿರಿ (ಕೊಪ್ಪಳ ಜಿಲ್ಲೆ): ಜಿಲ್ಲಾಡಳಿತದಿಂದ ಜೂನ್ 26ರಂದು ನಡೆದಿದ್ದ ಜನಸ್ಪಂದನ ಕಾರ್ಯಕ್ರಮದಲ್ಲಿ ಪಟ್ಟಣದ ಗೌಡರ ಓಣಿ ರೈತ ಸಂಗಪ್ಪ ತಮಗೆ ಕನ್ಯೆ ಹುಡುಕಿಕೊಡುವಂತೆ ಜಿಲ್ಲಾಧಿ ಕಾರಿಗಳಿಗೆ ಮನವಿ ಸಲ್ಲಿಸಿದ ವಿಷಯಕ್ಕೆ ಸಂಬಂಧಿಸಿದಂತೆ ವಧುಗಳು ಇರುವ ಬಗ್ಗೆ ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿಯು ಯುವಕನಿಗೆ ಪತ್ರ ಬರೆದಿದ್ದಾರೆ.

'ಕನ್ಯೆ ಹುಡುಕುವ ವಿಷಯಕ್ಕೆ ಸಂಬಂಧಿಸಿದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿಯನ್ನು ಸಂಪರ್ಕಿಸಿದ್ದು, ಬಳ್ಳಾರಿಯ ಶ್ರೀ ಸೇವಾನಿಕೇತನ ಎಂಬ ಸ್ವಯಂ ಸೇವಾ ಸಂಸ್ಥೆಯಲ್ಲಿ ಕನ್ಯೆ ಸಿಗುವ ಮಾಹಿತಿ ಸಿಗುತ್ತದೆ ಎಂದು ತಿಳಿಸಿದ್ದಾರೆ' ಎಂದು ಸಂಗಪ್ಪ ಅವರಿಗೆ ಮಾಹಿತಿ ನೀಡಲಾಗಿದೆ. ಪತ್ರದ ಪ್ರತಿಯನ್ನು ಜಿಲ್ಲಾಧಿಕಾರಿ ಅವರಿಗೂ ಸಲ್ಲಿಸಲಾಗಿದೆ.

'ನಾನು ರೈತ ಕುಟುಂಬದಿಂದ ಬಂದಿದ್ದೇನೆ. ಹತ್ತಾರು ವರ್ಷಗಳಿಂದಲೂ ವಧು ಅನ್ವೇಷಣೆಗಾಗಿ ಲಕ್ಷಾಂತರ ರೂಪಾಯಿ ಕಳೆದುಕೊಂ-ಡಿದ್ದೇನೆ. ಯಾರೂ ಕನ್ಯೆ ನೀಡಲು ಮುಂದೆ ಬರುತ್ತಿಲ್ಲ. ಹೀಗಾಗಿ ಮಾನಸಿಕವಾಗಿ ನೊಂದಿರುವೆ. ನೀವಾದರೂ ಕನ್ಯೆ ಹುಡುಕಿ ನನ್ನ ಮದುವೆಗೆ ಸಹಕರಿಸಿ' ಎಂದು ಸಂಗಪ್ಪ ಅವರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದರು.

ತಯಾರಿ...

ಆಳ ಸಮುದ್ರ ಮೀನುಗಾರಿಕೆ ಆಗಸ್ಟ್ ತಿಂಗಳಲ್ಲಿ ಮತ್ತೆ ಪ್ರಾರಂಭವಾಗಲಿರುವ ಹಿನ್ನೆಲೆಯಲ್ಲಿ ಮಂಗಳೂರಿನ ಮೀನುಗಾರಿಕಾ ಬಂದರಿನಲ್ಲಿ ಮೋಟಾರ್ ಚಾಲಿತ ದೋಣಿಗಳ ರಿಪೇರಿ ಕೆಲಸದಲ್ಲಿ ತೊಡಗಿದ್ದ ಕಾರ್ಮಿಕರು – ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

'ವಿದ್ಯಾರ್ಥಿಗಳಿಗೆ ವಾರವಿಡೀ ಮೊಟ್ಟೆ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಣೆಗೆ ರಜಾ ದಿನ ಹೊರತುಪಡಿಸಿ, ವಾರದ 6 ದಿನವೂ ಮೊಟ್ಟೆ ವಿತರಣೆಗೆ ನಿರ್ಧರಿಸಲಾ-ಗಿದೆ. ಇನ್ನೊಂದು ತಿಂಗಳಲ್ಲಿ ಅದು ಕಾರ್ಯರೂಪಕ್ಕೆ ಬರಲಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗರದಲ್ಲಿ ಗುರುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಲ್ಯಾಪ್ ಟಾಪ್ ವಿತರಿಸಿ ಹಾಗೂ ಶೇ 100ರಷ್ಟು ಫಲಿತಾಂಶ ಪಡೆದ ಶಾಲೆಗಳ ಮುಖ್ಯಸ್ಥರನ್ನು ಅಭಿನಂದಿಸಿ ಅವರು ಮಾತನಾಡಿದರು.

'ಈ ಮೊದಲು ಎಂಟನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಮಾತ್ರ ವಾರಕ್ಕೊಮ್ಮೆ ಮೊಟ್ಟೆ ವಿತರಣೆ ಮಾಡ-ಲಾಗುತ್ತಿತ್ತು. ನಮ್ಮ ಸರ್ಕಾರ ಅದನ್ನು 10ನೇ ತರಗತಿಯವರೆಗೆ ವಿಸ್ತರಿಸಿದೆ. ವಾರದಲ್ಲಿ ಒಂದು ದಿನದ ಬದಲು ಎರಡು ದಿನಕ್ಕೆ ಹೆಚ್ಚಿಸಲಾಗಿತ್ತು. ಇನ್ನು ವಾರವಿಡೀ ವಿತರಿಸಲಾಗುವುದು' ಎಂದರು.

ಈ ವರ್ಷ ರಾಜ್ಯದಲ್ಲಿ 1,600 ಶಾಲೆಗಳ ಕೊಠಡಿಗಳ ದುರಸ್ತಿ ಗುರಿ ಹೊಂದಲಾಗಿದೆ. ಅಗತ್ಯವಿರುವ ಕಡೆ ಹೊಸ ಕಟ್ಟಡ ನಿರ್ಮಾಣಕ್ಕೆ ಶೀಘ್ರ ಮಂಜೂರಾತಿ ನೀಡಲಾಗುವುದು. ಹೊಸದಾಗಿ 500 ಕೆಪಿಎಸ್ ಶಾಲೆಗಳನ್ನು ತೆರೆಯಲು ಮೊದಲು ಉದ್ದೇಶಿಸ-ಲಾಗಿತ್ತು. ಈಗ ಅದನ್ನು 1,000ಕ್ಕೆ ಏರಿಸಲಾಗುವುದು. ಕೆಪಿಎಸ್ ಶಾಲೆಯಲ್ಲಿ 10 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ನೀಡುವ ಗುರಿ ಹೊಂದಲಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ. ಧನಂಜಯ ಸರ್ಜಿ, ಸೂಡಾ ಅಧ್ಯಕ್ಷ ಎಚ್‌.ಎಸ್. ಸುಂದರೇಶ್, ಡಿಡಿಪಿಐ ಸಿ.ಆರ್.ಪರಮೇಶ್ವರಪ್ಪ, ಜಿಲ್ಲಾ ಪಂಚಾಯಿತಿ ಸಿಇಒ ಎನ್‌.ಹೇಮಂತ್, ಸಿದ್ದಬಸಪ್ಪ, ಧರ್ಮಪ್ಪ, ರಾಘವೇಂದ್ರ, ಹರಿಪ್ರಸಾದ್ ಇದ್ದರು.

ಹೇರ್‌ಸ್ಟೈಲ್: ವೈಯಕ್ತಿಕ ಟೀಕೆ ಬೇಡ

'ನನ್ನ ಹೇರ್‌ಸ್ಟೈಲ್ ವಿಚಾರದಲ್ಲಿ ಕೆಲವರು ವೈಯಕ್ತಿಕವಾಗಿ ಟೀಕೆ ಮಾಡುತ್ತಿದ್ದಾರೆ. ಅದು ಸರಿಯಲ್ಲ. ನನ್ನನ್ನು ನೋಡಿದರೆ ವಾಕರಿಗೆ ಬರುತ್ತದೆ ಎಂದು ಸಾಹಿತಿಯೊಬ್ಬರು ಹೇಳಿದ್ದಾರೆ. ಹೀಗೆ ವೈಯಕ್ತಿಕವಾಗಿ ಟೀಕೆ ಮಾಡುವ ಬದಲು ಶಿಕ್ಷಣ ಕ್ಷೇತ್ರದಲ್ಲಿ ರಚನಾತ್ಮಕ ಬದಲಾವಣೆ ಬಗ್ಗೆ ಸಲಹೆ ಕೊಡಲಿ, ಗೌರವಯುತವಾಗಿ ಸ್ವೀಕರಿಸುತ್ತೇನೆ' ಎಂದು ಪ್ರಶ್ನೆಯೊಂದಕ್ಕೆ ಮಧು ಪ್ರತಿಕ್ರಿಯಿಸಿದರು.

ದೇವಗೊಂಡನಹಳ್ಳಿಗೆ ಭೇಟಿ ನೀಡಿದ ಸಿ.ಟಿ.ರವಿ

ಜ್ವರ ಕ್ಲಿನಿಕ್ ತೆರೆದ ಆರೋಗ್ಯ ಇಲಾಖೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಇಡೀ ಊರಿನ ಜನರೇ ಅನಾರೋಗ್ಯಕ್ಕೆ ತುತ್ತಾಗಿರುವ ದೇವ-ಗೊಂಡನಹಳ್ಳಿಯಲ್ಲಿ ಆರೋಗ್ಯ ಇಲಾಖೆ ಗುರುವಾರ ಜ್ವರ ತಪಾಸಣೆಗೆ ಕ್ಲಿನಿಕ್ ತೆರೆದಿದೆ. ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಭೇಟಿ ನೀಡಿ ಜನರ ಆರೋಗ್ಯ ವಿಚಾರಿಸಿದರು. ಸಾವಿರಕ್ಕೂ ಹೆಚ್ಚು ಜನರಿಗೆ ಅನಾರೋಗ್ಯ ಕಾಡಿದೆ ಎಂದು ಗ್ರಾಮಸ್ಥರು ಹೇಳಿಕೊಂಡರು.

ದೇವಗೊಂಡನಹಳ್ಳಿಯಲ್ಲಿ ಇಡೀ ಊರನ್ನೇ ಕಾಡುತ್ತಿರುವ ಅನಾರೋಗ್ಯದ ಕುರಿತು 'ಪ್ರಜಾವಾಣಿ' ಗುರುವಾರ ವರದಿ ಪ್ರಕಟಿಸಿತ್ತು. ಗುರುವಾರ ಬೆಳಿಗ್ಗೆಯೇ ಆರೋಗ್ಯ ಇಲಾಖೆ ಜ್ವರ ಕ್ಲಿನಿಕ್ ತೆರೆದಿದ್ದು, ಆರೋಗ್ಯ ತಪಾಸಣೆ ಮತ್ತು ರಕ್ತದ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಿದೆ.

ಬೆಂಗಳೂರಿನಿಂದ ಬಂದಿರುವ ಆರೋಗ್ಯ ಇಲಾಖೆ ತಂಡ ಕೂಡ ಲಾರ್ವ ಮಾದರಿ ಸಂಗ್ರಹಿಸಿತು.

ದೇವಗೊಂಡನಹಳ್ಳಿಯಲ್ಲಿ ಆರೋಗ್ಯ ಇಲಾಖೆಯಿಂದ ಜ್ವರ ಕ್ಲಿನಿಕ್ ತೆರೆದು ಜನರ ಆರೋಗ್ಯ ತಪಾಸಣೆ ನಡೆಸಿದರು

ವರದಿ ಪರಿಣಾಮ

'ಒಂದೂವರೆ ತಿಂಗಳಿಂದ ಇಡೀ ಊರಿನ ಜನರೇ ಅನಾರೋಗ್ಯ ಸಮಸ್ಯೆ ಎದುರಿಸಿದ್ದೇವೆ. ಆರೋಗ್ಯ ಇಲಾಖೆ ಅಧಿಕಾರಿಗಳು ಯಾರೂ ಇತ್ತ ಬಂದಿಲ್ಲ. ಸಾವಿರಕ್ಕೂ ಹೆಚ್ಚು ಜನ ಒಳ ಮತ್ತು ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದಿದ್ದೇವೆ. ವಿಪರೀತ ಜ್ವರ ಮತ್ತು ಕೈಕಾಲು ನೋವಿನಿಂದ ಬಳಲಿದ್ದೇವೆ. ಪತ್ರಿಕೆಯಲ್ಲಿ ವರದಿ ಪ್ರಕಟವಾದ ಬಳಿಕ ಗುರುವಾರ ಆರೋಗ್ಯ ಇಲಾಖೆ ಅಧಿಕಾರಿಗಳು ಬಂದಿದ್ದಾರೆ' ಎಂದು ಗ್ರಾಮಸ್ಥರು ವಿವರಿಸಿದರು.

ಇಷ್ಟು ದೊಡ್ಡ ಸಮಸ್ಯೆಯಾದರೂ ಯಾರ ಗಮನಕ್ಕೂ ಬಾರದಿರುವುದು ಆರೋಗ್ಯ ಇಲಾಖೆ ಬೇಜವಾಬ್ದಾರಿ ಎಂದು ಸಿ.ಟಿ.ರವಿ ಹೇಳಿದರು.

'ಘಟಪ್ರಭಾ ಬಲದಂಡೆ ಕಾಲುವೆ ದುರಸ್ತಿಗೆ ₹1 ಕೋಟಿ ಪ್ರಸ್ತಾವ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಹಿಡಕಲ್ ಜಲಾಶಯದ ಘಟಪ್ರಭಾ ಬಲದಂಡೆ ಕಾಲುವೆಯ (ಕಬ್ಬೂರ ಅಂಚು ಕಾಲುವೆ) ಆಧುನೀ-ಕರಣಕ್ಕೆ ಈಗಾಗಲೇ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಖಾಸಗಿ ಸಂಸ್ಥೆಗೆ ವಹಿಸಲಾಗಿದೆ. ಇದರ ಸರ್ವೆ ಕಾರ್ಯ ಪ್ರಗತಿಯಲ್ಲಿದೆ' ಎಂದು ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಜೇಶ ಅಮ್ಮಿನಬಾವಿ ತಿಳಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಗುರುವಾರ ಪ್ರಕಟವಾದ 'ಅಧಿಕಾರಿಗಳ ನಿರ್ಲಕ್ಷ್ಯ: ರೈತರಿಂದ ಹೂಳು ತೆರವು' ವಿಶೇಷ ವರದಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಅವರು, '45 ಕಿ.ಮೀ ಉದ್ದದ ಕಾಲುವೆಯ ಸ್ಟ್ರಕ್ಚರ್, ಲೈನಿಂಗ್ ಹಾಳಾಗಿದ್ದರಿಂದ ಕೊನೆಯ ಭಾಗದ ರೈತರಿಗೆ ನೀರು ತಲುಪುತ್ತಿಲ್ಲ. ತುರ್ತಾಗಿ ಕಾಲುವೆ ದುರಸ್ತಿಗೆ ₹ 1 ಕೋಟಿಗಾಗಿ ಅನುಮೋದನೆಗೆ ಕಳಿಸಲಾಗಿದೆ' ಎಂದು ತಿಳಿಸಿದ್ದಾರೆ.

'ಚಿಕ್ಕೋಡಿ ಭಾಗದಲ್ಲಿರುವ ಐದು ಉಪವಿಭಾಗಗಳಲ್ಲಿ ಕಾಲುವೆ ದುರಸ್ತಿಗೆ ₹5 ಲಕ್ಷ ಮೀಸಲು ಇಡಲಾಗಿದೆ. ಇದು ಸಾಕಾಗದು. ಉಳಿದ ₹95 ಲಕ್ಷವನ್ನೂ ಮಂಜೂರು ಮಾಡಬೇಕು ಎಂದು ನೀರಾವರಿ ನಿಗಮದ ಬೆಳಗಾವಿಯ ಮುಖ್ಯ ಎಂಜಿನಿಯರ್ ವರದಿ ಸಲ್ಲಿಸಿದ್ದಾರೆ. ಫಲಾನುಭವಿ ರೈತರಿಗೂ ವಸ್ತುಸ್ಥಿತಿ ತಿಳಿಸಲಾಗಿದೆ. ಡಿಪಿಆರ್ ಸಿದ್ಧವಾದ ಬಳಿಕ ರೈತರ ಸಮಸ್ಯೆ ಬಗೆಹರಿಯಲಿದೆ' ಎಂದು ಅವರು ತಿಳಿಸಿದ್ದಾರೆ.

ಅಧಿಕಾರಿಗಳ ನಿರ್ಲಕ್ಷ್ಯ: ರೈತರಿಂದ ಹೂಳು ತೆರವು

ಗುರುವಾರ ಪ್ರಕಟವಾದ ಘಟಪ್ರಭಾ ಬಲದಂಡೆ ಕಾಲುವೆಯ ಸಮಸ್ಯೆ ಬಿಂಬಿಸುವ ವಿಶೇಷ ವರದಿ

ಆಂಧ್ರಪ್ರದೇಶದ ಹಿಂದೂಪುರದಲ್ಲಿ ಒತ್ತೆಯಾಳಾಗಿದ್ದ ಬಾಲಕಿ ರಕ್ಷಣೆ

ಅಕ್ಕನ ಮಗಳ ಮಾರಿದ್ದ ಚಿಕ್ಕಮ್ಮ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 11 ವರ್ಷದ ಬಾಲಕಿಯ ಮಾರಾಟ
- ತುಮಕೂರು ನಗರ ಪೊಲೀಸರಿಂದ ರಕ್ಷಣೆ; ಬಾಲಮಂದಿರದ ಸುಪರ್ದಿಗೆ

ತುಮಕೂರು: ಸಾಲ ತೀರಿಸಲಾಗದೆ ಅದಕ್ಕೆ ಬದಲಾಗಿ ಮಾರಾಟ ಮಾಡಿದ್ದ ತುಮಕೂರಿನ ಬಾಲಕಿಯನ್ನು ಆಂಧ್ರ-ಪ್ರದೇಶದ ಹಿಂದೂಪುರದಲ್ಲಿ ನಗರ ಠಾಣೆಯ ಪೊಲೀಸರು ರಕ್ಷಿಸಿ, ನಗರಕ್ಕೆ ಕರೆ ತಂದಿದ್ದಾರೆ.

ನಗರದ ಹೊರವಲಯ ದಿಬ್ಬೂರಿನ ಚೌಡಮ್ಮ ಎಂಬುವರ 11 ವರ್ಷದ ಪುತ್ರಿಯನ್ನು ರಕ್ಷಿಸಿ ಕರೆತಂದಿರುವ ಪೊಲೀಸರು ನಗರದ ಬಾಲ ಮಂದಿರದ ಸುಪರ್ದಿಗೆ ಒಪ್ಪಿಸಿದ್ದಾರೆ.

ಆಂಧ್ರಪ್ರದೇಶದ ಹಿಂದೂಪುರದಲ್ಲಿ ನೆಲೆಸಿರುವ ಸಹೋದರಿ ಸುಜಾತ ಮನೆಗೆ ಚೌಡಮ್ಮ ಕೆಲ ದಿನಗಳ ಹಿಂದೆ ಮಗಳನ್ನು ಕಳಿಸಿದ್ದರು. ಶ್ರೀರಾಮುಲು ಎಂಬುವರಿಗೆ ಕೊಡಬೇಕಿದ್ದ ₹35 ಸಾವಿರ ಸಾಲದ ಬದಲಾಗಿ ಸಹೋದರಿಯ ಮಗಳನ್ನು ಸುಜಾತಾ ಮಾರಾಟ ಮಾಡಿದ್ದರು.

ಬಾಲಕಿಯನ್ನು ಕರೆದೊಯ್ದ ಶ್ರೀರಾಮುಲು ಬಾತುಕೋಳಿ ಮೇಯಿಸಲು ಒತ್ತೆಯಾಳಾಗಿ ಇರಿಸಿಕೊಂಡಿದ್ದರು. ಈ ವಿಷಯ ತಿಳಿದ ಚೌಡಮ್ಮ ಹಿಂದೂಪುರಕ್ಕೆ ತೆರಳಿ ಮಗಳನ್ನು ತನ್ನೊಂದಿಗೆ ಕಳುಹಿಸುವಂತೆ ಬೇಡಿಕೊಂಡಿದ್ದರು. ಆದರೆ, ಶ್ರೀರಾಮುಲು ಒಪ್ಪಿರಲಿಲ್ಲ. ಬಾಲಕಿಯನ್ನು ತಾನು ಖರೀದಿಸಿದ್ದು, ಸಾಲದ ಹಣ ಕೊಟ್ಟು ಕರೆದುಕೊಂಡು ಹೋಗುವಂತೆ ಹೇಳಿದ್ದರು ಎನ್ನಲಾಗಿದೆ.

'ನನ್ನ ಮಗಳನ್ನು ಹಿಂದೂಪುರದ ಶ್ರೀರಾಮುಲು ಎಂಬುವರು ಒತ್ತೆಯಾಳಾಗಿ ಇಟ್ಟುಕೊಂಡಿದ್ದಾರೆ. ಒತ್ತೆಯಾಳಾಗಿ ದುಡಿಯುತ್ತಿರುವ ತನ್ನ ಮಗಳನ್ನು ರಕ್ಷಿಸುವಂತೆ' ಹಿಂದೂಪುರದಿಂದ ಈಚೆಗೆ ಮರಳಿದ್ದ ಚೌಡಮ್ಮ, ತುಮಕೂರು ಜಿಲ್ಲಾ ಕಾರ್ಮಿಕ ಅಧಿಕಾರಿ ತೇಜಾವತಿ ಅವರಿಗೆ ಮನವಿ ಸಲ್ಲಿಸಿದ್ದರು.

ಕೂಡಲೇ ಕಾರ್ಮಿಕರ ಅಧಿಕಾರಿ ಈ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದು ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದರು. ಬಾಲಕಿಯನ್ನು ರಕ್ಷಿಸಿ, ಕರೆತರುವ ಜವಾಬ್ದಾರಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯು ನಗರ ಠಾಣೆ ಪೊಲೀಸರಿಗೆ ವಹಿಸಿದ್ದರು.

ದೂರು ಬಂದ ಒಂದು ವಾರದಲ್ಲೇ ಬಾಲಕಿಯನ್ನು ಪೊಲೀಸರು ರಕ್ಷಿಸಿ ಕರೆ ತಂದಿದ್ದಾರೆ ಎಂದು ಕಾರ್ಮಿಕ ಅಧಿಕಾರಿ ತೇಜಾವತಿ ತಿಳಿಸಿದ್ದಾರೆ.

ಶುಕ್ರವಾರ, ಜುಲೈ 12, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 193 | ಪುಟ 16

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಶಿವರಾಜ್‌ಕುಮಾರ್ ಜನ್ಮದಿನಕ್ಕೆ ಸಾಲು ಸಾಲು ಹೊಸ ಸಿನಿಮಾಗಳ ಘೋಷಣೆ

ಆಳ–ಅಗಲ: ನೀರಿನ ಬರ ಆರ್ಥಿಕತೆಗೆ ಗರ

ಬಜೆಟ್: ಅರ್ಥಶಾಸ್ತ್ರಜ್ಞರ ಜತೆ ಪ್ರಧಾನಿ ಮೋದಿ ಚರ್ಚೆ 10

ನಟಿ, ನಿರೂಪಕಿ ಅಪರ್ಣಾ ನಿಧನ 3

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,897	24,315	₹74,880 (ಬೆಂಗಳೂರು)	₹94,400 (ಬೆಂಗಳೂರು)	83.53

56 ಸ್ಥಳಗಳಲ್ಲಿ ಶೋಧ • ₹48.08 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ

ಲೋಕಾ ಬಲೆಗೆ ಕೋಟಿ ಕುಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಬ್ಬರು ನಿವೃತ್ತರು ಮತ್ತು ಒಂಬತ್ತು ಅಧಿಕಾರಿಗಳಿಗೆ ಸಂಬಂಧಿಸಿದ 56 ಸ್ಥಳಗಳ ಮೇಲೆ ಗುರುವಾರ ಏಕಕಾಲಕ್ಕೆ ದಾಳಿಮಾಡಿ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು, ₹48.08 ಕೋಟಿ ಮೌಲ್ಯದ ಅಕ್ರಮ ಆಸ್ತಿಗಳನ್ನು ಪತ್ತೆ ಮಾಡಿದ್ದಾರೆ.

ಹೊಸದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸಣ್ಣ ನೀರಾವರಿ ಇಲಾಖೆ ನಿವೃತ್ತ ಮುಖ್ಯ ಎಂಜಿನಿಯರ್ ಎಂ. ರವೀಂದ್ರ ಹಾಗೂ ಮಂಡ್ಯದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಎಸ್. ಶಿವರಾಜು ಮನೆಯ ಮೇಲೆ ನಿವೃತ್ತಿ ಬಳಿಕವೂ ದಾಳಿ ನಡೆದಿದೆ.

ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ಕೆ.ಜಿ. ಜಗದೀಶ್, ಹಾರೋಹಳ್ಳಿ ತಹಶೀಲ್ದಾರ್ ವಿಜಯಣ್ಣ, ಕಬಿನಿ ಜಲಾಶಯದ ಸೂಪರಿಂಟೆಂಡಿಂಗ್ ಎಂಜಿನಿಯರ್ ಕೆ. ಮಹೇಶ್, ಬಿಬಿಎಂಪಿ ಕಂದಾಯ ಅಧಿಕಾರಿ ಬಸವರಾಜ ಮಗಿ, ಧಾರವಾಡ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಶೇಖರ್ ಗೌಡ ದಾಳಿಗೊಳಗಾದ ಪ್ರಮುಖ ಅಧಿಕಾರಿಗಳು.

5ನೇ ಪುಟ ನೋಡಿ

ಎನ್. ಎಂ. ಜಗದೀಶ್ ಅವರಿಗೆ ಸೇರಿದ ತೋಟದ ಮನೆ

ಗ್ರಾ.ಪಂ ಕಾರ್ಯದರ್ಶಿ ಬಳಿ ₹28 ಲಕ್ಷ ನಗದು

ಬೆಂಗಳೂರಿನ ದಾಸನಪುರ ಗ್ರಾಮ ಪಂಚಾಯಿತಿಯ ಗ್ರೇಡ್–1 ಕಾರ್ಯದರ್ಶಿ ಎನ್.ಎಂ. ಜಗದೀಶ್ ಅವರ ಮನೆಯಲ್ಲಿ ₹28 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ. ಮೂರು ವಾಸದ ಮನೆ, ಕೃಷಿ ಜಮೀನುಗಳೂ ಇರುವುದು ಪತ್ತೆಯಾಗಿದೆ.

583 ಕ್ಯಾಸಿನೊ ಕಾಯಿನ್ ವಶಕ್ಕೆ

ಕಲಬುರಗಿ: ಬಿಬಿಎಂಪಿ ಮಹದೇವಪುರ ವಿಭಾಗದ ಕಂದಾಯ ಅಧಿಕಾರಿ ಬಸವರಾಜ ಮಗಿ ಅವರಿಗೆ ಸೇರಿದ ಇಲ್ಲಿನ ಎಂ.ಬಿ. ನಗರದ ಮನೆಯಲ್ಲಿ 583 ಕ್ಯಾಸಿನೊ ಕಾಯಿನ್‌ಗಳು ಹಾಗೂ ಗೋವಾದ ‘ಕ್ಲಬ್ ಡೆಲ್ಫಿನ್’ ಹೆಸರಿನ ಕ್ಯಾಸಿನೊ ಸದಸ್ಯತ್ವ ಕಾರ್ಡ್ ಪತ್ತೆಯಾಗಿವೆ. ಒಂದೊಂದು ಕಾಯಿನ್‌ಗಳ ಮೌಲ್ಯ ₹50 ಸಾವಿರದಿಂದ ₹1 ಲಕ್ಷ ಇರಬಹುದು ಎಂದು ಅಂದಾಜಿಸಲಾಗಿದೆ.

ಖಾತೆ ವರ್ಗಕ್ಕೆ ನಾಗೇಂದ್ರ ಒತ್ತಡ?

ನಿಗಮದ ಮಾಜಿ ವ್ಯವಸ್ಥಾಪಕನ ಹೇಳಿಕೆ • ರಿಮಾಂಡ್ ಅರ್ಜಿಯಲ್ಲಿ ಮಾಹಿತಿ

● ಆದಿತ್ಯ ಕೆ.ಎ.

ಬೆಂಗಳೂರು: ‘ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ ಬಿ. ನಾಗೇಂದ್ರ ಅವರೇ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ₹94 ಕೋಟಿ ಅಕ್ರಮ ವರ್ಗಾವಣೆ ಹಗರಣಕ್ಕೆ ಬಳಸಿರುವ ಎಂ.ಜಿ. ರಸ್ತೆಯ ಯೂನಿಯನ್ ಬ್ಯಾಂಕ್ ಶಾಖೆಯಲ್ಲಿನ ಖಾತೆಯನ್ನು ತೆರೆಯಲು ಅಧಿಕಾರಿಗಳ ಮೇಲೆ ಒತ್ತಡ ಹೇರಿದ್ದರು’ ಎಂದು ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳವು (ಎಸ್‌ಐಟಿ) ನ್ಯಾಯಾಲಯಕ್ಕೆ ತಿಳಿಸಿದೆ.

ಬಂಧಿತ ಆರೋಪಿ, ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಜೆ.ಬಿ.ಪದ್ಮನಾಭ ಅವರು ವಿಚಾರಣೆ ವೇಳೆ ನೀಡಿದ್ದ ಮಾಹಿತಿ ಆಧರಿಸಿ ನ್ಯಾಯಾಲಯಕ್ಕೆ ಎಸ್‌ಐಟಿ ಸಲ್ಲಿಸಿರುವ ರಿಮಾಂಡ್ ಅರ್ಜಿಯಲ್ಲಿ ಈ ಮಾಹಿತಿ ಇದೆ. ನಾಗೇಂದ್ರ ಸೂಚನೆಯಂತೆ ಅಕ್ರಮ ನಡೆದಿದೆ ಎಂಬುದು ತನಿಖೆಯಲ್ಲಿ ಪತ್ತೆಯಾಗಿದೆ ಎಂದೂ ಎಸ್‌ಐಟಿ ಹೇಳಿದೆ.

‘ನಾಗೇಂದ್ರ ಆಪ್ತ ಕಾರ್ಯದರ್ಶಿ ಆಗಿದ್ದ ದೇವೇಂದ್ರಪ್ಪ, ಅವರ ಆಪ್ತ ನೆಕ್ಕಂಟಿ ನಾಗರಾಜ್, ಸಂಬಂಧಿಕ ನಾಗೇಶ್ವರ್ ರಾವ್ ಸೇರಿದಂತೆ ನಾಲ್ವರು ಶಾಂಗ್ರಿ–ಲಾ ಹೋಟೆಲ್‌ನಲ್ಲಿ ನಡೆದ ಚರ್ಚೆಯಲ್ಲಿ ಭಾಗಿಯಾಗಿದ್ದರು. ಹೊಸ ಖಾತೆ ತೆರೆಯುವಂತೆ ನಾಗರಾಜ್ ಹೇಳಿದಾಗ ನಾನು ನಿರಾಕರಿಸಿದ್ದೆ. ಆಗ, ನಾಗರಾಜ್ ಸಚಿವ ನಾಗೇಂದ್ರ ಹೊರಗಿದ್ದಾರೆ ಎಂದು ಹೇಳಿದರು. ಆಗ ಎಲ್ಲರೂ ಸಚಿವರ ಬಳಿ ಹೋಗಿದ್ದು, ಸಚಿವರು ಅಲ್ಲಿಂದ ಎದ್ದು ಬಂದು ನಾವು ಮೊದಲು ಕುಳಿತಿದ್ದ ಸ್ಥಳಕ್ಕೆ ಬಂದರು. ತಮ್ಮ ಜತೆಗಿರುವ ವ್ಯಕ್ತಿಯ ಹೆಸರಿನಲ್ಲಿ ಹೊಸ ಖಾತೆ ತೆರೆದು, ಠೇವಣಿ ಇಡುವಂತೆ ನಾಗೇಂದ್ರ ಅವರು ಕಳೆದ ವರ್ಷದ ಡಿಸೆಂಬರ್‌ನಲ್ಲಿ ಸೂಚಿಸಿದ್ದರು’ ಎಂದು ಪದ್ಮನಾಭ ವಿಚಾರಣೆಯಲ್ಲಿ ಹೇಳಿದ್ದಾರೆ.

5ನೇ ಪುಟ ನೋಡಿ

ದದ್ದಲ್ ಆಪ್ತಗೆ ₹55 ಲಕ್ಷ, ನಾಗೇಂದ್ರ ಆಪ್ತಗೆ ₹25 ಲಕ್ಷ

‘ನೆಕ್ಕಂಟಿ ನಾಗರಾಜ್, ನಾಗೇಶ್ವರ ರಾವ್, ಸತ್ಯನಾರಾಯಣ ವರ್ಮರಿಂದ ಬೆಂಗಳೂರಿನ ಮೌರ್ಯ ಹೋಟೆಲ್ ಬಳಿ ತಮ್ಮ ಪಾಲಿನ ಹಣವನ್ನು ಪದ್ಮನಾಭ ಪಡೆದುಕೊಂಡಿದ್ದರು. ಆ ಪೈಕಿ ₹3.62 ಕೋಟಿಯನ್ನು ಸೂಟ್‌ಕೇಸ್, ಬ್ಯಾಗ್, ಕಾರಿನಲ್ಲಿ ಪದ್ಮನಾಭ ಬಚ್ಚಿಟ್ಟಿದ್ದರು. ಅದನ್ನು ನಾಗೇಂದ್ರ ಮತ್ತು ದದ್ದಲ್ ಆಪ್ತರಿಗೆ ಹಂತಹಂತವಾಗಿ ಹಂಚಿಕೆ ಮಾಡಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

‘ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಆಪ್ತ ಸಹಾಯಕ ಪಂಪಣ್ಣಗೆ ₹5 ಲಕ್ಷ ಹಾಗೂ ನಾಗೇಂದ್ರ ಅವರ ಆಪ್ತ ಸಹಾಯಕ ಹರೀಶ್‌ಗೆ ₹25 ಲಕ್ಷ ಬಿಬಿಎಂಪಿ ಕಚೇರಿ ಸಮೀಪದ ಶ್ರೀನಿಧಿ ಹೋಟೆಲ್ ಬಳಿಯ ಪಾರ್ಕ್‌ನಲ್ಲಿ ಸಂದಾಯ ಆಗಿತ್ತು. ಶೇಷಾದ್ರಿಪುರದ ಕೊಳಚೆ ನಿರ್ಮೂಲನಾ ಮಂಡಳಿ ಕಚೇರಿ ಬಳಿ ಪಂಪಣ್ಣಗೆ ಮತ್ತೊಮ್ಮೆ ₹50 ಲಕ್ಷ ಕೊಡಲಾಗಿತ್ತು’ ಎಂದು ತಿಳಿಸಿವೆ.

5ನೇ ಪುಟ ನೋಡಿ

ಗೂಗಲ್ ಪೇ, ಫೋನ್ ಪೇ ಬಳಕೆ

ಹೈದರಾಬಾದ್‌ನ ‘ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ’ಯಲ್ಲಿ (ಎಫ್‌ಎಫ್‌ಸಿಸಿಎಸ್ ಎಲ್) 18 ನಕಲಿ ಖಾತೆ ತೆರೆಯಲಾಗಿತ್ತು. ಆ ನಕಲಿ ಖಾತೆಗಳಿಗೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಎಂ.ಜಿ.ರಸ್ತೆ ಶಾಖೆಯಿಂದ ₹94.73 ಕೋಟಿ ವರ್ಗಾವಣೆಗೊಂಡಿತ್ತು. ನಕಲಿ ಖಾತೆದಾರರು ಇತರೆ ಬ್ಯಾಂಕ್ ಖಾತೆಗಳಿಗೆ ನೆಟ್ ಬ್ಯಾಂಕಿಂಗ್, ಆರ್‌ಟಿಜಿಎಸ್, ಫೋನ್ ಪೇ, ಗೂಗಲ್ ಪೇ ಮೂಲಕ ಹಣ ವರ್ಗಾವಣೆ ಮಾಡಿಕೊಂಡಿದ್ದರು. ಅಲ್ಲಿಂದ ಬೇರೆ ಬೇರೆ ರೂಪದಲ್ಲಿ ಹಣ ಆರೋಪಿಗಳ ಕೈಸೇರಿತ್ತು ಎಂದು ಗೊತ್ತಾಗಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ರಾಜಕೀಯವಾಗಿ ಪ್ರತಿರೋಧ ಒಡ್ಡಲು ನಮಗೂ ಗೊತ್ತಿದೆ: ಸಿದ್ದರಾಮಯ್ಯ

‘ಒಬಿಸಿ ಎಂಬ ಕಾರಣಕ್ಕೆ ಷಡ್ಯಂತ್ರ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಹಿಂದುಳಿದ ವರ್ಗಕ್ಕೆ ಸೇರಿದ ನಾನು 2ನೇ ಬಾರಿಗೆ ಮುಖ್ಯಮಂತ್ರಿಯಾಗಿರುವುದನ್ನು ಕಂಡು ಎಲ್ಲರಿಗೂ ಹೊಟ್ಟೆ ಉರಿ. ಅದನ್ನು ಸಹಿಸಿಕೊಳ್ಳಲಾಗದೇ ನನ್ನ ವಿರುದ್ಧ ಷಡ್ಯಂತ್ರ ಮಾಡುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಬೇಕೆಂದೇ, ರಾಜಕೀಯ ಕಾರಣಕ್ಕಾಗಿ ನನ್ನ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಬಿಜೆಪಿಯವರಿಗೆ ನನ್ನನ್ನು ಸಹಿಸಿಕೊಳ್ಳಲಾಗುತ್ತಿಲ್ಲ. ಹೀಗಾಗಿ, ಷಡ್ಯಂತ್ರ ಮಾಡುತ್ತಿದ್ದಾರೆ. ನನ್ನ ವಿರುದ್ಧ ದೂರಲು ಬೇರೇನೂ ಇಲ್ಲವಲ್ಲ; ಅದಕ್ಕಾಗಿ ನನ್ನ ಪತ್ನಿ ಪಡೆದ ನಿವೇಶನದ ವಿಷಯವನ್ನು ಹಿಡಿದುಕೊಂಡಿದ್ದಾರೆ. ಕಾನೂನಿನಂತೆ ನಡೆದಿರುವ ವಿಚಾರವನ್ನು ಅಕ್ರಮ ಎಂದು ಬಿಂಬಿಸುತ್ತಿದ್ದಾರೆ. ಇದಕ್ಕೆಲ್ಲಾ ಹೆದರುತ್ತೀನಾ ನಾನು’ ಎಂದು ಕೇಳಿದರು.

‘ನನ್ನ ಪತ್ನಿಗೆ ಬದಲಿ ನಿವೇಶನ ಕೊಟ್ಟ ವಿಷಯದಲ್ಲಿ ಬಿಜೆಪಿಯವರು ರಾಜಕೀಯ ಮುಂದುವರಿಸಿದರೆ ನಾವೂ ರಾಜಕೀಯವನ್ನೇ ಮಾಡಬೇಕಾಗುತ್ತದೆ. ಹೇಗೆ ಪ್ರತಿರೋಧ ತೋರಬೇಕೆಂಬುದು ನಮಗೂ ಗೊತ್ತಿದೆ’ ಎಂದು ಗುಡುಗಿದರು.

‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಮೊದಲಿನಿಂದಲೂ ಗಬ್ಬೆದ್ದು ಹೋಗಿದ್ದು, ಸ್ವಚ್ಛಗೊಳಿಸುವ ಕೆಲಸ ಮಾಡುವೆ. ಅದೇ ಬೇರೆ ಪ್ರಕರಣ. ನಾವು ನಿವೇಶನ ಪಡೆದುಕೊಂಡಿರುವುದು ಹಗರಣ ಅಲ್ಲವೇ ಅಲ್ಲ. ನಾವು ಕಾನೂನಾತ್ಮಕವಾಗಿಯೇ ಜಮೀನು ಪಡೆದಿದ್ದೇವೆ. ಕಾನೂನಿಗೆ ವಿರುದ್ಧವಾಗಿ ಆಗಿರುವುದೆಲ್ಲಿ ಎನ್ನುವುದನ್ನು ಬಿಜೆಪಿಯವರು ದಾಖಲೆಗಳ ಸಹಿತ ತೋರಿಸಲಿ’ ಎಂದು ಸವಾಲು ಹಾಕಿದರು.

> **2023ರ ಮಾರ್ಚ್‌ನಿಂದ ಈವರೆಗೆ ಒಟ್ಟು 3.37 ಲಕ್ಷ ಚದರ ಅಡಿ ಜಾಗವನ್ನು ಕೇವಲ ಐವರಿಗೆ ಮುಡಾ ನೀಡಿದೆ**
> **ಟಿ.ಎಸ್.ಶ್ರೀವತ್ಸ,** ಶಾಸಕ, ಕೃಷ್ಣರಾಜ ಕ್ಷೇತ್ರ

5ನೇ ಪುಟ ನೋಡಿ

ತಮಿಳುನಾಡಿಗೆ ನಿತ್ಯ 1 ಟಿಎಂಸಿ ಅಡಿ ನೀರು ಹರಿಸಲು ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ರಾಜ್ಯವು ಜುಲೈ 12ರಿಂದ 31ರ ವರೆಗೆ ಪ್ರತಿದಿನ 1 ಟಿಎಂಸಿ ಅಡಿ (11,500 ಕ್ಯುಸೆಕ್) ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಬೇಕು ಎಂದು ಕಾವೇರಿ ನೀರು ನಿಯಂತ್ರಣ ಸಮಿತಿ ಶಿಫಾರಸು ಮಾಡಿದೆ.

ನವದೆಹಲಿಯಲ್ಲಿ ಗುರುವಾರ ನಡೆದ ಸಮಿತಿಯ 99ನೇ ಸಭೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡು ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಭಾಗಿಯಾದರು. ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ಪ್ರತಿದಿನ ಸಂಚಿತ ನೀರಿನ ಹರಿವು ಪ್ರಮಾಣ 1 ಟಿಎಂಸಿ ಇರಲೇಬೇಕು ಎಂದು ಸಮಿತಿ ಸ್ಪಷ್ಟಪಡಿಸಿತು.

ಜಲಾಶಯಗಳಲ್ಲಿ ನೀರಿನ ಸ್ಥಿತಿಗತಿ (ಟಿಎಂಸಿ ಅಡಿಗಳಲ್ಲಿ)

ಜಲಾಶಯ	ಸಂಗ್ರಹ ಸಾಮರ್ಥ್ಯ	ಈಗಿರುವ ನೀರು	2023ರ ಜುಲೈ 11ರಂದು ಎಷ್ಟಿತ್ತು
ಹಾರಂಗಿ	8.50	6.08	4.11
ಹೇಮಾವತಿ	37.10	19.78	15.52
ಕೆಆರ್‌ಎಸ್	49.45	26.37	14.45
ಕಬಿನಿ	19.52	18.67	11

(*ಮಾಹಿತಿ: ಕೆಎಸ್‌ಎನ್‌ಎಂಡಿಸಿ)

5ನೇ ಪುಟ ನೋಡಿ

ಬಸ್ ಡಿಕ್ಕಿ: ರಸ್ತೆ ಬದಿ ನಿಂತಿದ್ದ ವ್ಯಕ್ತಿ ಸಾವು

ಆನೇಕಲ್: ಬನ್ನೇರುಘಟ್ಟ ಸಮೀಪದ ಜಂಗಲ್‌ಪಾಳ್ಯ ಬಳಿ ಗುರುವಾರ ಬಿಎಂಟಿಸಿ ಬಸ್ ಎರಡು ದ್ವಿಚಕ್ರ ವಾಹನ ಮತ್ತು ಸರಕು ಸಾಗಣೆ ವಾಹನಕ್ಕೆ ಡಿಕ್ಕಿ ಹೊಡೆದು ರಸ್ತೆ ಬದಿ ನಿಂತಿದ್ದ ವ್ಯಕ್ತಿ ಒಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ರಸ್ತೆ ಬದಿ ನಿಂತಿದ್ದ ಆಂಧ್ರಪ್ರದೇಶದ ಕೆ.ಬಿ.ಪ್ರಸಾದ್ ರಾವ್ (60) ಎಂಬುವರು ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಬೆಂಗಳೂರಿನ ಕಡೆಗೆ ಹೊರಟಿದ್ದ ಬಿಎಂಟಿಸಿ ಬಸ್ ಅಡ್ಡ ಬಂದ ಬೈಕ್ ಸವಾರನಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಎರಡು ದ್ವಿಚಕ್ರ ವಾಹನ ಮತ್ತು ಸರಕು ಸಾಗಣೆ ವಾಹನಕ್ಕೆ ಡಿಕ್ಕಿ ಹೊಡೆದಿದೆ. ನಂತರ ರಸ್ತೆ ಬದಿ ನಿಂತಿದ್ದ ಪ್ರಸಾದ್ ರಾವ್ ಅವರಿಗೂ ಡಿಕ್ಕಿ ಹೊಡೆದಿದೆ. ಅವರು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ.

22 ಪ್ರಯೋಗಾಲಯಗಳಿಗೆ ನೋಟಿಸ್ ನೀಡಿದ ಆರೋಗ್ಯ ಇಲಾಖೆ

ಡೆಂಗಿ ಪರೀಕ್ಷೆಗೆ ಅಧಿಕ ಹಣ ವಸೂಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಂಗಿ ಪರೀಕ್ಷೆಗೆ ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚುವರಿ ಹಣ ಪಡೆಯುತ್ತಿದ್ದ ನಗರದ 22 ಪ್ರಯೋಗಾಲಯಗಳಿಗೆ ಆರೋಗ್ಯ ಇಲಾಖೆ ನೋಟಿಸ್ ನೀಡಿದೆ.

ಆರೋಗ್ಯಾಧಿಕಾರಿಗಳ ತಂಡ ಬೆಂಗಳೂರು ಉತ್ತರ, ದಕ್ಷಿಣ, ಪೂರ್ವ ಮತ್ತು ಆನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿನ 31 ಖಾಸಗಿ ಸಂಸ್ಥೆಗಳಿಗೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿದೆ. ಈ ವೇಳೆ ಹಲವು ಸಂಸ್ಥೆಗಳು ಅಧಿಕ ಹಣ ಪಡೆಯುತ್ತಿರುವುದು ದೃಢಪಟ್ಟಿದೆ. ಇದರಿಂದಾಗಿ ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ ಹಾಗೂ ಕೆಪಿಎಂಇ ಕಾಯ್ದೆಯಡಿ ಆರೋಗ್ಯ ಇಲಾಖೆ ನೋಟಿಸ್ ನೀಡಿದ್ದು, ಕಾನೂನಿನ ಅಡಿ ಕ್ರಮಕೈಗೊಳ್ಳಲು ಮುಂದಾಗಿದೆ.

ಡೆಂಗಿ ಪರೀಕ್ಷೆಗೆ ಖಾಸಗಿ ಪ್ರಯೋಗಾಲಯ ಹಾಗೂ ಆಸ್ಪತ್ರೆಗಳು ಅಧಿಕ ಹಣ ವಸೂಲಿ ಮಾಡುತ್ತಿವೆ ಎಂಬ ದೂರುಗಳು ಬಂದಿದ್ದರಿಂದ ಸರ್ಕಾರವು ಕೆಲ ದಿನಗಳ ಹಿಂದೆ ಈ ಪರೀಕ್ಷೆಗೆ ದರ ನಿಗದಿ ಮಾಡಿ, ಆದೇಶ ಹೊರಡಿಸಿದೆ. ಎಲಿಸಾ ಎನ್‌ಎಸ್ 1 ಪರೀಕ್ಷೆಗೆ ₹300, ಎಲಿಸಾ ಐಜಿಎಂ ಪರೀಕ್ಷೆಗೆ ₹300 ನಿಗದಿಪಡಿಸಲಾಗಿದೆ. 'ರ್‍ಯಾಪಿಡ್ ಕಾರ್ಡ್' ಪರೀಕ್ಷೆಗೆ ₹250 ಗೊತ್ತುಪಡಿಸಲಾಗಿದೆ.

ನೋಟಿಸ್ ಪಡೆದ ಸಂಸ್ಥೆಗಳು: ಯಲಹಂಕದ ಪ್ರೈಮ್ ಡಯಾಗ್ನೋಸ್ಟಿಕ್ಸ್, ಆಸ್ಟರ್ ಕ್ಲಿನಿಕ್, ಸಿಗ್ಮಾ ಡಯಾಗ್ನೋಸ್ಟಿಕ್ಸ್, ದೊಡ್ಡಬೊಮ್ಮಸಂದ್ರದ ಶ್ರೀ ರಾಘವ್ ಕ್ಲಿನಿಕ್, ವೈಟ್‌ಫೀಲ್ಡ್‌ನ ಡಾ. ಲಾಲ್ ಪಥ್ ಲ್ಯಾಬ್ಸ್, ಹೊರಮಾವಿನ ಟ್ರಸ್ಟ್ ಇನ್ ಆಸ್ಪತ್ರೆ, ಎಸ್‌ಜೆಪಿ ಆಸ್ಪತ್ರೆ, ಮೆಡಾಲ್ ಕ್ಲೂಮ್ಯಾಕ್ಸ್ ಡಯಾಗ್ನೋಸ್ಟಿಕ್ಸ್, ಹೊಸೂರು ರಸ್ತೆಯ ಟಿಕೆಎಸ್ ಡಯಾಗ್ನೋಸ್ಟಿಕ್ ಸೆಂಟರ್, ವಿನೋದ್ ಡಯಾಗ್ನೋಸ್ಟಿಕ್ಸ್ ಮತ್ತು ಹೆಬ್ಬಗೋಡಿಯ ಮಹೇಶ ಹೆಲ್ತ್ ಕೇರ್ ಸಂಸ್ಥೆಗೆ ನೋಟಿಸ್ ನೀಡಲಾಗಿದೆ.

ಜೆ.ಪಿ.ನಗರದ ಕ್ರಿಯಾ ಆಸ್ಪತ್ರೆ, ಎಲೆಕ್ಟ್ರಾನಿಕ್ ಸಿಟಿಯ ಸ್ಪಿಂಗ್ರ್ ಲೈಫ್ ಹೆಲ್ತ್ ಕೇರ್, ಇ-ಸಿಟಿ ಆಸ್ಪತ್ರೆ, ಜಯನಗರದ ಬಯೋ ಲೈನ್ ಲ್ಯಾಬೊರೇಟರೀಸ್, ಆಂಕ್ವೆಸ್ಟ್, ಕಮ್ಮನಹಳ್ಳಿಯ ಪ್ರಣವ್ ಡಯಾಗ್ನೋಸ್ಟಿಕ್ಸ್, ಬಾಗಲೂರಿನ ಬಾಲಾಜಿ ಲ್ಯಾಬ್ ಡಯಾಗ್ನೋಸ್ಟಿಕ್ಸ್, ಎಸ್‌ಎಲ್‌ವಿ ಡಯಾಗ್ನೋಸ್ಟಿಕ್ಸ್, ನಾಗವಾರ ಮುಖ್ಯ ರಸ್ತೆಯಲ್ಲಿನ ಆಲ್ಟಿಸ್ ಆಸ್ಪತ್ರೆ, ಕಾರ್ಟುಲಸ್ ಡಯಾಗ್ನೋಸ್ಟಿಕ್ಸ್ ಮತ್ತು ಕಮ್ಮನಹಳ್ಳಿಯ ಈಶಾ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಅಧಿಕ ಹಣ ಪಡೆದ ಕಾರಣ ನೋಟಿಸ್ ಪಡೆದಿವೆ.



ಡೆಂಗಿ ಪರೀಕ್ಷೆಗೆ ಸಂಬಂಧಿಸಿದಂತೆ ಯಲಹಂಕದ ಪ್ರೈಮ್ ಡಯಾಗ್ನೋಸ್ಟಿಕ್ಸ್‌ನಲ್ಲಿ ಆರೋಗ್ಯಾಧಿಕಾರಿಗಳ ತಂಡ ಪರಿಶೀಲನೆ ನಡೆಸಿತು.

'ಹೆಚ್ಚುವರಿ ದರ ಪಡೆದರೆ ದೂರು ಸಲ್ಲಿಸಿ'

ಡೆಂಗಿ ಪರೀಕ್ಷೆಗೆ ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚುವರಿ ದರ ಪಡೆಯುವ ಆಸ್ಪತ್ರೆ ಹಾಗೂ ಪ್ರಯೋಗಾಲಯಗಳ ವಿರುದ್ಧ ಸಾರ್ವಜನಿಕರು ದೂರು ಸಲ್ಲಿಸಬಹುದಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಬೆಂಗಳೂರು ನಗರ ಜಿಲ್ಲೆ, ಹಳೆ ಕ್ಷಯರೋಗಿಗಳ ಆಸ್ಪತ್ರೆ ಆವರಣ, ಹಳೆ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು-38 ಈ ವಿಳಾಸಕ್ಕೆ ದೂರು ಸಲ್ಲಿಸಬಹುದು. ಇ-ಮೇಲ್ ವಿಳಾಸ dhobangaloreurban@gmail.com ಅಥವಾ ಮೊ. 9449843037ಕ್ಕೆ ಸಂಪರ್ಕಿಸಿ, ದೂರು ಸಲ್ಲಿಸಬಹುದು ಎಂದು ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

'ಬೀರಪ್ಪ–85' ಅಭಿನಂದನಾ ಸಮಾರಂಭ 13ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾವಿದ, ನಿವೃತ್ತ ಉಪ ಮುಖ್ಯ ಸಂಚಾರ ವ್ಯವಸ್ಥಾಪಕ ಬೀರಪ್ಪ ಅವರಿಗೆ 'ಬೀರಪ್ಪ–85' ಅಭಿನಂದನಾ ಕಾರ್ಯಕ್ರಮವನ್ನು ಜುಲೈ 13ರಂದು ಮಧ್ಯಾಹ್ನ 3ಕ್ಕೆ ವಸಂತನಗರದ ಡಿ. ದೇವರಾಜ ಅರಸು ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

'ಬೀರಪ್ಪ–85 ಅಭಿನಂದನಾ ಸಮಿತಿ' ಗೌರವಾಧ್ಯಕ್ಷ ಎಚ್.ಎಂ. ರೇವಣ್ಣ ಅವರು ಈ ಬಗ್ಗೆ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬಿಟಿಎಸ್‌ನಲ್ಲಿ ಸಣ್ಣ ಉದ್ಯೋಗಕ್ಕೆ ಸೇರಿದ್ದ ಅವರು ಓದು ಮತ್ತು ಪ್ರಯತ್ನದಿಂದ ಕೆಎಸ್‌ಆರ್‌ಟಿಸಿಯ ಉಪ ಮುಖ್ಯ ಸಂಚಾರ ವ್ಯವಸ್ಥಾಪಕ ಹುದ್ದೆವರೆಗೆ ಬಡ್ತಿ ಪಡೆದು ನಿವೃತ್ತರಾಗಿದ್ದಾರೆ. ಹವ್ಯಾಸಕ್ಕಾಗಿ ನಾಟಕ ಮಾಡುತ್ತಿದ್ದ ಅವರು ಮುಂದೆ ಚಿತ್ರ ನಿರ್ಮಾಣ ಮಾಡಿದ್ದರು. ಚಿತ್ರನಟನಾಗಿಯೂ ಹೆಸರು ಮಾಡಿದ್ದಾರೆ ಎಂದರು.

ಸಮಾನ ಮನಸ್ಕರೊಂದಿಗೆ ಸೇರಿ ಏಳೂವರೆ ವರ್ಷಗಳಿಂದ ನಿಮ್ಹಾನ್ಸ್ ಕಾಂಪೌಂಡ್‌ನಲ್ಲಿ ಪ್ರತಿದಿನ 800 ರೋಗಿಗಳು ಮತ್ತು ಅವರ ಸಂಬಂಧಿಗಳಿಗೆ ಆಹಾರ ವಿತರಣೆ ಮಾಡುತ್ತಿದ್ದಾರೆ. ಕುರುಬ ಸಮಾಜದ ಹೆಣ್ಣು ಮಕ್ಕಳಿಗಾಗಿಯೇ ವಸತಿನಿಲಯ ತೆರೆಯಲು ಕಾರಣೀಭೂತರಲ್ಲಿ ಅವರು ಒಬ್ಬರು ಎಂದು ತಿಳಿಸಿದರು.

ಅಭಿಮಾನಿ ಬಳಗವು ರೂಪಿಸಿರುವ 'ಸರಿಕೆ' ಅಭಿನಂದನಾ ಹೊತ್ತಿಗೆಯನ್ನು ಮತ್ತು ಹುಲಿ ಚಂದ್ರಶೇಖರ್ ಅವರ ನಿರ್ದೇಶನದ 'ಸಂವೇದನಾಶೀಲ ಸಾಹಸಿ' ಕಿರುಚಿತ್ರವನ್ನು ಅನಾವರಣಗೊಳಿಸಿ ಅಭಿನಂದನೆ ಸಲ್ಲಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ರಾಮಲಿಂಗಾರೆಡ್ಡಿ, ಬೈರತಿ ಸುರೇಶ ಭಾಗವಹಿಸಲಿದ್ದಾರೆ. ವಿಜಯಪುರದ ಅಕ್ಕಮಹಾದೇವಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಓಂಕಾರ ಕಾಕಡೆ, ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ. ರವಿ ಮಾತನಾಡಲಿದ್ದಾರೆ. ಬೆಂಗಳೂರು ಕನಕಗುರು ಪೀಠದ ಸಿದ್ಧರಾಮಾನಂದ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಮಾಜಿ ಯೋಧರಿಗಾಗಿ 19ರಂದು ಉದ್ಯೋಗ ಮೇಳ

ಬೆಂಗಳೂರು: ರಕ್ಷಣಾ ಸಚಿವಾಲಯದ ಪುನರ್ವಸತಿ ಮಹಾನಿರ್ದೇಶನಾಲಯದ (ಡಿಜಿಆರ್) ವತಿಯಿಂದ ಮಾಜಿ ಯೋಧರಿಗಾಗಿ ಜುಲೈ 19ರಂದು ಜಾಲಹಳ್ಳಿಯ ವಾಯುಪಡೆ ನಿಲ್ದಾಣ (ಎಂಟಿ ಕಾಂಪ್ಲೆಕ್ಸ್)ದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ. ಬೆಳಿಗ್ಗೆ 7 ರಿಂದ 10ರ ವರೆಗೆ ಮಾಜಿ ಸೈನಿಕರ ನೋಂದಣಿ ಕಾರ್ಯ ನಡೆಯಲಿದೆ. ಹೆಸರು ನೋಂದಾಯಿಸಲು ತಮ್ಮ ಇಎಸ್‌ಎಂ ಗುರುತಿನ ಚೀಟಿ ಮತ್ತು ಇತ್ತೀಚಿನ ಸ್ವವಿವರದ ಐದು ಪ್ರತಿಗಳನ್ನು ಇತ್ತೀಚಿನ ಭಾವಚಿತ್ರದೊಂದಿಗೆ ತರಬೇಕು.

ಕಾರ್ಪೊರೇಟ್ ಸಂಸ್ಥೆಗಳ ಪ್ರತಿನಿಧಿಗಳು ಆಕಾಂಕ್ಷಿಗಳ ಸಂದರ್ಶನ ಮತ್ತು ದಾಖಲೆಗಳ ಪರಿಶೀಲನೆ ನಡೆಸುವರು. ವಿವಿಧ ಹುದ್ದೆಗಳ ನೇಮಕಾತಿಗಳಲ್ಲಿ ಇಎಸ್‌ಎಂ ಅನ್ನು ಬಳಸಿಕೊಳ್ಳಲಿದ್ದಾರೆ.

ಕಂಪನಿ, ಕಾರ್ಪೊರೇಟ್ ಸಂಸ್ಥೆಗಳು, ಉದ್ಯೋಗದಾತರು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡು ತಮ್ಮ ಮಳಿಗೆಗಳನ್ನು www.dgrindia.gov.in ನಲ್ಲಿ ಕಾಯ್ದಿರಿಸಬಹುದು. ಮಾಹಿತಿಗೆ ಜಂಟಿ ನಿರ್ದೇಶಕರು (ಎಸ್ ಇ ಮತ್ತು ಸಿಐ), ಡೈರೆಕ್ಟರ್ ಜನರಲ್ ರಿಸೆಟ್ಲಮೆಂಟ್, ವೆಸ್ಟ್ ಬ್ಲಾಕ್ IV, ಆರ್.ಕೆ.ಪುರಂ, ನವದೆಹಲಿ–110066 ಅಥವಾ ದೂರವಾಣಿಸಂಖ್ಯೆ011-20862542ಅಥವಾ ಇ ಮೇಲ್ seopadgr@desw.gov.in,drzspne@desw.gov.in ಗೆ ಕಳುಹಿಸಬಹುದು ಎಂದು ಪುನರ್ವಸತಿ ಮಹಾನಿರ್ದೇಶನಾಲಯದ ಪ್ರಕಟಣೆ ತಿಳಿಸಿದೆ.

ಅಂಗವಿಕಲರ ಕ್ರೀಡಾ ಸಂಸ್ಥೆ ಅಧ್ಯಕ್ಷ ವೆಂಕಟೇಶ್

ಬೆಂಗಳೂರು: ರಾಜ್ಯ ಅಂಗವಿಕಲರ ಕ್ರೀಡಾ ಸಂಸ್ಥೆ ಅಧ್ಯಕ್ಷರಾಗಿ ಕೆ.ವೈ. ವೆಂಕಟೇಶ್ ಅವರನ್ನು ಆಯ್ಕೆ ಮಾಡಲಾಗಿದೆ. ಕಾರ್ಯಕಾರಿ ಸಮಿತಿ ಸಭೆಯಲ್ಲಿ ಉಪಾಧ್ಯಕ್ಷರಾಗಿ ಎಂ.ನೀಲಾಂಜನೇಯ, ವೈ.ಬಿ.ಶಿವಪ್ರಸಾದ್ ಮತ್ತು ಸಮಿತಿ ಸದಸ್ಯರಾಗಿ ಡಿ.ರಮೇಶ್ ಅವರನ್ನು ನೇಮಕ ಮಾಡಲಾಗಿದೆ.

ಸುದ್ದಿ 2 ನಿಮಿಷ

ಹೂಡಿಕೆ ತನ್ನಿ: ಜಪಾನ್ ಉದ್ಯಮಿಗಳಿಗೆ ಕರೆ

ಬೆಂಗಳೂರು: ಜಪಾನ್‌ನಿಂದ ರಾಜ್ಯಕ್ಕೆ ಹೆಚ್ಚಿನ ಹೂಡಿಕೆ ತರಲು, ಈಗಾಗಲೇ ಹೂಡಿಕೆ ಮಾಡಿರುವ ಜಪಾನ್ ದೇಶದ ಕಂಪನಿಗಳೇ ಕರ್ನಾಟಕದ ರಾಯಭಾರಿಗಳಾಗಿ ಕಾರ್ಯನಿರ್ವಹಿಸಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಇಲ್ಲಿನ ಜಪಾನ್ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ (ಜೆಸಿಸಿಐ) ಏರ್ಪಡಿಸಿದ್ದ, ರಾಜ್ಯದಲ್ಲಿನ ಜಪಾನ್ ಉದ್ಯಮ ಸಂಸ್ಥೆಗಳ ಜತೆಗಿನ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕರ್ನಾಟಕ ಹೇಗೆ ಹೂಡಿಕೆ ಸ್ನೇಹಿ, ಇಲ್ಲಿ ಲಭ್ಯ ಇರುವ ಮಾನವ ಸಂಪನ್ಮೂಲ, ಕಾನೂನು ಸುವ್ಯವಸ್ಥೆ, ಹವಾಮಾನ ಇತ್ಯಾದಿ ವಿಷಯಗಳ ಬಗ್ಗೆ ತಮ್ಮ ದೇಶದ ಇತರ ಕಂಪನಿಗಳಿಗೆ ಮನವರಿಕೆ ಮಾಡಿಕೊಡಬೇಕು ಎಂದು ಅವರು ಜಪಾನ್ ಉದ್ಯಮಿಗಳಿಗೆ ಕರೆ ನೀಡಿದರು.

ಈಚೆಗೆ ತಮ್ಮ ನೇತೃತ್ವದ ನಿಯೋಗವು ಜಪಾನ್‌ಗೆ ಭೇಟಿ ನೀಡಿದ್ದಾಗ, ಜಪಾನ್ ಮತ್ತು ಕರ್ನಾಟಕಕ್ಕೆ ಪರಸ್ಪರ ಲಾಭವಿರುವ ಹಲವು ಅಂಶಗಳನ್ನು ಗಮನಿಸಲಾಯಿತು. ಅಲ್ಲಿನ ಸಾರಿಗೆ ವ್ಯವಸ್ಥೆ ಅಚ್ಚರಿ ಮೂಡಿಸಿತು ಎಂದು ಅವರು ಹೇಳಿದರು.

ಮುಂದಿನ ಫೆಬ್ರುವರಿ 12ರಿಂದ 14ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಎಲ್ಲ ಉದ್ಯಮ ಪ್ರತಿನಿಧಿಗಳಲ್ಲಿ ಮನವಿ ಮಾಡಿದರು.

ನಿಯಮ ಉಲ್ಲಂಘನೆ 192 ಸವಾರರ ವಿರುದ್ಧ ಪ್ರಕರಣ

ಬೆಂಗಳೂರು: ನಗರದಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ 192 ವಾಹನ ಸವಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಒಟ್ಟು ₹96 ಸಾವಿರ ದಂಡ ವಸೂಲು ಮಾಡಲಾಗಿದೆ.

ರಸ್ತೆಗಳಲ್ಲಿ ಏಕಮುಖ ಸಂಚಾರ ನಿಯಮ ಉಲ್ಲಂಘಿಸಿದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ದೂರುಗಳು ಬಂದ ಹಿನ್ನೆಲೆಯಲ್ಲಿ ಪೂರ್ವ ವಿಭಾಗದ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ, ವಾಹನಗಳ ತಪಾಸಣೆ ನಡೆಸಿದ್ದಾರೆ. ಈ ಪೈಕಿ 167 ವಾಹನ ಸವಾರರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಪಾದಚಾರಿ ಮಾರ್ಗದ ಮೇಲೆ ವಾಹನ ಚಲಾಯಿಸಿದ ಪ್ರಕರಣದಲ್ಲಿ 25 ಮಂದಿ ವಿರುದ್ಧ ದೂರು ದಾಖಲಿಸಲಾಗಿದೆ.

ಟ್ಯಾಂಕರ್ ತಪಾಸಣೆ: 216 ವಾಟರ್ ಟ್ಯಾಂಕರ್‌ಗಳನ್ನು ತಪಾಸಣೆ ಮಾಡಿ, ದಾಖಲಾತಿ ಹೊಂದಿರದ 94 ವಾಹನಗಳ ಚಾಲಕರ ಮೇಲೆ ಪ್ರಕರಣ ದಾಖಲಿಸಲಾಗಿದೆ. ಒಟ್ಟು ₹44,500 ದಂಡ ವಸೂಲು ಮಾಡಲಾಗಿದೆ.

ಸುಗಮ ವಾಹನ ಸಂಚಾರಕ್ಕೆ ಸವಾರರು ಕಡ್ಡಾಯವಾಗಿ ನಿಯಮ ಪಾಲಿಸಬೇಕು. ಸಂಚಾರ ನಿಯಮಗಳ ಕುರಿತು ಅರಿವು ಮೂಡಿಸಲಾಗುವುದು ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ನಿರೂಪಕಿ ದಿವ್ಯಾ ವಸಂತ ಬಂಧನ

ಸುಲಿಗೆ ಪ್ರಕರಣ: ಕೇರಳದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಇಂದಿರಾನಗರ ಸೇರಿದಂತೆ ಹಲವು ಕಡೆಯ ಸ್ಪಾಗಳಲ್ಲಿ ಸುಲಿಗೆ ನಡೆಸಿದ್ದ ಆರೋಪದಡಿ ಸುದ್ದಿ ವಾಹಿನಿ ನಿರೂಪಕಿ ದಿವ್ಯಾ ವಸಂತ ಅವರನ್ನು ಜೀವನ ಬಿಮಾನಗರ ನಗರ ಠಾಣೆ ಪೊಲೀಸರು ಕೇರಳದಲ್ಲಿ ಗುರುವಾರ ಬಂಧಿಸಿದ್ದಾರೆ.

'ಆರೋಪಿಯನ್ನು ನಗರಕ್ಕೆ ಕರೆತರಲಾಗುತ್ತಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ ಕಸ್ಟಡಿಗೆ ಪಡೆದುಕೊಳ್ಳಲಾಗುವುದು' ಎಂದು ಪೊಲೀಸರು ಹೇಳಿದರು.

ಇಂದಿರಾನಗರ ಸ್ಪಾ ವ್ಯವಸ್ಥಾಪಕರನ್ನು ಬೆದರಿಸಿ ₹15 ಲಕ್ಷ ಸುಲಿಗೆ ಯತ್ನ ಪ್ರಕರಣದಲ್ಲಿ ದಿವ್ಯಾ ಅವರು ತಲೆಮರೆಸಿಕೊಂಡಿದ್ದರು. ಇದೇ ಪ್ರಕರಣದಲ್ಲಿ 'ರಾಜ್' ನ್ಯೂಸ್ ಸುದ್ದಿ ವಾಹಿನಿ ಕಾರ್ಯನಿರ್ವಾಹಕ ಅಧಿಕಾರಿ(ಸಿಇಒ) ರಾಜಾನುಕುಂಟೆ ವೆಂಕಟೇಶ್ ಮತ್ತು ದಿವ್ಯಾ ವಸಂತ ಅವರ ಸಹೋದರ ಸಂದೇಶ್ ಅವರನ್ನೂ ಪೊಲೀಸರು ಬಂಧಿಸಿದ್ದರು.

ಪ್ರಕರಣ ದಾಖಲಾದ ಮೇಲೆ ದಿವ್ಯಾ ಅವರು ಸ್ನೇಹಿತರ ನೆರವು ಕೋರಿ ಕೇರಳಕ್ಕೆ ಪರಾರಿ ಆಗಿದ್ದರು. ಸಚಿನ್ ಮತ್ತು ಆಕಾಶ ಎಂಬುವವರ ಪತ್ತೆಗೆ ಶೋಧ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ವೆಂಕಟೇಶ್ ಹಾಗೂ ದಿವ್ಯಾ ಅವರು ಸುಲಿಗೆ ಕೃತ್ಯಗಳಿಗೆ ವಾಟ್ಸ್‌ಆ್ಯಪ್‌ನಲ್ಲಿ 'ಸ್ಕೈ ರಿಸರ್ಚ್ ಟೀಂ' ಹೆಸರಿನ ಗ್ರೂಪ್ ರಚಿಸಿಕೊಂಡಿದ್ದರು. ಈ ಗ್ರೂಪ್‌ನಲ್ಲಿ ತಮ್ಮ ಕಾರ್ಯಸೂಚಿಗಳ ಬಗ್ಗೆ ಆರೋಪಿಗಳು ಚರ್ಚಿಸುತ್ತಿದ್ದರು. ಆರೋಪಿಗಳು ಒಂದು ತಂಡ ಕಟ್ಟಿಕೊಂಡು ಇತ್ತೀಚಿಗೆ ಇಂದಿರಾನಗರದ 100 ಅಡಿ ರಸ್ತೆ 15ನೇ ಮುಖ್ಯರಸ್ತೆಯ 'ಟ್ರೀ ಸ್ಪಾ ಆ್ಯಂಡ್ ಬ್ಯೂಟಿ' ಪಾರ್ಲರ್‌ನ ವ್ಯವಸ್ಥಾಪಕ ಶಿವಶಂಕರ್‌ಗೆ ವೇಶ್ಯಾವಾಟಿಕೆ ನಡೆದಿದೆ ಎಂದು ಬೆದರಿಸಿ ಹಣ ಸುಲಿಗೆಗೆ ಯತ್ನಿಸಿದ್ದರು. ತಾಂತ್ರಿಕ ಮಾಹಿತಿ ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ವೆಂಕಟೇಶ್ ಹಾಗೂ ದಿವ್ಯಾ ತಂಡ ಕೆಲ ದಿನಗಳ ಹಿಂದೆ ಬ್ಯೂಟಿ ಪಾರ್ಲರ್‌ಗೆ ಈಶಾನ್ಯ ರಾಜ್ಯದ ಯುವತಿಯನ್ನು ಕೆಲಸಕ್ಕೆ ಸೇರಿಸಿತ್ತು. ಬಳಿಕ ಗ್ರಾಹಕನ ಸೋಗಿನಲ್ಲಿ ಸ್ಪಾಗೆ ದಿವ್ಯಾ ಸೋದರ ಸಂದೇಶ್ ತೆರಳಿದ್ದರು. ಈ ಮೊದಲೇ ಸ್ಪಾನಲ್ಲಿ ಕೆಲಸದಲ್ಲಿದ್ದ ತನ್ನ ತಂಡದ ಯುವತಿ ಬಳಿಯೇ ಮಸಾಜ್‌ಗೆ ದಿನಾಂಕ ನಿಗದಿಪಡಿಸಿದ್ದರು. ಆಗ ಕೊಠಡಿಯಲ್ಲಿ ರಹಸ್ಯ ಕ್ಯಾಮೆರಾ ಇಟ್ಟು, ಗ್ರಾಹಕರು ಸಲುಗೆಯಿಂದಿರುವ ದೃಶ್ಯಾವಳಿಗಳನ್ನು ಸಂದೇಶ್ ಚಿತ್ರೀಕರಿಸಿಕೊಂಡಿದ್ದರು. ಬಳಿಕ ತನ್ನ ವಾಹಿನಿಯ ವರದಿಗಾರ್ತಿಯನ್ನು ಸ್ಪಾಗೆ ಕಳುಹಿಸಿ ವೆಂಕಟೇಶ್ ಹಣ ಸುಲಿಗೆಗೆ ಯತ್ನಿಸಿದ್ದರು' ಎಂದು ಪೊಲೀಸರು ಹೇಳಿದರು.

ದಿವ್ಯಾ ವಸಂತ

ಈ ಹಿಂದೆ ಖಾಸಗಿ ಸುದ್ದಿವಾಹಿನಿಯಲ್ಲಿ ನಿರೂಪಕಿಯಾಗಿದ್ದ ದಿವ್ಯಾ ಅವರು ಕಾರ್ಯಕ್ರಮವೊಂದರಲ್ಲಿ 'ಇಡೀ ರಾಜ್ಯವೇ ಖುಷಿ ಪಡೋ ಸುದ್ದಿ' ಎಂದು ಹೇಳಿ ಸದ್ದು ಮಾಡಿದ್ದರು.

ನಿಧನ

ಶ್ರೀ ಎಸ್. ಎಂ. ಕೃಷ್ಣಮೂರ್ತಿ
ನಿವೃತ್ತ, ಉಪ ಆಯುಕ್ತರು, ಬೆಂಗಳೂರು ನಗರ ಪಾಲಿಕೆ

ಇವರು ದಿನಾಂಕ: 11.07.2024 ರಂದು ಸಂಜೆ 7.40ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 12.07.2024 ರಂದು ಶುಕ್ರವಾರ, ಮಧ್ಯಾಹ್ನ 1.00 ಗಂಟೆಗೆ ಕಲಪಳ್ಳಿಯ ವಿದ್ಯುತ್ ಚಿತಗಾರದಲ್ಲಿ ನಡೆಸಲಾಗುವುದು.

ದುಃಖತಪ್ತರು: ಕುಟುಂಬವರ್ಗದವರು.

Contact no - +917259198430

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಸಂಚಾರ (ವಾಣಿಜ್ಯ) ಇಲಾಖೆ, 2ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ, ಕೆ.ಹೆಚ್.ರಸ್ತೆ, ಬೆಂಗಳೂರು–560027 ದೂರವಾಣಿ ಸಂಖ್ಯೆ: 080 22537575

ವೆಬ್‌ಸೈಟ್ : www.mybmtc.com ಇ–ಮೇಲ್ : ctmc@mybmtc.com

ಸಂಖ್ಯೆ:ಬೆಂಮಸಾಸಂ/ಕೇಕಸಂ/ವಾ1577/1608/24–25 ದಿನಾಂಕ:11.07.2024

ಟೆಂಡರ್ ಪ್ರಕಟಣೆ ಸಂಖ್ಯೆ– 05/2024–25 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

... www.kppp.karnataka.gov.in ... 080-46010000; 080-68948777; 080-22483777 ... ctmc@mybmtc.com ...

ಸಹಿ/– ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) (ಟೆಂಡರ್ ಕರೆಯುವ ಪ್ರಾಧಿಕಾರ)

ಸಾರ್ವಜನಿಕ ಪ್ರಕಟಣೆ

[illegible]

ಸ್ಥಳ: ಬೆಂಗಳೂರು
ದಿನಾಂಕ: ಜುಲೈ 11, 2024

ಸಹಿ/– ಪ್ರಸನ್ನ ಹೈ ಶ್ರೀಂಗೇರಿ, ಅಡ್ವೊಕೇಟ್

ಕೇಂದ್ರೀಯ ವಿದ್ಯಾಲಯ

ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯ ಪರಿಸರ, ಬೆಂಗಳೂರು–560017
(An Autonomous Body under Ministry of Education, Govt of India)
Tel: 080-25211610, Website: https://nal.kvs.ac.in, E-Mail: kvnal05@gmail.com
Ref.: F.13049/K.V.(N.A.L)/2024-25/ Date: 11/07/2024

ಗುತ್ತಿಗೆ ಶಿಕ್ಷಕರ ನೇಮಕಾತಿಗೆ ಸೂಚನೆ

... https://nal.kvs.ac.in ... ಸಹಿ/– ಪ್ರಾಂಶುಪಾಲರು

ನೈಋತ್ಯ ರೈಲ್ವೆ

... www.ireps.gov.in ... South Western Railway · SWR ... SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಇಓಎಲ್‌ಬಿ6ಗೇಟ್ಸ್_ಎಲ್‌ಸಿ129_ಎಲ್‌ಸಿ143, ದಿನಾಂಕ : 06-07-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹೆಬ್ಬಾಳ – ಬಾಣಸವಾಡಿ ನಡುವೆ ಎಲ್‌ಸಿ 143 (ಕಿಮೀ 213/200–300) ಯಲ್ಲಿ, ಬೆಂಗಳೂರು – ಜೋಲಾರಪೇಟೆ ಸೆಕ್ಷನ್‌ನ ಎಲ್‌ಸಿ 129 ದೇವನಗೊಂತಿ (ಕಿಮೀ 325/400–500) ನಲ್ಲಿ ...	ರೂ. 91,63,332.42

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29–07–2024 ... www.ireps.gov.in ...

ನೈಋತ್ಯ ರೈಲ್ವೆ

... ರೂ. 81,98,353.85 ... 30–07–2024 ... www.ireps.gov.in ...

ನೈಋತ್ಯ ರೈಲ್ವೆ

... ದಿನಾಂಕ : 05-07-2024 ... 04–10–2024 ... www.ireps.gov.in ...

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ, ಕೋಲಾರ–563101

e-mail : eepwdkolar07@gmail.com, website: www.kpwd.gov.in, e-portal: http://kppp.karnataka.gov.in
ದೂರವಾಣಿ: 08152–222022, ಫ್ಯಾಕ್ಸ್: 08152–227443

ಇ–ಟೆಂಡರ್ ಪ್ರಕಟಣೆ – ಕೆಡಬ್ಲ್ಯು–4
ಟೆಂಡರ್ ಪ್ರಕಟಣೆ ಸಂಖ್ಯೆ–04/ 2024–25 ದಿನಾಂಕ: 04.07.2024

... 20.07.2024 ... 22.07.2024 ... http://kppp.karnataka.gov.in ...

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಲೋ.ಇ. ಕೋಲಾರ ವಿಭಾಗ, ಕೋಲಾರ

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಎಲೆಕ್ಟ್ರೋ-ಆಪ್ಟಿಕ್ ಸಿಸ್ಟಮ್‌ಗಳ ಪ್ರಯೋಗಾಲಯ (ಎಲ್‌ಇಒಎಸ್)
ಪೀಣ್ಯ, ಬೆಂಗಳೂರು–560058, ಎಲ್‌ಇಒಎಸ್ ನಿರ್ವಾಹಕ ಸಮೂಹ (ಎಲ್‌ಸಿಎಂಜಿ)
(ದೂರವಾಣಿ: (080)–22685088, 5193, 5093, 5086, (ಫ್ಯಾಕ್ಸ್): (080)–28392310)

... LEOS/CMG/EMW-08/2024-25 ... 08.07.2024 ... 12.07.2024 ... 06.08.2024 ... www.isro.gov.in ... www.tenderwizard.com/ISRO ...

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)
ಮುಖ್ಯಕಛೇರಿ, ನಂ. 6/13/1, 10ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು– 560072. ದೂರವಾಣಿ: 080–22282220
ಇ–ಮೇಲ್: kredlmd@gmail.com, www.kredl.karnataka.gov.in

ಸಂ.ಕೆ.ಆರ್.ಇ.ಡಿ.ಎಲ್/07ಎಸ್.ಜಿ/1681/2024 ದಿನಾಂಕ:11.07.2024

ಆಸಕ್ತಿ ವ್ಯಕ್ತಪಡಿಸುವಿಕೆ ಪ್ರಕಟಣೆ

ಕೆ.ಆರ್.ಇ.ಡಿ.ಎಲ್. ವತಿಯಿಂದ ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿ 500 ಮೆ.ವ್ಯಾ. ಸಾಮರ್ಥ್ಯದ ಸೋಲಾರ್ ಪಾರ್ಕ್‌ನ್ನು ಸ್ಥಾಪಿಸಲು ರೈತರ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವ ಕುರಿತು.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು (KREDL) ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿ 500 ಮೆ.ವ್ಯಾ ಸಾಮರ್ಥ್ಯದ ಸೋಲಾರ್ ಪಾರ್ಕ್‌ನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿರುತ್ತದೆ. ಸದರಿ ಪಾರ್ಕ್ ಸ್ಥಾಪನೆಗಾಗಿ ಒಂದೇ ಕಡೆ ಅಂದಾಜು 2000 ಎಕರೆಯಷ್ಟು ಜಮೀನಿನ ಅವಶ್ಯಕತೆ ಇರುತ್ತದೆ. ಈ ಜಮೀನನ್ನು ಸುಮಾರು 28 ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹೊಂದಲು ಸಂಸ್ಥೆಯು ಬಯಸಿದೆ. ಗುತ್ತಿಗೆ ಪಡೆದ ಜಮೀನಿಗೆ ಪ್ರತಿ ಎಕರೆ ವಿಸ್ತೀರ್ಣಕ್ಕೆ ವಾರ್ಷಿಕ ಗುತ್ತಿಗೆ ದರವನ್ನು ಈಗಾಗಲೇ ಸ್ಥಾಪಿಸಿದ 2050 ಮೆ.ವ್ಯಾ ಸಾಮರ್ಥ್ಯದ ಪಾವಗಡ ಸೋಲಾರ್ ಪಾರ್ಕ್ ಮಾದರಿಯಡಿ ನಿಗದಿಪಡಿಸಲಾಗುವುದು. ಈ ಯೋಜನೆಗೆ ಗುತ್ತಿಗೆ ಆಧಾರದ ಮೇಲೆ ಭೂಮಿ ನೀಡಲು ಆಸಕ್ತಿಯುಳ್ಳ ರೈತರು ತಮ್ಮ ಒಪ್ಪಿಗೆಯನ್ನು ಲಿಖಿತವಾಗಿ ಕೆಳಕಂಡ ನಮೂನೆಯಲ್ಲಿ **ದಿನಾಂಕ:16.08.2024 ರೊಳಗೆ** ಸಂಬಂಧಪಟ್ಟ ದಾಖಲಾತಿಗಳೊಂದಿಗೆ ವಿವರಗಳನ್ನು ಕರ್ನಾಟಕ ಸೌರ ಶಕ್ತಿ ಅಭಿವೃದ್ಧಿ ನಿಗಮ ನಿಯಮಿತ, ತಿರುಮಣಿ ಗ್ರಾಮ, ನಾಗಲಮಡಿಕೆ ಹೋಬಳಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ಇಲ್ಲಿ ನೀಡಬೇಕೆಂದು ಕೋರಲಾಗಿದೆ. ಒಪ್ಪಿಗೆ ಪತ್ರದ ಮಾದರಿಯು ಕೆ.ಆರ್.ಇ.ಡಿ.ಎಲ್. ವೆಬ್‌ಸೈಟ್:**https://kredl.karnataka.gov.in** ನಲ್ಲಿ ಲಭ್ಯವಿರುತ್ತದೆ.

ಭೂಮಾಲೀಕರ ಹೆಸರು	ಸರ್ವೆ ನಂ.	ಹಿಸ್ಸಾ ನಂ.	ಭೂಮಿಯ ವ್ಯಾಪ್ತಿ ಗುಂಟೆಗಳಲ್ಲಿ	ಗ್ರಾಮ ಪಂಚಾಯತ್	ಗ್ರಾಮ	ತಾಲ್ಲೂಕು

ಯೋಜನೆಗೆ ಅವಶ್ಯಕವಿರುವ ಸೂಕ್ತ ಜಮೀನುಗಳನ್ನು ಗುತ್ತಿಗೆ ಪಡೆಯುವುದರಲ್ಲಿ ಕೆ.ಆರ್.ಇ.ಡಿ.ಎಲ್. ಸಂಸ್ಥೆಯ ನಿರ್ಧಾರವೇ ಅಂತಿಮವಾಗಿರುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: **ಶ್ರೀ ಮಹೇಶ್: 9663174832**

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ ಡಿ.ಎಲ್

ಸಚಿವರ ಮೇಲೆ ಕ್ರಮ ಏಕಿಲ್ಲ– ಸತ್ಯ ಶೋಧನಾ ಸಮಿತಿಗೆ ನಾಯಕರ ಪ್ರಶ್ನೆ

‘ಹೊಂದಾಣಿಕೆ ರಾಜಕೀಯದಿಂದ ‘ಕೈ’ಗೆ ಸೋಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೊಂದಾಣಿಕೆ ರಾಜಕೀಯ, ಪಕ್ಷ ಮತ್ತು ಸರ್ಕಾರದ ಮಧ್ಯೆ ಸಮನ್ವಯದ ಕೊರತೆ, ಸರ್ಕಾರ ಅಧಿಕಾರಕ್ಕೆ ಬಂದು ವರ್ಷ ತುಂಬುವ ಮೊದಲೇ ಗಂಭೀರವಾಗಿ ಕೇಳಿ ಬಂದ ಭ್ರಷ್ಟಾಚಾರ ಆರೋಪ, ಅಂಕೆ ದಾಟಿದ ‘ಕುಟುಂಬ ರಾಜಕೀಯ...’

ಲೋಕಸಭೆ ಚುನಾವಣೆಯ ಸೋಲಿಗೆ ಕಾಂಗ್ರೆಸ್ ನಾಯಕರು ಮುಂದಿಟ್ಟ ಕಾರಣಗಳು ಇವು.

ಸೋಲಿನ ಪರಾಮರ್ಶೆ ಎಐಸಿಸಿ ನಾಯಕ ಮಧುಸೂದನ್ ಮಿಸ್ತ್ರಿ ನೇತೃತ್ವದಲ್ಲಿ ರಚಿಸಲಾದ ಸತ್ಯ ಶೋಧನಾ ಸಮಿತಿ ಮುಂದೆ ಕಾಂಗ್ರೆಸ್ ನಾಯಕರು ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಸಚಿವರು, ಶಾಸಕರು, ಮಾಜಿ ಶಾಸಕರು, ಹಿರಿಯ ಮುಖಂಡರು ಗುರುವಾರ ಅಭಿಪ್ರಾಯ ಹಂಚಿಕೊಂಡರು.

ವಿಧಾನಸಭೆ ಚುನಾವಣೆಯಲ್ಲಿ ಮುನ್ನಡೆ ತಂದುಕೊಟ್ಟ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಹಿಂದೆ ಬಿದ್ದಿದ್ದಾರೆ. ಸಚಿವರು ತಾವು ಪ್ರತಿನಿಧಿಸುವ ಕ್ಷೇತ್ರಗಳಲ್ಲಿಯೂ ಮುನ್ನಡೆ ತಂದುಕೊಡಲು ವಿಫಲರಾಗಿದ್ದಾರೆ. ಮುನ್ನಡೆ ತಂದುಕೊಡಲು ವಿಫಲರಾದ ಸಚಿವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂಬ ಅಭಿಪ್ರಾಯವನ್ನೂ ಕೆಲವರು ವ್ಯಕ್ತಪಡಿಸಿದ್ದಾರೆ ಎಂದೂ ಗೊತ್ತಾಗಿದೆ.

ಕೆಲವು ಕ್ಷೇತ್ರಗಳಲ್ಲಿ ಬಿಜೆಪಿ ಜೊತೆ ‘ಹೊಂದಾಣಿಕೆ ರಾಜಕೀಯ’ದ ಕಾರಣಕ್ಕೆ ಪಕ್ಷದ ಅಭ್ಯರ್ಥಿ ಸೋಲು ಕಾಣುವಂತಾಯಿತು. ಗೆಲ್ಲಲು ಹೆಚ್ಚಿನ ಅವಕಾಶಗಳಿದ್ದ ಚಿತ್ರದುರ್ಗ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಕ್ಷೇತ್ರಗಳನ್ನು ಪಕ್ಷ ಕಳೆದುಕೊಳ್ಳಲು ಕೇವಲ ಒಕ್ಕಲಿಗ– ಲಿಂಗಾಯತ ಜಾತಿ ಸಮೀಕರಣವಷ್ಟೆ ಕಾರಣವಲ್ಲ. ಅದರಲ್ಲೂ ವಿಜಯಪುರ ಮತ್ತು ಕೋಲಾರದಲ್ಲಿ ಸ್ಥಳೀಯ ನಾಯಕರು ಹೊಂದಾಣಿಕೆ ಮಾಡಿಕೊಂಡಿದ್ದರಿಂದಲೇ ಸೋಲು ಉಂಟಾಗಿದೆ ಎಂಬ ವಿಚಾರವನ್ನು ಸಮಿತಿಯ ಮುಂದೆ ಕೆಲವು ನಾಯಕರು ವ್ಯಕ್ತಪಡಿಸಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

‘ಗ್ಯಾರಂಟಿ’ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿದರೂ ಚುನಾವಣೆಯಲ್ಲಿ ಅದರ ಲಾಭ ಪಡೆಯಲು ಪಕ್ಷಕ್ಕೆ ಸಾಧ್ಯವಾಗಿಲ್ಲ. ಈ ಯೋಜನೆಗಳು ಮನೆ, ಮನೆ ತಲುಪಿದ ಬಗ್ಗೆ ಸರಿಯಾದ ರೀತಿಯಲ್ಲಿ ಪ್ರಚಾರ ಮಾಡಲಿಲ್ಲ. ಚುನಾವಣೆ ಹತ್ತಿರ ಬರುತ್ತಿದ್ದಂತೆ ಪಕ್ಷ ನಾಯಕರಿಗೆ ಕಾರ್ಯಕರ್ತರು ನೆನಪಾಗಿದ್ದಾರೆ. ಉಸ್ತುವಾರಿ ಸಚಿವರು ಶಾಸಕರ ಮಾತುಗಳಿಗೆ ಬೆಲೆ ಕೊಡುತ್ತಿಲ್ಲ. ಕಾರ್ಯಕರ್ತರ ಮಾತನ್ನೂ ಕೇಳುವವರು ಯಾರೂ ಇಲ್ಲ. ಈ ಎಲ್ಲ ವಿಷಯಗಳು ಚುನಾವಣೆಯಲ್ಲಿ ಫಲಿತವಾಗಿದೆ ಎಂದು ಕೆಲವರು ಅಭಿಪ್ರಾಯ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಚುನಾವಣೆ ಸಂದರ್ಭದಲ್ಲಿ ಕೆಲವು ಸಚಿವರು, ಶಾಸಕರು, ಮುಖಂಡರು ನೀಡಿದ ಕೆಲವು ಬಹಿರಂಗ ಹೇಳಿಕೆಗಳೂ ಪಕ್ಷದ ಪಾಲಿಗೆ ಮುಳುವಾಗಿವೆ. ಪಕ್ಷದ ವೇದಿಕೆಯಲ್ಲಿ ವ್ಯಕ್ತಪಡಿಸಬೇಕಾದ ಅಭಿಪ್ರಾಯಗಳನ್ನು ಮಾಧ್ಯಮಗಳ ಮುಂದೆ ಬಹಿರಂಗವಾಗಿ ಹೇಳಿಕೊಂಡ ಕಾರಣ ಕಾರ್ಯಕರ್ತರಲ್ಲಿ ಗೊಂದಲ ಸೃಷ್ಟಿಯಾಯಿತು. ಕೆಲವು ಕ್ಷೇತ್ರಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮತಗಳು ಬಾರದಿರಲು ಇಂತಹ ಹೇಳಿಕೆಗಳೂ ಕಾರಣವಾದವು ಎಂದು ಇನ್ನೂ ಕೆಲವರು ಹೇಳಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

ಸಮಿತಿಯ ಸದಸ್ಯರನ್ನು ಭೇಟಿಯಾದ ಬಳಿಕ ಮಾತನಾಡಿದ ಸಚಿವ ಎಂ.ಬಿ ಪಾಟೀಲ, ‘ಲೋಕಸಭಾ ಚುನಾವಣೆಯಲ್ಲಿ ಸಚಿವರು, ಶಾಸಕರು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಕೆಲವು ಕಡೆ ಮುನ್ನಡೆ ಕಡಿಮೆಯಾಗಿದೆ. ನನ್ನ ಕ್ಷೇತ್ರದಲ್ಲಿ ಅಲ್ಪಪ್ರಮಾಣದ ಮುನ್ನಡೆ ಕಡಿಮೆ ಆಗಿದೆ. ನಮ್ಮ ಕ್ಷೇತ್ರದಲ್ಲಿ ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ’ ಎಂದರು.

‘ಅಂಗೈ ಹುಣ್ಣಿಗೆ ಕನ್ನಡಿ ಬೇಕಿಲ್ಲ’

‘ಲೋಕಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ನಿರೀಕ್ಷಿತ ಸ್ಥಾನಗಳು ಬಂದಿಲ್ಲ. ಅದಕ್ಕೆ ಕಾರಣ ಹುಡುಕಲು ಸಮಿತಿಯವರು ಅಭಿಪ್ರಾಯ ಸಂಗ್ರಹಿಸಿದ್ದಾರೆ. ಅಂಗೈ ಹುಣ್ಣಿಗೆ ಕನ್ನಡಿ ಬೇಕಿಲ್ಲ’ ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಸಮಿತಿಯ ಸದಸ್ಯರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಅವರು, ‘ವಿಧಾನಸಭೆ ಚುನಾವಣೆಗೆ ನಡೆಸಿದ ತಯಾರಿ ಲೋಕಸಭೆ ಚುನಾವಣೆಯಲ್ಲಿ ಆಗಿಲ್ಲ. ಅದಕ್ಕೆ ಕಾರಣಗಳನ್ನು ಕೊಟ್ಟಿದ್ದೇವೆ. ಕಳೆದ ಒಂದು ವರ್ಷದಿಂದ ಸರ್ಕಾರ ಮತ್ತು ಪಕ್ಷ ಎಲ್ಲಿ ಎಡವಿದೆ, ಯಾವ ರೀತಿಯಲ್ಲಿ ಕೆಲಸ ಮಾಡಿದೆ ಎಂಬ ಮಾಹಿತಿಯನ್ನೂ ನೀಡಿದ್ದೇವೆ’ ಎಂದರು.

‘ವಿಜಯಪುರ ಸೋಲಿಗೆ ಹೊಂದಾಣಿಕೆ ಕಾರಣ’

‘ವಿಜಯಪುರದಲ್ಲಿ ಕಾಂಗ್ರೆಸ್ ಶಾಸಕರು ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ’ ಎಂದು ಮಾಜಿ ಶಾಸಕ ಮನೋಹರ್ ಐನಾಪುರ ಆರೋಪಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ವಿಧಾನಸಭೆ ಚುನಾವಣೆಯಲ್ಲಿ ಇಂಡಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದಿದೆ. ಅದೇ ಕ್ಷೇತ್ರದಲ್ಲಿ ಲೋಕಸಭೆಯಲ್ಲಿ ಬಿಜೆಪಿಗೆ ಮುನ್ನಡೆ ಸಿಕ್ಕಿದೆ. ಉಸ್ತುವಾರಿ ಸಚಿವರ ಕ್ಷೇತ್ರದಲ್ಲಿಯೂ ಬಿಜೆಪಿಗೆ ಮುನ್ನಡೆ ಬಂದಿದೆ. ಕಾಂಗ್ರೆಸ್ ಪಕ್ಷವನ್ನು ಉಳಿಸಬೇಕಾದರೆ ಈ ಹೊಂದಾಣಿಕೆ ರಾಜಕೀಯ ನಿಲ್ಲಿಸಬೇಕು’ ಎಂದು ಹೇಳಿದರು.

ಮೈತ್ರಿ ಎದುರಿಸಲು ಸಿದ್ಧತೆ ಮಾಡಿಕೊಳ್ಳುತ್ತೇವೆ– ಡಿಕೆಶಿ

‘ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಎಲ್ಲಿ ಎಡವಿದೆ ಎಂದು ಪರಾಮರ್ಶೆ ನಡೆಸಿ, ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಂಡು ಮುಂದಿನ ದಿನಗಳಲ್ಲಿ ಬಿಜೆಪಿ– ಜೆಡಿಎಸ್ ಮೈತ್ರಿಯನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳಲಾಗುವುದು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಲೋಕಸಭೆ ಚುನಾವಣೆಯಲ್ಲಿ ಗುಪ್ತಗಾಮಿನಿಯಾಗಿ ಯಾವ ವಿಚಾರ ಮತದಾರರನ್ನು ಪರಿವರ್ತನೆ ಮಾಡಿದೆ ಎಂಬುದನ್ನು ಪತ್ತೆ ಹಚ್ಚಬೇಕಿದೆ. ಬಿಜೆಪಿ– ಜೆಡಿಎಸ್ ಮೈತ್ರಿ ಪರಿಣಾಮಕಾರಿಯಾಗಲಿದೆ ಎಂದು ನಾವು ಮೊದಲೇ ಅಂದಾಜಿಸಿದ್ದೆವು. ಮುಂದಿನ ದಿನಗಳಲ್ಲೂ ಅವರು ಒಟ್ಟಾಗಿರುತ್ತಾರೆ ಎಂದು ನಮಗೆ ಗೊತ್ತಿದೆ. ಅವರು ಒಟ್ಟಾಗಿದ್ದರೂ ನಾವು ಹೇಗೆ ಸಿದ್ಧತೆ ಮಾಡಿಕೊಳ್ಳಬೇಕೊ ಮಾಡುತ್ತೇವೆ’ ಎಂದು ಹೇಳಿದರು.

ಇನ್‌ಸ್ಟಿಟ್ಯೂಟ್ ಆಫ್ ಚಾರ್ಟೆಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ಬೆಂಗಳೂರು, ಐಸಿಡಬ್ಲ್ಯುಎಐ ಅಸೋಸಿಯೇಶನ್, ಚೇಂಬರ್ ಆಫ್ ಇಂಡಸ್ಟ್ರಿ ಆ್ಯಂಡ್ ಕಾಮರ್ಸ್, ರಾಜ್ಯ ಬಾರ್ ಕೌನ್ಸಿಲ್ ವತಿಯಿಂದ ಆದಾಯ ತೆರಿಗೆ ಅಧಿಕಾರಿಗಳು ಮತ್ತು ತೆರಿಗೆದಾರರಿಗೆ ಹಮ್ಮಿಕೊಂಡಿದ್ದ ಮಾಹಿತಿ ಕಾರ್ಯಕ್ರಮದಲ್ಲಿ ಆದಾಯ ತೆರಿಗೆ ಮಹಾನಿರ್ದೇಶಕಿ ಸುನೀತಾ ಬೈನ್ಸ್‌ಲಾ, ಕರ್ನಾಟಕ ಮತ್ತು ಗೋವಾ ವಲಯದ ಆದಾಯ ತೆರಿಗೆ ಮುಖ್ಯ ಆಯುಕ್ತರಾದ ಶೆಲ್ಲಿ ಜಿಂದಾಲ್, ಅಧಿಕಾರಿಗಳು, ವಿವಿಧ ಸಂಘಟನೆಗಳ ಮುಖ್ಯಸ್ಥರು ಭಾಗವಹಿಸಿದ್ದರು

ಗಣ್ಯರ ವಾಹನಗಳಲ್ಲಿ ರಾಷ್ಟ್ರಧ್ವಜ ಬಳಕೆಗೆ ಸುತ್ತೋಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗಣ್ಯರ ಅಧಿಕೃತ ಸರ್ಕಾರಿ ವಾಹನಗಳಲ್ಲಿ ರಾಷ್ಟ್ರಧ್ವಜ ಬಳಕೆಯ ಸಂಬಂಧ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ.

ಮುಖ್ಯಮಂತ್ರಿ, ಸಚಿವರು, ವಿಧಾನಸಭಾಧ್ಯಕ್ಷರು, ಉಪಸಭಾಧ್ಯಕ್ಷರು, ವಿಧಾನಪರಿಷತ್ ಸಭಾಪತಿ ಮತ್ತು ಉಪಸಭಾಪತಿ, ಹೈಕೋರ್ಟ್ ನ್ಯಾಯಾಧೀಶರು ತಮ್ಮ ಅಧಿಕೃತ ಸರ್ಕಾರಿ ವಾಹನಗಳಲ್ಲಿ ರಾಷ್ಟ್ರಧ್ವಜವನ್ನು ಬಳಸಬಹುದು ಎಂದು ತಿಳಿಸಿದೆ.

ಬಿಜೆಪಿ ಪದಾಧಿಕಾರಿಗಳ ಸಭೆಯ ಅಭಿಮತ

‘ಕಾಂಗ್ರೆಸ್ ಸರ್ಕಾರ ದಲಿತ ವಿರೋಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ದಲಿತ ವಿರೋಧಿ ಎಂಬುದಾಗಿ ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆಯು ಅಭಿಪ್ರಾಯಪಟ್ಟಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಸುನೀಲ್ ಕುಮಾರ್ ಅವರು ತಿಳಿಸಿದರು.

ನಗರದಲ್ಲಿ ಗುರುವಾರ ನಡೆದ ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆ ಬಳಿಕ ಮಾತನಾಡಿದ ಅವರು, ವಾಲ್ಮೀಕಿ ನಿಗಮದ ಹಗರಣದಲ್ಲಿ ಪರಿಶಿಷ್ಟ ಪಂಗಡದ ಜನಾಂಗಕ್ಕೆ ಬಳಕೆ ಆಗಬೇಕಾದ ಹಣವನ್ನು ಕಾಂಗ್ರೆಸ್ ನುಂಗಿಹಾಕಿದೆ. ಅದೇರೀತಿ ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕೆ ಬಳಸಬೇಕಾದ ಎಸ್‌ಇಪಿ, ಟಿಎಸ್‌ಪಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿ ದೊಡ್ಡ ಪ್ರಮಾಣದಲ್ಲಿ ಎರಡು ಸಮುದಾಯಗಳಿಗೆ ಈ ಸರ್ಕಾರ ಅನ್ಯಾಯ ಮಾಡಿದೆ ಎಂದು ಸಭೆ ಅಭಿಪ್ರಾಯಪಟ್ಟಿದೆ ಎಂದು ವಿವರಿಸಿದರು.

ಬಿಜೆಪಿ ಸರ್ಕಾರ ಈ ವರ್ಗಗಳ ಮೀಸಲಾತಿಯನ್ನು ಹೆಚ್ಚಿಸಿ ಅವರ ಕಲ್ಯಾಣಕ್ಕೆ ಮುಂದಾಗಿತ್ತು. ಆದರೆ, ಇವತ್ತಿನ ಕಾಂಗ್ರೆಸ್ ಸರ್ಕಾರವು ದಲಿತರ ಹೆಸರನ್ನು ಹೇಳುತ್ತ ದಲಿತರ ಹಣವನ್ನು ನುಂಗಲು ಭ್ರಷ್ಟಾಚಾರದಲ್ಲಿ ನಿರತವಾಗಿದೆ; ಇದರ ಪ್ರಯತ್ನದ ಕ್ಯಾಪ್ಟನ್ ಆಗಿ ಸಿದ್ದರಾಮಯ್ಯ ಅವರು ಇದ್ದರೆ, ಸಚಿವ ಸಂಪುಟವು ದಲಿತರ ಹಣವನ್ನು ನುಂಗಿ ಹಾಕಲು ಸಹಮತ ವ್ಯಕ್ತಪಡಿಸಿದ್ದು ವಿಷಾದದ ಸಂಗತಿ ಎಂದು ನುಡಿದರು.

ಮೂಡಾ ಹಗರಣ, ವಾಲ್ಮೀಕಿ ನಿಗಮದ ಹಗರಣ, ಎಸ್‌ಇಪಿ, ಟಿಎಸ್‌ಪಿ ಹಗರಣ, ಕಾರ್ಮಿಕ ಇಲಾಖೆಯ ಹಗರಣ- ಇದು ಹಗರಣಗಳ ಸರಮಾಲೆಯ ಮತ್ತು ಅಭಿವೃದ್ಧಿ ಶೂನ್ಯ ಸರ್ಕಾರ ಎಂದು ಟೀಕಿಸಿದರು.

ಎರಡೂ ಹಗರಣಗಳ ಬಗ್ಗೆ ಬಿಜೆಪಿಯು ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಸದನದ ಹೊರಗೂ, ಒಳಗೂ ತೀವ್ರ ಹೋರಾಟ ನಡೆಸಲಿದೆ

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ತಮ್ಮ ಜಾಗದಲ್ಲಿ ಮುಡಾ ಅಧಿಕಾರಿಗಳು ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿ ನಡೆಸುತ್ತಿದ್ದರೂ ಸಿದ್ದರಾಮಯ್ಯ ಸುಮ್ಮನಿದ್ದರು. ಆಮೇಲೆ ಬದಲಿ ಜಮೀನು ಕೇಳಿದ್ದಾರೆ

ಜಗದೀಶ ಶೆಟ್ಟರ್, ಬಿಜೆಪಿ ಸಂಸದ

‘ನಿಗಮದ ಹಗರಣಕ್ಕೆ ಸಿ.ಎಂ ಅಧ್ಯಕ್ಷ’

‘ವಾಲ್ಮೀಕಿ ನಿಗಮದ ನಿಧಿ ದುರ್ಬಳಕೆ ಹಗರಣದಲ್ಲಿ ಜಾರಿ ನಿರ್ದೇಶನಾಲಯವು ಈ ಹಗರಣದ ‘ಉಪಾಧ್ಯಕ್ಷ’ನನ್ನು ಹಿಡಿದಿದೆ. ಆ ಉಪಾಧ್ಯಕ್ಷನನ್ನು ಬಳಸಿಕೊಂಡು ಹಗರಣದ ‘ಅಧ್ಯಕ್ಷ’ನನ್ನು ಹಿಡಿಯಲಿದೆ. ಸಚಿವರಾಗಿದ್ದವರು ಈ ಹಗರಣಕ್ಕೆ ಉಪಾಧ್ಯಕ್ಷರಾಗಿದ್ದರೆ, ಮುಖ್ಯಮಂತ್ರಿಯೇ ಅಧ್ಯಕ್ಷ’ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

‘ರಾಜ್ಯ ಸರ್ಕಾರದ ಖಜಾನೆಯಿಂದಲೇ ನಿಗಮದ ಖಾತೆಗೆ ಹಣ ಜಮೆಯಾಗಿದೆ. ಮುಖ್ಯಮಂತ್ರಿಯೇ ಹಣಕಾಸು ಖಾತೆ ನಿರ್ವಹಿಸುತ್ತಿದ್ದಾರೆ ಅಲ್ಲವೆ. ಬಿ.ನಾಗೇಂದ್ರ ಅವರೊಬ್ಬರಿಂದಲೇ ಇಷ್ಟು ದೊಡ್ಡ ಹಗರಣ ಮಾಡಲು ಸಾಧ್ಯವಿಲ್ಲ. ಮುಖ್ಯಮಂತ್ರಿಗೆ ಗೊತ್ತಿದ್ದೇ ಇವೆಲ್ಲಾ ನಡೆದಿದೆ’ ಎಂದು ಮಾಜಿ ಶಾಸಕ ರಾಜೂಗೌಡ ಆರೋಪಿಸಿದರು.

ಆರ್‌ಐಟಿ: ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆಗೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಯ್ಯ ತಾಂತ್ರಿಕ ವಿದ್ಯಾಲಯದಲ್ಲಿ ‘ಸೆಂಟರ್ ಆಫ್ ಎಕ್ಸಲೆನ್ಸ್’ ಸ್ಥಾಪಿಸುವ ಒಡಂಬಡಿಕೆಗೆ ರಾಮಯ್ಯ ತಾಂತ್ರಿಕ ವಿದ್ಯಾಲಯ (ಆರ್‌ಐಟಿ), ಜೆಎಸ್‌ಡಬ್ಲ್ಯುಐಪಿ ಹೋಲ್ಡಿಂಗ್ಸ್ ಹಾಗೂ ಶಾರಿಕ ಸ್ಮಾರ್ಟ್‌ಟೆಕ್ ಸಂಸ್ಥೆಗಳು ಸಹಿ ಹಾಕಿವೆ.

ತಾಂತ್ರಿಕ ವಿದ್ಯಾಲಯದ ಆವರಣದಲ್ಲಿ ಗುರುವಾರ ಜೆಎಸ್‌ಡಬ್ಲ್ಯು ಸಮೂಹ ಸಂಸ್ಥೆಯ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಸಜ್ಜನ್ ಜಿಂದಾಲ್, ಶಾರಿಕ ಸ್ಮಾರ್ಟೆಕ್ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ರಾಜೇಂದರ್ ಕೌಲ್, ಗೋಕುಲ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ.ಆರ್. ಜಯರಾಮ್ ಸಹಿ ಹಾಕಿದರು.

ಗೋಕುಲ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ.ಆರ್. ಜಯರಾಮ್ ಮಾತನಾಡಿ, ‘₹5 ಕೋಟಿ ವೆಚ್ಚದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ನಿರ್ಮಾಣಗೊಳ್ಳಲಿದ್ದು, ಸಂಶೋಧನೆ, ತರಬೇತಿಗೆ ಸಹಾಯವಾಗಲಿದೆ. ಫ್ಲೆಕ್ಸಿಬಲ್ ಪರ್ವಸಿಸ್ಟಂ, ಸ್ಮಾರ್ಟ್ ಗ್ರಿಡ್ ರೂಪಿಸುವ ಯೋಜನೆ ಇದೆ. 'ಸೇವೆಗಾಗಿ ಪ್ರಯೋಗಾಲಯ' ಎಂಬ ಪರಿಕಲ್ಪನೆಯಲ್ಲಿ ವೃತ್ತಿಪರರು, ನವೋದ್ಯಮಿಗಳನ್ನು ಸೃಷ್ಟಿಸುವ ಆಲೋಚನೆಯನ್ನು ಕಾಲೇಜು ಹೊಂದಿದೆ’ ಎಂದು ತಿಳಿಸಿದರು.

ಸಜ್ಜನ್ ಜಿಂದಾಲ್ ಮಾತನಾಡಿ, ‘ಈ ಕಾಲೇಜಿನಲ್ಲಿ 1980ರ ದಶಕದಲ್ಲಿ ನಾನು ಓದುವ ಸಂದರ್ಭದಲ್ಲಿ ಕಾಲೇಜಿನ ಕ್ಯಾಂಪಸ್ ಇಷ್ಟು ದೊಡ್ಡದಾಗಿರಲಿಲ್ಲ. ಇಂದು ಸಾಕಷ್ಟು ಬೆಳವಣಿಗೆ ಹೊಂದಿದೆ. ಸಾವಿರಾರು ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ನಾನು ಓದಿದ ಕಾಲೇಜಿಗೆ ಏನಾದರೂ ಕೊಡುಗೆ ನೀಡಬೇಕೆಂಬ ಹಂಬಲದಿಂದ ‘ಸೆಂಟರ್ ಆಫ್ ಎಕ್ಸೆಲೆನ್ಸ್’ ಆರಂಭಕ್ಕೆ ಅನುದಾನ ನೀಡುತ್ತಿದ್ದೇನೆ’ ಎಂದು ಹೇಳಿದರು.

ಗೋಕುಲ ಶಿಕ್ಷಣಸಂಸ್ಥೆ ಉಪಾಧ್ಯಕ್ಷ ಎಂ.ಆರ್. ಸೀತಾರಾಂ, ಕಾರ್ಯದರ್ಶಿ ಎಂ.ಆರ್. ರಾಮಯ್ಯ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಎಸ್. ರಾಮ ಪ್ರಸಾದ್, ಪ್ರಾಂಶುಪಾಲ ಎನ್.ವಿ.ಆರ್. ನಾಯ್ಡು ಭಾಗವಹಿಸಿದ್ದರು.

ರಾಮಯ್ಯ ತಾಂತ್ರಿಕ ವಿದ್ಯಾಲಯದಲ್ಲಿ ‘ಸೆಂಟರ್ ಆಫ್ ಎಕ್ಸಲೆನ್ಸ್’ ಸ್ಥಾಪಿಸುವ ಒಡಂಬಡಿಕೆಗೆ ಸಹಿ ಹಾಕುವ ಕಾರ್ಯಕ್ರಮದಲ್ಲಿ ಶಾರಿಕ ಸ್ಮಾರ್ಟೆಕ್ ನಿರ್ದೇಶಕ ವಿಜಯ್ ಪಾಂಡೆ, ಅಧ್ಯಕ್ಷ ರಾಜೇಂದರ್ ಕೌಲ್, ಜೆಎಸ್‌ಡಬ್ಲ್ಯು ಸಮೂಹ ಸಂಸ್ಥೆಯ ಅಧ್ಯಕ್ಷ ಸಜ್ಜನ್ ಜಿಂದಾಲ್, ಗೋಕುಲ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ.ಆರ್. ಜಯರಾಮ್, ಉಪಾಧ್ಯಕ್ಷ ಎಂ.ಆರ್. ಸೀತಾರಾಂ, ಕಾರ್ಯದರ್ಶಿ ಎಂ.ಆರ್. ರಾಮಯ್ಯ, ಪ್ರಾಂಶುಪಾಲ ಎನ್.ವಿ.ಆರ್. ನಾಯ್ಡು ಭಾಗವಹಿಸಿದ್ದರು.

ಬಾಳ ನಿರೂಪಣೆ ಮುಗಿಸಿದ ಅಪರ್ಣಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ, ನಿರೂಪಕಿ ಅಪರ್ಣಾ ವಸ್ತಾರೆ(57) ಗುರುವಾರ ರಾತ್ರಿ ನಿಧನರಾದರು. ಅವರಿಗೆ ಪತಿ ನಾಗರಾಜ ವಸ್ತಾರೆ ಇದ್ದಾರೆ.

ಕಳೆದ ಎರಡು ವರ್ಷದ ಹಿಂದೆ ಅವರಿಗೆ ಶ್ವಾಸಕೋಶದ ಕ್ಯಾನ್ಸರ್ ದೃಢಪಟ್ಟಿತ್ತು. ಇದೇ ಫೆಬ್ರುವರಿ ಬಳಿಕ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿತ್ತು.

ಸಿನಿಮಾ ತಾರೆಯಾಗಿ ವೃತ್ತಿ ಬದುಕು ಆರಂಭಿಸಿದ್ದ ಅಪರ್ಣಾ ನಿರೂಪಣೆಯಲ್ಲಿ ಪ್ರಸಿದ್ಧಿ ಪಡೆದಿದ್ದರು.

‘ಮಸಣದ ಹೂವು’ ಚಿತ್ರದ ಮುಖಾಂತರ ಬೆಳ್ಳಿತೆರೆಗೆ ಕಾಲಿಟ್ಟ ಅಪರ್ಣಾ ‘ಇನ್‌ಸ್ಪೆಕ್ಟರ್ ವಿಕ್ರಂ’ ಚಿತ್ರ ಸೇರಿದಂತೆ ಹಲವು ಚಿತ್ರಗಳಲ್ಲಿ ನಟಿಸಿದ್ದರು.

‘ಮೂಡಲಮನೆ’, ‘ಮುಕ್ತ’ ಸೇರಿದಂತೆ ಹಲವು ಧಾರಾವಾಹಿಗಳಲ್ಲಿ ನಟಿಸಿದ್ದ ಅಪರ್ಣಾ, ಕಿರುತೆರೆಯಲ್ಲಿ ನಿರೂಪಕಿಯಾಗಿ ಮಿಂಚಿದವರು. ರೇಡಿಯೊಗಳಲ್ಲಿ ಹಲವು ಕಾರ್ಯಕ್ರಮಗಳಿಗೆ ಧ್ವನಿಯಾಗಿದ್ದ ಅಪರ್ಣಾ, ನಮ್ಮ ಮೆಟ್ರೋ ರೈಲಿನಲ್ಲಿ ಬರುವ ಘೋಷಣೆಗಳಿಗೂ ಧ್ವನಿಯಾಗಿದ್ದಾರೆ. 2013ರಲ್ಲಿ ಬಿಗ್‌ಬಾಸ್‌ನಲ್ಲಿ ಸ್ಪರ್ಧಿಸಿದ್ದ ಅವರು, ‘ಮಜಾ ಟಾಕೀಸ್’ ಎಂಬ ಕಿರುತೆರೆ ಕಾರ್ಯಕ್ರಮದ ಮೂಲಕ ಕನ್ನಡಿಗರಿಗೆ ಹತ್ತಿರವಾಗಿದ್ದರು.

ಸ್ಪಷ್ಟ ಕನ್ನಡದಲ್ಲಿ ನಿರೂಪಣೆ ಮಾಡುವ ಮೂಲಕ ಅಪರ್ಣಾ ಎಲ್ಲರ ಮನಗೆಲ್ಲುತ್ತಿದ್ದರು. ಚಂದನ ವಾಹಿನಿಯಲ್ಲಿ ಹಲವು ಕಾರ್ಯಕ್ರಮಗಳನ್ನೂ ಅಪರ್ಣಾ ನಿರೂಪಿಸಿದ್ದಾರೆ. ಬೆಂಗಳೂರಿನ ಮಲ್ಲೇಶ್ವರದಲ್ಲಿ ಬಾಲ್ಯ ಕಳೆದ ಅಪರ್ಣಾ, ಕುಮಾರಪಾರ್ಕ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ನಂತರ ಎಂಇಎಸ್ ಕಾಲೇಜಿನಲ್ಲಿ ಶಿಕ್ಷಣ ಪಡೆದರು.

ಶಿಕ್ಷಣ ಪಡೆಯುವ ವೇಳೆಗೆ ಅಪರ್ಣಾ ಅವರಿಗೆ ಸಿನಿಮಾದಲ್ಲಿ ಅವಕಾಶ ಲಭಿಸಿತ್ತು. ಅಪರ್ಣಾ ಅವರ ತಂದೆ ಕೆ.ಎಸ್.ನಾರಾಯಣ ಸ್ವಾಮಿ ಸಿನಿಮಾ ಪತ್ರಕರ್ತರಾಗಿದ್ದರು. ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರು ನಾರಾಯಣಸ್ವಾಮಿ ಅವರ ಬಳಿ ಬಂದು ಅಪರ್ಣಾಗೆ ನಾಯಕಿಯ ಪಾತ್ರ ನೀಡುವುದಾಗಿ ಹೇಳಿದ್ದರಂತೆ. ಹೀಗೆ ಅಪರ್ಣಾ ಅವರಿಗೆ ‘ಮಸಣದ ಹೂವು’ ಚಿತ್ರದಲ್ಲಿ ಅವಕಾಶ ದೊರಕಿತ್ತು.

ನಾಗರಾಜ್ ವಸ್ತಾರೆ ಅವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡ ಚಿತ್ರ

1993ರಿಂದ 2010ರವರೆಗೆ ಆಕಾಶವಾಣಿ, ಎಫ್‌ಎಂನಲ್ಲಿ ಉದ್ಘೋಷಕಿಯಾಗಿ, ಆರ್‌ಜೆಯಾಗಿ ಕೆಲಸ ಮಾಡಿದ್ದ ಅಪರ್ಣಾ, ಟಿ.ಎನ್.ಸೀತಾರಾಂ ಅವರ ‘ಮುಕ್ತ’ ಧಾರಾವಾಹಿಯ ಶೀಲಾ ದೀಕ್ಷಿತ್ ಪಾತ್ರದಿಂದ ನಟಿಯಾಗಿ ಜನರ ಮನಸ್ಸಿನಲ್ಲಿ ಉಳಿದರು. ಸಿನಿಮಾ, ಧಾರಾವಾಹಿ, ದೂರದರ್ಶನ ನಿರೂಪಣೆ, ಆಕಾಶವಾಣಿ, ವೇದಿಕೆ ಕಾರ್ಯಕ್ರಮ ಹೀಗೆ ಎಲ್ಲ ಮಾಧ್ಯಮಗಳಲ್ಲೂ ತಮ್ಮದೇ ಛಾಪು ಮೂಡಿಸಿದ್ದರು ಅಪರ್ಣಾ.

‘ಸರ್ಕಾರಿ ಸಮಾರಂಭಗಳು ಸೇರಿದಂತೆ ಕನ್ನಡದ ಪ್ರಮುಖ ವಾಹಿನಿಗಳ ಕಾರ್ಯಕ್ರಮದಲ್ಲಿ ಕನ್ನಡ ಭಾಷೆಯಲ್ಲಿ ಅತ್ಯಂತ ಸೊಗಸಾಗಿ ನಿರೂಪಣೆ ಮಾಡುತ್ತಾ ನಾಡಿನ ಮನೆಮಾತಾಗಿದ್ದ ಬಹುಮುಖ ಪ್ರತಿಭೆಯೊಂದು ಬಹುಬೇಗನೇ ಅಗಲಿರುವುದು ದುಃಖದ ಸಂಗತಿ. ಅಪರ್ಣಾ ಅವರ ಆತ್ಮಕ್ಕೆ ಶಾಂತಿ ಸಿಗಲಿ’ ಎಂದು ‘ಎಕ್ಸ್’ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂತಾಪ ಸೂಚಿಸಿದ್ದಾರೆ.

ಎರಡು ವರ್ಷಗಳ ಹಿಂದೆ ಇದೇ ಜುಲೈನಲ್ಲಿ ಅಪರ್ಣಾಗೆ ಶ್ವಾಸಕೋಶದ ಕ್ಯಾನ್ಸರ್ ಇರುವುದು ತಪಾಸಣೆಯಲ್ಲಿ ಗೊತ್ತಾಯಿತು. ಆದಾಗಲೇ ಅದು ನಾಲ್ಕನೇ ಹಂತ ತಲುಪಿತ್ತು. ಮೊದಲು ನೋಡಿದ ವೈದ್ಯರು ಆರು ತಿಂಗಳು ಇದ್ದರೆ ಹೆಚ್ಚು ಎಂದಿದ್ದರು. ಆದರೆ ಅಪರ್ಣಾ ಛಲಗಾತಿ. ಕಳೆದ ಜನವರಿವರೆಗೂ ಹೋರಾಡಿದಳು. ಫೆಬ್ರುವರಿಯಿಂದ ಸೋತಳು. ನಾವಿಬ್ಬರೂ ಸೋತೆವು. ಬರುವ ಅಕ್ಟೋಬರ್‌ಗೆ ಆಕೆಗೆ 58 ವರ್ಷ ತುಂಬುತ್ತಿತ್ತು. ಆದರೆ ಅವಳ ದೇಹ ಎನ್ನುವುದು ಒಂದು ಮಾಯಕ. ಅದು ತನ್ನ ನಿಜವಾದ ವಯಸ್ಸನ್ನು ಯಾವತ್ತೂ ತೋರಿಸಿಲ್ಲ. ಆಕೆಯೂ ಅದರಂತೆ ಬಾಳಿದವಳು. ಗುರುವಾರ ರಾತ್ರಿ 9.30ರ ಸುಮಾರಿಗೆ ಆಕೆ ನಿಧನಳಾದಳು. ಶುಕ್ರವಾರ ಬೆಳಿಗ್ಗೆ 7.30ರಿಂದ ಮನೆಯಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನದ ವ್ಯವಸ್ಥೆ ಮಾಡುತ್ತೇವೆ

ನಾಗರಾಜ್ ವಸ್ತಾರೆ

ಕನ್ನಡದ ಕಂಚಿನ ದನಿಯೊಂದು ನಿರಂತರ ಮೌನಕ್ಕೆ ಜಾರಿತು

ಟಿ. ಎನ್. ಸೀತಾರಾಂ

ಅರ್ಜಿ ಆಹ್ವಾನ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಸ್ಪರ್ಧಾತ್ಮಕ ಪರೀಕ್ಷಾ ಸಂಸ್ಥೆಯು 2024ನೇ ಸಾಲಿನ ಕೆಎಎಸ್ ಪೂರ್ವಭಾವಿ ಪರೀಕ್ಷಾ ತರಬೇತಿಗೆ ಮತ್ತು ಮಾರ್ಗದರ್ಶನಕ್ಕೆ ಅರ್ಜಿ ಆಹ್ವಾನಿಸಿದೆ.

ಜುಲೈ 16ರಿಂದ (ಆನ್‌ಲೈನ್/ಆಫ್‌ಲೈನ್) ತರಗತಿಗಳು ಪ್ರಾರಂಭವಾಗಲಿವೆ. ಆಸಕ್ತ ಅಭ್ಯರ್ಥಿಗಳು ಜುಲೈ 15ರೊಳಗೆ ಅರ್ಜಿ ಸಲ್ಲಿಸಬೇಕು.

ವಿಳಾಸ: ಕೇಂದ್ರ ಕಚೇರಿ ಕೃಷಿಕ್ ಸರ್ವೋದಯ ಫೌಂಡೇಶನ್, ನಂ. 15, 2ನೇ ಮಹಡಿ, ಎಚ್.ಎ.ಎಲ್ ಹಳೆವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ, ಬೆಂಗಳೂರು–08. ಹೆಚ್ಚಿನ ಮಾಹಿತಿಗಾಗಿ http://www.ksfkarnataka.comಗೆ ಭೇಟಿ ನೀಡಿ ಅಥವಾ 080–25202299/9901911410ಗೆ ಸಂಪರ್ಕಿಸಲು ತಿಳಿಸಲಾಗಿದೆ.

ವಿದ್ಯಾರ್ಥಿ ವೇತನ ಅರ್ಜಿ ಆಹ್ವಾನ

ಯಲಹಂಕ: ವಿದ್ಯಾಪೋಷಕರ ಸಂಘದಿಂದ 2024ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇಕಡ 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದ ಆರ್ಥಿಕವಾಗಿ ದುರ್ಬಲರಾದ, ಒಕ್ಕಲಿಗ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ವಿಳಾಸ, ಮೊಬೈಲ್ ಸಂಖ್ಯೆ ವಿವರಗಳಿರುವ ಅರ್ಜಿಯೊಂದಿಗೆ ಜಾತಿ ಹಾಗೂ ವರಮಾನ ಪ್ರಮಾಣಪತ್ರ, ಆಧಾರ್ ಮತ್ತು ದೃಢೀಕೃತ ಅಂಕಪಟ್ಟಿಯ ನಕಲು ಪ್ರತಿಗಳನ್ನು ಸಲ್ಲಿಸಬೇಕು.

ಅರ್ಜಿ ಸಲ್ಲಿಸುವ ವಿಳಾಸ: ‘ಅಧ್ಯಕ್ಷರು, ವಿದ್ಯಾಪೋಷಕರ ಸಂಘ, ನಂ.12, ಇಂಚರ, 2ನೇ ಮುಖ್ಯರಸ್ತೆ, ಸುರಭಿ ಬಡಾವಣೆ, ಯಲಹಂಕ, ಬೆಂಗಳೂರು–560064’. ಜುಲೈ 31, ಅರ್ಜಿ ಸಲ್ಲಿಸಲು ಕೊನೆಯ ದಿನ. ವಿವರಗಳಿಗೆ: 9008891539, 9845048696 ಮೊಬೈಲ್ ಸಂಖ್ಯೆಗೆ ಸಂಪರ್ಕಿಸಬಹುದು

ನಗರದಲ್ಲಿ ಇಂದು

ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ದಿನೇಶ್ ಗುಂಡೂರಾವ್, ಡಾ. ಶರಣ ಪ್ರಕಾಶ ಪಾಟೀಲ, ಜಮೀರ್ ಅಹಮದ್ ಖಾನ್, ಹರ್ಷ ಗುಪ್ತಾ, ರಂದೀಪ್ ಡಿ., ಡಾ.ಶ್ರೀನಿವಾಸ ಜಿ.ಎನ್., ಕೆ. ಮಲ್ಲು, ವಾಸುದೇವ ಆರ್., ಐ. ಕ್ಲಮೆಂಟ್, ಅಧ್ಯಕ್ಷತೆ: ಐವನ್ ನಿಗ್ಲಿ, ಆಯೋಜನೆ: ಆ್ಯಂಗ್ಲೋ ಇಂಡಿಯನ್ ಯೂನಿಟಿ ಸೆಂಟರ್ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 9

ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಾರೋಪ ಸಮಾರಂಭ: ಅತಿಥಿಗಳು: ಬಿ.ಆರ್. ಲಕ್ಷ್ಮಣರಾವ್, ಶ್ರೀಹರ್ಷ, ಅಧ್ಯಕ್ಷತೆ: ಎಲ್. ಗೋಮತಿದೇವಿ, ಅತಿಥಿಗಳು: ಸಂಗಪ್ಪ, ಶಿವಶಂಕರಪ್ಪ ಎಲ್.ಎಚ್., ಶ್ರೀನಾಥ್ ರಾಜ್ ಜಿ., ಆಯೋಜನೆ ಮತ್ತು ಸ್ಥಳ: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಅರಮನೆ ರಸ್ತೆ, ಬೆಳಿಗ್ಗೆ 11

ಬಿ.ಆರ್ ಲಕ್ಷ್ಮಣರಾವ್

‘ಚಿಂತನ ಚಿಗುರು’ ಮಾಸ ಪತ್ರಿಕೆ ಬಿಡುಗಡೆ, ಪ್ರತಿಭಾ ಪುರಸ್ಕಾರ, ನಿವೃತ್ತ ಉಪನ್ಯಾಸಕರಿಗೆ ಸನ್ಮಾನ: ಉದ್ಘಾಟನೆ: ಸಿಂಧೂ ಬಿ. ರೂಪೇಶ್, ಚಿಂತನ ಚಿಗುರು ಬಿಡುಗಡೆ: ಬಂಜಗೆರೆ ಜಯಪ್ರಕಾಶ್, ಪ್ರತಿಭಾ ಪುರಸ್ಕಾರ: ಆನಂದರಾಜ್ ಎ., ಅತಿಥಿಗಳು: ಶ್ರೀಧರ್, ಜಿ. ನಾಗಣ್ಣ, ಆರ್. ರಾಜಗೋಪಾಲ್, ನಿಂಗೇಗೌಡ ಎ.ಎಚ್., ಎಸ್.ಆರ್. ವೆಂಕಟೇಶ್, ಅಧ್ಯಕ್ಷತೆ: ಜಿ.ಎಸ್. ಪುರುಷೋತ್ತಮ, ಆಯೋಜನೆ: ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ ಪ್ರದಾನ–2023: ಚಂದ್ರಶೇಖರ ಕಂಬಾರ, ಅತಿಥಿಗಳು: ಕುಮುದ್ ಶರ್ಮಾ, ಮಾಧವ್ ಕೌಶಿಕ್, ಆಯೋಜನೆ: ಕೇಂದ್ರ ಸಾಹಿತ್ಯ ಅಕಾಡೆಮಿ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5.30

ಚಂದ್ರಶೇಖರ ಕಂಬಾರ

ನಾಣ್ಯದರ್ಶಿನಿ–2024: ಉದ್ಘಾಟನೆ: ಸತ್ಪಾಲ್ ಮಹಾರಾಜ್, ಅತಿಥಿ: ರಿಜ್ವಾನ್ ರಜಾಕ್, ಆಯೋಜನೆ: ಕನ್ನಡ ನಾಡು ನಾಣ್ಯ ಸಂಘ, ಸ್ಥಳ: ಶಿಕ್ಷಕ ಸದನ, ಕೆ.ಜಿ. ರಸ್ತೆ, ಬೆಳಿಗ್ಗೆ 11

ಕಮಲಾ ಹಂಪನಾ ಅವರಿಗೆ ನುಡಿ ನಮನ: ಮಹೇಶ ಜೋಶಿ, ಹಂ.ಪ. ನಾಗರಾಜಯ್ಯ, ಡಿ. ಸುಧಾಕರ, ಟಿ.ಎ. ನಾರಾಯಣಗೌಡ, ಪುರುಷೋತ್ತಮ ಬಿಳಿಮಲೆ, ಕೆ.ಆರ್. ಸಂಧ್ಯಾರೆಡ್ಡಿ, ದೊಡ್ಡೇಗೌಡ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಕಮಲಾ ಹಂಪನಾ

ಮರಳಿ ಸಂವಿಧಾನದೆಡೆಗೆ: ‘ಜನಾದೇಶ 2024– ಸಂವಿಧಾನ ಕಲ್ಪಿಸಿದ ಭಾರತಕ್ಕಾಗಿ ಹೊಸ ರಾಜಕಾರಣ ಹೇಗೆ?’ ಸಂವಾದ: ಭಾಗವಹಿಸುವವರು: ಸಸಿಕಾಂತ್ ಸೆಂಥಿಲ್, ಆಯೋಜನೆ: ಜಾಗೃತ ಕರ್ನಾಟಕ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್ ಆವರಣ, ಅರಮನೆ ರಸ್ತೆ, ಸಂಜೆ 4

ಎಂ.ಪಿ. ಪ್ರಕಾಶ್–84: ಉದ್ಘಾಟನೆ: ಸಿ. ಸೋಮಶೇಖರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿ: ಕೆ.ಎಸ್. ನಾಗರಾಜ್, ಉಪಸ್ಥಿತಿ: ಪಿ. ವಿಜಯಕುಮಾರ್, ಪ್ರಮೀಳಾ ಗರಡಿ, ಸುಧಾ ನಾಗರಾಜ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆಎಸ್‌ಎಸ್ ಸಭಾಂಗಣ, ಗೇಟ್ ನಂ. 7, 38ನೇ ಕ್ರಾಸ್, 1ನೇ ಮುಖ್ಯರಸ್ತೆ, 8ನೇ ವಿಭಾಗ ಜಯನಗರ, ಸಂಜೆ 5.30

ಪ್ರವಚನ: ‘ವಿದುರನೀತಿ’ ಕುರಿತು: ವಿದ್ಯಾಧೀಶತೀರ್ಥ ಶ್ರೀಪಾದ ಸ್ವಾಮೀಜಿ, ‘ಸುಂದರಕಾಂಡ’ ಕುರಿತು: ವಿದ್ಯಾರಾಜೇಶ್ವರತೀರ್ಥ ಶ್ರೀಪಾದ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ಉಡುಪಿ ಪಲಿಮಾರು ಮಠ, ಸಂಪಿಗೆ ರಸ್ತೆ, ಮಲ್ಲೇಶ್ವರ, ಸಂಜೆ 5.30

ಬಿ.ಎಂ. ಶ್ರೀನಿವಾಸಯ್ಯ ಸ್ಮಾರಕ 9ನೇ ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆ–2024: ಅತಿಥಿಗಳು: ಎಂಗಳಗುಪ್ಪೆ ಸೀತಾರಾಮಯ್ಯ ಇಂದಿರೇಶ್, ಬಿ.ಎಸ್. ರಾಗಿಣಿ ನಾರಾಯಣ್, ಪಿ. ದಯಾನಂದ್ ಪೈ, ರವಿ ವೆಂಕಟೇಸಮ್, ಅಧ್ಯಕ್ಷತೆ: ಅವಿರಾಮ್ ಶರ್ಮಾ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಎಸ್ ಕಾನೂನು ಕಾಲೇಜು, ದೊಡ್ಡಬಸವಣ್ಣ ರಸ್ತೆ, ಬಸವನಗುಡಿ, ಸಂಜೆ 5.30

ಅಭಿನಂದನಾ ಸಮಾರಂಭ, ಹಳೆಯ ವಿದ್ಯಾರ್ಥಿ ಸಂಘದ ವೆಬ್ ಪೋರ್ಟಲ್ ಉದ್ಘಾಟನೆ: ಅಭಿನಂದಿತರು: ಬಿ. ವೀರಪ್ಪ, ಅತಿಥಿಗಳು: ಎ.ಎಸ್. ಪೊನ್ನಣ್ಣ, ನಾಗಭೂಷಣ, ಉದಯ್ ಹೊಳ್ಳ, ವಿವೇಕ್ ಸುಬ್ಬಾರೆಡ್ಡಿ, ಪ್ರಭುದೇವ ಕಲ್ಮಠ, ಅಧ್ಯಕ್ಷತೆ: ಎಂ.ಟಿ. ನಾಣಯ್ಯ, ಆಯೋಜನೆ: ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆ, ಸ್ಥಳ: ಎಸ್‌ಜೆಆರ್ ಕಾಲೇಜಿನ ಸಭಾಂಗಣ, ಆನಂದರಾವ್ ವೃತ್ತ, ಸಂಜೆ 5.30

ಎಚ್.ಎಸ್. ವೆಂಕಟೇಶಮೂರ್ತಿ ಅವರ ‘ಕೃಷ್ಣ ಕೋಗಿಲೆ’ ಭಾವಗೀತೆಗಳ ಗೊಂಚಲು ಪುಸ್ತಕ ಬಿಡುಗಡೆ: ಪಿ. ಶೇಷಾದ್ರಿ, ಜಯಶ್ರೀ ಅರವಿಂದ್, ಬಿ.ಆರ್. ಲಕ್ಷ್ಮಣರಾವ್, ಅತಿಥಿ: ಜೋಗಿ, ಗಾಯನ: ರಕ್ಷಾ ಪ್ರಿಯಾರಾಮ್, ಸಂಜೆ 6ರಿಂದ, (ಆನ್‌ಲೈನ್ ಕಾರ್ಯಕ್ರಮ)

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

‘ದೋಷಾರೋಪ ಪಟ್ಟಿ ಸಲ್ಲಿಕೆ ಬಳಿಕವೂ ಬಂಧನ ಸಲ್ಲ’

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ಕ್ರಿಮಿನಲ್ ಪ್ರಕರಣಗಳಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ ನಂತರವೂ ಆರೋಪಿಯನ್ನು ಬಂಧನದಲ್ಲಿ ಇರಿಸಿ ವಿಚಾರಣೆ ಮುಂದುವರಿಸಿದರೆ ಅದು ವಿಚಾರಣಾ ಪೂರ್ವ ಶಿಕ್ಷೆ ಎನಿಸಿಕೊಳ್ಳುತ್ತದೆ’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಅಭಿಪ್ರಾಯಪಟ್ಟಿದೆ.

ಜೋಡಿ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಆರೋಪಿ ಎಂ.ಬಿ.ಸಂತೋಷ್ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಅಂತೆಯೇ, ಆರೋಪಿ ಪರ ವಕೀಲರಾದ ಚಿಕ್ಕಮಗಳೂರಿನ ಪಿ.ಇ.ಸುರೇಶ್ ಮಂಡಿಸಿದ ವಾದ ಮನ್ನಿಸಿರುವ ನ್ಯಾಯಪೀಠ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಪ್ರಕರಣವೇನು?: ‘ಮೂಡಿಗೆರೆ ತಾಲ್ಲೂಕು ಬಣಕಲ್ ಗ್ರಾಮದಲ್ಲಿದ್ದ ಸಂತೋಷ್‌ರವರ ಕೃಷಿ ಜಮೀನನ್ನು ಕಾರ್ತಿಕ್ (45) ಮಧ್ಯವರ್ತಿಯಾಗಿ ಮಾರಾಟ ಮಾಡಿಸಿದ್ದರು. ಮಾರಾಟದ ನಂತರ ತನಗೆ ಬರಬೇಕಾದ ಲಾಭದ ಹಣಕ್ಕೆ ಕಾರ್ತಿಕ್ ಮೋಸ ಮಾಡಿದ್ದಾರೆ ಎಂದು ಸಂತೋಷ್ ತಗಾದೆ ತೆಗೆದಿದ್ದರು. ಈ ಸಂಬಂಧ 2023ರ ಆಗಸ್ಟ್ 13ರಂದು ತಮ್ಮ ಮನೆಯಲ್ಲಿ ಕಾರ್ತಿಕ್ ಜೊತೆ ಮಾತುಕತೆ ನಡೆಸುತ್ತಿದ್ದ ಸಮಯದಲ್ಲಿ ಕಾರ್ತಿಕ್ ಮೇಲೆ ಹಲ್ಲೆ ಮಾಡಿದ್ದಾರೆ. ಸ್ಥಳದಲ್ಲಿಯೇ ಇದ್ದ ಸಂತೋಷ್ ಅವರ ತಂದೆ ಭಾಸ್ಕರ ಗೌಡ (68) ಇದನ್ನು ತಡೆಯಲು ಮುಂದಾದಾಗ ಅವರ ಮೇಲೂ ಹಾಗೂ ಅವರ ತಾಯಿ ಪ್ರೇಮಾ ಅವರ ಮೇಲೂ ಹಲ್ಲೆ ನಡೆಸಿದ್ದಾರೆ. ಕಾರ್ತಿಕ್ ಸ್ಥಳದಲ್ಲೇ ಮೃತಪಟ್ಟರೆ ಭಾಸ್ಕರಗೌಡ ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿತ್ತು. ನಂತರ ಅವರೂ ಮೃತಪಟ್ಟಿದ್ದರು. ಈ ಸಂಬಂಧ ಕಾರ್ತಿಕ್ ಪತ್ನಿ ಶಾಂಭವಿ (42) ಬಾಳೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು’ ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿತ್ತು.

ಘಟನೆ ಸಂಬಂಧ ಪೊಲೀಸರು ಸಂತೋಷ್ ಅವರನ್ನು ಬಂಧಿಸಿದ್ದರು. ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ-1860ರ ಕಲಂ 302 ಮತ್ತು 307ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿ ಚಿಕ್ಕಮಗಳೂರು ಎರಡನೇ ಹೆಚ್ಚುವರಿ ಹಾಗೂ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ಸೆಷನ್ಸ್ ನ್ಯಾಯಾಲಯ ಸಂತೋಷ್ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿತ್ತು.

ಭರತ್ ಶೆಟ್ಟಿಗೆ ಮಧ್ಯಂತರ ಜಾಮೀನು

ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ನಲ್ಲಿ ಬಿಎನ್‌ಎಸ್ ಖಾತೆ ತೆರೆದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ನಿಂದನಾತ್ಮಕ ಭಾಷಣ ಮಾಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಮಂಗಳೂರು ಉತ್ತರ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಶಾಸಕ ವೈ. ಭರತ್ ಶೆಟ್ಟಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತು ಬದ್ಧ ಮಧ್ಯಂತರ ಜಾಮೀನು ನೀಡಿದೆ.

ಈ ಸಂಬಂಧ ಭರತ್ ಶೆಟ್ಟಿ ಸಲ್ಲಿಸಿದ್ದ ಅರ್ಜಿಯನ್ನು, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಗುರುವಾರ ವಿಚಾರಣೆ ನಡೆಸಿದರು.

‘ಒಂದು ವೇಳೆ ಭರತ್ ಶೆಟ್ಟಿ ಅವರನ್ನು ಕಾವೂರು ಠಾಣೆ ಪೊಲೀಸರು ಬಂಧಿಸಿದರೆ ಮಧ್ಯಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು. ಭರತ್ ಶೆಟ್ಟಿ ಅವರು ₹1 ಲಕ್ಷ ಮೌಲ್ಯದ ವೈಯಕ್ತಿಕ ಬಾಂಡ್, ಒಬ್ಬರ ಭದ್ರತೆ ಒದಗಿಸಬೇಕು. ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು ಮತ್ತು ಸಾಕ್ಷ್ಯ ತಿರುಚಬಾರದು. ತನಿಖಾಧಿಕಾರಿ ವಿಚಾರಣೆಗೆ ಕರೆದಾಗ ಹಾಜರಾಗಬೇಕು’ ಎಂಬ ಷರತ್ತುಗಳನ್ನು ವಿಧಿಸಲಾಗಿದೆ.

ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಪ್ರಾಸಿಕ್ಯೂಷನ್ ಪರ ವಕೀಲರಿಗೆ ನಿರ್ದೇಶಿಸಿದ ನ್ಯಾಯಾಲಯ ಇದೇ 16ಕ್ಕೆ ವಿಚಾರಣೆ ಮುಂದೂಡಿದೆ. ಅರ್ಜಿದಾರರ ಪರ ಹೈಕೋರ್ಟ್ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ವಾದ ಮಂಡಿಸಿದರು.

ಈ ಆದೇಶದ ಮೂಲಕ ಕರ್ನಾಟಕದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಭಾರತೀಯ ನಾಗರಿಕ ಸಂಹಿತೆ-2023ರ (ಬಿಎನ್‌ಎಸ್) ಅಡಿಯಲ್ಲಿ ಶಾಸಕ ಭರತ್ ಶೆಟ್ಟಿ ಜಾಮೀನು ಪಡೆದ ಮೊದಲ ಆರೋಪಿ ಎನಿಸಿ ಖಾತೆ ತೆರೆದಿದ್ದಾರೆ.

ಪ್ರಕರಣವೇನು?: ‘ಇದೇ 8ರಂದು ಬೆಳಿಗ್ಗೆ ಕಾವೂರು ಜಂಕ್ಷನ್‌ನಲ್ಲಿ ಏರ್ಪಡಿಸಲಾಗಿದ್ದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಶಾಸಕ ಭರತ್ ಶೆಟ್ಟಿ ಭಾಷಣ ಮಾಡಿದ್ದರು. ಆಗ ಅವರು ರಾಹುಲ್ ಗಾಂಧಿ ಅವರನ್ನು ನಿಂದಿಸಿದ್ದಾರೆ. ಈ ಸಂದರ್ಭದಲ್ಲಿ ಹಾಜರಿದ್ದ ಮಂಗಳೂರು ದಕ್ಷಿಣ ವಿಧಾನಸಭಾ ಶಾಸಕರಾದ ವೇದವ್ಯಾಸ್ ಕಾಮತ್, ಮಂಗಳೂರು ಸಂಸದ ಬ್ರಿಜೇಶ್ ಚೌಟ ಹಾಗೂ ಮಹಾನಗರ ಪಾಲಿಕೆ ಸದಸ್ಯರು ಭರತ್ ಶೆಟ್ಟಿ ಭಾಷಣಕ್ಕೆ ಪ್ರಚೋದನೆ ನೀಡಿದ್ದಾರೆ’ ಎಂದು ಆರೋಪಿಸಿ ಮಂಗಳೂರಿನ ಅನಿಲ್ ಕುಮಾರ್, ಕಾವೂರು ಠಾಣೆಗೆ ದೂರು ನೀಡಿದ್ದರು.

ದೂರನ್ನು ಆಧರಿಸಿ, ಭರತ್ ಶೆಟ್ಟಿ ಮತ್ತು ಇತರರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ-2023ರ ಕಲಂ 351 (3) (ಕ್ರಿಮಿನಲ್ ಬೆದರಿಕೆ), 353 (ಪ್ರಚೋದನೆ) ಅಡಿ ಎಫ್‌ಐಆರ್ ದಾಖಲಿಸಲಾಗಿತ್ತು.

ಎನ್‌ಇಪಿ: ರಾಜ್ಯ ಸರ್ಕಾರಕ್ಕೆ ನೋಟಿಸ್

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಕೈಬಿಟ್ಟು ರಾಜ್ಯ ಶಿಕ್ಷಣ ನೀತಿ ಜಾರಿಗೆ ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ಗಿರೀಶ್ ಭಾರದ್ವಾಜ್ ಹಾಗೂ ಆರ್. ಆನಂದ ಮೂರ್ತಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಂ. ಅರುಣ್ ಶ್ಯಾಮ್, ‘ರಾಜ್ಯ ಶಿಕ್ಷಣ ನೀತಿಯನ್ನು ಕೈಬಿಟ್ಟು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕಾರ್ಯರೂಪಕ್ಕೆ ತರುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಮನವಿ ಮಾಡಿದರು.

ಕೆಲ ಕಾಲ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಆಗಸ್ಟ್ 1ಕ್ಕೆ ಮುಂದೂಡಿತು. ಕೇಂದ್ರ ಸರ್ಕಾರದ ಪರ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ಹಾಜರಿದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕ
ಬಸವನಗುಡಿ ಬೆಂಗಳೂರು – 560 004

ಪ್ರಕಟಣೆ

ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕ (ರಿ) ನ್ಯಾಷನಲ್ ಹೈಸ್ಕೂಲ್ ಆವರಣ, ಬಸವನಗುಡಿ, ಬೆಂಗಳೂರು– 04. ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ 4 ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಗುರುತಿಸಲಾದ 1 ಬೋಧಕೇತರ ಬ್ಯಾಕ್‌ಲಾಗ್ ಹುದ್ದೆಗೆ ಪರಿಶಿಷ್ಟ ಪಂಗಡದ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರ ಸಂ.	ಹುದ್ದೆಯ ಹೆಸರು	ಹುದ್ದೆಯ ಸಂಖ್ಯೆ	ಮೀಸಲಾತಿ
1.	ಬೆರಳಚ್ಚುಗಾರರು	01	ಪರಿಶಿಷ್ಟ ಪಂಗಡ

ಅರ್ಹತೆ: ಅಭ್ಯರ್ಥಿಗಳು ದ್ವಿತೀಯ ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುವ ಸೀನಿಯರ್ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. (ಕನ್ನಡ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದು ಖಡ್ಡಾಯವಾಗಿದೆ). ವಯೋಮಿತಿ 18 – 40 ವರ್ಷಗಳು. ಈ ಹುದ್ದೆಯು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಾತ್ರ ಮೀಸಲಿದ್ದು, ಇತರೆ ವರ್ಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಂತಿಲ್ಲ. ಅಭ್ಯರ್ಥಿಗಳನ್ನು ಶೈಕ್ಷಣಿಕ ವಿದ್ಯಾರ್ಹತೆ ಮತ್ತು ವಯೋಮಿತಿ ಆಧಾರದ ಮೇಲೆ ಮಾತ್ರ ಆಯ್ಕೆ ಮಾಡಲಾಗುವುದು. ಯಾವುದೇ ಸಂದರ್ಶನ ಇರುವುದಿಲ್ಲ.
ಅಭ್ಯರ್ಥಿಗಳು ಎ4 ಅಳತೆಯ ಖಾಲಿ ಹಾಳೆಯಲ್ಲಿ ತಮ್ಮ ಹೆಸರು, ಹುಟ್ಟಿದ ದಿನಾಂಕ, ಪ್ರವರ್ಗ, ವಿದ್ಯಾರ್ಹತೆ, ಜಾತಿ ಪ್ರಮಾಣ ಪತ್ರ ಮತ್ತು ಅನುಭವ ಇದ್ದಲ್ಲಿ ಸೂಕ್ತ ದೃಢೀಕೃತ ಪತ್ರಗಳೊಂದಿಗೆ ವಿಳಾಸ ಮತ್ತು ದೂರವಾಣಿ ಸಂಖ್ಯೆ ಇತರೆ ಸೂಕ್ತ ಮಾಹಿತಿಗಳೊಂದಿಗೆ ಅರ್ಜಿಯನ್ನು ದ್ವಿಪ್ರತಿಯಲ್ಲಿ ಈ ಜಾಹೀರಾತು ಪ್ರಕಟಣೆಗೊಂಡ 10 ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ದಿನಾಂಕ 22.07.2024 ನಂತರ ಸಲ್ಲಿಕೆಯಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹಾಗೆಯೇ ಒಂದು ಪ್ರತಿಯನ್ನು ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಕಾಳಿದಾಸ ರಸ್ತೆ, ಬೆಂಗಳೂರು – 560 009 ಈ ಕಛೇರಿಗೆ ಅಂಚೆ ಮುಖಾಂತರ ಅಥವಾ ಖುದ್ದಾಗಿ ಮೇಲೆ ತಿಳಿಸಲಾದ ಅವಧಿಯೊಳಗೆ ಸಲ್ಲಿಸತಕ್ಕದ್ದು.

ಸಹಿ/– ಕಾರ್ಯದರ್ಶಿಗಳು
ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕ,
ನ್ಯಾಷನಲ್ ಹೈಸ್ಕೂಲ್ ಆವರಣ, ಬಸವನಗುಡಿ, ಬೆಂಗಳೂರು–04.

ಮಾನ್ಯ ಗೌರವಾನ್ವಿತ ಪ್ರಿನ್ಸಿಪಲ್ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ನೆಲಮಂಗಲ
Crl.Misc. 201/2024
ಅರ್ಜಿದಾರರು: ಶ್ರೀ ಕರಿಯಪ್ಪ ಮತ್ತು ಇತರರು
ವಿರುದ್ಧ
ಎದುರುದಾರರು: ತಹಶೀಲ್ದಾರ್, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಈ ಮೇಲ್ಕಂಡ ಅರ್ಜಿದಾರರ ಮುತ್ತಜ್ಜಿ ಶ್ರೀಮತಿ ದೊಡ್ಡಮ್ಮ ಕೋಂ ಲೇಟ್ ಕರೆಅಜ್ಜಯ್ಯ ನವರು ದಿನಾಂಕ: 07.06.1987 ರಂದು ಚಂದನ ಹೊಸಹಳ್ಳಿ ಗ್ರಾಮ, ಸೋಂಪುರ ಹೋಬಳಿ ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಮರಣ ಹೊಂದಿದ್ದು, ಅರ್ಜಿದಾರರ ಮುತ್ತಜ್ಜಿ ಮರಣ ಪ್ರಮಾಣ ಪತ್ರ ನೀಡುವಂತೆ ಎದುರುದಾರರಾದ ತಹಶೀಲ್ದಾರ್ ರವರಿಗೆ ನಿರ್ದೇಶನ ನೀಡುವಂತೆ ಆದೇಶಿಸಬೇಕೆಂದು ಕೋರಿ, ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ಸದರಿ ಅರ್ಜಿಯ ವಿಚಾರಣೆಯನ್ನು ದಿನಾಂಕ: 21.08.2024 ರಂದು ಬೆಳಗ್ಗೆ 11.00 ಗಂಟೆಗೆ ನಿಗಧಿಗೊಳಿಸಿದ್ದು, ಮೇಲ್ಕಂಡ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಅಂತಹ ವ್ಯಕ್ತಿಗಳು, ಮೇಲ್ಕಂಡ ದಿನಾಂಕದಂದು ತಾವಾಗಲೀ, ತಮ್ಮ ವಕೀಲರ ಮೂಲಕವಾಗಲೀ ಹಾಜರಾಗಲು ಈ ಮೂಲಕ ತಿಳಿಯಪಡಿಸಲಾಗಿದೆ. ತಪ್ಪಿದಲ್ಲಿ, ಮಾನ್ಯ ನ್ಯಾಯಾಲಯವು ಸದರಿ ಅರ್ಜಿಗೆ ಯಾವುದೇ ಆಕ್ಷೇಪಣೆಗಳಿಲ್ಲವೆಂದು ಪರಿಗಣಿಸಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸುತ್ತದೆ. ಪ್ರಕಟಣೆ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದು.
ಈ ಪ್ರಕಟಣೆಯನ್ನು ಮಾನ್ಯ ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ದಿನಾಂಕ 06/07/2024 ರಂದು ನೀಡಲಾಯಿತು.
ಮಾನ್ಯ ನ್ಯಾಯಾಲಯದ ಆದೇಶ
ಶಿರಸ್ತೇದಾರರು
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನೆಲಮಂಗಲ
ಅರ್ಜಿದಾರರ ಪರ ವಕೀಲರು
ಕೃಷ್ಣ, ಬಿ.ಎ, ಎಲ್.ಎಲ್.ಬಿ, **ವಕೀಲರು**
ನಂ. 80/3, 2ನೇ ಮಹಡಿ, 28ನೇ ಕ್ರಾಸ್, 6ನೇ ಬ್ಲಾಕ್, ಜಯನಗರ, ಯಡಿಯೂರು, ಕನಕಪುರ ಮುಖ್ಯ ರಸ್ತೆ, ಬೆಂಗಳೂರು-560070.

ಮಾನ್ಯ ಗೌರವಾನ್ವಿತ ಪ್ರಿನ್ಸಿಪಲ್ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ನೆಲಮಂಗಲ
Crl.Misc. 199/2024
ಅರ್ಜಿದಾರರು: ಶ್ರೀ ಕರಿಯಪ್ಪ ಮತ್ತು ಇತರರು
ವಿರುದ್ಧ
ಎದುರುದಾರರು: ತಹಶೀಲ್ದಾರ್, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಈ ಮೇಲ್ಕಂಡ ಅರ್ಜಿದಾರರ ಮುತ್ತಣ್ಣ ಶ್ರೀ ಕರೆಅಜ್ಜಯ್ಯ ಅನ್ ಲೇಟ್ ಕರೇತಿಮ್ಮಯ್ಯನವರು ದಿನಾಂಕ: 08.09.1977 ರಂದು ಚಂದನ ಹೊಸಹಳ್ಳಿ ಗ್ರಾಮ, ಸೋಂಪುರ ಹೋಬಳಿ ನೆಲ ಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಮರಣ ಹೊಂದಿದ್ದು, ಅರ್ಜಿದಾರರ ಮುತ್ತಜ್ಜ ಮರಣ ಪ್ರಮಾಣ ಪತ್ರ ನೀಡುವಂತೆ ಎದುರುದಾರರಾದ ತಹಶೀಲ್ದಾರ್ ರವರಿಗೆ ನಿರ್ದೇಶನ ನೀಡುವಂತೆ ಆದೇಶಿಸಬೇಕೆಂದು ಕೋರಿ, ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ಸದರಿ ಅರ್ಜಿಯ ವಿಚಾರಣೆ ಯನ್ನು ದಿನಾಂಕ: 21.08.2024 ರಂದು ಬೆಳಗ್ಗೆ 11.00 ಗಂಟೆಗೆ ನಿಗಧಿಗೊಳಿಸಿದ್ದು, ಮೇಲ್ಕಂಡ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಅಂತಹ ವ್ಯಕ್ತಿಗಳು, ಮೇಲ್ಕಂಡ ದಿನಾಂಕದಂದು ತಾವಾಗಲೀ, ತಮ್ಮ ವಕೀಲರ ಮೂಲಕವಾಗಲೀ ಹಾಜರಾಗಲು ಈ ಮೂಲಕ ತಿಳಿಯಪಡಿಸ ಲಾಗಿದೆ. ತಪ್ಪಿದಲ್ಲಿ ಮಾನ್ಯ ನ್ಯಾಯಾಲಯವು ಸದರಿ ಅರ್ಜಿಗೆ ಯಾವುದೇ ಆಕ್ಷೇಪಣೆಗಳಿಲ್ಲವೆಂದು ಪರಿಗಣಿಸಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ಇತ್ಯರ್ಥ ಪಡಿಸುತ್ತದೆ. ಪ್ರಕಟಣೆ: ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದು.
ಈ ಪ್ರಕಟಣೆಯನ್ನು ಮಾನ್ಯ ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ದಿನಾಂಕ: 06/07/2024 ರಂದು ನೀಡಲಾಯಿತು.
ಮಾನ್ಯ ನ್ಯಾಯಾಲಯದ ಆದೇಶ
ಶಿರಸ್ತೇದಾರರು
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನೆಲಮಂಗಲ
ಅರ್ಜಿದಾರರ ಪರ ವಕೀಲರು
ಕೃಷ್ಣ, ಬಿ.ಎ. ಎಲ್.ಎಲ್.ಬಿ, **ವಕೀಲರು,**
ನಂ. 80/3, 2ನೇ ಮಹಡಿ, 26ನೇ ಕ್ರಾಸ್, 6ನೇ ಬ್ಲಾಕ್, ಜಯನಗರ, ಯಡಿಯೂರು, ಕನಕಪುರ ಮುಖ್ಯ ರಸ್ತೆ, ಬೆಂಗಳೂರು-560070.

ಮಾನ್ಯ ಗೌರವಾನ್ವಿತ ಪ್ರಿನ್ಸಿಪಲ್ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ನೆಲಮಂಗಲ
Crl.Misc. 200/2024
ಅರ್ಜಿದಾರರು: ಶ್ರೀ ಕರಿಯಪ್ಪ ಮತ್ತು ಇತರರು
ವಿರುದ್ಧ
ಎದುರುದಾರರು: ತಹಶೀಲ್ದಾರ್, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಈ ಮೇಲ್ಕಂಡ ಅರ್ಜಿದಾರರ ಅಜ್ಜಿ ಶ್ರೀಮತಿ ತಾಯಮ್ಮ ಕೋಂ ಲೇಟ್ ಹಾವಿನಕರಿಯಪ್ಪ ನವರು ದಿನಾಂಕ: 01.10.1995 ರಂದು ಚಂದನಹೊಸಹಳ್ಳಿ ಗ್ರಾಮ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಮರಣ ಹೊಂದಿದ್ದು, ಅರ್ಜಿದಾರರ ಅಜ್ಜಿ ಮರಣ ಪ್ರಮಾಣ ಪತ್ರ ನೀಡುವಂತೆ ಎದುರುದಾರರಾದ ತಹಶೀಲ್ದಾರ್ ರವರಿಗೆ ನಿರ್ದೇಶನ ನೀಡುವಂತೆ ಆದೇಶಿಸಬೇಕೆಂದು ಕೋರಿ, ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ಸದರಿ ಅರ್ಜಿಯ ವಿಚಾರಣೆಯನ್ನು ದಿನಾಂಕ: 21.08.2024 ರಂದು ಬೆಳಗ್ಗೆ 11.00 ಗಂಟೆಗೆ ನಿಗಧಿಗೊಳಿಸಿದ್ದು, ಮೇಲ್ಕಂಡ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಅಂತಹ ವ್ಯಕ್ತಿಗಳು, ಮೇಲ್ಕಂಡ ದಿನಾಂಕದಂದು ತಾವಾಗಲೀ, ತಮ್ಮ ವಕೀಲರ ಮೂಲಕವಾಗಲೀ ಹಾಜರಾಗಲು ಈ ಮೂಲಕ ತಿಳಿಯಪಡಿಸಲಾಗಿದೆ. ತಪ್ಪಿದಲ್ಲಿ ಮಾನ್ಯ ನ್ಯಾಯಾಲಯವು ಸದರಿ ಅರ್ಜಿಗೆ ಯಾವುದೇ ಆಕ್ಷೇಪಣೆಗಳಿಲ್ಲವೆಂದು ಪರಿಗಣಿಸಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ಇತ್ಯರ್ಥ ಪಡಿಸುತ್ತದೆ. ಪ್ರಕಟಣೆ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದು.
ಈ ಪ್ರಕಟಣೆಯನ್ನು ಮಾನ್ಯ ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ದಿನಾಂಕ 06/07/2024 ರಂದು ನೀಡಲಾಯಿತು.
ಮಾನ್ಯ ನ್ಯಾಯಾಲಯದ ಆದೇಶ
ಶಿರಸ್ತೇದಾರರು
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನೆಲಮಂಗಲ
ಅರ್ಜಿದಾರರ ಪರ ವಕೀಲರು
ಕೃಷ್ಣ, ಬಿ.ಎ, ಎಲ್.ಎಲ್.ಬಿ, **ವಕೀಲರು,**
ನಂ, 80/3, 2ನೇ ಮಹಡಿ, 26ನೇ ಕ್ರಾಸ್, 6ನೇ ಬ್ಲಾಕ್, ಜಯನಗರ, ಯಡಿಯೂರು, ಕನಕಪುರ ಮುಖ್ಯ ರಸ್ತೆ, ಬೆಂಗಳೂರು-560070.

PUBLIC NOTICE
To Place your Classified Ads Contact
9731810277

ASTRO YATRA
ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

Wanted

WANTED FEMALE Office Assistant- Any Degree, Good Communication Skills English & Hindi for Pvt Ltd Company in Rajajinagar Contact: 9108458798/ 9845579620

BUSINESS

Business Offers

Business For Sale

FACTORY FOR Sale, UPVC Windows and Doors Fabrication Unit for sale near Bannerghatta (S.B.Halli) Contact: Ashok 7975341885, Ajit Jain 9880339404.

General

BUSINESS OPPORTUNITY to Earn 50k/m part or Full time, in Property Development co. Interested call me 9663391355/ 9371937555

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Commerical

Chamarajpet

FOR SALE Commercial Site 30*72 North facing, Sirsi Road, Chamrajpete 22k per.sft. Negotiable. 9611944199, 8951677990

Sites

Kempegowda Layout

***NADAPRABHU* KEMPEGOWDA** Layout1st Block K sector 30x40 W/F 82 lakhs,9th Block D sector 80x65 South west corner commercial site. ₹6500/-.Contact: 9686469799

JOB OPPORTUNITIES

Teachers/ Professors

APPLICATIONS FOR the post of Principal is invited for reputed Polytechnic institution situated in South Bangalore from the eligible candidates with Ph.D/ M.Tech. (CS/ IS) with minimum 10 years teaching and administrative experience, remuneration commensurate with experience. Candidates may apply within 31st July 2024 to E-mail: vasavvp79@gmail.com.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Tumkur Road

300 NOS, BMRDA Approved Residential Sites Available for sale before Nelamangala on Tumkur Road at Attractive Price. Housing Society/ Bulk Buyers Contact: 9019862158

Flat

M G Road And Around

ST. JHONS Road Embassy Oasis 4 BHK Semi Furnished, 4100 Sft, 3 Carpark, Upper Floor All Amenities: 9845022510

PERSONAL

Announcements

ANNOUNCEMENT

I, **MAYUR D. S/o B Dayananda** aged about 22 years, R/at No.13B, KPWD Quarters, Jeevanbheema Nagar, Bengaluru-560075, state that, I had made an affidavit on 23-10-2019 declaring my names **MAYUR D AND MAYUR BANNIKAL DAYANANDA**, as mine only and one and the same person. The same was duly notarized and was published in the local and national daily news papers and submitted to the concerned authorities.
However, the above mentioned news paper ads have been lost and even, after honest search I could not find. Hence this affidavit dated: 10-07-2024 Before notary T Mallikarjuna, Bengaluru.

Lost

DOCUMENT LOST

I, **LAKSHMI K** Residing at # No.15, Asha Jyothi, Sanjay Gandhi Nagar, Bangalore. have lost my 1) Document / Article : General Power of attorney given by M. Lokanath to M. shrinivas on 22/07/2005. Document No. / Identification: CC/4-301352.
2) Document / Article : Schedule Details of 15x40, Site No.02, Assessment No.8, Ullal gram katha No.90, Yashvanthpur Hobli. Bengaluru North Taluk. Document No. / Identification: CC/4-301353.
3) Document / Article : Affidavit by M Lokanath on 22/07/2005. Document No. / Identification: CC/4-301354.
while shifting residence. If Found please Contact: **9591190444**

Change of Name

I, KRITHIKA M N, D/o M.S.Nanjunda residing at #83, Diagonal Road, V.V.Puram Bangalore-560004, have changed my name to KRITHIKA KASHYAP vide affidavit dated 09.07.2024. Sworn before notary K.Ramegowda, Bangalore.

CHANGE OF NAME
I, **SOWMYA VASUDEVA** Residing at Flat No.A306, Dhathri Residency, Opp. Arat Falicita Apartment, Begur, Bommanahalli, Bengaluru-560068, have changed my name to **SOWMYA VASUDEV ACHARYA** vide affidavit dated 06-07-2024 sworn to before notary M. Rajendra, Bengaluru.

I, PETER G. R/a #7/84, RBI Colony, 3rd block east Jayanagar Bangalore 560011, have changed my name to SARAVANAN P vide affidavit dated 11-07-2024 before notary MOHAMMED HUSSAIN K. Bangalore.

I ANNAPURNA B.R Residing At No. 6/9, 26/27, Bannerghatta road, Sapthagiri layout, Gottigere, Bangalore-560083 Have Changed My Name to ANNAPOORNA B.R Vide Affidavit Dated 22/06/2024 before Notary N.Nagappa Bangalore.

CHANGE OF NAME
I, **SHYAM SUNDARI DEVI,** Spouse of Ser. No. 268449L EX MWO. JAGANNATH PRASAD SINGH, residing at #177, 6th Main Road, Defence Colony, Bagalur Road,Vinayaka Nagar, Bangalore - 560063, have changed my name from **SHYAM SUNDARI DEVI** to **SUNDARI DEVI,** vide Affidavit dated 10th-Jul-2024. before notary GR Ravichandra Reddy, Bangalore

I, SAJITH KUMAR KATHIRAN, R/a #131/1 'Archana', 6th main 1st Block, 3rd phase, Banashankari 3rd stage, Bangalore- 560085 I Hereby Declare RISHABH SAJITH Alias RISHABH SAJITH KATHIRAN Both the Name Belongs to my Son But For Official Use RISHABH SAJITH KATHIRAN Vide Affidavit Dated 11/07/2024 before Notary T. Venkategowda Bangalore

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752
+91 9886213331
+91 9731810277 | +91 9900428036
080-45557163/164
*Conditions apply

ಹೆಬ್ಬಾಳ ಮೇಲ್ಸೇತುವೆ ವಿಸ್ತರಣೆ ಕಾಮಗಾರಿ ಪ್ರಗತಿ

ವಾಹನ ಸಂಚಾರ ಮಾರ್ಗ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆ ವಿಸ್ತರಣೆ ಹಾಗೂ ಬಿಎಂಆರ್‌ಸಿಎಲ್‌ನಿಂದ ಮೆಟ್ರೊ ಕಾಮಗಾರಿ ಪ್ರಗತಿಯಲ್ಲಿದ್ದು, ಈ ಮಾರ್ಗದಲ್ಲಿ ವಾಹನ ದಟ್ಟಣೆಯಾಗಲಿದೆ. ಹಾಗಾಗಿ ವಾಹನಗಳಿಗೆ ಪರ್ಯಾಯ ಮಾರ್ಗದ ವ್ಯವಸ್ಥೆ ಮಾಡಲಾಗಿದೆ.

ವಿಮಾನ ನಿಲ್ದಾಣ, ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಹೆಬ್ಬಾಳ ಮೇಲ್ಸೇತುವೆ ಮೇಲೆ ನಿತ್ಯ 2.5 ಲಕ್ಷಕ್ಕೂ ಅಧಿಕ ವಾಹನಗಳು ಸಂಚರಿಸುತ್ತವೆ. ಮೇಲ್ಸೇತುವೆಯ ನಿಗದಿತ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಸಂಚರಿಸುವುದರಿಂದ ದಟ್ಟಣೆ ಉಂಟಾಗುತ್ತಿರುತ್ತದೆ.

ಸಂಚಾರ ದಟ್ಟಣೆ ನಿವಾರಿಸಲು ಕೆಲ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಕೆ.ಆರ್.ಪುರ ಅಪ್ ರ‍್ಯಾಂಪ್‌ನಿಂದ ಹೆಬ್ಬಾಳ ಮೇಲ್ಸೇತುವೆ ಕಡೆಗೆ (200 ಮೀಟರ್) ಬಿಡಿಎ ವತಿಯಿಂದ ಮೇಲ್ಸೇತುವೆ ವಿಸ್ತರಣೆ, ಯೋಗೇಶ್ವರ ನಗರ ಕ್ರಾಸ್ (ಕೆಂಪಾಪುರ ಕ್ರಾಸ್) ಕೆ.ಆರ್.ಪುರದಿಂದ ಹೆಬ್ಬಾಳ ಜಂಕ್ಷನ್ ಕಡೆಗೆ, ಕೊಡಿಗೇಹಳ್ಳಿ ಜಂಕ್ಷನ್, ಬ್ಯಾಟರಾಯನಪುರ ಜಂಕ್ಷನ್ ಬಳಿ ಮೆಟ್ರೊ ಕಾಮಗಾರಿ ಹಾಗೂ ಹೆಬ್ಬಾಳ ಪಿಎಸ್ ಜಂಕ್ಷನ್ (ನಗರದ ಕಡೆಗೆ) ಬಿಡಿಎ ವತಿಯಿಂದ ಹೆಚ್ಚುವರಿ ಮೇಲ್ಸೇತುವೆ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ.

ಕಾಮಗಾರಿ ನಡೆಯುತ್ತಿರುವುದರಿಂದ ದಟ್ಟಣೆ ಅವಧಿಯಲ್ಲಿ ವಾಹನ ಸಂಚಾರ ನಿಧಾನಗತಿಯಲ್ಲಿರುತ್ತದೆ. ಇದರಿಂದ ನಿಗದಿತ ಸಮಯಕ್ಕೆ ವಿಮಾನ ನಿಲ್ದಾಣ ತಲುಪಲು ಸಾಧ್ಯವಿಲ್ಲ. ಆದ್ದರಿಂದ ನಿಗದಿತ ಅವಧಿಗಿಂತ ಎರಡು ತಾಸು ಮುಂಚಿತವಾಗಿ ಹೊರಡಬೇಕು ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಹೆಬ್ಬಾಳ ರಸ್ತೆಯಲ್ಲಿ ವಾಹನಗಳ ದಟ್ಟಣೆ –ಪ್ರಜಾವಾಣಿ ಚಿತ್ರ

1. ಕೆ.ಆರ್.ಪುರದಿಂದ ವಿಮಾನ ನಿಲ್ದಾಣ ಕಡೆಗೆ ಪ್ರಯಾಣಿಸುವವರು ಬಳಸಬೇಕಾದ ಮಾರ್ಗ:

- ಕೆ.ಆರ್.ಪುರ ಕಡೆಯಿಂದ ವಿಮಾನ ನಿಲ್ದಾಣ ಕಡೆಗೆ ಚಲಿಸುವ ವಾಹನಗಳು ಹೊರವರ್ತುಲ ರಸ್ತೆಯಲ್ಲಿ ಬಲ ತಿರುವು ಪಡೆದು ಹೆಣ್ಣೂರು ಕ್ರಾಸ್–ಬಾಗಲೂರು ರಸ್ತೆಯ ಮೂಲಕ ವಿಮಾನ ನಿಲ್ದಾಣಕ್ಕೆ ಹೋಗಬಹುದು.
- ಹೊರವರ್ತುಲ ರಸ್ತೆಯಲ್ಲಿ ನಾಗವಾರ ಜಂಕ್ಷನ್ ಬಳಿ ಬಲ ತಿರುವು ಪಡೆದು ಥಣಿಸಂದ್ರ–ಹೆಗಡೆನಗರ ಮುಖ್ಯರಸ್ತೆ, ಬೆಳ್ಳಳ್ಳಿ ಸೇತುವೆ–ರೇವಾ ಜಂಕ್ಷನ್ ಮೂಲಕ ಬಲ ತಿರುವು ಪಡೆದು ಬಾಗಲೂರು ರಸ್ತೆಯ ಮೂಲಕ ವಿಮಾನ ನಿಲ್ದಾಣಕ್ಕೆ ಹೋಗುವುದು.
- ಕೆ.ಆರ್.ಪುರ ಕಡೆಯಿಂದ ನಗರದ ಕಡೆಗೆ ಬರುವ ವಾಹನಗಳು ಐಟಿಸಿ–ಮುಕುಂದ ಚಿತ್ರಮಂದಿರ ರಸ್ತೆಯ ಲಿಂಗರಾಜಪುರ ಮೇಲ್ಸೇತುವೆ ಮಾರ್ಗದ ಮೂಲಕ ನಗರದ ಕಡೆ ಪ್ರವೇಶಿಸಬಹುದು.
- ನಾಗವಾರ ಮತ್ತು ಟ್ಯಾನರಿ ರಸ್ತೆ ಮಾರ್ಗವಾಗಿ ನಗರದ ಕಡೆಗೆ ಪ್ರವೇಶಿಸಬಹುದು.

2. ಬೆಂಗಳೂರು–ಬಳ್ಳಾರಿ ರಸ್ತೆಯಿಂದ ನಗರದ ಕಡೆಗೆ ಬರುವ ಭಾರಿ ಮತ್ತು ಮಧ್ಯಮ ಗಾತ್ರದ ಸರಕು ಸಾಗಾಣಿಕೆ ವಾಹನಗಳು ಬಳಸಬೇಕಾದ ಮಾರ್ಗ:

- ಬೆಂಗಳೂರು–ಬಳ್ಳಾರಿ ರಸ್ತೆಯಿಂದ ಬರುವ ವಾಹನಗಳು ದೇವನಹಳ್ಳಿಯ ರಾಣಿ ಕ್ರಾಸ್ ಬಳಿ ಎಡ ತಿರುವು ಪಡೆದು ಹೊಸಕೋಟೆ, ಕೋಲಾರ ಕಡೆಗೆ ಚಲಿಸಬೇಕು.
- ಬೆಂಗಳೂರು–ಬಳ್ಳಾರಿ ರಸ್ತೆಯಿಂದ ಬರುವ ವಾಹನಗಳು ದೇವನಹಳ್ಳಿಯ ದೊಡ್ಡಬಳ್ಳಾಪುರ ಕ್ರಾಸ್ ಬಳಿ ಎಡ ತಿರುವು ಪಡೆದು ಹೊಸಕೋಟೆ, ಕೋಲಾರ ಕಡೆಗೆ ಚಲಿಸುವುದು.
- ಬೆಂಗಳೂರು–ಬಳ್ಳಾರಿ ರಸ್ತೆಯಿಂದ ಬರುವ ವಾಹನಗಳು ವಿದ್ಯಾನಗರ ಕ್ರಾಸ್ ಬಳಿ ಎಡತಿರುವು ಪಡೆದು ರಜಾಕ್ ಪಾಳ್ಯ–ಬಾಗಲೂರು ಮೂಲಕ ಹೆಣ್ಣೂರು–ಕೆ.ಆರ್.ಪುರಂ ಮಾರ್ಗವಾಗಿ ನಗರದ ಕಡೆಗೆ ಚಲಿಸುವುದು.
- ದೊಡ್ಡಬಳ್ಳಾಪುರ ಕಡೆಯಿಂದ ನಗರಕ್ಕೆ ಬರುವ ವಾಹನಗಳು ರಾಜಾನುಕುಂಟೆ ಬಳಿ ಬಲ ತಿರುವು ಪಡೆದು ನೆಲಮಂಗಲ ಕಡೆಗೆ ಚಲಿಸುವುದು.

ಕಾರ್ಯಕ್ರಮದಲ್ಲಿ ಎಸ್ತರ್ ಡಫ್ಲೋ, ಶಾಯಿನ್ ಒಲ್ಲೀವಿಯೆ, ಲೇಖಕಿ ರೂಪಾ ಪೈ, ದಿ ಜನರಲ್ ಕಾನ್ಸುಲ್ ಆಫ್ ಫ್ರಾನ್ಸ್‌ನ ದಿ ಜನರಲ್ ಕಾನ್ಸುಲ್ ಥಿಯೆರಿ ಬರ್ತೆಲೊಟ್ ಹಾಗೂ ಪ್ರಥಮ್ ಬುಕ್ಸ್‌ನ ಮುಖ್ಯಸ್ಥ ಆರ್.ಶ್ರೀರಾಮ್ ಪುಸ್ತಕಗಳನ್ನು ಬಿಡುಗಡೆ ಮಾಡಿದರು

‘ಬಡತನದ ಅರ್ಥಶಾಸ್ತ್ರ ಅರಿವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಡತನದ ಬಗ್ಗೆ ತಿಳಿಸುವ ಮಕ್ಕಳ ಪುಸ್ತಕಗಳ ಸಂಖ್ಯೆ ತೀರಾ ಕಡಿಮೆ. ಬಡವರಿಗೆ ಬಡತನದ ಅರ್ಥಶಾಸ್ತ್ರ ಅರಿವಾಗಬೇಕು’ ಎಂದು ಅರ್ಥಶಾಸ್ತ್ರಜ್ಞೆ ಎಸ್ತರ್ ಡಫ್ಲೋ ತಿಳಿಸಿದರು.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಪ್ರಥಮ್ ಬುಕ್ಸ್ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅವರು ‘ಮೂಲಭೂತ ವಿಚಾರಗಳ ಬಗ್ಗೆ’ ಬರೆದ ಮಕ್ಕಳ ಪುಸ್ತಕಗಳ ಸರಣಿ ಬಿಡುಗಡೆಯಾಯಿತು. ಅವರ ಫ್ರೆಂಚ್ ಮೂಲದ ಕತೆಗಳನ್ನು ಕನ್ನಡ, ಮರಾಠಿ, ಹಿಂದಿ, ತಮಿಳು ಹಾಗೂ ಬಂಗಾಳಿ ಭಾಷೆಯಲ್ಲಿ ಪ್ರಕಟಿಸಲಾಗಿದೆ.

ಈ ವೇಳೆ ಮಾತನಾಡಿದ ಎಸ್ತರ್, ‘ಬಡವರು ಬಡವರಾಗಿಯೇ ಉಳಿಯುವುದು ಯಾಕೆ? ಎಂಬ ಸಂಕೀರ್ಣ ವಿಷಯವನ್ನು ನಾನು ಬಿಡಿಬಿಡಿಯಾಗಿ ಕತೆ ರೂಪದಲ್ಲಿ ಹೇಳುವ ಪ್ರಯತ್ನ ಮಾಡಿದ್ದೇನೆ. ಬಡತನದ ಕತೆಗಳು ಸಾಧ್ಯವಾದಷ್ಟು ಮಕ್ಕಳಿಗೆ ತಲುಪಿ, ಅವರು ಈ ಬಗ್ಗೆ ಆಲೋಚಿಸುವಂತಾಗಬೇಕು. ಈ ಬಗ್ಗೆ ಸೂಕ್ತ ಪರಿಹಾರೋಪಾಯಗಳನ್ನು ಕಂಡುಕೊಳ್ಳುವಂತಾಗಬೇಕು’ ಎಂದು ಅವರು ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ದಿನಾಚರಣೆ ಸಿದ್ಧತೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಮಟ್ಟದ ಸ್ವಾತಂತ್ರ್ಯ ದಿನಾಚರಣೆಗೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಧಿಕಾರಿಗಳೊಂದಿಗೆ ಗುರುವಾರ ಪೂರ್ವಭಾವಿ ಸಭೆ ನಡೆಸಿದ ಅವರು, ‘ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಲು ಆಯಾ ಇಲಾಖೆಗಳಿಗೆ ನೀಡಿರುವ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕು’ ಎಂದರು.

‘ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಆಸನಗಳ ವ್ಯವಸ್ಥೆ, ಯಾವ ದ್ವಾರಗಳಲ್ಲಿ ಯಾರಿಗೆ ಪ್ರವೇಶ, ಪಾರ್ಕಿಂಗ್ ವ್ಯವಸ್ಥೆ, ಮಾರ್ಗ ಬದಲಾವಣೆ ಸೇರಿದಂತೆ ಇನ್ನಿತರೆ ವ್ಯವಸ್ಥೆಗಳಲ್ಲಿ ಗೊಂದಲ ಉಂಟಾಗದಂತೆ ನೋಡಿಕೊಳ್ಳಬೇಕು’ ಎಂದು ಸೂಚಿಸಿದರು.

ಮುನ್ನೆಚ್ಚರಿಕೆ, ಭದ್ರತೆಯ ಹಿತ ದೃಷ್ಟಿಯಿಂದ ಮೈದಾನದ ಸುತ್ತಲಿನ ರಸ್ತೆಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧತೆ ಮಾಡಿಕೊಳ್ಳಬೇಕು. ನಾಡಗೀತೆ, ರೈತ ಗೀತೆ ಹಾಡಲು ತಂಡಗಳನ್ನು ಆಯ್ಕೆ ಮಾಡಬೇಕು ಎಂದರು.

ಬಿಬಿಎಂಪಿ ವಿಶೇಷ ಆಯುಕ್ತರಾದ ಡಾ. ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಪ್ರೀತಿ ಗೆಹ್ಲೋಟ್, ವಲಯ ಆಯುಕ್ತರಾದ ಡಾ. ಆರ್. ಎಲ್ ದೀಪಕ್, ಕರೀಗೌಡ, ಸ್ನೇಹಲ್, ವಿನೋತ್ ಪ್ರಿಯಾ, ಬೆಂಗಳೂರು ನಗರ ಜಿಲ್ಲಾಧಿಕಾರಿ ದಯಾನಂದ್, ಲೋಕೋಪಯೋಗಿ, ಪೊಲೀಸ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಗುತ್ತಿಗೆದಾರರಿಗೆ ಇನ್ನೂ ಒಟ್ಟು ₹5 ಸಾವಿರ ಕೋಟಿ ಬಿಲ್ ಪಾವತಿ ಬಾಕಿ

ಬಿಬಿಎಂಪಿಗೆ ₹750 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ‘ವಿಶೇಷ ಮೂಲಸೌಕರ್ಯಕ್ಕೆ ಬಂಡವಾಳ ಬೆಂಬಲ’ ಯೋಜನೆಯಡಿ 2024–25ನೇ ಸಾಲಿನ ಮೊದಲ ಕಂತು ₹750 ಕೋಟಿ ಅನುದಾನವನ್ನು ಬಿಬಿಎಂಪಿಗೆ ಜುಲೈ 11ರಂದು ಬಿಡುಗಡೆ ಮಾಡಿದೆ.

ಬೃಹತ್ ರಸ್ತೆಗಳು, ಮೇಲ್ಸೇತುವೆ, ಕಾರಿಡಾರ್ ಮುಂತಾದ ಯೋಜನೆಗಳನ್ನು ‘ವಿಶೇಷ ಮೂಲಸೌಕರ್ಯಕ್ಕೆ ಬಂಡವಾಳ ಬೆಂಬಲ’ ಯೋಜನೆಯಡಿ ಬಿಬಿಎಂಪಿ ಅನುಷ್ಠಾನಗೊಳಿಸುತ್ತಿದ್ದು, ಇದಕ್ಕಾಗಿ ಈ ಆರ್ಥಿಕ ವರ್ಷದಲ್ಲಿ ₹3 ಸಾವಿರ ಕೋಟಿ ನಿಗದಿ ಮಾಡಲಾಗಿದೆ. ಅಲ್ಲದೆ ರಾಜ್ಯ ಸರ್ಕಾರದ ಅನುದಾನದಲ್ಲಿ ನಿರ್ವಹಿಸಲಾಗಿರುವ ಕಾಮಗಾರಿಗಳಿಗೆ ₹2,400 ಕೋಟಿ ಮೌಲ್ಯದ ಬಿಲ್‌ಗಳನ್ನು ಇನ್ನೂ ಪಾವತಿ ಮಾಡಬೇಕಿದೆ.

ಮೊದಲನೇ ತ್ರೈಮಾಸಿಕದ ಕಂತು ₹750 ಕೋಟಿಯನ್ನು ಈ ಯೋಜನೆಯಡಿಯ ಕಾಮಗಾರಿಗಳಿಗೆ ಮಾತ್ರ ಬಳಸಿಕೊಳ್ಳಬೇಕು. ಹಣ ಬಿಡುಗಡೆ ಮಾಡಿದ ವರದಿಯೊಂದಿಗೆ ಪ್ರಮಾಣಪತ್ರವನ್ನೂ ಸಲ್ಲಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆ ಆದೇಶದಲ್ಲಿ ತಿಳಿಸಲಾಗಿದೆ.

‘ಬಿಬಿಎಂಪಿಯಲ್ಲಿ ರಾಜ್ಯ ಸರ್ಕಾರದ ಅನುದಾನದಲ್ಲಿ ನಿರ್ವಹಿಸಲಾಗಿರುವ ಕಾಮಗಾರಿಗಳನ್ನು ಪರಿಶೀಲಿಸುವ ಕಾರಣದಿಂದ ಬಿಲ್ ಮೊತ್ತದಲ್ಲಿ ಕಳೆದ ವರ್ಷದಿಂದ ಶೇ 75ರಷ್ಟು ಮಾತ್ರ ಪಾವತಿ ಮಾಡಲಾಗುತ್ತಿದೆ. ಬಾಕಿ ಉಳಿಸಿಕೊಂಡಿರುವ ಶೇ 25ರಷ್ಟು ಮೊತ್ತವೇ ₹1 ಸಾವಿರ ಕೋಟಿಯಷ್ಟಿದೆ. ಇದೀಗ ₹750 ಕೋಟಿ ಪಾವತಿ ಮಾಡಿದರೂ ಇನ್ನೂ ₹2,650 ಕೋಟಿಯಷ್ಟು ಬಾಕಿ ಉಳಿಯಲಿದೆ’ ಎಂದು ಬಿಬಿಎಂಪಿ ಗುತ್ತಿಗೆದಾರರು ತಿಳಿಸಿದ್ದಾರೆ.

‘ಬಿಬಿಎಂಪಿ ಅನುದಾನದಲ್ಲಿ ನಿರ್ವಹಿಸಲಾಗಿರುವ ಕಾಮಗಾರಿಗಳಿಗೆ 2022ರ ನವೆಂಬರ್ ಅಂತ್ಯದವರೆಗೆ ಬಿಲ್ ಪಾವತಿ ಮಾಡಲಾಗುತ್ತಿದೆ. 24 ತಿಂಗಳು ಬಾಕಿ ಉಳಿದಿದ್ದ ಬಿಲ್ ಪಾವತಿ ಅವಧಿ 19 ತಿಂಗಳಿಗೆ ಇಳಿದಿದೆಯಾದರೂ ಇನ್ನೂ ₹2,500 ಕೋಟಿಗೂ ಹೆಚ್ಚು ಮೊತ್ತ ಬಾಕಿ ಉಳಿದಂತಾಗುತ್ತದೆ’ ಎಂದು ಹೇಳಿದ್ದಾರೆ.

‘ಕಳೆದ ವರ್ಷದ ಆಗಸ್ಟ್ ವೇಳೆಗೆ ಬಿಬಿಎಂಪಿ ಗುತ್ತಿಗೆದಾರರಿಗೆ ಒಟ್ಟಾರೆಯಾಗಿ ₹6 ಸಾವಿರ ಕೋಟಿಯಷ್ಟು ಬಿಲ್ ಪಾವತಿಸಬೇಕಾಗಿತ್ತು. ರಾಜ್ಯ ಸರ್ಕಾರ ಜುಲೈ 11ರಂದು ₹750 ಕೋಟಿ ಹಾಗೂ ಬಿಬಿಎಂಪಿ ಸುಮಾರು ₹250 ಕೋಟಿಯನ್ನು ಬಿಡುಗಡೆ ಮಾಡಿರುವುದರಿಂದ ಸುಮಾರು ₹1 ಸಾವಿರ ಕೋಟಿಯಷ್ಟು ಬಾಕಿ ಕಡಿಮೆಯಾಗಿದೆ. ಈ ವರ್ಷದ ಅಂತ್ಯದ ವೇಳೆಗೆ ಬಹುತೇಕ ಎಲ್ಲ ಬಾಕಿ ಪಾವತಿಯಾಗುವ ಭರವಸೆ ದೊರೆತಿದೆ’ ಎಂದು ಗುತ್ತಿಗೆದಾರರು ತಿಳಿಸಿದ್ದಾರೆ.

ಭೂಸ್ವಾಧೀನವಾಗದೆ ಕಾಮಗಾರಿ ನಡೆಯೊಲ್ಲ!

ಕೆಂಗೇರಿ ಹೊರವರ್ತುಲ ರಸ್ತೆ ಅನ್ನಪೂರ್ಣೇಶ್ವರಿನಗರ ಮುಖ್ಯರಸ್ತೆ ಜಂಕ್ಷನ್ ಗ್ರೇಡ್ ಸೆಪರೇಟರ್ ಕೆಲಸಕ್ಕೆ ವಿಘ್ನ

• ಆರ್. ಮಂಜುನಾಥ್

ಬೆಂಗಳೂರು: ಗ್ರೇಡ್ ಸೆಪರೇಟರ್ ಕಾಮಗಾರಿ ಆರಂಭವಾಗಿ ಎರಡು ವರ್ಷವಾದರೂ, ಭೂಸ್ವಾಧೀನದ ಪ್ರಕ್ರಿಯೆ ಮುಗಿದಿಲ್ಲ. ಇದರಿಂದ ಕಾಮಗಾರಿ ಮುಂದುವರಿಯದೆ ಅನ್ನಪೂರ್ಣೇಶ್ವರಿನಗರದ ಮುಖ್ಯರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿದೆ.

ಕೆಂಗೇರಿ ಹೊರ ವರ್ತುಲ ರಸ್ತೆಯಲ್ಲಿರುವ ಬಿಡಿಎ ಕಾಂಪ್ಲೆಕ್ಸ್ ಬಳಿ ಅನ್ನಪೂರ್ಣೇಶ್ವರಿ ನಗರ ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ಕಾಮಗಾರಿ 2022ರ ಜುಲೈನಲ್ಲಿ ಆರಂಭವಾಗಿದೆ. ಕಾಂಪ್ಲೆಕ್ಸ್‌ಗೆ ಹೊಂದಿಕೊಂಡಂತೆ ಚರಂಡಿ ಹಾಗೂ ತಡೆಗೋಡೆ ಕಾಮಗಾರಿ ನಡೆದಿದೆ. ಈ ತಡೆಗೋಡೆ ಹಾಗೂ ಚರಂಡಿ ನಡುವಿನ ಪ್ರದೇಶದಲ್ಲಿ ರಸ್ತೆ ನಿರ್ಮಾಣವಾಗಬೇಕಾಗಿದ್ದರೂ ಅದು ವಾಹನ ನಿಲುಗಡೆಯ ತಾಣವಾಗಿರುವುದು ಕಾಮಗಾರಿಯ ಪ್ರಗತಿ ಕುಂಟುತ್ತಾ ಸಾಗಿರುವುದಕ್ಕೆ ಸಾಕ್ಷ್ಯ ಒದಗಿಸುತ್ತಿದೆ.

ಮಾಗಡಿ ರಸ್ತೆ ಕಡೆಗೆ ಮುಕ್ತ ಸಂಚಾರಕ್ಕೆ ಅನುವಾಗಬೇಕಾಗಿದ್ದ ಈ ಗ್ರೇಡ್ ಸೆಪರೇಟರ್‌ನ ಕಾಮಗಾರಿ ಗಡುವಿನಂತೆ ನಡೆದಿದ್ದರೆ ಈಗಾಗಲೇ ವಾಹನ ಸಂಚಾರಕ್ಕೆ ಮುಕ್ತವಾಗಿ ಮೂರು ತಿಂಗಳಾಗಬೇಕಿತ್ತು. ಆದರೆ, ಇದು ಕೂಡ ಆರಂಭದ ಕಾಮಗಾರಿಯ ಸ್ಥಿತಿಯಲ್ಲಿಯೇ ನಿಂತಿದೆ. ಅನ್ನಪೂರ್ಣೇಶ್ವರಿನಗರ ಹಾಗೂ ಸುಮನಹಳ್ಳಿ ಹೊರವರ್ತುಲ ರಸ್ತೆಗೆ ಮುಕ್ತ ಸಂಚಾರವೂ ಈ ಗ್ರೇಡ್ ಸೆಪರೇಟರ್‌ನ ಉದ್ದೇಶವಾಗಿದ್ದರೂ, ಇದೀಗ ಅಲ್ಲಿನ ವಾಹನ ದಟ್ಟಣೆಗೆ ಕಾರಣವಾಗಿದೆ.

ಟೆಂಡರ್ ಮೊತ್ತಕ್ಕಿಂತ ಶೇ 10ರಷ್ಟು ಪ್ರೀಮಿಯಂ ದರವನ್ನು ನೀಡಿ, ಟರ್ನ್ ಕೀ ಆಧಾರದಲ್ಲಿ ಗ್ರೇಡ್‌ಸೆಪರೇಟರ್‌ಕಾಮಗಾರಿಯ ಗುತ್ತಿಗೆ ನೀಡಲಾಗಿದೆ. ನಿಗದಿಯಾಗಿರುವ ಮೊತ್ತಕ್ಕಿಂತ ಹೆಚ್ಚು ಮೊತ್ತವನ್ನು ಬಿಬಿಎಂಪಿ ನೀಡುವಂತಿಲ್ಲವಾದರೂ, ವರ್ಷಾನುಗಟ್ಟಲೆ ಕಾಮಗಾರಿ ನಡೆದರೆ ಸ್ಥಳೀಯರು, ವಾಹನ ಸವಾರರು, ವ್ಯಾಪಾರಸ್ಥರಿಗೆ ಕಿರಿಕಿರಿಯ ಜೊತೆಗೆ ಆರ್ಥಿಕವಾಗಿ ನಷ್ಟವೂ ಉಂಟಾಗುತ್ತಿದೆ.

‘ಭೂಸ್ವಾಧೀನಕ್ಕೇ ₹16.50 ಕೋಟಿಯನ್ನು ಮೀಸಲಿಡಲಾಗಿದೆಯಾದರೂ, ಆ ಪ್ರಕ್ರಿಯೆಯನ್ನು ಬಿಬಿಎಂಪಿ ಅಧಿಕಾರಿಗಳು ಇನ್ನೂ ಮುಗಿಸಿಲ್ಲ. ಆದ್ದರಿಂದ ಕಾಮಗಾರಿಯ ಪ್ರಗತಿಗೆ ಹಿನ್ನಡೆಯಾಗಿದೆ’ ಎಂಬುದು ಕೆಲಸಗಾರರ ಮಾತು.

‘ಕಾಮಗಾರಿ ಆರಂಭಿಸಿದ ಮೇಲೆ ಭೂಸ್ವಾಧೀನವಾಗಿಲ್ಲ, ಪ್ರಕ್ರಿಯೆ ನಡೆಯಬೇಕು ಎಂದು ಸಬೂಬು ಹೇಳುವ ಬಿಬಿಎಂಪಿ ಎಂಜಿನಿಯರ್‌ಗಳು, ಗುತ್ತಿಗೆ ನೀಡುವ ಮುನ್ನವೇ ಕಾಮಗಾರಿಗೆ ಅಗತ್ಯ ಜಮೀನು ಲಭ್ಯವಿದೆಯೆ ಎಂಬುದನ್ನು ಖಚಿತಪಡಿಸಲು ಸಾಧ್ಯವಿಲ್ಲವೆ? ಇವರ ಯೋಜನಾಪಟ್ಟಿ ಹೆಚ್ಚಾಗಲು ಕಾಮಗಾರಿಗಳಿಗೆ ಅವಕಾಶ ಮಾಡಿಕೊಟ್ಟು, ಜನರನ್ನು ಸಂಕಷ್ಟ ತಳ್ಳುತ್ತಿದ್ದಾರೆ’ ಎಂದು ಸ್ಥಳೀಯರಾದ ನಂದಕುಮಾರ್, ರಾಜೇಶ್, ರಂಗೇಗೌಡ ಅವರು ಆರೋಪಿಸಿದರು.

ಅನ್ನಪೂರ್ಣೇಶ್ವರಿ ನಗರ ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಬಿಡಿಎ ಕಾಂಪ್ಲೆಕ್ಸ್ ಸಮೀಪ ಗ್ರೇಡ್ ಸೆಪರೇಟರ್ ಕಾಮಗಾರಿ ನಡೆಯಬೇಕಾದ ಸ್ಥಳ
–ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

₹44.78 ಕೋಟಿ	18 ಜುಲೈ 2022	20 ತಿಂಗಳು	₹1.85 ಕೋಟಿ	ಗುತ್ತಿಗೆದಾರರು;
ಅನ್ನಪೂರ್ಣೇಶ್ವರಿನಗರ ಮುಖ್ಯರಸ್ತೆ ಜಂಕ್ಷನ್ ಗ್ರೇಡ್ ಸೆಪರೇಟರ್‌ಗೆ ಒಟ್ಟು ವೆಚ್ಚ	ಕಾಮಗಾರಿಗೆ ಕಾರ್ಯಾದೇಶ ನೀಡಿದ ದಿನ	ಕಾಮಗಾರಿ ಮುಗಿಸಲು ನೀಡಲಾಗಿದ್ದ ಗಡುವು	ಗುತ್ತಿಗೆದಾರರಿಗೆ ಹಣ ಬಿಡುಗಡೆ	ಪಿಜಿಬಿ ಎಂಜಿನಿಯರ್ಸ್, ರಿಚ್ಮಂಡ್ ರಸ್ತೆ

‘ವ್ಯಾಪಾರಕ್ಕೂ ಸಂಚಕಾರ’

‘ಅನ್ನಪೂರ್ಣೇಶ್ವರಿನಗರ ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ಕಾಮಗಾರಿಗೆ ರಸ್ತೆಯನ್ನು ದೊಡ್ಡ ಪ್ರಮಾಣದಲ್ಲಿ ಅಗೆದು ಹಾಗೆಯೇ ಬಿಡಲಾಗಿದೆ. ಇಲ್ಲಿ ಕಾಮಗಾರಿಯೂ ನಡೆಯುತ್ತಿಲ್ಲ, ರಸ್ತೆಯೂ ಇಲ್ಲದಂತಾಗಿದೆ. ಸುತ್ತಮುತ್ತಲೂ ವಾಣಿಜ್ಯ ಪ್ರದೇಶವಾಗಿದ್ದು, ಗ್ರಾಹಕರಿಗೆ ತೀವ್ರ ಸಮಸ್ಯೆಯಾಗುತ್ತಿದೆ. ಇದರಿಂದಾಗಿ ನಮಗೆಲ್ಲ ವ್ಯಾಪಾರಕ್ಕೂ ತೊಂದರೆಯಾಗಿದೆ’ ಎಂದು ಮಳಿಗೆ ಮಾಲೀಕ ರಜತ್ ಅಳಲು ತೋಡಿಕೊಂಡರು.

‘ರಸ್ತೆ, ಕಾಮಗಾರಿಯೂ ಇಲ್ಲ’

‘ಬಿಡಿಎ ಕಾಂಪ್ಲೆಕ್ಸ್, ಕಾಲೇಜು ಹಾಗೂ ಉಪ ನೋಂದಣಾಧಿಕಾರಿ ಕಚೇರಿಗಳು ಈ ಜಂಕ್ಷನ್‌ನಲ್ಲೇ ಇವೆ. ಗ್ರೇಡ್ ಸೆಪರೇಟರ್ ಕಾಮಗಾರಿಯಿಂದ ವಾಹನ ದಟ್ಟಣೆ ಅತಿಯಾಗಿದೆ. ರಸ್ತೆಯನ್ನು ರಸ್ತೆಯಾಗಿ ಉಳಿಸದೆ, ಕಾಮಗಾರಿಯನ್ನೂ ಮಾಡದೆ ಎರಡು ವರ್ಷದಿಂದ ನಮ್ಮ ಜೀವ ತಿನ್ನುತ್ತಿದ್ದಾರೆ. ನಿತ್ಯವೂ ಇಲ್ಲಿ ಓಡಾಡಲು ನಮಗೆಲ್ಲ ತೀರಾ ತೊಂದರೆಯಾಗಿದೆ’ ಎಂದು ಅಣ್ಣಪೂರ್ಣೇಶ್ವರಿ ನಗರದ ನಿವಾಸಿ ರಾಮಕೃಷ್ಣ ದೂರಿದರು.

‘ಆರು ತಿಂಗಳಲ್ಲಿ ಪೂರ್ಣ’

‘ಭೂಸ್ವಾಧೀನದ ಜೊತೆಗೆ ಬೆಸ್ಕಾಂ, ಜಲಮಂಡಳಿಗಳ ಕೆಲಸಗಳು, ‘ಯುಟಿಲಿಟಿ ಶಿಫ್ಟಿಂಗ್’ ಕಾರ್ಯಗಳು ಕಾಮಗಾರಿಯನ್ನು ವಿಳಂಬಗೊಳಿಸಿವೆ. ಇದೀಗ ಎಲ್ಲವನ್ನೂ ಸರಿಪಡಿಸಲಾಗಿದ್ದು, ಅನ್ನಪೂರ್ಣೇಶ್ವರಿ ನಗರ ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ಕಾಮಗಾರಿ ಇನ್ನು ಆರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ’ ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

5 ಅರೆಸೇನಾ ಪಡೆಗಳಲ್ಲಿ ಅಗ್ನಿವೀರರಿಗೆ ಶೇ 10 ಮೀಸಲಾತಿ ಘೋಷಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಶಸ್ತ್ರ ಪಡೆಗಳಲ್ಲಿ ನಾಲ್ಕು ವರ್ಷಗಳ ಕಾಲ ಸೇವೆ ಪೂರೈಸುವ ‘ಅಗ್ನಿವೀರ’ರಿಗೆ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳು (ಸಿಎಪಿಎಫ್) ಹಾಗೂ ಅಸ್ಸಾಂ ರೈಫಲ್ಸ್‌ನಲ್ಲಿ ಶೇ 10ರಷ್ಟು ಮೀಸಲಾತಿಯನ್ನು ಕೇಂದ್ರ ಸರ್ಕಾರ ಗುರುವಾರ ಘೋಷಿಸಿದೆ.

‘ಅಗ್ನಿವೀರರ ನೇಮಕಕ್ಕೆ ಅನುವು ಮಾಡಿಕೊಡುವುದಕ್ಕಾಗಿ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ನೇಮಕಾತಿ ವೇಳೆ, ವಯೋಮಿತಿ ಸಡಿಲಿಕೆ ಹಾಗೂ ದೈಹಿಕ ಸಾಮರ್ಥ್ಯ ಪರೀಕ್ಷೆಯಿಂದ ವಿನಾಯಿತಿಯಂತಹ ಪ್ರಯೋಜನಗಳನ್ನು ಸಹ ಅಗ್ನಿವೀರರಿಗೆ ನೀಡಲಾಗುತ್ತದೆ’ ಎಂದು ಐದು ಅರೆಸೇನಾ ಪಡೆಗಳ ಮುಖ್ಯಸ್ಥರು ಹೇಳಿದ್ದಾರೆ.

ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್), ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್), ಸಶಸ್ತ್ರ ಸೀಮಾ ಬಲ (ಎಸ್‌ಎಸ್‌ಬಿ), ರೈಲ್ವೆ ಸುರಕ್ಷಾ ಪಡೆ (ಆರ್‌ಪಿಎಫ್) ಮತ್ತು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಮುಖ್ಯಸ್ಥರು ಈ ಕುರಿತ ಹೇಳಿಕೆಗಳನ್ನು ಒಳಗೊಂಡ ವಿಡಿಯೊ ಬಿಡುಗಡೆ ಮಾಡಿದ್ದಾರೆ.

ಇಂಡೊ–ಟಿಬೆಟನ್ ಗಡಿ ಪೊಲೀಸ್ (ಐಟಿಬಿಪಿ)ನಲ್ಲಿ ನಡೆಯುವ ನೇಮಕಾತಿಗೂ ಇವೇ ನಿಯಮಗಳು ಅನ್ವಯವಾಗಲಿವೆ ಎಂದೂ ಅವರು ತಿಳಿಸಿದ್ದಾರೆ.

‘ನೇಮಕಾತಿ ವೇಳೆ, ಮೊದಲ ಬ್ಯಾಚ್‌ನ ಮಾಜಿ ಅಗ್ನಿವೀರರಿಗೆ ವಯೋಮಿತಿಯಲ್ಲಿ ಐದು ವರ್ಷಗಳು ಮತ್ತು ನಂತರದ ಬ್ಯಾಚ್‌ನವರಿಗೆ ಮೂರು ವರ್ಷಗಳ ಸಡಿಲಿಕೆ ನೀಡಲಾಗುವುದು’ ಎಂದು ಸಿಐಎಸ್‌ಎಫ್ ಮಹಾನಿರ್ದೇಶಕ ನೀನಾ ಸಿಂಗ್ ಅವರು ಹೇಳಿದ್ದಾರೆ.

‘ಮೊದಲ ಬ್ಯಾಚ್‌ನ ಅಗ್ನಿವೀರರನ್ನು 2026ರ ಡಿಸೆಂಬರ್ ಅಥವಾ 2027ರ ಜನವರಿಯಲ್ಲಿ ಕರ್ತವ್ಯದಿಂದ ಬಿಡುಗಡೆ ಮಾಡಲಾಗುತ್ತದೆ’ ಎಂದು ಆರ್‌ಪಿಎಫ್ ಮಹಾ ನಿರ್ದೇಶಕ ಮನೋಜ್ ಯಾದವ್ ಹೇಳಿದ್ದಾರೆ.

‘ಇದೊಂದು ಸ್ವಾಗತಾರ್ಹ ನಿರ್ಧಾರ’ ಎಂದು ಸಿಆರ್‌ಪಿಎಫ್ ಮುಖ್ಯಸ್ಥ ಅನೀಶ್ ದಯಾಲ್ ಸಿಂಗ್ ಹೇಳಿದ್ದಾರೆ.

ಬಂಧನ ಪ್ರಶ್ನಿಸಿ ಕೇಜ್ರಿವಾಲ್ ಅರ್ಜಿ: ಇಂದು ‘ಸುಪ್ರೀಂ’ನಿಂದ ತೀರ್ಪು

ನವದೆಹಲಿ(ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಜೊತೆ ನಂಟಿದೆ ಎನ್ನಲಾದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದ ತೀರ್ಪನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಪ್ರಕಟಿಸಲಿದೆ.

ನ್ಯಾಯಮೂರ್ತಿ ಸಂಜೀವ್ ಖನ್ನಾ ನೇತೃತ್ವದ ಪೀಠವು ತೀರ್ಪು ಪ್ರಕಟಿಸಲಿದೆ ಎಂದು ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುವ ವಿಚಾರಣಾ ಪಟ್ಟಿಯಲ್ಲಿ ಹೇಳಲಾಗಿದೆ.

ಅರ್ಜಿ ವಿಚಾರಣೆ ಪೂರ್ಣಗೊಳಿಸಿದ್ದ ಪೀಠವು, ಮೇ 17ರಂದು ತೀರ್ಪು ಕಾಯ್ದಿರಿಸಿ ಆದೇಶಿಸಿತ್ತು.

ಜನಸಂಖ್ಯೆ ನಿಯಂತ್ರಿಸಿದ ರಾಜ್ಯಕ್ಕೆ ಅನ್ಯಾಯ

ದಾವಣಗೆರೆ: ಕುಟುಂಬಕಲ್ಯಾಣಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಜನಸಂಖ್ಯೆ ನಿಯಂತ್ರಿಸಿದ ದಕ್ಷಿಣ ಭಾರತದ ರಾಜ್ಯಗಳಿಗೇ ಕೇಂದ್ರ ಸರ್ಕಾರದಿಂದ ಆರ್ಥಿಕ ಹಾಗೂ ರಾಜಕೀಯವಾಗಿ ಅನ್ಯಾಯವಾಗುತ್ತಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಗುರುವಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಏರ್ಪಡಿಸಿದ್ದ ರಾಜ್ಯ ಮಟ್ಟದ ವಿಶ್ವ ಜನಸಂಖ್ಯಾ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಜನಸಂಖ್ಯೆ ಬೆಳವಣಿಗೆ ನಿರ್ಧರಿಸುವ ಫಲವಂತಿಕೆ ದರ ದೇಶದಲ್ಲಿ ಶೇ 2.1ರಷ್ಟಿದೆ. ಕರ್ನಾಟಕದಲ್ಲಿ ಇದು ಶೇ 1.6ರಷ್ಟಿದ್ದು, ಜನಸಂಖ್ಯೆ ನಿಯಂತ್ರಣದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದೇವೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಜನಸಂಖ್ಯೆ ನಿಯಂತ್ರಣದಲ್ಲಿದೆ. ಉತ್ತರಪ್ರದೇಶ, ಬಿಹಾರ ಸೇರಿದಂತೆ ಉತ್ತರ ಭಾರತದ ವಿವಿಧ ರಾಜ್ಯಗಳು ಜನಸಂಖ್ಯೆ ನಿಯಂತ್ರಿಸುವಲ್ಲಿ ವಿಫಲವಾಗಿವೆ. ಕೇಂದ್ರ ಸರ್ಕಾರದ ಅನುದಾನ ಜನಸಂಖ್ಯೆ ಆಧಾರದಲ್ಲಿ ಹಂಚಿಕೆಯಾಗುತ್ತಿದ್ದು, ಉತ್ತರ ಭಾರತಕ್ಕೆ ಸಿಂಹಪಾಲು ಸಿಗುತ್ತಿದೆ. ನಮ್ಮನ್ನು ಕಡೆಗಣಿಸಲಾಗುತ್ತಿದೆ’ ಎಂದು ದೂರಿದರು.

ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಇದ್ದರು.

ಸಚಿವ ಡಾ.ಶರಣಪ್ರಕಾಶ ಪಾಟೀಲ ಅಭಿಮತ

‘ನೀಟ್: ರಾಜ್ಯಗಳು ಹೊರಗೆ ಉಳಿಯಲಾಗದು’

ಪ್ರಜಾವಾಣಿ ವಾರ್ತೆ

ಶರಣಪ್ರಕಾಶ ಪಾಟೀಲ

ಕಲಬುರಗಿ: ‘ಅಖಿಲ ಭಾರತ ಮಟ್ಟದಲ್ಲಿ ನಡೆಯುವ ವೈದ್ಯಕೀಯ ಕಾಲೇಜುಗಳ ಪ್ರವೇಶ ಪರೀಕ್ಷೆ ವ್ಯವಸ್ಥೆಯಿಂದ ಕರ್ನಾಟಕ ಹೊರಬರುವುದು ಸುಲಭವಿಲ್ಲ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಅಭಿಪ್ರಾಯಪಟ್ಟರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನೀಟ್ ಪರೀಕ್ಷೆ ನಡೆಸುವಲ್ಲಿ ಹಲವು ಲೋಪದೋಷಗಳಿವೆ. ಇದಕ್ಕಾಗಿ ತಮಿಳುನಾಡು ಸರ್ಕಾರ ಈ ವ್ಯವಸ್ಥೆಯಿಂದ ಹೊರಗುಳಿಯುವುದಾಗಿ ತಿಳಿಸಿದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಮುಂಚೆ ರಾಜ್ಯ ಸರ್ಕಾರಗಳೇ ಪ್ರವೇಶ ಪರೀಕ್ಷೆ ನಡೆಸುತ್ತಿದ್ದವು. ಆದರೆ, ಸುಪ್ರೀಂಕೋರ್ಟ್ ಆದೇಶದಂತೆ ಕೇಂದ್ರ ಸರ್ಕಾರವು ಅಖಿಲ ಭಾರತ ಮಟ್ಟದಲ್ಲಿ ಏಕಕಾಲಕ್ಕೆ ನೀಟ್ ಪರೀಕ್ಷೆ ನಡೆಸುತ್ತಿದೆ. ಈ ಪರೀಕ್ಷೆ ನಡೆಸಲು ಸಂಸತ್ತಿನಲ್ಲಿ ಕಾಯ್ದೆಯನ್ನೂ ರೂಪಿಸಲಾಗಿದೆ. ನೀಟ್ ಪರೀಕ್ಷೆಗೆ ಕಾಯ್ದೆಯ ಚೌಕಟ್ಟೂ ಇರುವುದರಿಂದ ರಾಜ್ಯಗಳು ಹೊರಗುಳಿಯುವಂತಿಲ್ಲ’ ಎಂದರು.

‘ನೀಟ್‌ನಿಂದ ರಾಜ್ಯಗಳು ಹೊರಗುಳಿಯಬೇಕಾದರೆ ಸಂಸತ್ತಿನಲ್ಲಿ ಕಾಯ್ದೆ ತಿದ್ದುಪಡಿಯಾಗಬೇಕು ಅಥವಾ ಸುಪ್ರೀಂಕೋರ್ಟ್ ಈ ವ್ಯವಸ್ಥೆ ರದ್ದತಿಗೆ ಆದೇಶ ಹೊರಡಿಸಬೇಕು. ಈ ಎರಡು ಆಯ್ಕೆ ಬಿಟ್ಟರೆ ಬೇರೆ ಸಾಧ್ಯತೆಗಳಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ನೀಟ್ ಪರೀಕ್ಷೆಯಲ್ಲಿ ಮೊದಲು ಅಕ್ರಮವೇ ನಡೆದಿಲ್ಲ ಎಂದು ಕೇಂದ್ರ ಮಾನವ ಸಂಪನ್ಮೂಲ ಸಚಿವರು ಹೇಳಿಕೆ ನೀಡಿದರು. ನಂತರ ಅಕ್ರಮ ನಡೆದಿದೆ ಎಂದರು. ಪರೀಕ್ಷೆಗಳನ್ನು ನಡೆಸುವ ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿಯು ನೀಟ್, ಪಿಜಿ–ಸಿಇಟಿ, ನೆಟ್ ಪರೀಕ್ಷೆಗಳನ್ನೂ ಏಕಾಏಕಿ ರದ್ದುಪಡಿಸಿತು. ಇಷ್ಟೆಲ್ಲ ಅವಾಂತರಗಳು ನಡೆದರೂ ಟೆಸ್ಟಿಂಗ್ ಏಜೆನ್ಸಿಯ ಮುಖ್ಯಸ್ಥರ ವಿರುದ್ಧ ಯಾವುದೇ ಏಕೆ ಕ್ರಮ ಕೈಗೊಂಡಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ನೀಟ್ ಪರೀಕ್ಷೆಯಲ್ಲಿ ಭಾರಿ ಅವ್ಯವಹಾರ ನಡೆದಿದ್ದು, ನರೇಂದ್ರ ಮೋದಿ ಸರ್ಕಾರದ ಪ್ರಭಾವಿಗಳೇ ಇದರಲ್ಲಿ ಇರುವುದರಿಂದ ಕೇಂದ್ರ ಸರ್ಕಾರ ಸುಮ್ಮನೆ ಕುಳಿತಿದೆ. ಸಚಿವರ ಬದಲು ಸಂವಿಧಾನೇತರ ಶಕ್ತಿಗಳು, ಆರ್‌ಎಸ್‌ಎಸ್ ಮುಖಂಡರು ಹೇಳಿದಂತೆ ತೀರ್ಮಾನಗಳು ನಡೆಯುತ್ತಿವೆ ಎಂಬ ಮಾಹಿತಿಗಳಿವೆ’ ಎಂದರು.

ಆನ್‌ಲೈನ್ ಪರೀಕ್ಷೆ, ಪಿಯುನ ಶೇ 50 ಅಂಕ ಪರಿಗಣನೆಗೆ ಶಿಫಾರಸು

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯನ್ನು (ನೀಟ್) ಆನ್‌ಲೈನ್ ಮೂಲಕ ನಡೆಸುವುದು, ನೀಟ್ ಅಂಕಗಳ ಜೊತೆಗೆ ಆಯಾ ರಾಜ್ಯದ ಪಿಯು ಪರೀಕ್ಷೆಯ ಶೇ 50 ಅಂಕಗಳನ್ನು ಪರಿಗಣಿಸುವುದು ಸೇರಿದಂತೆ ಹಲವು ಶಿಫಾರಸುಗಳನ್ನು ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆ ಮಾಡಿದೆ.

ಈ ಕುರಿತು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಸುಧಾರಣಾ ಸಮಿತಿ ಅಧ್ಯಕ್ಷ ಕೆ. ರಾಧಾಕೃಷ್ಣನ್ ಅವರಿಗೆ ಪತ್ರ ಬರೆದಿರುವ ವೇದಿಕೆಯ ಅಧ್ಯಕ್ಷ ಎಸ್. ಚಂದ್ರಶೇಖರ್ ಶೆಟ್ಟಿ, ನೀಟ್ ಉತ್ತಮ ಪರಿಕಲ್ಪನೆಯಾಗಿದೆ. ವಿದ್ಯಾರ್ಥಿಗಳು ಮತ್ತು ಅವರ ಪೋಷಕರ ಮೇಲಿನ ದೈಹಿಕ, ಆರ್ಥಿಕ ಮತ್ತು ಮಾನಸಿಕ ಹೊರೆಯನ್ನು ಕಡಿಮೆ ಮಾಡಿದೆ. ಆದರೆ, ನೀಟ್ ಆರಂಭವಾಗಿ ಹಲವು ವರ್ಷಗಳು ಕಳೆದರೂ ಒಟ್ಟಾರೆ ಆಶಯ ಈಡೇರಿಲ್ಲ. ಗ್ರಾಮೀಣ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪ್ರವೇಶ ಮರೀಚಿಕೆಯಾಗಿದೆ. ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಲಾಭದಾಯಕವಾಗಿದೆ. ವೈದ್ಯಕೀಯ ಶಿಕ್ಷಣದ ವ್ಯಾಪಾರೀಕರಣಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ಹೇಳಿದ್ದಾರೆ.

ಪಿಯುಸಿಯಲ್ಲಿ ಗಳಿಸಿದ ಅರ್ಹತೆಯ ಅಂಕಗಳನ್ನು ಶೇ 35ಕ್ಕೆ ಇಳಿಸುವ ಮೂಲಕ ಕಳಪೆ ಸಾಧನೆ ಮಾಡಿದ ವಿದ್ಯಾರ್ಥಿಗಳೂ ಎಂಬಿಬಿಎಸ್ ಪ್ರವೇಶ ಪಡೆಯಲು ಸಹಾಯ ಮಾಡಲಾಗಿದೆ. ನೀಟ್ ಪಾವಿತ್ರ್ಯ ಉಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತರಬೇತಿ ಕೇಂದ್ರಗಳು, ಖಾಸಗಿ ಸಂಸ್ಥೆಗಳ ಲಾಬಿಯನ್ನು ನಿಯಂತ್ರಿಸಬೇಕು. ಭಾರತದಂತಹ ವಿಶಾಲ ರಾಷ್ಟ್ರಗಳಲ್ಲಿ ಆಫ್‌ಲೈನ್ ಪರೀಕ್ಷೆಗಳ ವಿಫಲತೆಯನ್ನು ಅಂಶವನ್ನು ಗಂಭೀರವಾಗಿ ಪರಿಗಣಿಸಬೇಕು. ಪರೀಕ್ಷಾ ಕಾರ್ಯದಲ್ಲಿ ಒಳಗೊಳ್ಳುವ ಎಲ್ಲರ ಹೊಣೆಗಾರಿಕೆ ನಿಗದಿ ಮಾಡಬೇಕು ಎಂದು ಸಲಹೆ ನೀಡಿದ್ದಾರೆ. ಆನ್‌ಲೈನ್ ಪರೀಕ್ಷಾ ವ್ಯವಸ್ಥೆ ಕಡ್ಡಾಯಗೊಳಿಸಬೇಕು. ನೀಟ್ ಅಂಕಗಳ ಜತೆಗೆ ಆಯಾ ರಾಜ್ಯಗಳು ನಡೆಸುವ ಬೋರ್ಡ್ ಪರೀಕ್ಷೆಗಳ ಶೇ 50ರಷ್ಟು ಪರಿಗಣಿಸಿ, ರ್‍ಯಾಂಕ್ ಪಟ್ಟಿ ಸಿದ್ಧಪಡಿಸಬೇಕು. ಆ ಮೂಲಕ 12ನೇ ತರಗತಿಯ ಶಿಕ್ಷಣ ವ್ಯವಸ್ಥೆಯ ಗುಣಮಟ್ಟವೂ ಹೆಚ್ಚಾಗಲಿದೆ ಎಂದಿದ್ದಾರೆ.

ನುಡಿ ನಮನ

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ನಗರದಲ್ಲಿ ಹಮ್ಮಿಕೊಂಡಿದ್ದ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಹಾಗೂ ಗಮಕ ಕಲಾವಿದ ಎಂ.ಎ. ಜಯರಾಮ್ ರಾವ್ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಕೃಷ್ಣಾ ಮನವಳ್ಳಿ, ಎಂ.ಕೆ. ಶಂಕರಪ್ಪ, ಶ್ರೀನಿವಾಸ ಜಿ. ಕಪ್ಪಣ್ಣ, ಗಂಗಮ್ಮ ಕೇಶವಮೂರ್ತಿ, ಶುಭಾ ಧನಂಜಯ, ಎಚ್. ಜನಾರ್ದನ ಹಾಗೂ ನೀಲಮ್ಮ ಅವರು ರಾಜೀವ್ ತಾರಾನಾಥ್ ಹಾಗೂ ಎಂ.ಎ. ಜಯರಾಮ್ ರಾವ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು

ಇ.ಡಿ ದಾಳಿ ಬೇಕಿರಲಿಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯನ್ನು ಎಸ್‌ಐಟಿ ಮಾಡುತ್ತಿರುವಾಗ ಜಾರಿ ನಿರ್ದೇಶನಾಲಯ (ಇ.ಡಿ) ದಾಳಿ ಅನವಶ್ಯಕವಾಗಿತ್ತು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಈ ಪ್ರಕರಣದಲ್ಲಿ ವಂಚನೆ ನಡೆದಿರುವುದು ಸತ್ಯ. ಈ ಪ್ರಕರಣದ ಸತ್ಯ ನಮಗೆ ಗೊತ್ತಿದೆ’ ಎಂದರು.

‘ನಿರ್ದಿಷ್ಟ ಮೊತ್ತಕ್ಕಿಂತ ಹೆಚ್ಚಿನ ಪ್ರಮಾಣದ ಅವ್ಯವಹಾರ ನಡೆದರೆ ಸಿಬಿಐ ತನಿಖೆ ಮಾಡುವ ಅಧಿಕಾರವಿದೆ. ಈ ಎಲ್ಲ ತನಿಖೆ ಮುಕ್ತಾಯದ ನಂತರ, ತನಿಖೆಗೆ ಸರಿಯಾಗಿ ನಡೆದಿದೆಯೇ ಎಂದು ಇ.ಡಿ ಪರಾಮರ್ಶೆ ಮಾಡಬಹುದಿತ್ತು’ ಎಂದರು.

‘ಇ.ಡಿ ಅಧಿಕಾರಿಗಳು ಯಾವ ರೀತಿ ತನಿಖೆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಎಸ್‌ಐಟಿ ತನಿಖೆ ಮುಕ್ತವಾಗಿ ನಡೆಯುತ್ತಿದ್ದು, ತನಿಖೆಗೆ ಅಡಚಣೆ ಆಗಬಾರದು ಎಂಬ ಉದ್ದೇಶಕ್ಕೆ ಸ್ವಯಂಪ್ರೇರಿತರಾಗಿ ಸಚಿವರು ರಾಜೀನಾಮೆ ನೀಡಿದ್ದಾರೆ. ನಾವು ಕೂಡ ಪರಿಶೀಲಿಸಿದ್ದು, ಸಚಿವರು ಯಾವುದೇ ಸಹಿ ಮಾಡಿಲ್ಲ’ ಎಂದರು.

‘ಗ್ಯಾರಂಟಿ’ಗೆ ಬಳಸಿದರೆ ತಪ್ಪಿಲ್ಲ: ‘ಗ್ಯಾರಂಟಿ’ ಯೋಜನೆಗಳಿಗೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಬಳಸಿರುವುದಕ್ಕೆ ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗವು ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿ ಮಾಡಿರುವ ಬಗ್ಗೆ ಕೇಳಿದಾಗ, ‘ಇಡೀ ದೇಶದಲ್ಲಿ ಆಂಧ್ರಪ್ರದೇಶದ ನಂತರ ಕರ್ನಾಟಕದಲ್ಲಿ ಪರಿಶಿಷ್ಟರ ಕಲ್ಯಾಣಕ್ಕಾಗಿ ಪ್ರತ್ಯೇಕ ಅನುದಾನ ನೀಡಿ ಬಳಸಲು ಕಾಯ್ದೆ ತಂದಿದ್ದೇವೆ. ರಾಷ್ಟ್ರೀಯ ಆಯೋಗ ನೋಟಿಸ್ ಜಾರಿ ಮಾಡುವುದಾದರೆ ಕೇಂದ್ರ ಸರ್ಕಾರಕ್ಕೆ ನೀಡಬೇಕು. ಈ ಅನುದಾನವನ್ನು ನಮ್ಮ ಸರ್ಕಾರ ಪರಿಶಿಷ್ಟ ಜಾತಿಯವರಿಗೆ ವಿನಿಯೋಗಿಸುತ್ತಿದೆ. ಇದಕ್ಕೆ ನೋಟಿಸ್ ನೀಡಿರುವ ರಾಷ್ಟ್ರೀಯ ಆಯೋಗಕ್ಕೆ ನಾಚಿಕೆ ಆಗಬೇಕು. ‘ಗ್ಯಾರಂಟಿ’ ಯೋಜನೆಗೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಬಳಸಿಕೊಳ್ಳುವುದರಲ್ಲಿ ತಪ್ಪಿಲ್ಲ’ ಎಂದರು.

‘ಗ್ಯಾರಂಟಿಗಳಿಂದ ಆರ್ಥಿಕ ಸಂಕಷ್ಟ ಎದುರಾಗಿದೆ’ ಎಂಬ ಮುಖ್ಯಮಂತ್ರಿಯ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಗ್ಯಾರಂಟಿಗಳಿಂದ ರಾಜ್ಯ ಸರ್ಕಾರಕ್ಕೆ ಯಾವುದೇ ಆರ್ಥಿಕ ಸಂಕಷ್ಟ ಎದುರಾಗಿಲ್ಲ. ಜನರಿಗೆ ಕೊಟ್ಟ ಮಾತನ್ನು ನಾವು ಉಳಿಸಿಕೊಂಡಿದ್ದೇವೆ. ಗ್ಯಾರಂಟಿ ಯೋಜನೆಗಳು ಏನನ್ನೂ ಮುಳುಗಿಸಿಲ್ಲ’ ಎಂದರು.

ಕ್ರಿಕೆಟ್: ಅಕ್ಷಯ್ ಅಮೋಘ ಶತಕ

ಬೆಂಗಳೂರು: ಆರ್. ಅಕ್ಷಯ್ (126; 191ಎಸೆತ, 4X17) ಅವರ ಶತಕ ಮತ್ತು ವಿನಾಯಕ ಹೊಳ್ಳ(58ಕ್ಕೆ5) ಅವರ ಅಮೋಘ ಬೌಲಿಂಗ್‌ನಿಂದ ದ ಬೆಂಗಳೂರು ಕ್ರಿಕೆಟರ್ಸ್ ತಂಡವು ಎಂ.ಎ.ಟಿ ಆಚಾರ್ಯ ಶೀಲ್ಡ್‌ಗಾಗಿ ನಡೆಯುತ್ತಿರುವ ಕೆಎಸ್‌ಸಿಎ ಒಂದನೇ ಗುಂಪು, ಎರಡನೇ ಡಿವಿಷನ್ ಲೀಗ್ ನಾಕೌಟ್ ಟೂರ್ನಿಯಲ್ಲಿ ಇನಿಂಗ್ಸ್ ಮತ್ತು 76 ರನ್‌ಗಳಿಂದ ವರ್ಲ್‌ವಿಂಡ್ ಕ್ರಿಕೆಟರ್ಸ್ ಎದುರು ಜಯಿಸಿತು.

ಇನ್ನೊಂದು ಪಂದ್ಯದಲ್ಲಿ; ಹೆರಾನ್ಸ್ ಕ್ಲಬ್ ತಂಡದ ಎಸ್. ವಿನೋದ್ (ಅಜೇಯ 109) ಅವರು ಶತಕ ದಾಖಲಿಸಿದರು. ರಾಜಾಜಿನಗರ ಕ್ರಿಕೆಟರ್ಸ್ ವಿರುದ್ಧದ ಈ ಪಂದ್ಯವು ಡ್ರಾ ಆಯಿತು.

ಸಂಕ್ಷಿಪ್ತ ಸ್ಕೋರುಗಳು: ದ ಬೆಂಗಳೂರು ಕ್ರಿಕೆಟರ್ಸ್: 81.1 ಓವರ್‌ಗಳಲ್ಲಿ 351 (ಆರ್. ಅಕ್ಷಯ್ 126, ತೇಜಸ್ ರೆಡ್ಡಿ 20ಕ್ಕೆ2) ವರ್ಲ್‌ವಿಂಡ್ ಕ್ರಿಕೆಟರ್ಸ್: 35 ಓವರ್‌ಗಳಲ್ಲಿ 102 (ಮಂಜುನಾಥ್ 17ಕ್ಕೆ3, ಕೇಶವ್ ಮಂಜುನಾಥ್ 24ಕ್ಕೆ3) ಎರಡನೇ ಇನಿಂಗ್ಸ್: 58 ಓವರ್‌ಗಳಲ್ಲಿ 173 (ಆರ್. ಪ್ರತೀಕ್ಷ್ 53, ವಿ.ಎಲ್. ಸೂರಜ್ 76, ಕೇಶವ್ ಮಂಜುನಾಥ್ 32ಕ್ಕೆ2, ವಿನಾಯಕ ಹೊಳ್ಳ 58ಕ್ಕೆ5) ಬೆಂಗಳೂರು ಕ್ರಿಕೆಟರ್ಸ್‌ಗೆ ಇನಿಂಗ್ಸ್ ಮತ್ತು 76 ರನ್‌ಗಳ ಜಯ.

ಮೊದಲ ಇನಿಂಗ್ಸ್: ಮಲ್ಲೇಶ್ವರಂ ಜಿಮ್‌ಖಾನಾ: 41.2 ಓವರ್‌ಗಳಲ್ಲಿ 157 (ಶ್ರೇಯಾಂಕ ಸಾಗರ 70, ಲವೀಶ್ ಕೌಶಲ್ 59ಕ್ಕೆ3, ಅಗಸ್ತ್ಯ 24ಕ್ಕೆ4). ವಿಜಯಾ ಸಿಸಿ: 53 ಓವರ್‌ಗಳಲ್ಲಿ 204 (ಸಮ್ಯಕ್ ವೆಲಾಲೋರ್ 68ಕ್ಕೆ3). ಎರಡನೇ ಇನಿಂಗ್ಸ್: ಮಲ್ಲೇಶ್ವರಂ– 29.5 ಓವರ್‌ಗಳಲ್ಲಿ 119 (ವೀರೇಂದ್ರ 35ಕ್ಕೆ3, ಮಲಿಕ್ ಸಾಬ್ ಶಿರೂರ್ 19ಕ್ಕೆ3). 11.2 ಓವರ್‌ಗಳಲ್ಲಿ 1 ವಿಕೆಟ್‌ಗೆ 74. ಫಲಿತಾಂಶ: ವಿಜಯಾ ಸಿಸಿಗೆ 9 ವಿಕೆಟ್‌ಗಳ ಜಯ ಹಾಗೂ 6 ಪಾಯಿಂಟ್. **ಹೆರಾನ್ಸ್ ಕ್ಲಬ್:** 83.3 ಓವರ್‌ಗಳಲ್ಲಿ 302 (ಎಸ್. ವಿನೋದ್ ಅಜೇಯ 109, ಆದಿತ್ಯ ಮಣಿ 57, ನಿಶ್ಚಿತ್ ಎನ್ ರಾವ್ 56ಕ್ಕೆ3, ಎಸ್. ಭಾರ್ಗವ್ 74ಕ್ಕೆ3, ರಾಹುಲ್ ಪ್ರಸನ್ನ 57ಕ್ಕೆ3) ರಾಜಾಜಿನಗರ ಕ್ರಿಕೆಟರ್ಸ್: 64.1 ಓವರ್‌ಗಳಲ್ಲಿ 264 (ನಿಖಿಲ್ ವೇದಾಂತ್ 57) ಫಲಿತಾಂಶ: ಪಂದ್ಯ ಡ್ರಾ. ಇಬ್ಬರಿಗೂ ತಲಾ ಒಂದು ಅಂಕ. **ಜವಾನ್ಸ್ ಸಿಸಿ:** 90 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 381 (ಎಸ್.ಯು. ಕಾರ್ತಿಕ್ 65, ಹರ್ಷಿಲ್ 89, ಸುಮಿತ್ ಕುಮಾರ್ 95, ವಿದ್ಯಾಧರ್ ಪಾಟೀಲ 64ಕ್ಕೆ3, ಪ್ರಣವ್ ಭಾಟಿಯಾ 95ಕ್ಕೆ3) ಬೆಂಗಳೂರು ಯುನೈಟೆಡ್ ಸಿಸಿ: 61 ಓವರ್‌ಗಳಲ್ಲಿ 216 (ಎಂ. ಅರ್ಸಲನ್ 79, ಅಭಿನವ್ ಮನೋಹರ್ 85, ಇಶಾನ್ 41ಕ್ಕೆ5), ಎರಡನೇ ಇನಿಂಗ್ಸ್: 14 ಓವರ್‌ಗಳಲ್ಲಿ 1 ವಿಕೆಟ್‌ಗೆ 74. ಪಂದ್ಯ ಡ್ರಾ.

ವಾಸ್ತುಶಿಲ್ಪಶಾಸ್ತ್ರ ಕೋರ್ಸ್ ಪ್ರವೇಶ: ಅರ್ಹತಾ ಅಂಕ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಸ್ತುಶಿಲ್ಪ ಶಾಸ್ತ್ರ ಕೋರ್ಸ್‌ಗೆ ಪ್ರವೇಶ ಪಡೆಯಲು ಅಭ್ಯರ್ಥಿಗಳು ಇನ್ನು ಮುಂದೆ ದ್ವಿತೀಯ ಪಿಯುಸಿಯಲ್ಲಿ ಶೇ 45 ಅಂಕ ಪಡೆದರೂ ಸಾಕು.

ಅರ್ಹತಾ ಅಂಕಗಳನ್ನು ಶೇ 50ರಿಂದ 45ಕ್ಕೆ ಇಳಿಸಿ ವಾಸ್ತುಶಿಲ್ಪಶಾಸ್ತ್ರ ಪರಿಷತ್ತು ಆದೇಶ ಹೊರಡಿಸಿದ್ದು, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಜುಲೈ 13ರವರೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವಕಾಶ ನೀಡಿದೆ.

‘ಅರ್ಹತಾ ಅಂಕ ಕಡಿಮೆ ಮಾಡಿರುವ ಕುರಿತು ವಾಸ್ತುಶಿಲ್ಪ ಶಾಸ್ತ್ರ ಪರಿಷತ್ತು ಪತ್ರ ಬರೆದಿದ್ದು ನಾಟಾ ಪರೀಕ್ಷೆಯಲ್ಲಿ ಅರ್ಹರಾದವರಿಗೆ ಅರ್ಜಿ ಸಲ್ಲಿಸಲು ಮತ್ತೆ ಅವಕಾಶ ಕಲ್ಪಿಸಲಾಗಿದೆ. ಹೊಸದಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಜುಲೈ 15ರೊಳಗೆ ನಾಟಾ ಅಂಕಗಳ ವಿವರವನ್ನು ಕೆಇಎಗೆ ಸಲ್ಲಿಸಬೇಕು’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಅಣಕು ಫಲಿತಾಂಶ ಪ್ರಕಟ: ಎರಡನೇ ವರ್ಷದ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಡಿಪ್ಲೊಮಾ ಅಭ್ಯರ್ಥಿಗಳು ದಾಖಲಿಸಿರುವ ಆಯ್ಕೆಗಳ ಆಧಾರದ ಮೇಲೆ ಅಣಕು ಸೀಟು ಹಂಚಿಕೆಯ ಫಲಿತಾಂಶವನ್ನು ಪರೀಕ್ಷಾ ಪ್ರಾಧಿಕಾರ ತನ್ನ ವೆಬ್‌ಸೈಟಿನಲ್ಲಿ ಪ್ರಕಟಿಸಿದೆ.

ವಿದ್ಯುತ್ ಉತ್ಪಾದನೆಗೆ ‘ತೇಲುವ ಸೌರ ವಿದ್ಯುತ್ ಫಲಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಣ್ಣ ನೀರಾವರಿ ವ್ಯಾಪ್ತಿಯ ಕೆರೆಗಳಲ್ಲಿ ತೇಲುವ ಸೌರ ವಿದ್ಯುತ್ ಫಲಕಗಳನ್ನು ಅಳವಡಿಸಿ ವಿದ್ಯುತ್ ಉತ್ಪಾದಿಸುವ ಸಾಧ್ಯತೆ ಕುರಿತು ಚರ್ಚಿಸಲು ತಜ್ಞರ ಜತೆ ಸಭೆಯೊಂದನ್ನು ಆಯೋಜಿಸುವಂತೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಸೂಚಿಸಿದರು.

ಇಲಾಖೆಯ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ‘ನಮ್ಮ ಇಲಾಖೆ ವ್ಯಾಪ್ತಿಯಲ್ಲಿರುವ ಏತ ನೀರಾವರಿ ಯೋಜನೆ ಮೂಲಕ ನೀರು ತುಂಬಿಸುತ್ತಿರುವ 100 ಎಕರೆಗೂ ಹೆಚ್ಚು ವಿಸ್ತೀರ್ಣ ಹೊಂದಿರುವ 40 ಕೆರೆಗಳನ್ನು ಗುರುತಿಸಲಾಗಿದೆ. ಈ ಕೆರೆಗಳು ಸುಮಾರು 10 ಸಾವಿರ ಎಕರೆ ಪ್ರದೇಶ ವ್ಯಾಪ್ತಿಯನ್ನು ಹೊಂದಿದ್ದು, ಸುಮಾರು 2,500 ಮೆಗಾ ವಾಟ್ ವಿದ್ಯುತ್ ಉತ್ಪಾದನೆಗೆ ಅವಕಾಶವಿದೆ’ ಎಂದರು.

‘ಈ ಕೆರೆಗಳಲ್ಲಿ ವರ್ಷದಾದ್ಯಂತ ಶೇ 50 ರಿಂದ ಶೇ 60 ರಷ್ಟು ನೀರು ತುಂಬಿಸಲಾಗುತ್ತದೆ. ಈ ಕೆರೆಗಳಲ್ಲಿ ತೇಲುವ ಸೌರ ವಿದ್ಯುತ್ ಫಲಕಗಳನ್ನು ಅಳವಡಿಸುವ ಮೂಲಕ ವಿದ್ಯುತ್ ಉತ್ಪಾದನೆ ಮಾಡುವ ಉದ್ದೇಶ ಹೊಂದಿದ್ದೇವೆ. ಈ ಯೋಜನೆ ಮೂಲಕ ಏತ ನೀರಾವರಿ ಯೋಜನೆಗಳಿಗೆ ಭರಿಸಲಾಗುತ್ತಿರುವ ವಿದ್ಯುತ್ ವೆಚ್ಚವನ್ನು ಕಡಿತ ಗೊಳಿಸುವುದು ನಮ್ಮ ಆದ್ಯತೆ’ ಎಂದು ತಿಳಿಸಿದರು.

ಚನ್ನಪಟ್ಟಣ ಉಪ ಚುನಾವಣೆ: ಸ್ಥಳೀಯರ ಅಭಿಪ್ರಾಯ ಸಂಗ್ರಹ

ಯೋಗೇಶ್ವರ್‌ಗೆ ಟಿಕೆಟ್: ಮುಖಂಡರ ಒತ್ತಾಯ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಮುಂಬರುವ ಉಪ ಚುನಾವಣೆಗೆ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಯಾಗಿ ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರಿಗೇ ಟಿಕೆಟ್ ಕೊಡಬೇಕು ಎಂದು ಬಿಜೆಪಿ ಜಿಲ್ಲಾ ಪದಾಧಿಕಾರಿಗಳು ಹಾಗೂ ಸ್ಥಳೀಯ ಮುಖಂಡರು ಒತ್ತಾಯಿಸಿದರು.

ಅಭ್ಯರ್ಥಿ ಆಯ್ಕೆಗೆ ಸಂಬಂಧಿಸಿದಂತೆ ತಾಲ್ಲೂಕಿನ ಮತ್ತಿಕೆರೆಯ ಹೋಟೆಲ್‌ನಲ್ಲಿ ಉಪ ಚುನಾವಣೆ ಉಸ್ತುವಾರಿಗಳಾದ ಶಾಸಕ ಡಾ. ಸಿ.ಎನ್. ಅಶ್ವತ್ಥ ನಾರಾಯಣ, ವಿಧಾನ ಪರಿಷತ್ ಸದಸ್ಯ ಗೋಪಿನಾಥ ರೆಡ್ಡಿ, ಪಕ್ಷದ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ಸಂಸದ ಡಾ. ಸಿ.ಎನ್. ಮಂಜುನಾಥ್, ರೈತ ಮೋರ್ಚಾ ಉಪಾಧ್ಯಕ್ಷ ಎಂ. ರುದ್ರೇಶ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮುಖಂಡರ ಅಭಿಪ್ರಾಯ ಸಂಗ್ರಹಿಸಲಾಯಿತು.

‘ಕ್ಷೇತ್ರದ ಗೆಲುವು ಮೈತ್ರಿಕೂಟಕ್ಕೆ ಪ್ರತಿಷ್ಠೆಯಾಗಿದೆ. ಈಗಾಗಲೇ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗುವ ಇಂಗಿತ ವ್ಯಕ್ತಪಡಿಸಿ, ಜನಸ್ಪಂದನ ಕಾರ್ಯಕ್ರಮದ ಹೆಸರಿನಲ್ಲಿ ಚುನಾವಣಾ ಪ್ರಚಾರ ಆರಂಭಿಸಿದ್ದಾರೆ. ಅವರನ್ನು ಎದುರಿಸಲು ಸ್ಥಳೀಯ ಪ್ರಬಲ ರಾಜಕಾರಣಿ ಯೋಗೇಶ್ವರ್ ಅವರಿಗಿಂತ ಸೂಕ್ತ ವ್ಯಕ್ತಿ ಮತ್ತೊಬ್ಬರಿಲ್ಲ’ ಎಂದು ಸಭೆಯಲ್ಲಿದ್ದ ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದರು.

‘ಶಾಸಕರಾಗಿ ಮತ್ತು ಸಚಿವರಾಗಿ ಸೇವೆ ಸಲ್ಲಿಸಿರುವ ಯೋಗೇಶ್ವರ್ ಅವರು, ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಕೆರೆಗಳಿಗೆ ನೀರು ತುಂಬಿಸುವುದು, ನೀರಾವರಿ ಯೋಜನೆಗಳ ಜಾರಿ ಸೇರಿದಂತೆ ಹಲವು ಜನಪರ ಕಾರ್ಯಗಳ ಮೂಲಕ ಹೆಸರಾಗಿದ್ದಾರೆ. ಸ್ಥಳೀಯವಾಗಿ ತಮ್ಮದೇ ರಾಜಕೀಯ ಹಿಡಿತ ಹೊಂದಿರುವ ಅವರನ್ನೇ ಅಭ್ಯರ್ಥಿಯಾಗಿಸುವುದರಿಂದ ಚುನಾವಣೆಯಲ್ಲಿ ಸುಲಭವಾಗಿ ಗೆಲುವು ಸಾಧಿಸಬಹುದು. ಹಾಗಾಗಿ, ಮೈತ್ರಿ ನಾಯಕರು ಅವರ ಹೆಸರನ್ನೇ ಘೋಷಿಸಬೇಕು’ ಎಂದು ಒತ್ತಾಯಿಸಿದರು.

ಅಭಿಪ್ರಾಯ ಆಲಿಸಿದ ಡಾ.ಸಿ.ಎನ್. ಮಂಜುನಾಥ್, ‘ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯ ಗೆಲುವಷ್ಟೇ ಮುಖ್ಯ. ಸಭೆಯಲ್ಲಿ ವ್ಯಕ್ತವಾಗಿರುವ ಅಭಿಪ್ರಾಯವನ್ನು ಪಕ್ಷದ ವರಿಷ್ಠರ ಗಮನಕ್ಕೆ ತರಲಾಗುವುದು’ ಎಂದು ಭರವಸೆ ನೀಡಿದರು.

ಚನ್ನಪಟ್ಟಣ ಉಪ ಚುನಾವಣೆ ಅಭ್ಯರ್ಥಿ ಆಯ್ಕೆಗೆ ಸಂಬಂಧಿಸಿದಂತೆ ನಡೆದ ಬಿಜೆಪಿ ಜಿಲ್ಲಾ ಪದಾಧಿಕಾರಿಗಳು ಹಾಗೂ ಸ್ಥಳೀಯ ಮುಖಂಡರ ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಮಾತನಾಡಿದರು. ಸಂಸದ ಡಾ. ಸಿ.ಎನ್. ಮಂಜುನಾಥ್, ಶಾಸಕ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಹಾಗೂ ಮುಖಂಡರು ಇದ್ದಾರೆ

> ನಾನೇ ಅಭ್ಯರ್ಥಿ ಆಗಬೇಕೆಂಬುದು ಕ್ಷೇತ್ರದ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರ ಒತ್ತಾಸೆಯಾಗಿದೆ. ಕ್ಷೇತ್ರದ ಗೆಲುವಿನ ದೃಷ್ಟಿಯಿಂದ ನನಗೆ ಟಿಕೆಟ್ ಕೊಡಬೇಕು
> **ಸಿ.ಪಿ. ಯೋಗೇಶ್ವರ್,** ವಿಧಾನ ಪರಿಷತ್ ಸದಸ್ಯ

> ಚನ್ನಪಟ್ಟಣ ಉಪ ಚುನಾವಣೆ ಕುರಿತು ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಿ, 2–3 ದಿನದೊಳಗೆ ಅಭ್ಯರ್ಥಿ ಕುರಿತು ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು
> **ಡಾ. ಸಿ.ಎನ್. ಅಶ್ವತ್ಥ ನಾರಾಯಣ,** ಶಾಸಕ



ಭೈರವನ ಸಾಮ್ರಾಜ್ಯದ ಕಥೆ

ಇಂದು(ಜುಲೈ 12) ಚಂದನವನದ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಅವರ ಜನ್ಮದಿನ. 60ರ ಹೊಸ್ತಿಲು ದಾಟಿ ಎರಡು ಹೆಜ್ಜೆ ಇಟ್ಟಿದ್ದರೂ ತೆರೆಯ ಮೇಲಿನ ಶಿವರಾಜ್‌ಕುಮಾರ್ ಹೊಳಪು ಕಡಿಮೆಯಾಗಿಲ್ಲ. ಅವರ ಸಾಲು ಸಾಲು ಹೊಸ ಸಿನಿಮಾಗಳು ಘೋಷಣೆಯಾಗಿದ್ದು, ಅವುಗಳ ಮಾಹಿತಿ ಇಲ್ಲಿದೆ.

ಭೈರವನ ಕೊನೆ ಪಾಠ

ಶಿವರಾಜ್‌ಕುಮಾರ್

‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾ ಬಳಿಕ ನಿರ್ದೇಶಕ ಹೇಮಂತ್ ಎಂ. ರಾವ್ ‘ಸೆಂಚುರಿ ಸ್ಟಾರ್’ ಶಿವರಾಜ್‌ಕುಮಾರ್ ಅವರಿಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎನ್ನುವುದು ಖಚಿತವಾಗಿತ್ತು. ಕಳೆದ ವಾರವಷ್ಟೇ ಸಿನಿಮಾದ ಶೀರ್ಷಿಕೆ ಘೋಷಣೆಯಾಗಿತ್ತು. ಇದೀಗ ಆ ಸಿನಿಮಾದಲ್ಲಿ ಶಿವರಾಜ್‌ಕುಮಾರ್ ಅವರ ಪಾತ್ರ ಹೇಗಿರಲಿದೆ ಎನ್ನುವ ಫಸ್ಟ್‌ಲುಕ್ ಬಿಡುಗಡೆಯಾಗಿದೆ. 12ನೇ ಶತಮಾನದಲ್ಲಿ ನಡೆಯುವ ಕಾಲ್ಪನಿಕ ಕಥೆಯಲ್ಲಿ ಭೈರವ ಎಂಬ ಪಾತ್ರದಲ್ಲಿ ಶಿವರಾಜ್‌ಕುಮಾರ್ ಕಾಣಿಸಿಕೊಳ್ಳಲಿದ್ದಾರೆ.

ನಿರ್ದೇಶಕ ಹೇಮಂತ್ ತಮ್ಮ ಬರವಣಿಗೆಯ ಶಕ್ತಿಯಿಂದಲೇ ಸಿನಿಮಾಗಳಿಗೆ ಜೀವ ತುಂಬುವವರು. ‘ಭೈರವನ ಕೊನೆ ಪಾಠ’ ಕಥೆ ಹುಟ್ಟಿದ್ದು ಹೇಗೆ ಎನ್ನುವ ಪ್ರಶ್ನೆಗೆ ಉತ್ತರಿಸುತ್ತಾ, ‘ಶಿವರಾಜ್‌ಕುಮಾರ್ ಅವರ ಅಭಿಮಾನಿಯಾಗಿ ಅವರ ಸಿನಿಮಾಗಳನ್ನು ನೋಡಿದ್ದೇನೆ. 125ಕ್ಕೂ ಅಧಿಕ ಸಿನಿಮಾಗಳಲ್ಲಿ ಅಭಿನಯಿಸಿರುವ ಅವರು, ಎಲ್ಲ ಮಾದರಿಯ ಪಾತ್ರಗಳನ್ನು ಮಾಡಿದ್ದಾರೆ. ಹೀಗಾಗಿ ಹೊಸತೇನನ್ನಾದರೂ ಸೃಷ್ಟಿಸಬೇಕಿತ್ತು. ನಿರ್ಮಾಪಕ ವೈಶಾಕ್ ಜೊತೆ ಮಾತನಾಡಿದ ಬಳಿಕ ಕಥೆಯ ಎಳೆ ಹೇಳಿದ್ದೆ. ಇದು ಶಿವರಾಜ್‌ಕುಮಾರ್ ಅವರಿಗೆ ಫ್ರೆಶ್ ಆಗಿರುತ್ತದೆ ಎಂದುಕೊಂಡೆವು. ನಾನು ಶೇಕ್ಸ್‌ಪಿಯರ್ ಕಥೆ ಆಧರಿಸಿದ ನಾಟಕಗಳ ಅಭಿಮಾನಿ. ಅವರ ಬರವಣಿಗೆಯ ಪ್ರಭಾವ ನನ್ನ ಮೇಲೆ ಬಹಳಷ್ಟಿದೆ. ಅಲ್ಲಿ ಪಾತ್ರಗಳ ವಿಸ್ತರಣೆ ಕಂಡು ಚಕಿತನಾಗಿದ್ದೆ. ಈ ರೀತಿಯ ಸ್ಪೇಸ್‌ನಲ್ಲಿ ಸಿನಿಮಾ ಮಾಡಬೇಕು ಎನ್ನುವ ಆಸೆ ಮೊದಲಿನಿಂದಲೂ ಇತ್ತು’ ಎನ್ನುತ್ತಾರೆ ಹೇಮಂತ್.

‘ಕಾಲ್ಪನಿಕ ಆದರೆ ಫ್ಯಾಂಟಸಿ ಅಲ್ಲ’: ಭಿನ್ನ ಲುಕ್‌ನಲ್ಲಿ ಶಿವರಾಜ್‌ಕುಮಾರ್ ಈ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎನ್ನುವುದಕ್ಕೆ ಸಾಕ್ಷ್ಯದಂತಿದೆ ಫಸ್ಟ್‌ಲುಕ್. ಇದಕ್ಕಾಗಿ ಸ್ಟುಡಿಯೊ ಬದಲು ಚಿಕ್ಕಬಳ್ಳಾಪುರದ ಬಳಿಯ ಗುಡಿಬಂಡೆ ಕೋಟೆಯಲ್ಲೇ ಫೋಟೋಶೂಟ್ ನಡೆಸಲಾಗಿತ್ತು. ಇದಕ್ಕಾಗಿ ಶಿವರಾಜ್‌ಕುಮಾರ್ ನೂರಾರು ಮೆಟ್ಟಿಲುಗಳನ್ನು ಹತ್ತಿ ಹೋಗಿದ್ದರು. ‘ಈ ಸಿನಿಮಾ ಕಥೆ 12–13ನೇ ಶತಮಾನದಲ್ಲಿ ನಡೆಯುವಂತಹದ್ದು. ಇದು ಪೂರ್ಣವಾದ ಕಾಲ್ಪನಿಕ ಕಥೆ. ಆದರೆ ‘ಬಾಹುಬಲಿ’ ಸಿನಿಮಾದಂತೆ ಫ್ಯಾಂಟಸಿ ಕಥೆಯಲ್ಲ. ನಮ್ಮ ನಾಡಿನಲ್ಲಿ ನೂರಾರು ರಾಜರು ಆಳ್ವಿಕೆ ನಡೆಸಿದ್ದಾರೆ. ಅವರಲ್ಲಿ ಕೆಲವರ ಕಥೆಯಷ್ಟೇ ನಮಗೆ ತಿಳಿದಿದೆ. ಕೆಲವರು ಇತಿಹಾಸದ ಪುಟಗಳಲ್ಲಿ ಮರೆಯಾಗಿದ್ದಾರೆ. ‘ಭೈರವನ ಕೊನೆ ಪಾಠ’ ಒಂದು ರಾಜನ ಕಥೆಯಲ್ಲ, ಬದಲಾಗಿ ಅದು ಒಂದು ಸಾಮ್ರಾಜ್ಯದ ಕಥೆ’ ಎಂದು ಹೇಮಂತ್ ವಿವರಿಸಿದರು.

‘ಸದ್ಯ ಪ್ರಿಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ಹಂತ ಹಂತವಾಗಿ ಕಲಾವಿದರನ್ನು ಪರಿಚಯಿಸಲಾಗುವುದು. ಸಿನಿಮಾದಲ್ಲಿ ಸೆಟ್ ಹಾಗೂ ಗ್ರಾಫಿಕ್ಸ್ ಪ್ರಮುಖವಾಗಿರಲಿದೆ. ದೊಡ್ಡ ಪ್ರಮಾಣದಲ್ಲಿ ಸೆಟ್ ಕೆಲಸಗಳು ನಡೆಯಬೇಕಿದೆ. ಇದು ದೊಡ್ಡ ಸ್ಕೇಲ್‌ನ ಸಿನಿಮಾ. ನಾಲ್ಕು ಭಾಷೆಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದ್ದು, ಬೇರೆ ಭಾಷೆಯ ಕಲಾವಿದರನ್ನು ಕರೆತರುವ ಬಗ್ಗೆ ಮಾತುಕತೆ ನಡೆಯುತ್ತಿದೆ’ ಎಂದು ತಿಳಿಸಿದರು.

‘ಚಿತ್ರ ಅದ್ದೂರಿಯಾಗಿ ಮೂಡಿಬರಲಿದೆ. ಸೆಟ್‌ಗಳು, ಸ್ಥಳಗಳು ಎಲ್ಲವನ್ನೂ ದೊಡ್ಡದಾಗಿ ಪ್ಲ್ಯಾನ್ ಮಾಡಲಾಗಿದೆ’ ಎಂದಿದ್ದಾರೆ ಚಿತ್ರದ ನಿರ್ಮಾಪಕ ಡಾ.ವೈಶಾಕ್ ಜೆ. ಗೌಡ. ❖

> **“ಅಪ್ಪಾಜಿ, ಈ ರೀತಿಯ ಪಾತ್ರಗಳನ್ನು ನಿಭಾಯಿಸುವುದರಲ್ಲಿ ಹೆಸರುವಾಸಿಯಾಗಿದ್ದರು. ಭೈರವ ಪಾತ್ರದಲ್ಲಿ ನಟಿಸುತ್ತಿರುವುದಕ್ಕೆ ನನಗೆ ಅತೀವ ಸಂತೋಷವಾಗಿದೆ. ಹೇಮಂತ್ ಎಂ ರಾವ್ ಮತ್ತು ತಂಡದೊಂದಿಗೆ ಕೆಲಸ ಮಾಡಲು ಎದುರು ನೋಡುತ್ತಿದ್ದೇನೆ.**
> **–ಶಿವರಾಜ್‌ಕುಮಾರ್,** ನಟ ”

ಸೆಪ್ಟೆಂಬರ್‌ನಲ್ಲಿ ‘45’ ಟೀಸರ್

ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ. ಶೆಟ್ಟಿ ನಟಿಸುತ್ತಿರುವ, ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳುತ್ತಿರುವ ‘45’ ಸಿನಿಮಾದ ಚಿತ್ರೀಕರಣ ಕೊನೆಯ ಹಂತ ತಲುಪಿದೆ. ‘ಬಹುಕೋಟಿ ವೆಚ್ಚದಲ್ಲಿ ಸಿನಿಮಾ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ. ಸದ್ಯದಲ್ಲೇ ಕ್ಲೈಮ್ಯಾಕ್ಸ್ ಭಾಗದ ಸಾಹಸ ಸನ್ನಿವೇಶಗಳ ಚಿತ್ರೀಕರಣ 30 ದಿನಗಳ ಕಾಲ ಬೆಂಗಳೂರಿನಲ್ಲಿ ನಡೆಯಲಿದೆ. ಇಷ್ಟು ದಿನಗಳ ಕಾಲ ಅಪಾರ ವೆಚ್ಚದಲ್ಲಿ ಕ್ಲೈಮ್ಯಾಕ್ಸ್ ಭಾಗದ ಚಿತ್ರೀಕರಣ ನಡೆಯುತ್ತಿರುವುದು ಕನ್ನಡದಲ್ಲಿ ಇದೇ ಮೊದಲಿರಬಹುದು’ ಎಂದಿದೆ ಚಿತ್ರತಂಡ.

45 ಸಿನಿಮಾದ ಬಗ್ಗೆ ಮಾತನಾಡಿರುವ ಶಿವರಾಜ್‌ಕುಮಾರ್, ‘ಜನ್ಮದಿನ ಎನ್ನುವುದು ತಂದೆ ತಾಯಿ ನಮಗೆ ನೀಡಿರುವ ಗಿಫ್ಟ್. ಅವರಿಗೆ ನಾವು ಯಾವಾಗಲೂ ಚಿರಋಣಿಯಾಗಿರಬೇಕು. ಇಂದು ನನ್ನ ಅರವತ್ತೆರಡನೇ ಜನ್ಮದಿನ. ಇಷ್ಟು ವರ್ಷಗಳಿಂದ ಸಾವಿರಾರು ಅಭಿಮಾನಿಗಳು ನಮ್ಮ ಮನೆಗೆ ಬಂದು ನನ್ನ ಜನ್ಮದಿನವನ್ನು ಸಂಭ್ರಮಿಸಿದ್ದೀರಿ. ಈ ಸಲದ ಜನ್ಮದಿನಕ್ಕೆ ನಾನು ನಿಮಗೊಂದು ಸ್ಪೆಷಲ್ ಗಿಫ್ಟ್ ಕೊಡಲಿದ್ದೇನೆ. ಅದೇನೆಂದರೆ ‘45’ ಚಿತ್ರದ ನನ್ನ ಫಸ್ಟ್‌ಲುಕ್ ರಿಲೀಸ್ ಆಗಲಿದೆ’ ಎಂದಿದ್ದಾರೆ. ಸೂರಜ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಉಮಾ ರಮೇಶ್ ರೆಡ್ಡಿ ಅವರು ಈ ಚಿತ್ರ ನಿರ್ಮಿಸುತ್ತಿದ್ದಾರೆ.

ಅಭಿಮಾನಿಗಳಿಗೆ ನಿರಾಸೆ

‘ಅಭಿಮಾನಿಗಳ ಪ್ರೀತಿಯ ಅಪ್ಪುಗೆ, ನೀಡೋ ಆಶೀರ್ವಾದ ನಿಮ್ಮ ಶಿವುಗೆ ಶ್ರೀರಕ್ಷೆ. ಈ ವರ್ಷ ಜನ್ಮದಿನದಂದು ಅಭಿಮಾನಿಗಳ ಜೊತೆ ಇರಲು ಸಾಧ್ಯವಾಗುವುದಿಲ್ಲ. ವರ್ಷವಿಡೀ ಒಟ್ಟಿಗೆ ಪ್ರತಿದಿನ ಸೆಲೆಬ್ರೇಟ್ ಮಾಡೋಣ’ ಎಂದು ‘ಎಕ್ಸ್’ನಲ್ಲಿ ಶಿವರಾಜ್‌ಕುಮಾರ್ ಪೋಸ್ಟ್ ಮಾಡಿದ್ದಾರೆ.

ಖುಷಿ ರವಿ

ಬರ್ತಿದ್ದಾನೆ ಸನ್ ಆಫ್ ಮುತ್ತಣ್ಣ

ನಟ ದೇವರಾಜ್ ಕಿರಿಯ ಪುತ್ರ ಪ್ರಣಮ್ ದೇವರಾಜ್ ನಟನೆಯ ‘ಸನ್ ಆಫ್ ಮುತ್ತಣ್ಣ’ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಸಿನಿಮಾ ತೆರೆಗೆ ಬರಲಿದೆ ಎಂದಿದೆ ಚಿತ್ರತಂಡ.

‘ಸನ್ ಆಫ್ ಮುತ್ತಣ್ಣ’ ಸಿನಿಮಾದ ನಿರ್ದೇಶಕ ಶ್ರೀಕಾಂತ್ ಹುಣಸೂರು ಮತ್ತು ಚಿತ್ರತಂಡ ಸುದ್ದಿಗೋಷ್ಠಿ ನಡೆಸಿ ಮಾಹಿತಿ ಹಂಚಿಕೊಂಡಿತು. ‘ಈ ಸಿನಿಮಾದ ಪಯಣ ಖುಷಿಯ ಜೊತೆಗೆ ಭಾವನಾತ್ಮಕವಾಗಿಯೂ ಇತ್ತು. ಅಪ್ಪ ಮಗನ ಬಾಂಧವ್ಯದ ಕಥೆ ಇದು. ನಮ್ಮ ಕುಟುಂಬದಲ್ಲಿ ಅಪ್ಪ ಮಗನ ಬಾಂಧವ್ಯ ಹೇಗಿದೆ ಅಂತಾ ಎಲ್ಲರಿಗೂ ಗೊತ್ತಿದೆ. ರಂಗಾಯಣ ರಘು ಅವರು ನನಗೆ ತಂದೆ ರೀತಿ ಸೆಟ್‌ನಲ್ಲಿ ಇದ್ದರು. ಇವರಿಂದ ಸಾಕಷ್ಟು ಕಲಿತಿದ್ದೇನೆ. ಖುಷಿ ಅದ್ಭುತ ನಟಿ’ ಎಂದರು ಪ್ರಣಮ್.

ಪ್ರಣಮ್ ದೇವರಾಜ್

‘ಬಂಡಿ ಮಹಾಕಾಳಿ ದೇಗುಲದಲ್ಲಿ ಸಿನಿಮಾ ಆರಂಭಿಸಿದ್ದೆವು. ಇಲ್ಲಿಯೇ ಚಿತ್ರೀಕರಣ ಪೂರ್ಣಗೊಳಿಸಿದ್ದೇವೆ. 49 ದಿನ ಶೂಟಿಂಗ್ ನಡೆಸಲಾಗಿದೆ. ವಾರಾಣಸಿ, ಬೆಂಗಳೂರಿನಲ್ಲಿ ಚಿತ್ರೀಕರಣ ನಡೆದಿದೆ’ ಎಂದರು ಶ್ರೀಕಾಂತ್.

ಪ್ರಣಮ್ ದೇವರಾಜ್ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ಖುಷಿ ರವಿ ನಾಯಕಿಯಾಗಿ ಸಾಥ್ ಕೊಟ್ಟಿದ್ದಾರೆ. ಸುಚೇಂದ್ರ ಪ್ರಸಾದ್, ಗಿರಿ ಶಿವಣ್ಣ, ತಬಲ ನಾಣಿ, ಶ್ರೀನಿವಾಸ ಪ್ರಭು, ಸುಧಾ ಬೆಳವಾಡಿ, ಅರುಣ್ ಚಕ್ರವರ್ತಿ ತಾರಾಬಳಗದಲ್ಲಿದ್ದಾರೆ. ಪುರಾತನ ಫಿಲಂಸ್ ಬ್ಯಾನರ್ ಅಡಿಯಲ್ಲಿ ದಿವ್ಯಾ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಸ್ಕೇಟಿಂಗ್ ಕೃಷ್ಣ ಛಾಯಾಚಿತ್ರಗ್ರಹಣ, ಹರೀಶ್ ಕೊಮ್ಮೆ ಸಂಕಲನ, ಸಚಿನ್ ಬಸ್ರೂರ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ❖

ಉತ್ತರಕಾಂಡ

ಶಿವರಾಜ್‌ಕುಮಾರ್

ಜನ್ಮದಿನಕ್ಕೆ ಸಿನಿಮಾಗಳ ಕೊಡುಗೆ

1986ರಲ್ಲಿ ‘ಆನಂದ್’ ಚಿತ್ರದ ಮುಖಾಂತರ ಬೆಳ್ಳಿತೆರೆಗೆ ಕಾಲಿಟ್ಟ ಶಿವರಾಜ್‌ಕುಮಾರ್, ಸದ್ಯ ಚಂದನವನದಲ್ಲಿ 38 ವರ್ಷ ಪೂರೈಸಿ ಮುನ್ನಡೆಯುತ್ತಿದ್ದಾರೆ. 125ನೇ ಸಿನಿಮಾ ಪೂರೈಸಿದ ಸಂಭ್ರಮದಲ್ಲಿರುವ ಶಿವರಾಜ್‌ಕುಮಾರ್ ಅವರ ಕೈಯಲ್ಲಿರುವ ಸಿನಿಮಾಗಳ ಸಂಖ್ಯೆ ನೋಡಿದರೆ ಅವರ ವಯಸ್ಸು ಮರೆಯಾಗುತ್ತದೆ. 2023ರಲ್ಲಿ ರಜನಿಕಾಂತ್ ನಟನೆಯ ‘ಜೈಲರ್’ ಸಿನಿಮಾ ಮೂಲಕ ತಮಿಳು ಚಿತ್ರರಂಗಕ್ಕೂ ಕಾಲಿಟ್ಟ ಶಿವರಾಜ್‌ಕುಮಾರ್ ತೆಲುಗಿನಲ್ಲೂ ಒಂದು ಸಿನಿಮಾ ಮಾಡುತ್ತಿದ್ದಾರೆ.

ಸದ್ಯ ಗೀತಾ ಪಿಕ್ಚರ್ಸ್ ಲಾಂಛನದಡಿ ನಿರ್ಮಾಣವಾಗಿರುವ ‘ಭೈರತಿ ರಣಗಲ್’, ಅರ್ಜುನ್ ಜನ್ಯ ನಿರ್ದೇಶನದ ‘45’, ಧನಂಜಯ ಅವರ ಜೊತೆಗೆ ‘ಉತ್ತರಕಾಂಡ’ ಸಿನಿಮಾಗಳು ಶಿವರಾಜ್‌ಕುಮಾರ್ ಕೈಯಲ್ಲಿವೆ. ‘ಉತ್ತರಕಾಂಡ’ದ ‘ಮಾಲೀಕ’ನ ಪರಿಚಯವೂ ಅಭಿಮಾನಿಗಳಿಗೆ ದೊರಕಿದೆ. ‘ಭೈರತಿ ರಣಗಲ್’ ಟೀಸರ್ ಜನ್ಮದಿನದಂದು ಬಿಡುಗಡೆಯಾಗಲಿದೆ. ಈ ಸಿನಿಮಾಗಳು ಕ್ರಮವಾಗಿ ತೆರೆಗೆ ಬರುವ ಸಾಧ್ಯತೆ ಇದೆ. ಶಿವರಾಜ್‌ಕುಮಾರ್ ಅವರ 131ನೇ ಸಿನಿಮಾಗೆ ತೆಲುಗಿನ ಕಾರ್ತಿಕ್ ಅದ್ವೈತ್ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಇದರ ಫಸ್ಟ್‌ಲುಕ್ ಜುಲೈ 12ರ ಸಂಜೆ ಬಿಡುಗಡೆಯಾಗಲಿದೆ. ಸೂರಪ್ಪ ಬಾಬು ನಿರ್ಮಾಣ ಮಾಡುತ್ತಿರುವ, ನಂದಕಿಶೋರ್ ಆ್ಯಕ್ಷನ್ ಕಟ್ ಹೇಳಲಿರುವ ‘ಶಿವಗಣ’ವೂ ಘೋಷಣೆಯಾಗಿದೆ. ಇದರಲ್ಲಿ ಶಿವರಾಜ್‌ಕುಮಾರ್ ಹಾಗೂ ಗಣೇಶ್ ಮುಖ್ಯಭೂಮಿಕೆಯಲ್ಲಿ ಇರಲಿದ್ದಾರೆ. ಇದಾದ ಬಳಿಕ ಶಿವರಾಜ್‌ಕುಮಾರ್ ‘ಟಗರು–2’ ಸಿನಿಮಾ ಮಾಡುವ ಯೋಚನೆಯಲ್ಲಿದ್ದಾರೆ.

₹7 ಲಕ್ಷ ಪಡೆದಿದ್ದ ಆರೋಪಿ: ಸಿಸಿಬಿ ಠಾಣೆಯಲ್ಲಿ ಪ್ರಕರಣ ದಾಖಲು

ಸಿ.ಎಂ ಜಂಟಿ ಕಾರ್ಯದರ್ಶಿ ಹೆಸರಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು / ಬಾಗಲಕೋಟೆ: ಬಾಗಲಕೋಟೆ ಜಿಲ್ಲಾ ಆರೋಗ್ಯಾಧಿಕಾರಿಗೆ (ಡಿಎಚ್‌ಒ) ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ ರಾಮಯ್ಯ ಹೆಸರಿನಲ್ಲಿ ಕರೆ ಮಾಡಿದ್ದ ವ್ಯಕ್ತಿಯೊಬ್ಬ ₹7 ಲಕ್ಷ ವಂಚಿಸಿದ್ದು, ಈ ಸಂಬಂಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

2023 ಆಗಸ್ಟ್‌ನಲ್ಲಿ ಘಟನೆ ನಡೆದಿದ್ದರೂ, ಡಿಎಚ್‌ಒ ಡಾ.ಜಯಶ್ರೀ ಎಮ್ಮಿ ಅವರು, ಜುಲೈ 8ರಂದು (ಸೋಮವಾರ) ಪ್ರಕರಣ ದಾಖಲಿಸಿದ್ದಾರೆ.

‘ಎಫ್‌ಐಆರ್ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಬಾಗಲಕೋಟೆ ಡಿಎಚ್‌ಒ ಆಗಿ ಜಯಶ್ರೀ ಅವರು 2022ರ ಜನವರಿ 14ರಿಂದ ಕೆಲಸ ಮಾಡುತ್ತಿದ್ದಾರೆ. 2023ರ ಆಗಸ್ಟ್ 11ಕ್ಕೆ ಅದೇ ಹುದ್ದೆಗೆ ಡಾ.ರಾಜಕುಮಾರ್ ಯರಗಲ್ ಅವರನ್ನು (ಕಾಂಗ್ರೆಸ್ ಶಾಸಕ ಎಚ್.ವೈ. ಮೇಟಿ ಅಳಿಯ) ವರ್ಗಾವಣೆ ಮಾಡಲಾಗಿತ್ತು. ಜಯಶ್ರೀ ರಜೆಯಲ್ಲಿದ್ದಾಗ ಆಗಸ್ಟ್ 14ರಂದು ರಾಜಕುಮಾರ ಕಚೇರಿಗೆ ಬಂದು ವರದಿ ಮಾಡಿಕೊಂಡಿದ್ದರು. ರಜೆಯಿಂದ ವಾಪಸ್ ಬಂದಿದ್ದ ಜಯಶ್ರೀ ಅಧಿಕಾರ ಹಸ್ತಾಂತರಿಸದೇ ಕರ್ನಾಟಕ ಆಡಳಿತ ನ್ಯಾಯ ಮಂಡಳಿ (ಕೆಎಟಿ) ಮೊರೆ ಹೋಗಿದ್ದರು. ಡಿಎಚ್‌ಒ ಹುದ್ದೆಯಲ್ಲಿ ಜಯಶ್ರೀ ಅವರೇ ಮುಂದುವರೆಯುವಂತೆ ಕೆಎಟಿ ಆಗಸ್ಟ್ 17ರಂದು ಆದೇಶಿಸಿತ್ತು. ಆಗಸ್ಟ್ 22ರಂದು ಹಿರಿಯ ಅಧಿಕಾರಿಗಳು ಭೇಟಿಗೆಂದು ಬೆಂಗಳೂರಿಗೆ ಡಿಎಚ್‌ಒ ಬಂದಿದ್ದರು. ಅವರಿಗೆ 78294 72126/9164006691 ಮೊಬೈಲ್ ಸಂಖ್ಯೆಯಿಂದ ಕರೆ ಮಾಡಿದ್ದ ವ್ಯಕ್ತಿ, ರಾಮಯ್ಯ ಎಂದು ಪರಿಚಯಿಸಿಕೊಂಡಿದ್ದರು. ನಿವೃತ್ತ ಕೆಎಎಸ್ ಅಧಿಕಾರಿ ಆಗಿದ್ದು, ಮುಖ್ಯಮಂತ್ರಿ ಆಪ್ತ ಕಾರ್ಯದರ್ಶಿ ಪರಿಚಯಿಸಿಕೊಂಡು ನೆರವು ನೀಡುವುದಾಗಿ ಹೇಳಿಕೊಂಡಿದ್ದರು’ ಎಂದು ಪೊಲೀಸರು ಹೇಳಿದರು.

‘ರಾಜಕುಮಾರ್ ಅವರು ಹೈಕೋರ್ಟ್‌ಗೆ ಮೊರೆ ಹೋದರೆ ತೊಂದರೆ ಆಗಲಿದೆ’ ಎಂದು ಜಯಶ್ರೀಗೆ ತಿಳಿಸಿದ್ದ ಕರೆ ಮಾಡಿದ ವ್ಯಕ್ತಿ, ಹಣ ನೀಡಿದರೆ ನಿಮ್ಮ ಪರವಾಗಿ ಆದೇಶ ಮಾಡಿಸುವುದಾಗಿ ಆಮಿಷ ಒಡ್ಡಿದ್ದರು. ಅದಾದ ಮೇಲೆ ಜಯಶ್ರೀ ಅವರು ಹಂತಹಂತವಾಗಿ ₹7 ಲಕ್ಷವನ್ನು ಫೋನ್ ಪೇ ಹಾಗೂ ಬ್ಯಾಂಕ್ ಖಾತೆಗಳ ಮೂಲಕ ವರ್ಗಾವಣೆ ಮಾಡಿದ್ದರು. ಕೆಲವು ದಿನಗಳ ಬಳಿಕ ಜಯಶ್ರೀ ಅವರು ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ ರಾಮಯ್ಯ ಅವರನ್ನು ಸಂಪರ್ಕಿಸಿದ್ದರು. ಆಗ ತಾವು ವಂಚನೆಗೆ ಒಳಗಾಗಿರುವುದು ಪತ್ತೆಯಾಗಿತ್ತು’ ಎಂದು ಪೊಲೀಸರು ಹೇಳಿದರು.

ಅಧಿಕಾರ ಹಸ್ತಾಂತರಿಸದೇ ಜಯಶ್ರೀ ಕೆಎಟಿ ಮೊರೆ ಹೋಗಿದ್ದನ್ನು ಗಮನಿಸಿ ವಂಚನೆ ಎಸಗಲಾಗಿದೆ ಎಂದು ಪೊಲೀಸರು ಹೇಳಿದರು. ಈ ಕುರಿತು ಪ್ರತಿಕ್ರಿಯಿಸಲು ಡಾ.ಜಯಶ್ರೀ ಎಮ್ಮಿ ನಿರಾಕರಿಸಿದರು.

ಆಲಮಟ್ಟಿ: 3,500 ಕ್ಯುಸೆಕ್ ನೀರು ಹೊರಕ್ಕೆ

ಆಲಮಟ್ಟಿ: ಆಲಮಟ್ಟಿ ಜಲಾಶಯಕ್ಕೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿರುವ ಕಾರಣ ಮುಂಜಾಗ್ರತಾ ಕ್ರಮವಾಗಿ ಜಲಾಶಯ ಭರ್ತಿಗೂ ಮುನ್ನವೇ ನಾರಾಯಣಪುರ ಜಲಾಶಯಕ್ಕೆ ನೀರು ಬಿಡಲು ಗುರುವಾರದಿಂದ ಆರಂಭಿಸಲಾಗಿದೆ.

‘ಗುರುವಾರ ಮಧ್ಯಾಹ್ನ 12 ರಿಂದ 3,500 ಕ್ಯುಸೆಕ್ ನೀರನ್ನು ಜಲಾಶಯದ ಬಲಭಾಗದ ಆಲಮಟ್ಟಿ ವಿದ್ಯುತ್ ಉತ್ಪಾದನಾ ಘಟಕದ ಮೂಲಕ ನೀರನ್ನು ಹೊರಬಿಡಲಾಗುತ್ತಿದೆ. ರಾತ್ರಿವೇಳೆಗೆ ಒಳಹರಿವು ಹೆಚ್ಚಾದರೆ ಮಾತ್ರ ಹೊರಹರಿವನ್ನು 7,500 ಕ್ಯುಸೆಕ್‌ಗೆ ಹೆಚ್ಚಿಸಲಾಗುವುದು’ ಎಂದು ಆಲಮಟ್ಟಿ ಜಲಾಶಯದ ಮೂಲಗಳು ತಿಳಿಸಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್ *	124.80	104.40	4,917	3,251
ಹಾರಂಗಿ	2,859	2,850.74	2,059	200
ಕಬಿನಿ	2,284.00	2,282.68	5,118	5,000
ಹೇಮಾವತಿ	2,922	2,900.15	6,019	250
ಲಿಂಗನಮಕ್ಕಿ	1,819	1,772.05	13,128	3,422.14
ಸೂಪಾ (ಮೀ)	564	533.62	8,378.90	2,522.50
ಮಾಣಿ	595	576.60	2,124	0
ತುಂಗಭದ್ರಾ	1,633	1,604.12	25,349	205
ಮಲಪ್ರಭಾ	2,079.5	20,53.90	6,780	194
ಘಟಪ್ರಭಾ	2175	2,133.25	7,454	123
ಭದ್ರಾ	186	136.0	6,246	158
ಆಲಮಟ್ಟಿ (ಮೀ)	519.6	517.01	69,492	3,500
ನಾರಾಯಣಪುರ (ಮೀ)	492.25	489.20	200.56	95.56

* ನೆಲಮಟ್ಟದಿಂದ

ಖಾತೆ ವರ್ಗಕ್ಕೆ ನಾಗೇಂದ್ರ ಒತ್ತಡ?


ಬಸನಗೌಡ ದದ್ದಲ್

ಬಿ.ನಾಗೇಂದ್ರ

ಒಂದನೇ ಪುಟದಿಂದ...

ಪದ್ಮನಾಭ ಅವರ ಹೇಳಿಕೆಯನ್ನು ರಿಮಾಂಡ್ ಅರ್ಜಿಯಲ್ಲಿ ಉಲ್ಲೇಖಿಸಿದ್ದ ಎಸ್‌ಐಟಿ, ಪುನಃ ಅವರನ್ನು ಕಸ್ಟಡಿಗೆ ನೀಡುವಂತೆ ನ್ಯಾಯಾಲಯಕ್ಕೆ ಮನವಿ ಮಾಡಿತ್ತು. ನ್ಯಾಯಾಲಯ ಮನವಿಯನ್ನು ಪುರಸ್ಕರಿಸಿತ್ತು. ಅಧಿಕಾರಿಯು ವಿಚಾರಣೆ ವೇಳೆ ನೀಡಿದ್ದ ಹೇಳಿಕೆಯನ್ನು ಆಧರಿಸಿ ನಾಗೇಂದ್ರ ಅವರನ್ನು ತನಿಖೆಗೊಳ-ಪಡಿಸಲು ತನಿಖಾ ತಂಡ ತಯಾರಿ ಮಾಡಿಕೊಂಡಿತ್ತು ಎಂದು ಮೂಲಗಳು ಹೇಳಿವೆ.

‘ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ವಸಂತನಗರ ಶಾಖೆಯಲ್ಲಿ ನಿಗಮಕ್ಕೆ ಸಂಬಂಧಿಸಿದ ಎರಡು ಖಾತೆಗಳಿದ್ದವು. ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ.ಪದ್ಮನಾಭ ಅವರು ಒಂದು ಖಾತೆಯನ್ನು ಸರ್ಕಾರದ ಅನುಮತಿ ಪಡೆಯದೇ ಆರೋಪಿಗಳ ಸೂಚನೆಯಂತೆ ಎಂ.ಜಿ.ರಸ್ತೆ ಶಾಖೆಗೆ ವರ್ಗಾವಣೆ ಮಾಡಿದ್ದರು. ಆ ಖಾತೆಗೆ ಒಟ್ಟು ₹187 ಕೋಟಿ ವರ್ಗಾವಣೆ ಮಾಡಿದ್ದರು. ನಂತರ, ಮಾಜಿ ಸಚಿವ, ಶಾಸಕ ಬಿ.ನಾಗೇಂದ್ರ ಅವರ ಆಪ್ತ ನೆಕ್ಕಂಟಿ ನಾಗರಾಜ್ ಹಾಗೂ ಅವರ ಸಂಬಂಧಿ ನಾಗೇಶ್ವರ ರಾವ್ ಸೇರಿದಂತೆ ಹಲವರು ಹೈದರಾಬಾದ್‌ನ ಬ್ಯಾಂಕ್‌ಗೆ ₹94.73 ಕೋಟಿ ಹಣವನ್ನು ವರ್ಗಾವಣೆ ಮಾಡಿಸಿಕೊಂಡಿದ್ದರು’ ಎಂಬುದು ತನಿಖೆಯಿಂದ ಗೊತ್ತಾಗಿದೆ.

4 ಕಂಪನಿ ಹೆಸರು, ವಿಳಾಸ ಬಳಕೆ

ಬೆಂಗಳೂರಿನ ಕಂಪನಿಗಳ ಹೆಸರು, ವಿಳಾಸ ಬಳಸಿಕೊಂಡು ಆರೋಪಿಗಳು ನಕಲಿ ಖಾತೆ ತೆರೆದು ಹಣ ಜಮೆ ಮಾಡಿದ್ದರು. ನಂತರ, ಆ ಖಾತೆಗಳಿಂದ ಹಣ ಪಡೆದುಕೊಂಡಿದ್ದರು.

- ಬೆಂಗಳೂರಿನ ರಾಮ್ ಎಂಟರ್‌ಪ್ರೈಸೆಸ್ ₹5.7 ಕೋಟಿ
- ಜಿ.ಎನ್.ಇಂಡಸ್ಟ್ರೀಸ್ ₹4.42 ಕೋಟಿ
- ಸುಜಲಾ ಎಂಟರ್‌ಪ್ರೈಸೆಸ್ ₹5.63 ಕೋಟಿ
- ನೊವೆಲ್ ಸೆಕ್ಯುರಿಟಿ ಸರ್ವಿಸ್ ₹4 ಕೋಟಿ

ದದ್ದಲ್ ಆಪ್ತಗೆ ₹55 ಲಕ್ಷ, ನಾಗೇಂದ್ರ ಆಪ್ತಗೆ ₹25 ಲಕ್ಷ

ಒಂದನೇ ಪುಟದಿಂದ...

‘ಹೈದರಾಬಾದ್‌ನಿಂದ ಏಪ್ರಿಲ್ ಕೊನೆ ವಾರದಲ್ಲಿ ಬಂದಿದ್ದ ಮಧ್ಯವರ್ತಿ ಸತ್ಯನಾರಾಯಣ ವರ್ಮ, ಎರಡು ಬ್ಯಾಗ್‌ನಲ್ಲಿ ₹1.20 ಕೋಟಿ ತಂದು ಪದ್ಮನಾಭಗೆ ಕೊಟ್ಟಿದ್ದರು. ಮಾಜಿ ಲೆಕ್ಕಾಧಿಕಾರಿ ಪರುಶುರಾಮ್‌ಗೂ ₹25 ಲಕ್ಷ ಸಂದಾಯ ಆಗಿತ್ತು’ ಎಂಬುದು ತನಿಖೆಯಿಂದ ಗೊತ್ತಾಗಿದೆ.

ಲೋಕಾಯುಕ್ತ ಬಲೆಗೆ ಕೋಟಿ ಕುಳ

ಒಂದನೇ ಪುಟದಿಂದ...

ದಾವಣಗೆರೆಯ ಕೆಪಿಟಿಸಿಎಲ್ ಜಾಗೃತ ದಳದ ಕಾರ್ಯನಿರ್ವಾಹಕ ಎಂಜಿನಿಯರ್ ಡಿ.ಎಚ್. ಉಮೇಶ್ ಬಳಿ ತಲಾ ನಾಲ್ಕು ಮನೆ ಮತ್ತು ನಿವೇಶನಗಳಿವೆ. ಅಲ್ಲಿಯೇ ಬೆಸ್ಕಾಂ ಜಾಗೃತ ದಳದಲ್ಲಿ ಸಹಾಯಕ ಕಾರ್ಯ-ನಿರ್ವಾಹಕ ಎಂಜಿನಿಯರ್ ಹುದ್ದೆಯಲ್ಲಿ-ರುವ ಎಂ.ಎಸ್. ಪ್ರಭಾಕರ್ ಮನೆಯಲ್ಲಿ ₹3 ಲಕ್ಷ ನಗದು ಪತ್ತೆಯಾಗಿದೆ. ತಲಾ ಎರಡು ಮನೆ, ನಿವೇಶನಗಳೂ ಇವೆ.

ರವೀಂದ್ರ ಬಳಿ 49 ಎಕರೆ 16 ಗುಂಟೆ ಕೃಷಿ ಜಮೀನು, ಆರು ಮನೆ, ನಾಲ್ಕು ನಿವೇಶನಗಳಿರುವುದು ಪತ್ತೆಯಾಗಿದೆ. ₹1 ಕೋಟಿ ಮೌಲ್ಯದ ಚಿನ್ನಾಭರಣಗಳೂ ಇವೆ. ಕೆ.ಜಿ. ಜಗದೀಶ್ ಏಳು ಮನೆಗಳು, ಐದು ನಿವೇಶನಗಳು, 36 ಎಕರೆ 20 ಗುಂಟೆ ಕೃಷಿ ಜಮೀನು ಹೊಂದಿರುವುದು ಪತ್ತೆಯಾಗಿದೆ.

ಶಿವರಾಜು ಬಳಿ ತಲಾ ಮೂರು ನಿವೇಶನ, ಮನೆ, 10 ಎಕರೆ ಕೃಷಿ ಜಮೀನಿನ ಜತೆ ಕ್ರಷರ್ ಉದ್ಯಮ ಇರುವುದನ್ನೂ ಲೋಕಾಯುಕ್ತ ಪೊಲೀಸರು ಪತ್ತೆಹಚ್ಚಿದ್ದಾರೆ. ಮನೆಯಲ್ಲಿ ₹6 ಲಕ್ಷ ನಗದು ಸಿಕ್ಕಿದೆ.

ತಹಶೀಲ್ದಾರ್ ವಿಜಯಣ್ಣ ಬಳಿ ಒಂಬತ್ತು ಮನೆಗಳಿದ್ದರೆ, 13 ಎಕರೆ ಕೃಷಿ ಜಮೀನೂ ಇದೆ. ಮನೆಯಲ್ಲಿ ₹2.42 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ. ಮಹೇಶ್ ಬಳಿ 11 ಎಕರೆ 20 ಗುಂಟೆ ಜಮೀನು ಮತ್ತು ತಲಾ ಮೂರು ಮನೆ, ನಿವೇಶನ ಪತ್ತೆಯಾಗಿದೆ.

ಬೆಳಗಾವಿಯ ಪಂಚಾಯತ್ ರಾಜ್ ಎಂಜಿನಿಯರಿಂಗ್ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ದುರದುಂಡೇಶ್ವರ ಎಂ. ಬನ್ನೂರು ಬಳಿ ಮೂರು ಮನೆಗಳಿವೆ. ಮನೆಯಲ್ಲಿ ₹1.84 ಲಕ್ಷ ನಗದು ಸಿಕ್ಕಿದೆ.

ಎಲ್ಲ ಅಧಿಕಾರಿಗಳ ವಿರುದ್ಧ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದಡಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಲಾಗಿದೆ. ಲೋಕಾಯುಕ್ತ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್ ಮಾರ್ಗದರ್ಶ-ನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ 100 ಅಧಿಕಾರಿಗಳು, ಸಿಬ್ಬಂದಿ ಪಾಲ್ಗೊಂಡಿದ್ದರು.

ಶೇಖರ್‌ಗೌಡ 83 ಎಕರೆ ಜಮೀನು ಒಡೆಯ: ಧಾರವಾಡ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಶೇಖರ್ ಗೌಡ ಬಳಿ ₹7.88 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆಯಾಗಿದೆ. ಇವರು ಬರೋಬ್ಬರಿ 83 ಎಕರೆ ಜಮೀನಿನ ಒಡೆಯ. ಐದು ನಿವೇಶನ, ನಾಲ್ಕು ಮನೆಗಳೂ ಇವೆ.

ಅಧಿಕಾರಿಗಳು ಮತ್ತು ಅಕ್ರಮ ಆಸ್ತಿಯ ವಿವರ

ಅಧಿಕಾರಿ	ಹುದ್ದೆ	ಆಸ್ತಿ ಮೌಲ್ಯ
ವಿಜಯಣ್ಣ	ತಹಶೀಲ್ದಾರ್, ಹಾರೋಹಳ್ಳಿ, ರಾಮನಗರ	₹3.55 ಕೋಟಿ
ಎಂ.ರವೀಂದ್ರ	ನಿವೃತ್ತ ಮುಖ್ಯ ಎಂಜಿನಿಯರ್, ಸಣ್ಣ ನೀರಾವರಿ ಇಲಾಖೆ, ಬೆಂಗಳೂರು	₹5.75 ಕೋಟಿ
ಮಹೇಶ್ ಕೆ.	ಸೂಪರಿಂಟೆಂಡಿಂಗ್ ಎಂಜಿನಿಯರ್, ಜಲ ಸಂಪನ್ಮೂಲ ಇಲಾಖೆ	₹4.95 ಕೋಟಿ
ಕೆ.ಜಿ.ಜಗದೀಶ	ಸೂಪರಿಂಟೆಂಡಿಂಗ್ ಎಂಜಿನಿಯರ್, ಲೋಕೋಪಯೋಗಿ ಇಲಾಖೆ	₹5.26 ಕೋಟಿ
ಶೇಖರ್ ಗೌಡ	ಯೋಜನಾ ನಿರ್ದೇಶಕ, ನಿರ್ಮಿತಿ ಕೇಂದ್ರ, ಬೆಳಗಾವಿ	₹7.88 ಕೋಟಿ
ಶಿವರಾಜು ಎಸ್.	ನಿವೃತ್ತ ಕಾರ್ಯನಿರ್ವಾಹಕ ಎಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಪೂರೈಕೆ ಇಲಾಖೆ	₹5.08 ಕೋಟಿ
ಬಸವರಾಜ ಮಗಿ	ಕಂದಾಯ ಅಧಿಕಾರಿ, ಮಹದೇವಪುರ, ಬಿಬಿಎಂಪಿ	₹3.70 ಕೋಟಿ
ಡಿ.ಎಚ್.ಉಮೇಶ್	ಕಾರ್ಯನಿರ್ವಾಹಕ ಎಂಜಿನಿಯರ್, ಕೆಪಿಟಿಸಿಎಲ್, ಚಿಕ್ಕಮಗಳೂರು	₹5.38 ಕೋಟಿ
ಎಂ.ಎಸ್.ಪ್ರಭಾಕರ್	ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಬೆಸ್ಕಾಂ ಜಾಗೃತ ದಳ, ದಾವಣಗೆರೆ	₹2.01 ಕೋಟಿ
ಮಹದೇವ್ ಬನ್ನೂರ್	ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಪಂಚಾಯತ್ ರಾಜ್, ಬೆಳಗಾವಿ	₹1.30 ಕೋಟಿ
ಎನ್.ಎಂ.ಜಗದೀಶ್	ಗ್ರೇಡ್–1 ಕಾರ್ಯದರ್ಶಿ, ದಾಸನಪುರ ಗ್ರಾಮ ಪಂಚಾಯತಿ, ಬೆಂಗಳೂರು	₹3.22 ಕೋಟಿ

‘ಒಬಿಸಿ ಎಂಬ ಕಾರಣಕ್ಕೆ ಷಡ್ಯಂತ್ರ’

ಒಂದನೇ ಪುಟದಿಂದ....

‘ಮುಡಾ ಹಗರಣದ ಬಗ್ಗೆ ಇಬ್ಬರು ಐಎಎಸ್ ಅಧಿಕಾರಿಗಳ ನೇತೃತ್ವದ ಸಮಿತಿಯಿಂದ ತನಿಖೆ ನಡೆಯುತ್ತಿದೆ. ವರದಿ ಬಳಿಕ ಕಠಿಣ ಕ್ರಮ ಕೈಗೊಳ್ಳುತ್ತೇನೆ. ನಮ್ಮ ಕಾಲದಲ್ಲೂ ತಪ್ಪುಗಳಾಗಿವೆ. ಆದರೆ, ಬಿಜೆಪಿ ಕಾಲದಲ್ಲೇ ಹೆಚ್ಚು ತಪ್ಪುಗಳಾಗಿವೆ. ಶೇ 50:50 ಅನುಪಾತದಲ್ಲಿ ನಿವೇಶನ ಹಂಚಿಕೆ ವಿಷಯವನ್ನು ಮಧ್ಯವರ್ತಿಗಳು ಹಾಗೂ ಪ್ರಾಧಿಕಾರಗಳ ಆಯುಕ್ತರಾದಿ-ಯಾಗಿ ಯಾರೂ ದುರುಪಯೋಗ ಮಾಡಿಕೊಳ್ಳದಂತೆ ಸರಿಪಡಿಸುತ್ತೇವೆ’ ಎಂದರು.

‘2021ರಲ್ಲಿ ಬಿಜೆಪಿ ಸರ್ಕಾರವೇ ಇತ್ತಲ್ಲ. ಆ ಕಾಲದಲ್ಲಿ ಕೊಟ್ಟರೆ, ಮುಡಾದವರು ಆಗ ತಪ್ಪು ಮಾಡಿದ್ದರೆ ಜವಾಬ್ದಾರರು ಯಾರು’ ಎಂದು ಕೇಳಿದರು.

‘ನಿವೇಶನ ವಾಪಸ್ ಪಡೆದುಕೊಳ್ಳುವುದೇ ಆದರೆ, ಭೂಸ್ವಾಧೀನ ಕಾಯ್ದೆ ಪ್ರಕಾರ ಜಮೀನಿನ ಮೌಲ್ಯದ ಮೂರು ಪಟ್ಟು ಪರಿಹಾರ ಕೊಡಬೇಕಲ್ಲವೇ? ಅದರ ಪ್ರಕಾರ ಜಮೀನಿನ ಬೆಲೆ ₹57 ಕೋಟಿ, ಬಡ್ಡಿ ಸೇರಿದರೆ ಒಟ್ಟು ₹62 ಕೋಟಿ ಆಗುತ್ತದೆ. ಅದನ್ನು ಮುಡಾ ಕೊಡಬೇಕಾಗುತ್ತದೆ’ ಎಂದರು.

ವಾಲ್ಮೀಕಿ ನಿಗಮ: ವರದಿ ಬಂದಿಲ್ಲ–ಸಿ.ಎಂ

‘ವಾಲ್ಮೀಕಿ ನಿಗಮದಲ್ಲಿ ಅಕ್ರಮವಾಗಿ ಹಣ ವರ್ಗಾವಣೆ ವಿಚಾರದಲ್ಲಿ ನೈತಿಕ ಹೊಣೆ ಹೊತ್ತು ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು’ ಎಂದು ಶಾಸಕ ಜಿ.ಟಿ. ದೇವೇಗೌಡರ ಒತ್ತಾಯಕ್ಕೆ ಕೆಂಡಾಮಂಡಲವಾದ ಮುಖ್ಯಮಂತ್ರಿ, ‘ಬ್ಯಾಂಕ್‌ನಲ್ಲೂ ಅವ್ಯವಹಾರ ಆಗಿದೆ. ಅದಕ್ಕೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಪ್ರಧಾನಿ ನರೇಂದ್ರ ಮೋದಿ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕಲ್ಲವೇ?’ ಎಂದು ತಿರುಗೇಟು ನೀಡಿದರು.

‘ಸರ್ಕಾರಿ ಖಜಾನೆಯಿಂದಲೇ ₹187 ಕೋಟಿ ಹಣ ವರ್ಗಾವಣೆ ಆಗಿರುವ ಬಗ್ಗೆ ಅಧಿಕೃತವಾದ ಯಾವ ವರದಿಯೂ ಬಂದಿಲ್ಲ. ಎಲ್ಲವೂ ತನಿಖಾ ಹಂತದಲ್ಲೇ ಇವೆ. ಖಜಾನೆಯಿಂದ ವರ್ಗಾವಣೆ ಆಗುವ ಹಣದ ಎಲ್ಲಾ ವಿಚಾರವೂ ನನ್ನ ಗಮನಕ್ಕೆ ಬರುವುದಿಲ್ಲ. ಮೂರು ಹಂತದಲ್ಲಿ ತನಿಖೆಯಾಗುತ್ತಿದೆ. ವರದಿಗಳು ಬಂದ ನಂತರ ತಪ್ಪಿಸ್ಥರ ಮೇಲೆ ಕ್ರಮ ಕೈಗೊಳ್ಳುತ್ತೇವೆ’ ಎಂದರು.

ತಮಿಳುನಾಡಿಗೆ ನಿತ್ಯ 1 ಟಿಎಂಸಿ ಅಡಿ ನೀರು ಹರಿಸಲು ಶಿಫಾರಸು

ಒಂದನೇ ಪುಟದಿಂದ...

ಜುಲೈ 31ರ ವರೆಗೆ ಕರ್ನಾಟಕವು ಒಟ್ಟು 20 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಡಬೇಕಿದೆ.

ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಜಲಾಶಯಗಳಲ್ಲಿ ನೀರಿನ ಒಟ್ಟು ಸಂಗ್ರಹಣ ಪ್ರಮಾಣ 114 ಟಿಎಂಸಿ ಅಡಿ. ಕಳೆದ ವರ್ಷ ಇದೇ ಅವಧಿಯಲ್ಲಿ 45 ಟಿಎಂಸಿ ನೀರಿತ್ತು. ಈಗ 70.90 ಟಿಎಂಸಿ ಅಡಿ ನೀರು ಲಭ್ಯವಿದೆ. ಈ ಜಲಾಶಯಗಳಿಗೆ ಗುರುವಾರ ಒಳಹರಿವಿನ ಪ್ರಮಾಣ 18,892 ಕ್ಯುಸೆಕ್ ಹಾಗೂ ಹೊರಹರಿವು 6,972 ಕ್ಯುಸೆಕ್.

ಕರ್ನಾಟಕದ ವಾದವೇನು?: ರಾಜ್ಯದ ನಾಲ್ಕು ಜಲಾಶಯಗಳಿಗೆ ಜೂನ್ 1ರಿಂದ ಜುಲೈ 9ರವರೆಗೆ 41.65 ಟಿಎಂಸಿ ಅಡಿ ನೀರು ಹರಿದು ಬಂದಿದೆ. ಆದರೆ, ಒಳಹರಿವಿನ ಕೊರತೆ ಶೇ 28.71ರಷ್ಟಿದೆ. ಸದ್ಯ ಈ ಜಲಾಶಯಗಳಲ್ಲಿ 58.66 ಟಿಎಂಸಿ ಅಡಿ ನೀರಿದೆ. ಮೆಟ್ಟೂರಿನಿಂದ 4.90 ಟಿಎಂಸಿ ಅಡಿ ಮತ್ತು ಭವಾನಿಯಿಂದ 0.61 ಟಿಎಂಸಿ ಅಡಿ ನೀರನ್ನು (ಒಟ್ಟು 5.542 ಟಿಎಂಸಿ ಅಡಿ) ನದಿಗೆ ಹರಿಸಲಾಗಿದ್ದು, ತಮಿಳುನಾಡಿನ ಮೂರು ಜಲಾಶಯಗಳಲ್ಲಿ 24.70 ಟಿಎಂಸಿ ಅಡಿ ನೀರಿದೆ. ನೀರು ಹರಿಸುವುದಕ್ಕೆ ಸಂಬಂಧಿಸಿ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಮಿತಿಯು ಜುಲೈ 25ರವರೆಗೆ ಕಾಯುವುದು ಸೂಕ್ತ. ಬಳಿಕ, ವಸ್ತುಸ್ಥಿತಿಯನ್ನು ಪರಿಶೀಲಿಸಿ ಜಲಾಶಯಗಳಿಂದ ನೀರು ಬಿಡುವ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಬಹುದು.

ತಮಿಳುನಾಡು ಬೇಡಿಕೆಯೇನು?: ಹಿಂದಿನ ಜಲ ವರ್ಷದಲ್ಲಿ ಫೆಬ್ರುವರಿಯಿಂದ ಮೇ ತಿಂಗಳವರೆಗೆ ಕರ್ನಾಟಕವು ಪರಿಸರದ ಹರಿವಿನ ನೀರನ್ನೂ ಹರಿಸಿಲ್ಲ. ಪ್ರಸಕ್ತ ಜಲ ವರ್ಷದಲ್ಲಿ ಪರಿಸ್ಥಿತಿ ಸಾಮಾನ್ಯವಾಗಿದೆ. ಕರ್ನಾಟಕದ ಜಲಾಶಯಗಳಲ್ಲಿ ನೀರಿದೆ. ಹಾಗಾಗಿ, ಸುಪ್ರೀಂ ಕೋರ್ಟ್ ಮಾರ್ಪಡಿಸಿದ ಕಾವೇರಿ ಜಲವಿವಾದ ನ್ಯಾಯಮಂಡಳಿ ಆದೇಶದ ಪ್ರಕಾರ ಕರ್ನಾಟಕವು ಬಿಳಿಗುಂಡ್ಲುವಿನಲ್ಲಿ ನಿಗದಿತ ಹರಿವನ್ನು ಖಚಿತಪಡಿಸಿಕೊಳ್ಳಬೇಕು.

Godrej | LOCKS & ARCHITECTURAL FITTINGS AND SYSTEMS
FOR A SAFER, SMARTER LIVING EXPERIENCE.
REQUIRE DISTRIBUTORS / DEALERS
LOOKING TO EXPAND ITS DISTRIBUTION NETWORK IN KARNATAKA.
The applicant must have the following strengths;
• Good Financials
• Warehouse and delivery infrastructure
• Experience in distribution with other well-known brands associated with hardware / FMCD/ electrical/ plumbing/ plywood/ paints / adhesives etc.
• Good reputation in the market
• Computerized and online reporting with ready infrastructure
Please send your details at
ayan@godrej.com or call at 7829398398

ಸಂಯುಕ್ತ ಕಿಸಾನ್ ಮೋರ್ಚಾ ಎಚ್ಚರಿಕೆ; ವಿಧಾನಸಭಾ ಚುನಾವಣೆ ನಡೆಯುವ ರಾಜ್ಯಗಳಲ್ಲಿ ಹೋರಾಟಕ್ಕೆ ಆದ್ಯತೆ

ಎಂಎಸ್‌ಪಿ, ಸಾಲಮನ್ನಾಗೆ ಮತ್ತೆ ಹೋರಾಟ

ನವದೆಹಲಿ (ಪಿಟಿಐ): ಕೃಷಿ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನು ಖಾತರಿ, ಸಾಲಮನ್ನಾ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ರೈತ ಸಂಘಟನೆಗಳ ಒಕ್ಕೂಟ 'ಸಂಯುಕ್ತ ಕಿಸಾನ್ ಮೋರ್ಚಾ'ವು (ಎಸ್‌ಕೆಎಂ) ಮತ್ತೆ ಆಂದೋಲನ ನಡೆಸಲು ನಿರ್ಧರಿಸಲಾಗಿದೆ ಎಂದು ಗುರುವಾರ ಘೋಷಿಸಿದೆ. ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ, ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ಮನವಿ ಪತ್ರ ಸಲ್ಲಿಸಲು ನಿರ್ಧರಿಸಿದೆ.

2020-21ರಲ್ಲಿ ರೈತ ಹೋರಾಟವನ್ನು ಮುನ್ನಡೆಸಿದ್ದ ಎಸ್‌ಕೆಎಂ, ತನ್ನ ಸರ್ವಸದಸ್ಯರ ಸಭೆ ನಡೆಸಿದ ಮರುದಿನವೇ ಈ ಘೋಷಣೆ ಮಾಡಿದೆ. ಈ ಹಿಂದಿನಂತೆ ಆಂದೋಲನದ ಭಾಗವಾಗಿ ರಾಜಧಾನಿ ದೆಹಲಿಗೆ ಮೆರವಣಿಗೆ ನಡೆಸುವ ಸಾಧ್ಯತೆ ಇಲ್ಲ ಎಂದು ಸುಳಿವು ನೀಡಿದೆ.

'ವಿವಿಧ ಬೇಡಿಕೆ ಈಡೇರಿಸುವ ಸಂಬಂಧ ಕೇಂದ್ರ ಸರ್ಕಾರದ ಕೃಷಿ

ಇಲಾಖೆಯ ಕಾರ್ಯದರ್ಶಿಯು 2021ರ ಡಿಸೆಂಬರ್ 9ರಂದು ಎಸ್‌ಕೆಎಂ ಜೊತೆ ಮಾಡಿಕೊಂಡ ಒಪ್ಪಂದವನ್ನು ಜಾರಿಗೊಳಿಸಬೇಕು. ರೈತರ ದೈನಂದಿನ ಜೀವನಕ್ಕೆ ಎದುರಾಗಿರುವ ಹಲವು ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕು ಎಂಬುದು ನಮ್ಮ ಬೇಡಿಕೆಯಲ್ಲಿ ಒಳಗೊಂಡಿದೆ' ಎಂದು ಎಸ್‌ಕೆಎಂ ತಿಳಿಸಿದೆ.

'ಪ್ರಧಾನಿ ನರೇಂದ್ರ ಮೋದಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಲೋಕಸಭಾ, ರಾಜ್ಯಸಭಾ ಸದಸ್ಯರಿಗೂ ಬೇಡಿಕೆಗಳ ಮನವಿ ಪತ್ರವನ್ನು ಜುಲೈ 16ರಿಂದ 18ರ ಒಳಗಾಗಿ ಸಲ್ಲಿಸಲು ಸಮಯಾಕಾಶ ಕೋರಿದ್ದೇವೆ' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ರೈತರ ಪ್ರಮುಖ ಬೇಡಿಕೆಗಳು

- ಕೃಷಿ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ
- ವಿಶ್ವ ವ್ಯಾಪಾರ ಸಂಘಟನೆಯಿಂದ (ಡಬ್ಲ್ಯುಟಿಒ) ಭಾರತ ಹೊರಬರಬೇಕು
- ಕೃಷಿ ಕ್ಷೇತ್ರಕ್ಕೆ ಬಹುರಾಷ್ಟ್ರೀಯ ಕಂಪನಿಗಳು ಪ್ರವೇಶಿಸುವುದನ್ನು ತಡೆಯಬೇಕು
- ವಿದ್ಯುತ್ ಕ್ಷೇತ್ರದ ಖಾಸಗೀಕರಣ ಕೈ ಬಿಡಬೇಕು
- ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್ ಪ್ರಸ್ತಾವ ಹಿಂದಕ್ಕೆ ಪಡೆಯಬೇಕು
- ಆಂದೋಲನದಲ್ಲಿ ಮೃತಪಟ್ಟ ರೈತ ಕುಟುಂಬಗಳಿಗೆ ಪರಿಹಾರ
- ರೈತರ ಮೇಲೆ ಹಾಕಿದ ಎಲ್ಲ ಪ್ರಕರಣಗಳು ಹಿಂದಕ್ಕೆ ಪಡೆಯಬೇಕು
- ಎಲ್ಲ ಬೆಳೆಗಳಿಗೂ ಸಮಗ್ರ ವಿಮಾ ರಕ್ಷಣೆ
- ಕೃಷಿಕರು, ಕೃಷಿ ಕಾರ್ಮಿಕರಿಗೆ ಮಾಸಿಕ ₹10 ಸಾವಿರ ಪಿಂಚಣಿ
- 2013ರ ಭೂಸ್ವಾಧೀನ ಕಾಯ್ದೆ ಕಟ್ಟುನಿಟ್ಟಾಗಿ ಜಾರಿ
- ಕೃಷಿ ಕ್ಷೇತ್ರಕ್ಕೆ ಪ್ರತ್ಯೇಕ ಬಜೆಟ್ ಮಂಡನೆ
- ಕೇಂದ್ರದ ಸಹಕಾರಿ ಸಚಿವಾಲಯ ರದ್ದುಗೊಳಿಸಲು ಆಗ್ರಹ
- ಕೃಷಿ ಉತ್ಪನ್ನಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ

ಸ್ಮಾರಕ ನಿರ್ಮಿಸಿ, ಪರಿಹಾರ ನೀಡಿ: ದೆಹಲಿಯ ಸಿಂಘು ಮತ್ತು ಟಿಕ್ರಿ ಗಡಿಯಲ್ಲಿ 2020-21ರಲ್ಲಿ ನಡೆದ ಆಂದೋಲನದ ವೇಳೆ ಮೃತರಾದ ರೈತರ ಗೌರವಾರ್ಥ ಸ್ಮಾರಕ ನಿರ್ಮಾಣ, 2021ರಲ್ಲಿ ಉತ್ತರ ಪ್ರದೇಶದ ಲಖೀಂಪುರ ಖೀರಿ ಹಿಂಸಾಚಾರದಲ್ಲಿ ಮೃತಪಟ್ಟ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಎಸ್‌ಕೆಎಂ ಒತ್ತಾಯಿಸಿದೆ.

ದೇಶದಾದ್ಯಂತ ಪ್ರತಿಭಟನೆ: ಈ ಬಾರಿಯೂ ಆಂದೋಲನವು ದೆಹಲಿಗೆ ಮೆರವಣಿಗೆ ತೆರಳಲಿದೆಯಾ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಎಸ್‌ಕೆಎಂ ಮುಖಂಡರು, 'ಈ ಬಾರಿ ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದೇವೆ. ವಿಧಾನಸಭಾ ಚುನಾವಣೆ ಹತ್ತಿರದಲ್ಲಿರುವ ಮಹಾರಾಷ್ಟ್ರ, ಜಾರ್ಖಂಡ್, ಜಮ್ಮು ಮತ್ತು ಕಾಶ್ಮೀರ, ಹರಿಯಾಣ ರಾಜ್ಯಗಳಲ್ಲಿ ಹೆಚ್ಚಿನ ಆದ್ಯತೆ ನೀಡಿ ಹೋರಾಟ ನಡೆಸಲಾಗುವುದು. ಈ ರಾಜ್ಯಗಳಲ್ಲಿ ಬೇಡಿಕೆ ಸಂಬಂಧ ರೈತರ ಪ್ರತ್ಯೇಕ ಸಭೆ ಕರೆದು, ಬಿಜೆಪಿಯನ್ನು ಚುನಾವಣೆಯಲ್ಲಿ ಶಿಕ್ಷಿಸುವಂತೆ ಮನವಿ ಮಾಡಲಾಗುವುದು' ಎಂದರು.

'ಪ್ರತಿ ಬಾರಿ ಕೂಡ ಅದೇ ಮಾದರಿಯ ಪ್ರತಿಭಟನೆಯನ್ನು ಬಳಸಬೇಕೆಂದಿಲ್ಲ. ನಾವು ಈ ಸಲ ದೇಶದಾದ್ಯಂತ ಪ್ರತಿಭಟನೆ ನಡೆಸಲಿದ್ದೇವೆ' ಎಂದು ಸಭೆಯಲ್ಲಿ ಭಾಗವಹಿಸಿದ್ದ ಆಲ್ ಇಂಡಿಯಾ ಕಿಶಾನ್ ಸಭಾದ ಹನ್ನನ್ ಮುಲ್ಲಾ ತಿಳಿಸಿದರು.

ಬಿಜೆಪಿಗೆ 159 ಕ್ಷೇತ್ರಗಳಲ್ಲಿ ಹಿನ್ನಡೆ: ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ವಿವಿಧ ರಾಜ್ಯಗಳ 159 ಗ್ರಾಮೀಣ ಕ್ಷೇತ್ರಗಳಲ್ಲಿ ರೈತರ ಹೋರಾಟದಿಂದಲೇ ಬಿಜೆಪಿ ಸೋಲು ಕಾಣುವಂತಾಯಿತು ಎಂದು ಎಸ್‌ಕೆಎಂ ಮುಖಂಡರು ತಿಳಿಸಿದರು.

ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ರಾಜಸ್ಥಾನ ಹಾಗೂ ಮಹಾರಾಷ್ಟ್ರದ 38 ಗ್ರಾಮೀಣ ಕ್ಷೇತ್ರದಲ್ಲಿ ಬಿಜೆಪಿ ಸೋಲುಂಡಿದೆ. ಕೇಂದ್ರ ಸಚಿವರಾಗಿದ್ದ, ಉತ್ತರಪ್ರದೇಶದ ಲಖೀಂಪುರ ಖೀರಿಯಿಂದ ಸ್ಪರ್ಧಿಸಿದ್ದ ಅಜಯ್ ಮಿಶ್ರಾ, ಕುಂತಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕೃಷಿ ಸಚಿವ ಅರ್ಜುನ್ ಮುಂಡಾ ಕೂಡ ರೈತರ ಹೋರಾಟದಿಂದಲೇ ಸೋತಿದ್ದಾರೆ' ಎಂದರು. 2021ರ ಅಕ್ಟೋಬರ್ 3ರಂದು ಲಖೀಂಪುರ ಖೀರಿಯಲ್ಲಿ ಪ್ರತಿಭಟಿಸುತ್ತಿದ್ದ ರೈತರ ಮೇಲೆ ಬಿಜೆಪಿ ಕಾರ್ಯಕರ್ತರು ದಾಳಿ ನಡೆಸಿದ್ದರು, ಆಗಿನ ಸಂಸದ ಅಜಯ್ ಮಿಶ್ರಾ ಮಗ ಆಶೀಶ್ ಮಿಶ್ರಾ ಎಸ್‌ಯುವಿ ಹರಿಸಿದ್ದರಿಂದ ನಾಲ್ವರು ರೈತರು ಸೇರಿದಂತೆ 8 ಮಂದಿ ಮೃತಪಟ್ಟಿದ್ದರು.

ದೇಶದಾದ್ಯಂತ ಆ.9ರ 'ಕ್ವಿಟ್ ಇಂಡಿಯಾ ದಿನ'ದಂದು 'ಕಾರ್ಪೊರೇಟ್ ಕ್ವಿಟ್ ಇಂಡಿಯಾ ದಿನ'ವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಸಂಘಟನೆ ತಿಳಿಸಿದೆ.

'ಚಾಲನೆ: ಮದ್ಯ ಸೇವಿಸಿದ್ದ ಮಿಹಿರ್'

ಮುಂಬೈ (ಪಿಟಿಐ): 'ಬಿಎಂಡಬ್ಲ್ಯು ಕಾರು ಅಪಘಾತದ ವೇಳೆ ಕಾರು ಚಲಾಯಿಸುತ್ತಿದ್ದ ಪ್ರಕರಣದ ಪ್ರಮುಖ ಆರೋಪಿ ಮಿಹಿರ್ ಶಾ ಅವರು ಮದ್ಯ ಕುಡಿದಿದ್ದರು' ಎಂದು ಮುಂಬೈ ಪೊಲೀಸರು ಗುರುವಾರ ಮಾಹಿತಿ ನೀಡಿದ್ದಾರೆ.

ಪೊಲೀಸರ ತನಿಖಾ ತಂಡವು ಅಪಘಾತದ ದೃಶ್ಯಾವಳಿಯನ್ನು ಗುರುವಾರ ನಸುಕಿನಲ್ಲಿ ಮರುಸೃಷ್ಟಿ ಮಾಡಿತು. 'ಅಪಘಾತ ಮತ್ತು ಬಳಿಕ ನಡೆದ ಘಟನಾವಳಿಗಳ ಕುರಿತು ಮಿಹಿರ್ ಶಾ ಹಾಗೂ ಅವರ ಕಾರು ಚಾಲಕ ರಾಜ್‌ರಿಷಿ ಬಿದಾವತ್ ಅವರಿಗೆ ಪ್ರಶ್ನೆಗಳನ್ನೂ ಕೇಳಲಾಯಿತು' ಎಂದರು.

ಮಿಹಿರ್ ಶಾ, ಅವರ ತಂದೆ ಶಿವಸೇನಾ ನಾಯಕ ರಾಜೇಶ್ ಶಾ ಹಾಗೂ ಇವರ ಕಾರು ಚಾಲಕ ಬಿದಾವತ್ ಅವರನ್ನು ಈ ಪ್ರಕರಣದಲ್ಲಿ ಆರೋಪಿಗಳನ್ನಾಗಿಸಲಾಗಿದೆ. ಇವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 105 (ಉದ್ದೇಶಪೂರ್ವಕವಲ್ಲದ ಹತ್ಯೆ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ನ್ಯಾಯಾಂಗ ಬಂಧನಕ್ಕೆ: ಕಾರು ಚಾಲಕ ಬಿದಾವತ್ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ನೀಡಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಆದೇಶ ನೀಡಿದೆ. ಬಿದಾವತ್ ಅವರ ಪೊಲೀಸ್ ಕಸ್ಟಡಿ ಅವಧಿಯು ಗುರುವಾರಕ್ಕೆ ಮುಕ್ತಾಯವಾಗಿತ್ತು. 'ಪ್ರಕರಣದ ತನಿಖೆಯು ಪ್ರಗತಿಯಲ್ಲಿದೆ. ಬಿದಾವತ್ ಅವರನ್ನು ತಮ್ಮ ವಶಕ್ಕೆ ನೀಡಿ' ಎಂದು ಪೊಲೀಸರು ಮನವಿ ಮಾಡಿದರು. ಆದರೆ, ನ್ಯಾಯಾಲಯವು ಬಿದಾವತ್ ಅವರನ್ನು ನ್ಯಾಯಾಂಗ ಬಂಧನಕ್ಕೆ ನೀಡಿತು.

ಕೇಂದ್ರ ಮತ್ತು ಎನ್‌ಟಿಎಯಿಂದ ಸುಪ್ರೀಂ ಕೋರ್ಟ್‌ಗೆ ಹೆಚ್ಚುವರಿ ಪ್ರಮಾಣಪತ್ರ ಸಲ್ಲಿಕೆ

ನೀಟ್– ಯುಜಿ: ವಿಚಾರಣೆ 18ಕ್ಕೆ ಮುಂದೂಡಿಕೆ

ನವದೆಹಲಿ (ಪಿಟಿಐ): ಪರೀಕ್ಷಾ ಅಕ್ರಮಗಳ ಕಾರಣ ಈ ವರ್ಷದ 'ನೀಟ್–ಯುಜಿ' ರದ್ದು ಮತ್ತು ಮರುಪರೀಕ್ಷೆಗೆ ಕೋರಿ ಸಲ್ಲಿಸಿರುವ ವಿವಿಧ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಗುರುವಾರ ಇದೇ 18ಕ್ಕೆ ಮುಂದೂಡಿತು.

ಈ ಸಂಬಂಧ ಕೇಂದ್ರ ಮತ್ತು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಬುಧವಾರ ಪ್ರತ್ಯೇಕವಾಗಿ ಸಲ್ಲಿಸಿರುವ ಹೆಚ್ಚುವರಿ ಪ್ರಮಾಣಪತ್ರಗಳು ಕೆಲ ಅರ್ಜಿದಾರರ ವಕೀಲರಿಗೆ ತಲುಪಿಲ್ಲ ಎಂಬುದನ್ನು ಗಮನಿಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ಪೀಠವು, ವಿಚಾರಣೆಯನ್ನು ಮುಂದೂಡಿತು.

ಕೇಂದ್ರದ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಪ್ರಮಾಣಪತ್ರವನ್ನು ಕಕ್ಷಿದಾರರ ವಕೀಲರಿಗೆ ನೀಡಿರುವುದಾಗಿ ತಿಳಿಸಿದರು.

ಈ ವೇಳೆ ಅರ್ಜಿದಾರರ ಪರ ವಕೀಲರು, ಇದೇ 15ರಂದು ವಿಚಾರಣೆ ನಡೆಸುವಂತೆ ಕೋರಿದರು. ಆ ದಿನ ತಾನು ಲಭ್ಯವಿರುವುದಿಲ್ಲ ಎಂದು ಮೆಹ್ತಾ ಅವರು ತಿಳಿಸಿದರು. ಬಳಿಕ ಪೀಠವು ಇದೇ 18ಕ್ಕೆ ವಿಚಾರಣೆ ನಿಗದಿಪಡಿಸಿತು.

'ನೀಟ್–ಯುಜಿ' ಅಕ್ರಮ ಆರೋಪಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಸಿಬಿಐ, ಇಲ್ಲಿಯವರೆಗಿನ ತನಿಖೆಯ ಪ್ರಗತಿ ಕುರಿತ ಸ್ಥಿತಿಗತಿ ವರದಿ ಸಲ್ಲಿಸಿದೆ ಎಂದು ಪೀಠ ತಿಳಿಸಿತು.

ಹೆಚ್ಚುವರಿ ಪ್ರಮಾಣಪತ್ರದಲ್ಲಿ ಏನಿದೆ?: ಪ್ರಸಕ್ತ ಸಾಲಿನ 'ನೀಟ್– ಯುಜಿ' ಫಲಿತಾಂಶಗಳ ದತ್ತಾಂಶ ವಿಶ್ಲೇಷಣೆಯನ್ನು ಐಐಟಿ ಮದ್ರಾಸ್ ನಡೆಸಿದ್ದು, ಯಾವುದೇ 'ಸಾಮೂಹಿಕ ನಕಲು' ಅಥವಾ ಕೆಲವೇ ಸಂಖ್ಯೆಯ ಅಭ್ಯರ್ಥಿಗಳು ಲಾಭ ಪಡೆದಿರುವುದು ಕಂಡು ಬಂದಿಲ್ಲ ಎಂದು ಅದು ಹೇಳಿದೆ ಎಂಬುದನ್ನು ಪ್ರಮಾಣಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಮೇ 5ರಂದು ನಡೆದಿದ್ದ ಪರೀಕ್ಷೆಯಲ್ಲಿ ದೊಡ್ಡ ಪ್ರಮಾಣದ ಅವ್ಯವಹಾರಗಳು ನಡೆದಿರುವುದು ಕಂಡುಬಂದರೆ ಮರು ಪರೀಕ್ಷೆಗೆ ಆದೇಶಿಸಬಹುದು ಎಂದು ಪೀಠವು ಜುಲೈ 8ರಂದು ಹೇಳಿತ್ತು. ಹೀಗಾಗಿ ಹೆಚ್ಚುವರಿ ಪ್ರಮಾಣಪತ್ರದಲ್ಲಿ ಸರ್ಕಾರ ನೀಡಿರುವ ಸಮರ್ಥನೆ ಮಹತ್ವ ಪಡೆದುಕೊಂಡಿದೆ.

ನಾಲ್ಕು ಸುತ್ತು ಕೌನ್ಸೆಲಿಂಗ್: ಈ ವರ್ಷದ ವೈದ್ಯಕೀಯ ಕೋರ್ಸ್‌ಗಳ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಜುಲೈ ಮೂರನೇ ವಾರದಿಂದ ನಾಲ್ಕು ಸುತ್ತುಗಳಲ್ಲಿ ನಡೆಸಲಾಗುವುದು ಎಂದು ಪ್ರಮಾಣಪತ್ರದಲ್ಲಿ ತಿಳಿಸಲಾಗಿದೆ.

ಎನ್‌ಟಿಎ ಸಹ ಇದೇ ರೀತಿ ಪ್ರತ್ಯೇಕವಾಗಿ ಹೆಚ್ಚುವರಿ ಪ್ರಮಾಣಪತ್ರ ಸಲ್ಲಿಸಿದೆ. ರಾಷ್ಟ್ರೀಯ, ರಾಜ್ಯ ಮತ್ತು ನಗರ ಮಟ್ಟದಲ್ಲಿ ಅಭ್ಯರ್ಥಿಗಳ ಅಂಕಗಳ ವಿಶ್ಲೇಷಣೆ ನಡೆಸಲಾಗಿದೆ ಎಂದು ಅದು ಹೇಳಿದೆ.

ಅಂಕಗಳ ನೀಡಿಕೆ ಸಾಮಾನ್ಯವಾಗಿದೆ ಎಂಬುದನ್ನು ಈ ವಿಶ್ಲೇಷಣೆ ಸೂಚಿಸುತ್ತದೆ. ಅಲ್ಲದೆ ಅಂಕಗಳ ನೀಡಿಕೆ ಮೇಲೆ ಪ್ರಭಾವ ಬೀರುವ ಯಾವುದೇ ಬಾಹ್ಯ ಅಂಶಗಳು ಕಂಡುಬಂದಿಲ್ಲ ಎಂದು ಎನ್‌ಟಿಎ ತಿಳಿಸಿದೆ. ಜತೆಗೆ ಅದು ಪ್ರಶ್ನೆ ಪತ್ರಿಕೆಗಳ ಗೋಪ್ಯ ಮುದ್ರಣ, ಸಾಗಣೆ ಮತ್ತು ವಿತರಣೆ ವ್ಯವಸ್ಥೆಯ ವಿವರಗಳನ್ನೂ ಒದಗಿಸಿದೆ.

ಜುಲೈ 8ರ ವಿಚಾರಣೆ ವೇಳೆ ಪೀಠವು, 'ನೀಟ್–ಯುಜಿ' ಪರೀಕ್ಷೆಯಲ್ಲಿ ನಿಯಮಗಳ ಉಲ್ಲಂಘನೆಯಾಗಿದೆ ಎಂದು ಹೇಳಿತ್ತು. ಇದು ಇಡೀ ಪರೀಕ್ಷಾ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರಿದ್ದರೆ ಮರು ಪರೀಕ್ಷೆಗೆ ಆದೇಶಿಸಬಹುದು ಎಂದೂ ಪೀಠ ಹೇಳಿತ್ತು.

ಅಲ್ಲದೆ ಅಕ್ರಮಗಳಲ್ಲಿ ಭಾಗಿಯಾದವರು ಮತ್ತು ತಪ್ಪು ಮಾಡಿದವರ ಸಂಖ್ಯೆ ಹಾಗೂ ಪ್ರಶ್ನೆ ಪತ್ರಿಕೆ ಸೋರಿಕೆಯ ಸಮಯ ಮತ್ತು ವಿಧಾನ ಸೇರಿದಂತೆ ವಿವರಗಳನ್ನು ಒದಗಿಸುವಂತೆ ಸೂಚಿಸಿತ್ತು.

ವಿಚಾರಣೆ ನಡೆಯುತ್ತಿದ್ದ ವೇಳೆ ಸುಪ್ರೀಂ ಕೋರ್ಟ್ ಹೊರಗೆ ತೀರ್ಪಿಗಾಗಿ ಕಾಯುತ್ತಿದ್ದ ನೀಟ್ ಆಕಾಂಕ್ಷಿಗಳು — ಪಿಟಿಐ ಚಿತ್ರ

ನೀಟ್ ಆಕಾಂಕ್ಷಿಗಳಿಂದ ಪ್ರಧಾನ್ ಭೇಟಿ

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು 'ನೀಟ್–ಯುಜಿ' ನಿರ್ವಹಣೆಯಲ್ಲಿನ ಅಕ್ರಮಗಳ ಕುರಿತ ಗದ್ದಲದ ನಡುವೆಯೇ ತಮ್ಮ ನಿವಾಸದಲ್ಲಿ ನೀಟ್ ಆಕಾಂಕ್ಷಿಗಳನ್ನು ಗುರುವಾರ ಭೇಟಿಯಾದರು.

ಈ ವೇಳೆ ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಅನಿಶ್ಚಿತತೆ, ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿನ ವಿಳಂಬ ಮತ್ತು ಶೈಕ್ಷಣಿಕ ಕ್ಯಾಲೆಂಡರ್ ಸೇರಿದಂತೆ ವಿವಿಧ ಸಮಸ್ಯೆಗಳ ಕುರಿತು ಸಚಿವರ ಜತೆ ಮಾತನಾಡಿದರು ಎಂದು ಮೂಲಗಳು ತಿಳಿಸಿವೆ.

ಮತ್ತೊಬ್ಬ ಆರೋಪಿ ಬಂಧನ

ನವದೆಹಲಿ (ಪಿಟಿಐ): 'ನೀಟ್–ಯುಜಿ' ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿಗಳಲ್ಲಿ ಒಬ್ಬನಾದ ರಾಕಿ ಅಲಿಯಾಸ್ ರಾಜೇಶ್ ರಂಜನ್ ಎಂಬಾತನನ್ನು ಸಿಬಿಐ ಗುರುವಾರ ಬಂಧಿಸಿದೆ.

ನೀಟ್ ಅಕ್ರಮಗಳ ಪ್ರಕರಣದ ತನಿಖೆಯು ಸಿಬಿಐಗೆ ವರ್ಗಾವಣೆಯಾದ ದಿನದಿಂದಲೂ ಈತನ ಬಂಧನಕ್ಕೆ ಬಲೆ ಬೀಸಿತ್ತು. ತಪ್ಪಿಸಿಕೊಂಡು ತಿರುಗಾಡುತ್ತಿದ್ದ ಈತನನ್ನು ಪಟ್ನಾದ ಹೊರವಲಯದಲ್ಲಿ ಸಿಬಿಐ ಬಂಧಿಸಿದೆ.

ನಳಂದ ಮೂಲದ ರಾಕೇಶ್, ಮತ್ತೊಬ್ಬ ಪ್ರಮುಖ ಸಂಚುಕೋರ ಸಂಜೀವ್ ಮುಖಿಯಾ ಅವರ ಸಂಬಂಧಿ ಎಂದು ತಿಳಿದು ಬಂದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

10 ದಿನಗಳ ಕಸ್ಟಡಿ: ರಾಕೇಶ್‌ನನ್ನು ಪಟ್ನಾದ ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ನ್ಯಾಯಾಲಯವು 10 ದಿನಗಳವರೆಗೆ ಆತನನ್ನು ಸಿಬಿಐ ಕಸ್ಟಡಿಗೆ ಒಪ್ಪಿಸಿ ಆದೇಶಿಸಿದೆ ಎಂದು ಅವರು ಹೇಳಿದ್ದಾರೆ. ಈತನ ಬಂಧನದ ತರುವಾಯ ಸಿಬಿಐ, ಪಟ್ನಾ ಮತ್ತು ಸಮೀಪದ ಸ್ಥಳಗಳಲ್ಲಿ ಹಾಗೂ ಕೋಲ್ಕತ್ತದಲ್ಲಿ ಶೋಧ ನಡೆಸಿದೆ ಎಂದು ಅವರು ವಿವರಿಸಿದ್ದಾರೆ. ಈ ವಾರದ ಆರಂಭದಲ್ಲಿ ಬಿಹಾರ ಮತ್ತು ಜಾರ್ಖಂಡ್‌ನ 15 ಸ್ಥಳಗಳಲ್ಲಿ ಸಿಬಿಐ ಸಾಕ್ಷ್ಯಗಳನ್ನು ಸಂಗ್ರಹಿಸಿದೆ.

ಸುದ್ದಿ 2 ನಿಮಿಷ

ಏಳು ಹೊಸ ರಕ್ಷಣಾ ಯೋಜನೆ ಖಾಸಗಿ ವಲಯಕ್ಕೆ ಮಂಜೂರು

ನವದೆಹಲಿ (ಪಿಟಿಐ): ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ನೀರಿನಡಿಯಿಂದ ಉಡಾವಣೆ ಮಾಡಬಹುದಾದ ಉಡಾವಣಾ ವಾಹನಗಳನ್ನು ಅಭಿವೃದ್ಧಿಪಡಿಸುವುದು ಸೇರಿದಂತೆ ರಕ್ಷಣೆಗೆ ಸಂಬಂಧಿಸಿದ ಏಳು ಹೊಸ ಯೋಜನೆಗಳನ್ನು ಖಾಸಗಿ ವಲಯಕ್ಕೆ ನೀಡಿದೆ.

ರಕ್ಷಣೆಗೆ ಸಂಬಂಧಿಸಿದ ತಂತ್ರಜ್ಞಾನವನ್ನು ದೇಶದಲ್ಲೇ ಅಭಿವೃದ್ಧಿಪಡಿಸುವುದನ್ನು ಉತ್ತೇಜಿಸಲು ರಕ್ಷಣಾ ಸಚಿವಾಲಯದ ತಂತ್ರಜ್ಞಾನ ಅಭಿವೃದ್ಧಿ ನಿಧಿಯಡಿ ಈ ಯೋಜನೆಗಳಿಗೆ ಅನುಮತಿ ನೀಡಲಾಗಿದೆ.

ನೀರಿನಡಿಯಿಂದ ಉಡಾವಣೆ ಮಾಡುವ ವಾಹನಗಳು ಸಮುದ್ರದಲ್ಲಿ ಬಹುಮುಖ ಪಾತ್ರವನ್ನು ನಿಭಾಯಿಸಲಿದ್ದು, ಯುದ್ಧದ ವಿವಿಧ ಸನ್ನಿವೇಶಗಳಲ್ಲಿ ನಿಯೋಜಿಸಬಹುದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಯೋಜನೆಯನ್ನು ಪುಣೆಯ ಸಾಗರ್ ಎಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್‌ಗೆ ನೀಡಲಾಗಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.

ರೇಡಾರ್ ಸಿಗ್ನಲ್ ಪ್ರೊಸೆಸರ್, ವಿಮಾನಗಳಿಗಾಗಿ ಐಸ್ ಡಿಟೆಕ್ಷನ್ ಸೆನ್ಸರ್‌ಗಳನ್ನು ಅಭಿವೃದ್ಧಿಪಡಿಸುವುದು ಮತ್ತು ನೀರೊಳಗಿನ ವಸ್ತುಗಳನ್ನು ಪತ್ತೆಹಚ್ಚಲು ಮತ್ತು ಅವುಗಳನ್ನು ನಾಶಪಡಿಸಲು ರಿಮೋಟ್ ಕಂಟ್ರೋಲ್ ಮೂಲಕ ನಿಯಂತ್ರಿಸುವ ವಾಹನಗಳ ಅಭಿವೃದ್ಧಿ ಯೋಜನೆಗಳೂ ಇದರಲ್ಲಿ ಸೇರಿವೆ.

'ಸ್ವಾವಲಂಬನೆಗೆ ಉತ್ತೇಜನ ನೀಡಲು ಡಿಆರ್‌ಡಿಒ ತನ್ನ ಏಳು ಹೊಸ ಯೋಜನೆಗಳನ್ನು ಅಭಿವೃದ್ಧಿಪಡಿಸುವ ಹೊಣೆಯನ್ನು ಖಾಸಗಿಯವರಿಗೆ ನೀಡಿದೆ. ಸಶಸ್ತ್ರ ಪಡೆಗಳು, ಏರೋಸ್ಪೇಸ್ ಮತ್ತು ರಕ್ಷಣಾ ಕ್ಷೇತ್ರದ ವಿವಿಧ ಅವಶ್ಯಕತೆಗಳಿಗಾಗಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗುತ್ತದೆ' ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಆರ್‌ಎಸ್‌ಎಸ್ ಸಭೆ ಇಂದಿನಿಂದ

ರಾಂಚಿ (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮೂರು ದಿನಗಳ ವಾರ್ಷಿಕ ಸಭೆ ಶುಕ್ರವಾರ ಇಲ್ಲಿ ಆರಂಭವಾಗಲಿದ್ದು ಸಂಘಟನೆಯ ವಿಸ್ತರಣೆ ಮತ್ತು ಶತಮಾನೋತ್ಸವ ಆಚರಣೆ ಸೇರಿ ಹಲವು ಪ್ರಮುಖ ವಿಷಯಗಳನ್ನು ಚರ್ಚಿಸಲಾಗುವುದು ಎಂದು ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಮತ್ತು ಎಲ್ಲ ಪ್ರಾಂತ್ಯ ಪ್ರಚಾರಕರು (ಪ್ರಾಂತ್ಯ ಉಸ್ತುವಾರಿಗಳು) ಸಭೆಯಲ್ಲಿ ಭಾಗವಹಿಸಲಿದ್ದಾರೆ.

2025ರ ವಿಜಯದಶಮಿಯಂದು ಸಂಘವು 100 ವರ್ಷ ಪೂರೈಸಲಿದೆ. ಸಂಘಟನೆಯನ್ನು ದೇಶದಾದ್ಯಂತ ಮಂಡಲ ಮಟ್ಟಕ್ಕೆ (10ರಿಂದ15 ಹಳ್ಳಿಗಳ ಗುಂಪು) ವಿಸ್ತರಿಸುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಸಂಘವು ಪ್ರಸ್ತುತ 73,000 ಶಾಖೆಗಳನ್ನು ಹೊಂದಿದ್ದು, ಇದನ್ನು ಲಕ್ಷಕ್ಕೆ ಹೆಚ್ಚಿಸುವ ಗುರಿ ಹೊಂದಿದ್ದೇವೆ ಎಂದು ಸಂಘದ ಅಖಿಲ ಭಾರತ ಪ್ರಚಾರ ಮುಖ್ಯಸ್ಥ ಸುನೀಲ್ ಅಂಬೇಕರ್ ಹೇಳಿದರು.

ಕಪ್ಪು ಮೈಬಣ್ಣ: ಪತಿಯನ್ನು ತೊರೆದ ಪತ್ನಿ

ಗ್ವಾಲಿಯರ್ (ಮಧ್ಯಪ್ರದೇಶ) (ಪಿಟಿಐ): 'ಕಪ್ಪು ಮೈಬಣ್ಣ ಹೊಂದಿರುವ ಕಾರಣಕ್ಕೆ ಪತ್ನಿ ತನ್ನಿಂದ ದೂರವಾಗಿರುವುದಲ್ಲದೆ, ನನ್ನ ವಿರುದ್ಧ ಕಿರುಕುಳದ ದೂರನ್ನೂ ದಾಖಲಿಸಿದ್ದಾಳೆ' ಎಂದು ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ 24 ವರ್ಷದ ವ್ಯಕ್ತಿಯೊಬ್ಬರು ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾರೆ.

ದಂಪತಿಯ ಈ ಕಲಹ ಬಗೆಹರಿಸಲು ಪೊಲೀಸರು ಈ ಇಬ್ಬರನ್ನೂ ಶನಿವಾರ ಆಪ್ತ ಸಮಾಲೋಚನೆಗೆ ಕರೆದಿದ್ದಾರೆ.

ನಗರದ ವಿಕ್ಕಿ ಫ್ಯಾಕ್ಟರಿ ನಿವಾಸಿಯಾದ ವ್ಯಕ್ತಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, '14 ತಿಂಗಳ ಹಿಂದೆ ಮದುವೆಯಾಗಿದ್ದೇನೆ. ಮದುವೆಯ ನಂತರ, ನನ್ನ ಕಪ್ಪು ಮೈಬಣ್ಣದ ಕಾರಣ ಪತ್ನಿ ನನ್ನನ್ನು ನಿಂದಿಸಿ, ಕಿರುಕುಳ ನೀಡಲು ಪ್ರಾರಂಭಿಸಿದಳು' ಎಂದು ದೂರಿದ್ದಾರೆ.

8 ವರ್ಷದ ಬಾಲಕಿ ಮೇಲೆ ಅತ್ಯಾಚಾರ, ಕೊಲೆ: ಮೂವರು ಬಾಲಕರು ವಶಕ್ಕೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರ ಪ್ರದೇಶದ ನಂದ್ಯಾಲ ಜಿಲ್ಲೆಯ ಮುಚ್ಚುಮರ್ರಿ ಎಂಬಲ್ಲಿ ಎಂಟು ವರ್ಷದ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಕೊಲೆಗೈದ ಆರೋಪದಲ್ಲಿ ಮೂವರು ಬಾಲಕರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

12 ಮತ್ತು 13 ವರ್ಷದ ಬಾಲ ಆರೋಪಿಗಳು, ಬಾಲಕಿ ಕಲಿಯುತ್ತಿರುವ ಶಾಲೆಯಲ್ಲಿ ಹಿರಿಯ ವಿದ್ಯಾರ್ಥಿಗಳಾಗಿದ್ದಾರೆ ಎಂದು ನಂದಿಕೊಟ್ಕೂರು ಠಾಣೆಯ ಪೊಲೀಸರು ತಿಳಿಸಿದ್ದಾರೆ. ಬಾಲಕಿ ಮೂರನೇ ತರಗತಿಯಲ್ಲಿ ಓದುತ್ತಿದ್ದರೆ, ಬಾಲಕರು ಏಳು ಮತ್ತು ಎಂಟನೇ ತರಗತಿಯಲ್ಲಿ ಕಲಿಯುತ್ತಿದ್ದಾರೆ.

ಘಟನೆಯನ್ನು ಖಂಡಿಸಿ ಕೆಲವು ಗ್ರಾಮಸ್ಥರು ಗುರುವಾರ ಪ್ರತಿಭಟನೆ ನಡೆಸಿದ್ದು, ಮುಚ್ಚುಮರ್ರಿಯಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಬಾಲಕಿ ಭಾನುವಾರ ಬೆಳಿಗ್ಗೆಯಿಂದ ನಾಪತ್ತೆಯಾಗಿದ್ದು, ಆಕೆಯ ಮೃತದೇಹವನ್ನು ಪತ್ತೆಹಚ್ಚುವಂತೆ ಸಂಬಂಧಿಕರು ಒತ್ತಾಯಿಸಿದ್ದಾರೆ.

ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಬಳಿಕ ಕೊಲೆಗೈದು ಮೃತದೇಹವನ್ನು ಕಾಲುವೆಗೆ ತಳ್ಳಿರುವುದಾಗಿ ವಿಚಾರಣೆ ವೇಳೆ ಬಾಲಕರು ಹೇಳಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಬಾಲಕಿ ಕಾಣೆಯಾಗಿದ್ದರ ಕುರಿತು ಆಕೆಯ ಪೋಷಕರು ದೂರು ನೀಡಿದ್ದರು. ಪೊಲೀಸರಿಗೆ ಆರಂಭದಲ್ಲಿ ಯಾವುದೇ ಸುಳಿವು ಲಭಿಸಿರಲಿಲ್ಲ. ಪೊಲೀಸ್ ಶ್ವಾನವು ಒಬ್ಬ ಆರೋಪಿ ಬಾಲಕನ ಮನೆಯ ಬಳಿ ಬಂದು ನಿಂತಿತು. ಆತನನ್ನು ವಿಚಾರಣೆಗೆ ಒಳಪಡಿಸಿದಾಗ ತಪ್ಪೊಪ್ಪಿಕೊಂಡಿದ್ದಾನೆ.

ಮುಚ್ಚುಮರ್ರಿ ಗ್ರಾಮದ ಉದ್ಯಾನದಲ್ಲಿ ಭಾನುವಾರ ಸಂಜೆ ಬಾಲಕಿಯನ್ನು ನೋಡಿರುವುದಾಗಿ ಬಾಲಕರು ಪೊಲೀಸರಿಗೆ ತಿಳಿಸಿದ್ದಾರೆ. ತಮ್ಮೊಂದಿಗೆ ಆಟವಾಡುವಂತೆ ಬಾಲಕಿಯನ್ನು ಪುಸಲಾಯಿಸಿ ಸಮೀಪದ ಡ್ಯಾಂ ಬಳಿ ಕರೆದೊಯ್ದು ಅತ್ಯಾಚಾರ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ.

'ಅಗ್ನಿಪಥ': ಮಾಜಿ ಮುಖ್ಯಸ್ಥರ ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಅಗ್ನಿಪಥ' ಯೋಜನೆಯನ್ನು ಮರುಪರಿಶೀಲಿಸುವಂತೆ ರಾಜಕೀಯ ಪಕ್ಷಗಳು ಒತ್ತಾಯಿಸುತ್ತಿರುವ ನಡುವೆಯೇ, ಈ ವಿವಾದಾತ್ಮಕ ಯೋಜನೆಯನ್ನು ನೌಕಾಪಡೆಯ ಇಬ್ಬರು ನಿವೃತ್ತ ಮುಖ್ಯಸ್ಥರು ಟೀಕಿಸಿದ್ದಾರೆ.

'ಅಗ್ನಿಪಥ' ಯೋಜನೆಯಡಿ ನೇಮಕವಾಗುವ 'ಅಗ್ನಿವೀರ'ರಿಂದಾಗಿ ಸೇನೆಯ ಯುದ್ಧಸಾಮರ್ಥ್ಯಕ್ಕೆ ಧಕ್ಕೆಯಾಗಲಿದೆ. ಅಗತ್ಯದಷ್ಟು ತರಬೇತಿ ಹೊಂದಿರದ ಕಾರಣ ಅಗ್ನಿವೀರರು ಕಾವಲುಗಾರರಾಗಿ ಕರ್ತವ್ಯ ನಿರ್ವಹಿಸಲು ಯೋಗ್ಯರಾಗಿದ್ದಾರೆ ಎಂದು ಮಾಜಿ ಮುಖ್ಯಸ್ಥರಾದ ಅಡ್ಮಿರಲ್ ಅರುಣ್ ಪ್ರಕಾಶ್ ಮತ್ತು ಕರಂಬೀರ್ ಸಿಂಗ್ ಹೇಳಿದ್ದಾರೆ.

'ಅಗ್ನಿವೀರರಿಂದಾಗಿ ನೌಕಾಪಡೆಯ ಕಾರ್ಯಾಚರಣೆಗೆ ಹಿನ್ನಡೆಯಾಗಲಿದೆ. ನೌಕಾಪಡೆಯ ಸಾಮಾನ್ಯ ಯೋಧರು ಮತ್ತು ಅಗ್ನಿವೀರರ ನಡುವೆ ಬಹಳ ವ್ಯತ್ಯಾಸ ಗಳಿವೆ. ಯೋಧರು ಮತ್ತು ಅಗ್ನಿವೀರರ ನಡುವೆ ಸಂಘರ್ಷ ಮತ್ತು ಯುದ್ಧಸಾಮರ್ಥ್ಯ ಕುಂಠಿತವಾಗುವ ಸಾಧ್ಯತೆ ಇರುವುದರಿಂದ, ಕಮಾಂಡಿಂಗ್ ಅಧಿಕಾರಿಗಳು ಸಮಸ್ಯೆ ಎದುರಿಸಬೇಕಾಗುತ್ತದೆ' ಎಂದು ಈ ಇಬ್ಬರು ಮಾಜಿ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

'ಪಿಂಚಣಿಗೆ ತಗಲುವ ವೆಚ್ಚವನ್ನು ಕಡಿತಗೊಳಿಸುವ ಏಕೈಕ ಉದ್ದೇಶದಿಂದ ಅಗ್ನಿಪಥ ಯೋಜನೆ ಜಾರಿಗೊಳಿಸಲಾಗಿದೆ. ಆದರೆ, ಇದು ಸೇನೆ, ವಾಯುಪಡೆ ಮತ್ತು ನೌಕಾಪಡೆಯ ಸಾಮರ್ಥ್ಯವನ್ನು ಕುಂದಿಸಲಿದೆ. ರಾಷ್ಟ್ರೀಯ ಭದ್ರತೆಯ ಅರಿವು ಹೊಂದಿರುವವರಿಗೆ ಇದು ಅರ್ಥವಾಗುತ್ತದೆ' ಎಂದು ಅಡ್ಮಿರಲ್ (ನಿವೃತ್ತ) ಕರಂಬೀರ್ ಸಿಂಗ್ ಹೇಳಿದ್ದಾರೆ.

'ದಿ ವೈರ್' ಸುದ್ದಿ ಪೋರ್ಟಲ್‌ನ ಕರಣ್ ಥಾಪರ್ ಅವರಿಗೆ ನೀಡಿರುವ ಸಂದರ್ಶನದಲ್ಲಿ ಈ ಯೋಜನೆ ಕುರಿತು ಮಾತನಾಡಿರುವ ಅಡ್ಮಿರಲ್ (ನಿವೃತ್ತ) ಪ್ರಕಾಶ್, 'ಸೇನೆಗೆ ಅಗ್ನಿವೀರರಿಂದ ಹೆಚ್ಚು ಪ್ರಯೋಜನವಾಗಬಹುದು. ಆದರೆ, ವ್ಯಾಪಕವಾಗಿ ತಂತ್ರಜ್ಞಾನವನ್ನು ಬಳಸುವ ನೌಕಾಪಡೆ ಅಥವಾ ವಾಯುಪಡೆಗೆ ಇವರಿಂದಾಗುವ ಪ್ರಯೋಜನ ಅಲ್ಪ' ಎಂದು ಪ್ರತಿಪಾದಿಸಿದ್ದಾರೆ.

ಕಾರ್ಯಾಚರಣೆ ಉತ್ತರಾಖಂಡದ ಚಮೋಲಿ ಜಿಲ್ಲೆಯ ಜೋಗಿಧಾರ ಪ್ರದೇಶದ ಬಳಿ ಗುರುವಾರ ಭೂಕುಸಿತ ಸಂಭವಿಸಿದ್ದು, ಬದ್ರಿನಾಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಿಲುಕಿದ್ದ ಜನರನ್ನು ರಾಜ್ಯ ವಿಪತ್ತು ನಿರ್ವಹಣಾ ಪಡೆಯ ಸಿಬ್ಬಂದಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ದರು –ಪಿಟಿಐ ಚಿತ್ರ

ಮಹಾರಾಷ್ಟ್ರ: ನಗರ ನಕ್ಸಲರ ಕಡಿವಾಣಕ್ಕೆ ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ಮುಂಬೈ: ಗ್ರಾಮೀಣ ಮತ್ತು ಬುಡಕಟ್ಟು ಪ್ರದೇಶಗಳಲ್ಲಿನ ನಕ್ಸಲರ ಜೊತೆಗೆ ನಗರ ಪ್ರದೇಶಗಳಲ್ಲಿರುವ ನಕ್ಸಲರನ್ನು ಹತ್ತಿಕ್ಕುವ ಉದ್ದೇಶದ ಮಸೂದೆ 'ಮಹಾರಾಷ್ಟ್ರ ವಿಶೇಷ ಸಾರ್ವಜನಿಕ ಭದ್ರತಾ ಮಸೂದೆ 2024' ಅನ್ನು ಬಿಜೆಪಿ ನೇತೃತ್ವ ಮಹಾಯುತಿ ಸರ್ಕಾರ ಗುರುವಾರ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಮಂಡಿಸಿತು.

ನಗರ ಪ್ರದೇಶಗಳಲ್ಲಿ ಕಾನೂನುಬಾಹಿರ ಚಟುವಟಿಕೆ ತಡೆಯಲು ಇಂತಹದೇ ಕಾಯ್ದೆಯನ್ನು ಈ ಹಿಂದೆ ಛತ್ತೀಸಗಢ, ತೆಲಂಗಾಣ, ಆಂಧ್ರಪ್ರದೇಶ ಮತ್ತು ಒಡಿಶಾದಲ್ಲಿಯೂ ರಚಿಸಲಾಗಿದೆ.

ಗೃಹ, ಕಾನೂನು ಖಾತೆಯನ್ನು ಹೊಂದಿರುವ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಈ ಮಸೂದೆ ಮಂಡಿಸಿದರು. ಈ ಪ್ರಕಾರ ಕಾನೂನುಬಾಹಿರ ಚಟುವಟಿಕೆ ತಡೆಗೆ ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡಲಾಗುತ್ತದೆ.

'ನಕ್ಸಲರ ಪಿಡುಗು ಕೇವಲ ಕುಗ್ರಾಮ, ಜನವಸತಿ ಕಡಿಮೆ ಇರುವ ಸ್ಥಳಗಳಿಗೆ ಸೀಮಿತವಲ್ಲ. ನಗರ ಪ್ರದೇಶಗಳಲ್ಲಿ ನಕ್ಸಲರ ನೆಲೆ ಹೆಚ್ಚುತ್ತಿದೆ' ಎಂದು ಫಡಣವೀಸ್ ಅವರು ತಿಳಿಸಿದರು.

'ಸಮೃದ್ಧಿ ಕಾರಿಡಾರ್' ಯೋಜನೆಯಲ್ಲಿ ಭ್ರಷ್ಟಾಚಾರ: ಪಟೋಲೆ

ಮುಂಬೈ: 'ಸಮೃದ್ಧಿ ಕಾರಿಡಾರ್' ನಿರ್ಮಾಣ ಯೋಜನೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಮಹಾರಾಷ್ಟ್ರ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ಆರೋಪಿಸಿದ್ದು, ಹೆದ್ದಾರಿಯಲ್ಲಿ ಒಂದೇ ವರ್ಷದೊಳಗೆ ಬಿರುಕುಗಳು ಕಾಣಿಸಿಕೊಂಡಿವೆ ಎಂದಿದ್ದಾರೆ. ಇದೇ ವಿಚಾರದಲ್ಲಿ ಆಡಳಿತಾರೂಢ 'ಮಹಾಯುತಿ' ಮೈತ್ರಿಕೂಟದ ವಿರುದ್ಧ ಹರಿಹಾಯ್ದಿದ್ದಾರೆ.

'ಮುಂಬೈ– ನಾಗ್ಪುರ ಸಂಪರ್ಕ ಕಲ್ಪಿಸುವ ಸಮೃದ್ಧಿ ಮಹಾಮಾರ್ಗ ನಿರ್ಮಾಣದಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದ್ದಾರೆ.

ಹರಿಯಾಣ: ಬಿಎಸ್‌ಪಿ– ಐಎನ್‌ಎಲ್‌ಡಿ ಮೈತ್ರಿ

ಚಂಡೀಗಢ (ಪಿಟಿಐ): ಈ ವರ್ಷದ ಅಂತ್ಯದಲ್ಲಿ ನಡೆಯುವ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಭಾರತೀಯ ರಾಷ್ಟ್ರೀಯ ಲೋಕದಳವು (ಐಎನ್‌ಎಲ್‌ಡಿ) ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಜತೆ ಕೈ ಜೋಡಿಸಲಿದ್ದು ಮೈತ್ರಿ ಕುರಿತು ಎರಡೂ ಪಕ್ಷಗಳ ನಾಯಕರು ಗುರುವಾರ ಘೋಷಣೆ ಮಾಡಿದ್ದಾರೆ.

ಮೈತ್ರಿ ಪರವಾಗಿ, ಐಎನ್‌ಎಲ್‌ಡಿ ನಾಯಕ ಅಭಯ್ ಚೌತಾಲಾ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಬಿಂಬಿಸಲು ಉಭಯ ಪಕ್ಷಗಳ ನಾಯಕರು ನಿರ್ಧರಿಸಿದ್ದಾರೆ.

ಹರಿಯಾಣ ವಿಧಾನಸಭೆಯಲ್ಲಿನ 90 ಕ್ಷೇತ್ರಗಳ ಪೈಕಿ 37ರಲ್ಲಿ ಬಿಎಸ್‌ಪಿ ಮತ್ತು ಉಳಿದ ಕ್ಷೇತ್ರಗಳಲ್ಲಿ ಐಎನ್‌ಎಲ್‌ಡಿ ಸ್ಪರ್ಧಿಸುವುದಕ್ಕೆ ಸಹಮತ ವ್ಯಕ್ತವಾಗಿದೆ. ರಾಜ್ಯದಲ್ಲಿ ಆಡಳಿತಾರೂಢ ಬಿಜೆಪಿ ಸತತ ಮೂರನೇ ಬಾರಿಗೆ ಅಧಿಕಾರಕ್ಕೆ ಬರಲು ಹವಣಿಸುತ್ತಿದೆ.

ಚಂಡೀಗಢದಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಚೌತಾಲಾ, 'ಯಾವುದೇ ಸ್ವಾರ್ಥ ಹಿತಾಸಕ್ತಿ ಇಲ್ಲದೆ, ಜನರ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು ಮೈತ್ರಿ ಮಾಡಿಕೊಳ್ಳಲಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ನಾವು ಜಂಟಿಯಾಗಿ ಹೋರಾಡಲಿದ್ದೇವೆ. ರಾಜ್ಯವನ್ನು ಲೂಟಿ ಮಾಡುತ್ತಿರುವ ಬಿಜೆಪಿ ಮತ್ತು 10 ವರ್ಷಗಳ ಹಿಂದೆ ಲೂಟಿ ಮಾಡಿದ ಕಾಂಗ್ರೆಸ್ ಅನ್ನು ಅಧಿಕಾರದಿಂದ ದೂರವಿಡಬೇಕು ಎಂಬುದು ಸಾಮಾನ್ಯ ಜನರ ಭಾವನೆಯಾಗಿದೆ' ಎಂದರು.

ಚೌತಾಲಾ ಮತ್ತು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ಮೈತ್ರಿ ಕುರಿತು ಇತ್ತೀಚೆಗೆ ಸಭೆ ನಡೆಸಿದ್ದರು ಎಂದು ಬಿಎಸ್‌ಪಿ ರಾಷ್ಟ್ರೀಯ ಸಂಯೋಜಕ ಆಕಾಶ್ ಆನಂದ್ ಹೇಳಿದರು.

ಮೈತ್ರಿ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ, 'ಜನವಿರೋಧಿ ಪಕ್ಷಗಳನ್ನು ಸೋಲಿಸಲು ಬಿಎಸ್‌ಪಿ ಮತ್ತು ಐಎನ್‌ಎಲ್‌ಡಿ ಒಂದಾಗಿವೆ. ಅವು ಹೊಸ ಸಮ್ಮಿಶ್ರ ಸರ್ಕಾರ ರಚನೆಗೆ ಜತೆಯಾಗಿ ಕೆಲಸ ಮಾಡಲಿವೆ' ಎಂದು ಹೇಳಿದ್ದಾರೆ.

90 ಸದಸ್ಯ ಬಲದ ಹರಿಯಾಣ ವಿಧಾನಸಭೆಯಲ್ಲಿ ಪ್ರಸ್ತುತ ಐಎನ್‌ಎಲ್‌ಡಿಯ ಏಕೈಕ ಸದಸ್ಯರಾಗಿ ಚೌತಾಲಾ ಇದ್ದಾರೆ. ಸದನದಲ್ಲಿ ಬಿಎಸ್‌ಪಿ ಸದಸ್ಯರನ್ನು ಹೊಂದಿಲ್ಲ.

ತಡೆಗಟ್ಟಲು ಕೈಗೊಂಡ ಕ್ರಮ: ಪ್ರತಿಕ್ರಿಯೆ ಸಲ್ಲಿಕೆಗೆ ಕೇಂದ್ರಕ್ಕೆ 4 ವಾರಗಳ ಅವಕಾಶ

ಆತ್ಮಹತ್ಯೆ ಹೆಚ್ಚಳ ಸಾಮಾಜಿಕ ಸಮಸ್ಯೆ: 'ಸುಪ್ರೀಂ'

ನವದೆಹಲಿ(ಪಿಟಿಐ): ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿರುವ ಕುರಿತು ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಇದು ಸಾಮಾಜಿಕ ಸಮಸ್ಯೆ ಎಂದು ಗುರುವಾರ ಹೇಳಿದೆ.

ಆತ್ಮಹತ್ಯೆಗಳನ್ನು ತಡೆಯುವುದಕ್ಕಾಗಿ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೈಗೊಂಡ ಕ್ರಮಗಳ ಕುರಿತು ಸಮಗ್ರ ವರದಿ ಸಲ್ಲಿಸಲು ಕೇಂದ್ರ ಸರ್ಕಾರಕ್ಕೆ ನಾಲ್ಕು ವಾರಗಳ ಅವಕಾಶ ಕಲ್ಪಿಸಿದೆ.

ಈ ಸಂಬಂಧ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರ (ಪಿಐಎಲ್) ವಿಚಾರಣೆಯನ್ನು ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ಪೀಠ ನಡೆಸಿತು.

'ಇದೊಂದು ಸಾಮಾಜಿಕ ಸಮಸ್ಯೆ. ಈ ಕುರಿತು ಕೇಂದ್ರ ಸರ್ಕಾರ ಮತ್ತು ಸಂಬಂಧಿಸಿದ ಪ್ರಾಧಿಕಾರಗಳು ಪ್ರಮಾಣಪತ್ರ ಸಲ್ಲಿಸಬೇಕು' ಎಂದು ಮುಖ್ಯನ್ಯಾಯಮೂರ್ತಿ ಚಂದ್ರಚೂಡ್ ಹೇಳಿದರು.

ಈ ಸಂಬಂಧ, ವಕೀಲ ಗೌರವಕುಮಾರ್ ಬನ್ಸಲ್ ಎಂಬುವವರು ಪಿಐಎಲ್ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಕೇಂದ್ರ, ಎಲ್ಲ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ 2019ರ ಆಗಸ್ಟ್ 2ರಂದು ನೋಟಿಸ್ ಜಾರಿ ಮಾಡಿತ್ತು.

ಅರ್ಜಿದಾರರ ವಾದವೇನು?: ಆತ್ಮಹತ್ಯೆಯ ಆಲೋಚನೆ ಹೊಂದಿದ ವ್ಯಕ್ತಿಗಳಿಗೆ ನೆರವು ನೀಡಲು ಹಾಗೂ ಆಪ್ತ ಸಮಾಲೋಚನೆ ನಡೆಸುವುದಕ್ಕಾಗಿ 'ಕಾಲ್ ಸೆಂಟರ್'ಗಳನ್ನು ಸ್ಥಾಪಿಸುವಂತೆ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡುವಂತೆ ಅರ್ಜಿದಾರರು ಕೋರಿದ್ದಾರೆ.

ದೆಹಲಿ ಪೊಲೀಸ್ ದಾಖಲೆಗಳ ಪ್ರಕಾರ, 2014ರಿಂದ 2018ರ ನಡುವೆ, 18 ವರ್ಷಕ್ಕಿಂತ ಕಡಿಮೆ ವಯೋಮಾನದ 140 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಅಂಶವನ್ನು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ಆತ್ಮಹತ್ಯೆಗಳನ್ನು ತಡೆಗಟ್ಟುವುದಕ್ಕಾಗಿ ಪರಿಣಾಮಕಾರಿ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮ ರೂಪಿಸಿ, ಅನುಷ್ಠಾನಗೊಳಿಸುವಲ್ಲಿ ಸಂಬಂಧಪಟ್ಟ ಪ್ರಾಧಿಕಾರಗಳು ವಿಫಲವಾಗಿವೆ. ಇದು ಮಾನಸಿಕ ಆರೋಗ್ಯ ಕಾಯ್ದೆ,2017ರ ಸೆಕ್ಷನ್ 29 ಹಾಗೂ 115ರ ಉಲ್ಲಂಘನೆ ಮಾತ್ರವಲ್ಲ, ಸಂವಿಧಾನದ 21ನೇ ವಿಧಿಯ (ಜೀವನ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ರಕ್ಷಣೆ) ಉಲ್ಲಂಘನೆಯೂ ಆಗಿದೆ ಎಂದು ಅರ್ಜಿಯಲ್ಲಿ ವಿವರಿಸಿದ್ದಾರೆ.

ಇಬ್ಬರು ಶಾಸಕರ ವಿರುದ್ಧ ವಾರಂಟ್

ಲಖನೌ: 2006ರ ರೈಲ್ವೆ ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶದ ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ (ಎಸ್‌ಬಿಎಸ್‌ಪಿ) ಶಾಸಕ ಬೇಡಿ ರಾಮ್ ಮತ್ತು ನಿಶಾದ್ ಪಕ್ಷದ ಶಾಸಕ ವಿಪುಲ್ ದುಬೆ ಅವರ ವಿರುದ್ಧ ಇಲ್ಲಿನ ವಿಶೇಷ ನ್ಯಾಯಾಲಯ ಜಾಮೀನು ರಹಿತ ವಾರಂಟ್ (ಎನ್‌ಬಿಡಬ್ಲ್ಯು) ಹೊರಡಿಸಿದೆ.

ಈ ಎರಡೂ ಪಕ್ಷಗಳು ಉತ್ತರ ಪ್ರದೇಶದ ಆಡಳಿತಾರೂಢ ಬಿಜೆಪಿ ನೇತೃತ್ವದ ಎನ್‌ಡಿಎಯ ಪಾಲುದಾರ ಪಕ್ಷಗಳಾಗಿವೆ. ವಿಶೇಷ ನ್ಯಾಯಾಧೀಶ ಪುಷ್ಕರ್ ಉಪಾಧ್ಯಾಯ ಅವರು ಇಬ್ಬರೂ ಶಾಸಕರ ವಿರುದ್ಧ ಎನ್‌ಬಿಡಬ್ಲ್ಯು ಹೊರಡಿಸಿದ್ದಾರೆ.

ಬೇಡಿ ರಾಮ್ ಅವರು ವಿವಿಧ ರಾಜ್ಯಗಳಲ್ಲಿನ ಸರ್ಕಾರಿ ಹುದ್ದೆಗಳ ನೇಮಕಾತಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ನೇಮಕಾತಿಗಾಗಿ ಹಣ ಪಡೆದುಕೊಂಡಿರುವುದನ್ನು ಒಪ್ಪಿಕೊಂಡಿದ್ದ ವಿಡಿಯೊ ಕೆಲ ದಿನಗಳ ಹಿಂದೆ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿತ್ತು.

ನಿಶಾದ್ ಪಕ್ಷದ ಶಾಸಕ ವಿಪುಲ್ ದುಬೆ ಮತ್ತು ಇತರರಿಗೆ ಹಲವು ಬಾರಿ ಸಮನ್ಸ್ ನೀಡಲಾಗಿದ್ದರೂ, ಅವರು ನ್ಯಾಯಾಲಯದ ಮುಂದೆ ಹಾಜರಾಗಿರಲಿಲ್ಲ. ಬೇಡಿ ರಾಮ್ ಅವರು ಗಾಜಿಪುರ ಜಿಲ್ಲೆಯ ಜಖನಿಯ ಶಾಸಕ ಹಾಗೂ ವಿಪುಲ್ ಅವರು ಭದೋಹಿ ಜಿಲ್ಲೆಯ ಜ್ಞಾನಪುರದ ಶಾಸಕರು. ಈ ಇಬ್ಬರು ಶಾಸಕರು ಮತ್ತು ಪ್ರಕರಣದ ಇತರ ಆರೋಪಿಗಳನ್ನು ಇದೇ 26ರಂದು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ನ್ಯಾಯಾಧೀಶರು ಆದೇಶಿಸಿದ್ದಾರೆ.

ಪೊಲೀಸರಿಗೆ ಸಮನ್ಸ್

ನವದೆಹಲಿ (ಪಿಟಿಐ): ಭಾರತೀಯ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ಮಾಜಿ ಮುಖ್ಯಸ್ಥ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಮಹಿಳಾ ಕುಸ್ತಿಪಟುಗಳು ದಾಖಲಿಸಿರುವ ಕ್ರಿಮಿನಲ್ ಮೊಕದ್ದಮೆಗೆ ಸಂಬಂಧಿಸಿದಂತೆ ಜುಲೈ 26ರಂದು ಇಬ್ಬರು ಪೊಲೀಸ್ ಅಧಿಕಾರಿಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳುವಂತೆ ದೆಹಲಿ ನ್ಯಾಯಾಲಯ ಗುರುವಾರ ಸೂಚಿಸಿದೆ. ಹೆಚ್ಚುವರಿ ಮುಖ್ಯ ಮ್ಯಾಜಿಸ್ಟ್ರೇಟ್ ಪ್ರಿಯಾಂಕಾ ರಜಪೂತ್, ಅಧಿಕಾರಿಗಳಿಗೆ ಹೇಳಿಕೆ ದಾಖಲಿಸಲು ಸಮನ್ಸ್ ನೀಡಿದ್ದಾರೆ.

ಡೆಂಗಿ: ಮೇಲ್ವಿಚಾರಣೆಗೆ 'ವಾರ್ ರೂಮ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಡೆಂಗಿ ಜ್ವರ ಪರಿಸ್ಥಿತಿ ಸೂಕ್ಷ್ಮ ಮೇಲ್ವಿಚಾರಣೆಗೆ 'ವಾರ್ ರೂಮ್' ಪ್ರಾರಂಭಿಸಿ, ಡೆಂಗಿ ಪೀಡಿತರ ಮೇಲೆ 14 ದಿನಗಳ ನಿಗಾ ವಹಿಸಬೇಕೆಂದು ಆರೋಗ್ಯ ಇಲಾಖೆಯು ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ.

ಈ ಬಗ್ಗೆ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಸುತ್ತೋಲೆ ಹೊರಡಿಸಿದ್ದಾರೆ. ಆರೋಗ್ಯ ಸೌಧದಲ್ಲಿರುವ ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮ (ಎನ್‌ವಿಬಿಡಿಸಿಪಿ) ವಿಭಾಗವು ರಾಜ್ಯಮಟ್ಟದ 'ವಾರ್ ರೂಮ್' ಅನ್ನು ಹೊಂದಿರಲಿದೆ.

ಎಲ್ಲ ಜಿಲ್ಲೆಗಳು ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಡೆಂಗಿ ಜ್ವರ ಪರಿಸ್ಥಿತಿ ಮೇಲ್ವಿಚಾರಣೆ, ದತ್ತಾಂಶ ಸಂಗ್ರಹಣೆ ನಿಯಂತ್ರಣ ಕೊಠಡಿ ಅಥವಾ 'ಡೆಂಗಿ ವಾರ್ ರೂಮ್' ಸ್ಥಿರಗೊಳಿಸಬೇಕು. ನಿಗಾ ಇರಿಸಲು ಜಿಲ್ಲಾಧಿಕಾರಿ ಅಧ್ಯಕ್ಷತೆ ಯಲ್ಲಿ ಕಾರ್ಯ ಪಡೆ ರಚಿಸಬೇಕು. ಈ ಕಾರ್ಯಪಡೆ ವಾರಕ್ಕೊಮ್ಮೆ ಸಭೆ ನಡೆಸಿ, ಸಲಹೆ -ಸೂಚನೆಗಳನ್ನು ಸಂಬಂಧಪಟ್ಟವರಿಗೆ ನೀಡಬೇಕು. ಡೆಂಗಿ ಪೀಡಿತರಿಗೆ ಜ್ವರ ಲಕ್ಷಣ ಕಂಡುಬಂದ ದಿನದಿಂದ 14 ದಿನಗಳವರೆಗೆ ನಿಗಾ ಇರಬೇಕು ಎಂದು ತಿಳಿಸಿದ್ದಾರೆ.

ಬಿಬಿಎಂಪಿ ಹಾಗೂ ಜಿಲ್ಲಾಡಳಿತಗಳು ಅಧಿಕ ಪ್ರಕರಣಗಳು ವರದಿಯಾದ ಪ್ರದೇಶ ಗುರುತಿಸಿ, ವಿವರವನ್ನು ರಾಜ್ಯಮಟ್ಟದ 'ವಾರ್ ರೂಮ್'ಗೆ ಸಲ್ಲಿಸಬೇಕು. ಹೆಚ್ಚು ಪ್ರಕರಣಗಳು ವರದಿಯಾದ ಪ್ರದೇಶಗಳಲ್ಲಿ ಲಾರ್ವಾ ನಾಶ ಚಟುವಟಿಕೆಗಳನ್ನು ತೀವ್ರಗೊಳಿಸಬೇಕು. ಜ್ವರ ಕ್ಲಿನಿಕ್‌ಗಳನ್ನು ತುರ್ತಾಗಿ ಪ್ರಾರಂಭಿಸಬೇಕು. ಬಿಬಿಎಂಪಿ ಕುಟುಂಬ ಎಣಿಕೆಯ ವಿವರಣೆಗೆ ವ್ಯವಸ್ಥೆ ಮಾಡಬೇಕು ಎಂದು ಸೂಚಿಸಲಾಗಿದೆ.

ಹಾಸಿಗೆ ಮೀಸಲು: ಡೆಂಗಿ ಜ್ವರ ಪ್ರಕರಣಗಳ ನಿರ್ವಹಣೆಗೆ ತಾಲ್ಲೂಕು ಆಸ್ಪತ್ರೆಯಲ್ಲಿ ತಲಾ ಐದು ಹಾಸಿಗೆ, ಜಿಲ್ಲಾ ಆಸ್ಪತ್ರೆಗಳಲ್ಲಿ ತಲಾ ಹತ್ತು ಹಾಸಿಗೆಗಳನ್ನು ಮೀಸಲಿಡಬೇಕು ಎಂದು ತಿಳಿಸಿದ್ದಾರೆ.

381 ಪ್ರಕರಣ ದೃಢ

ರಾಜ್ಯದಲ್ಲಿ ಡೆಂಗಿ ಪತ್ತೆ ಸಂಬಂಧ ಆರೋಗ್ಯ ಇಲಾಖೆಯು ಪರೀಕ್ಷೆಗಳ ಸಂಖ್ಯೆ ಹೆಚ್ಚಿಸಿದ್ದರಿಂದ ಪ್ರಕರಣಗಳೂ ಅಧಿಕ ಸಂಖ್ಯೆಯಲ್ಲಿ ದೃಢಪಡುತ್ತಿವೆ. ಗುರುವಾರ 381 ಮಂದಿ ಡೆಂಗಿ ಪೀಡಿತರಾಗಿರುವುದು ಖಚಿತಪಟ್ಟಿದೆ.

ಡೆಂಗಿ ಪತ್ತೆಗೆ 24 ಗಂಟೆಗಳಲ್ಲಿ 2,503 ಪರೀಕ್ಷೆಗಳನ್ನು ನಡೆಸಲಾಗಿತ್ತು. ಹೊಸದಾಗಿ ಡೆಂಗಿ ಪೀಡಿತರಾದವರಲ್ಲಿ ನಾಲ್ಕರು ಒಂದು ವರ್ಷದೊಳಗಿನವರು ರಾದರೆ, 140 ಮಂದಿ 18 ವರ್ಷದೊಳಗಿನವರಾಗಿದ್ದಾರೆ. 237 ಮಂದಿ 18 ವರ್ಷ ಮೇಲ್ಪಟ್ಟವರಾಗಿದ್ದಾರೆ. ಸದ್ಯ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ 362 ಡೆಂಗಿ ಪೀಡಿತರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಡೆಂಗಿ ಪೀಡಿತರಲ್ಲಿ ಈವರೆಗೆ ಏಳು ಮಂದಿ ಮೃತಪಟ್ಟಿದ್ದಾರೆ.

29ಕ್ಕೆ ಪಾಲಿಕೆಗಳ ನೌಕರರ ಪ್ರತಿಭಟನೆ

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ, ರಾಜ್ಯದ 10 ಮಹಾನಗರ ಪಾಲಿಕೆಗಳ ಸಿಬ್ಬಂದಿ ಜುಲೈ 29ರಿಂದ ಪ್ರತಿಭಟನೆ ನಡೆಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆಗಳ ನೌಕರರ ಸಂಘ ತಿಳಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಜುಲೈ 11ರಂದು ಪತ್ರ ಬರೆದಿರುವ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್, '7ನೇ ವೇತನ ಆಯೋಗದ ವರದಿಯನ್ನು ಯಥಾವತ್ತಾಗಿ ಅನುಷ್ಠಾನಗೊಳಿಸಬೇಕು. ಹೊಸ ಪಿಂಚಣಿ ಪದ್ಧತಿಯನ್ನು ರದ್ದು ಪಡಿಸಬೇಕು, ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ತಿದ್ದುಪಡಿ ತರಬೇಕು' ಎಂದು ಬೇಡಿಕೆ ಇರಿಸಿದ್ದಾರೆ.

'ಬೇಡಿಕೆಗಾಗಿ ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಸರ್ಕಾರ ಕ್ರಮ ಜರುಗಿಸಿಲ್ಲ. ಹೀಗಾಗಿ, ಜುಲೈ 29 ರಿಂದ ಸಾಮೂಹಿಕ ರಜೆ ಹಾಕಿ, ಕೆಲಸಕ್ಕೆ ಗೈರುಹಾಜರಾಗುವ ಮೂಲಕ ಪ್ರತಿಭಟಿಸಲು ನಿರ್ಧರಿಸಲಾಗಿದೆ' ಎಂದು ಅಮೃತ್‌ರಾಜ್ ತಿಳಿಸಿದ್ದಾರೆ.

ಮೊಮ್ಮಗನಿಂದ ಹಲ್ಲೆ; ಅಜ್ಜಿ ಸಾವು

ವಿರಾಜಪೇಟೆ (ಕೊಡಗು ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರಲ್ಲಿ 15 ವರ್ಷದ ಬಾಲಕ ತನ್ನ 48 ವರ್ಷ ಅಜ್ಜಿಯ ಮೇಲೆ ಹಲ್ಲೆ ನಡೆಸಿದ್ದು, ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕಲಬುರಗಿ ಮಹಾನಗರ ಪಾಲಿಕೆ

ದೂ: 08472/ 278675 ಫ್ಯಾಕ್ಸ : 08472 / 260776 ಇ ಮೇಲ್ itstaff_ulb_gulbarga@yahoo.com

ಸಂಖ್ಯೆಕಮಪಾ/ಆಶಾ/ಎಸ್.ಡಬ್ಲ್ಯು.ಎಂ./ಎಸ್.ಬಿ.ಎಂ.2.0/ಟಿ.ಎಸ್./55/2023-24 ದಿನಾಂಕ: 10.07.2024

:: ಟೆಂಡರ ಪ್ರಕಟಣೆ ::

ವಿಷಯ : ಎಸ್.ಬಿ.ಎಂ.2.0 ಅಡಿ ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿಯಲ್ಲಿ ಈ ಕೆಳಗಿನ ಕಾಮಗಾರಿಗೆ ಟೆಂಡರ ಆಹ್ವಾನಿಸಲಾಗಿರುತ್ತದೆ.

1) ಕಾಮಗಾರಿ ವಿವರ: Tender for the Supply, Installation, Commissioning and Successful run of 16cum Portable Compactor along with Truck Mounted Hook Loader on 28T GVW Truck Chassis for Rajivgandhi Nagar Transfer Station at Kalaburagi City Corporation, ಅಂದಾಜು ಮೊತ್ತ ರೂ. 30573800/-, ಇಂಡೆಂಟ ಸಂಖ್ಯೆ: DMA/2024-25/IND2393, ಇ.ಎಂ.ಡಿ. : ರೂ. 458607/-, 2) ಟೆಂಡರ ಸ್ವೀಕರಿಸುವ ಅಂತಿಮ ದಿನಾಂಕ: 20.07.2024 ಸಮಯ : ಸಾಯಂಕಾಲ 5.21 ಗಂಟೆಗೆ, 3) ಟೆಂಡರ ಸಲ್ಲಿಸಲು ಅಂತಿಮ ದಿನಾಂಕ: 08.08.2024 ಸಮಯ : ಸಾಯಂಕಾಲ 5.00 ಗಂಟೆಗೆ, 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 09.08.2024 ಸಮಯ : ಸಾಯಂಕಾಲ 5.30 ಗಂಟೆಗೆ, 5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 12.08.2024 ಸಮಯ : ಬೆಳಿಗ್ಗೆ 11.30 ಗಂಟೆಗೆ, 6) ಪ್ರಿ ಬಿಡ್ ಸಭೆ ವಿವರ : ದಿನಾಂಕ : 22.07.2024 ಸಮಯ : ಬೆಳಿಗ್ಗೆ 11.30 ಗಂಟೆಗೆ ಸ್ಥಳ : ಕೋಣೆ ಸಂಖ್ಯೆ 13 ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿ ಟ್ಯಾಂಕ ಬಂಡ್ ರೋಡ, ಜಗತ್ತ ಕಲಬುರಗಿ-585101, 7) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಸಹಾಯಕ ಕಾರ್ಯಪಾಲಕ ಅಭಿಯಂತರರು, (ಪರಿಸರ), ಕಲಬುರಗಿ ಮಹಾನಗರ ಪಾಲಿಕೆ ಕಲಬುರಗಿ, 8) ಅಂತರಜಾಲ ತಾಣದ ವಿಳಾಸ: http://kppp.karnataka.gov.in

ಸಹಿ/- ಉಪ ಆಯುಕ್ತರು, (ಅಭಿವೃದ್ಧಿ)
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/201/ಕೆ.ಎಸ್.ಎಂ.ಸಿ.&ಎ/2024-25

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹಾವೇರಿ

ಈ ಕಚೇರಿ ಗುತ್ತಿಗೆ ಪ್ರಕಟಣೆ ಸಂ. 033/ಜಿ/ಗುತ್ತಿಗೆ/8443/2024-25/1116 ದಿನಾಂಕ: 06-07-2024

ಇ-ಟೆಂಡರ್ ಪ್ರಕಟಣೆ

ದಿನಾಂಕ:06-07-2024ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 11218 ಕಾಮಗಾರಿಗಳ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 15-07-2024 (ಮಧ್ಯಾಹ್ನ 4.00 ಗಂಟೆವರೆಗೆ ಮಾತ್ರ) ಮತ್ತು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್ ಸೈಟ್ http://www.kppp.karnataka.gov.inನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/- (ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹಾವೇರಿ)

ವಾ.ಸಾ.ಸಂ/ಹಾವೇರಿ/94/ಟೆಂಡರ್/2024-25

ರಾಷ್ಟ್ರೀಯ ಆರೋಗ್ಯ ಅಭಿಯಾನ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು-23
ದೂ: 080-23113584 ಇ-ಮೇಲ್:pdrch-hfws@karnataka.gov.in

ಸಂ: HFWS-MHOOTHR/16/2024-MH (eOffice No 1351401 ದಿನಾಂಕ: 11.07.2024

ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಣೆ

Printing & Supply of MCP Cards (Thayi Card)

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಬೆಂಗಳೂರು ರವರು ತಾಯಿ ಕಾರ್ಡ್ ಮುದ್ರಣ ಮತ್ತು ಸರಬರಾಜಿಗೆ ಸಂಬಂಧಪಟ್ಟಂತೆ ಉತ್ಪಾದಕರು/ಸರಬರಾಜುದಾರರು ಪ್ರಸ್ತಾವನೆಯನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸುವುದು.

Tender No: DD(MH)/126/2023-24/IND0020

ಟೆಂಡರ್ ದಾಖಲಾತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಂಪೂರ್ಣ ಮಾಹಿತಿಯನ್ನು ದಿನಾಂಕ: 11/07/2024 ರಿಂದ ಡೌನ್‌ಲೋಡ್ ಮಾಡಬಹುದಾಗಿದೆ. ಆಸಕ್ತಿಯುಳ್ಳ ಉತ್ಪಾದಕರು/ಸರಬರಾಜುದಾರರು ಟೆಂಡರ್ ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 22/07/2024 ಸಂಜೆ 05:30 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ಬೆಳಿಗ್ಗೆ 11.00 ರಿಂದ ಸಂಜೆ 05.00 ಗಂಟೆಯವರೆಗೆ ಭೇಟಿ ನೀಡಬಹುದು.

ಸಹಿ/-
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

DIPR/CP/BCPL/892/2024-25

ಕರ್ನಾಟಕ ರಾಜ್ಯ ಪೊಲೀಸ್, ಪೊಲೀಸ್ ಇನ್ಸ್‌ಪೆಕ್ಟರ್, ಆರ್ಥಿಕ ಅಪರಾಧ ದಳ, ಕೇಂದ್ರ ಅಪರಾಧ ವಿಭಾಗ(ಸಿಸಿಬಿ), ಬೆಂಗಳೂರು

ಪ್ರಕಟಣೆ

ಸಾರ್ವಜನಿಕರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶುಶ್ರುತಿ ಸೌಹಾರ್ದ ಸಹಕಾರ ನಿಯಮಿತ ಬ್ಯಾಂಕ್ ಹೆಸರಿನಲ್ಲಿ ಆರೋಪಿಗಳಾದ **ಶ್ರೀನಿವಾಸಮೂರ್ತಿ. ಎನ್, ಶ್ರೀಮತಿ. ಧಾರಿಣಿದೇವಿ, ಶ್ರೀಮತಿ. ಮೋಕ್ಷತಾರ, ಲಕ್ಷ್ಮಿನಾರಾಯಣ, ಡಾ॥ ಪ್ರಶಾಂತ್, ಉಮಾ.ಕೆ ಹಾಗೂ ಪ್ರಶಾಂತ್‌ಕುಮಾರ್ ಹಾಗೂ ನಿರ್ದೇಶಕರು** ಇತರರು ಹೆಚ್ಚಿನ ಲಾಭಾಂಶವನ್ನು ನೀಡುವುದಾಗಿ ಸಾರ್ವಜನಿಕರಿಂದ ಕೋಟ್ಯಾಂತರ ರೂಗಳನ್ನು ಹೂಡಿಕೆ ಮಾಡಿಸಿಕೊಂಡು ಮೋಸ ಮಾಡಿದ್ದು ಅಲ್ಲದೇ **ಸುರೇಶ್.ಹೆಚ್.ಎಸ್, ವೇಣು.ವಿ, ಮಂಜುನಾಥ್.ಎಸ್, ಗಂಗಾಧರ.ಎನ್ ಹಾಗೂ ಇತರೆ ಸಾಲಗಾರರು** ಸಾಲ ಪಡೆದು ಮರುಪಾವತಿ ಮಾಡದೇ ಬ್ಯಾಂಕ್ ಅಧ್ಯಕ್ಷರೊಂದಿಗೆ ಸೇರಿಕೊಂಡು ಬ್ಯಾಂಕ್‌ಗೆ ಮೋಸ ಮಾಡಿದ್ದು, ಈ ಬಗ್ಗೆ ರಾಜಗೋಪಾಲನಗರ ಪೊಲೀಸ್ ಠಾಣೆಯಲ್ಲಿ ಹಾಗೂ ಬೇರೆ ಬೇರೆ ಪೊಲೀಸ್ ಠಾಣೆಗಳಲ್ಲಿ ಒಟ್ಟು ನಾಲ್ಕು ಪ್ರಕರಣಗಳು ದಾಖಲಾಗಿದ್ದು, ಸಿಸಿಬಿ, ಆರ್ಥಿಕ ಅಪರಾಧ ದಳ, ಬೆಂಗಳೂರು ನಗರದಲ್ಲಿ ತನಿಖೆಯಲ್ಲಿ ಇರುತ್ತದೆ.

ಈ ಪ್ರಕರಣದ ಆರೋಪಿಗಳಾದ ಶ್ರೀನಿವಾಸಮೂರ್ತಿ. ಎನ್, ಶ್ರೀಮತಿ. ಧಾರಿಣಿದೇವಿ, ಶ್ರೀಮತಿ. ಮೋಕ್ಷತಾರ, ಲಕ್ಷ್ಮಿನಾರಾಯಣ, ಡಾ॥ ಪ್ರಶಾಂತ್, ಉಮಾ.ಕೆ ಹಾಗೂ ಪ್ರಶಾಂತ್‌ಕುಮಾರ್ ಹಾಗೂ ಬ್ಯಾಂಕ್ ನಿರ್ದೇಶಕರು, ಸಾಲಗಾರರಾದ ಸುರೇಶ್.ಹೆಚ್.ಎಸ್, ವೇಣು.ವಿ, ಮಂಜುನಾಥ್.ಎಸ್, ಗಂಗಾಧರ.ಎನ್ ಹಾಗೂ ಇತರೆ ಸಾಲಗಾರರ ಹೆಸರಿನಲ್ಲಿರುವ ಸ್ಥಿರ ಮತ್ತು ಚರಾ ಆಸ್ತಿಗಳನ್ನು ಸ್ವಾಧೀನ ಪಡಿಸಿಕೊಂಡು, ಕೆ.ಪಿ.ಐ.ಡಿ ಕಾಯಿದೆ-2016ರಂತೆ ಕ್ರಮ ಜರುಗಿಸಬೇಕಾಗಿರುವುದರಿಂದ ಇವರುಗಳ ಹೆಸರಿನಲ್ಲಿರುವ ಸ್ಥಿರ ಮತ್ತು ಚರಾ ಆಸ್ತಿಗಳ ಬಗ್ಗೆ ಮಾಹಿತಿ ತಿಳಿಸಿದಲ್ಲಿ ಮಾಹಿತಿದಾರರ ಹೆಸರನ್ನು ಗೌಪ್ಯವಾಗಿರಿಸಲಾಗುವುದು. ಹಾಗೂ ಈ ಆರೋಪಿಗಳ ಬಳಿ ಹಣ ಹೂಡಿಕೆ ಮಾಡಿ ಹಣ ಕಳೆದುಕೊಂಡಿರುವವರು ಇದ್ದಲ್ಲಿ ಈ ಕೆಳಕಂಡ ಅಧಿಕಾರಿಯವರಿಗೆ ಮಾಹಿತಿ ನೀಡಲು ಕೋರಿದೆ.

ಸಹಿ/- ಸಂತೋಷ್ ರಾಮ್.ಆರ್, ಪೊಲೀಸ್ ಇನ್ಸ್‌ಪೆಕ್ಟರ್,
ಆರ್ಥಿಕ ಅಪರಾಧ ದಳ, ಸಿಸಿಬಿ, ಬೆಂಗಳೂರು. ಮೊ: 9480801562

ಕರ್ನಾಟಕ ರಾಜ್ಯ ಪೊಲೀಸ್, ಪೊಲೀಸ್ ಇನ್ಸ್‌ಪೆಕ್ಟರ್, ಆರ್ಥಿಕ ಅಪರಾಧ ದಳ, ಕೇಂದ್ರ ಅಪರಾಧ ವಿಭಾಗ(ಸಿಸಿಬಿ), ಬೆಂಗಳೂರು

ಪ್ರಕಟಣೆ

ಸಾರ್ವಜನಿಕರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, **G.G. Online Pvt. Ltd** ಹೆಸರಿನಲ್ಲಿ ಆರೋಪಿಗಳಾದ **ಶ್ರೀಕಂಠ.ಎಂ.ಎಸ್, ಸತೀಶ್.ಎಂ.ಎಸ್, ಮತ್ತು ದೀಪಕ್.ಕೆ.ಆರ್,** ಎಂಬುವವರು ಹೆಚ್ಚಿನ ಲಾಭಾಂಶವನ್ನು ನೀಡುವುದಾಗಿ ಸಾರ್ವಜನಿಕರಿಂದ ಕೋಟ್ಯಾಂತರ ರೂಗಳನ್ನು ಹೂಡಿಕೆ ಮಾಡಿಸಿಕೊಂಡು ಮೋಸ ಮಾಡಿದ್ದು, ಈ ಬಗ್ಗೆ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಎರಡು ಪ್ರಕರಣಗಳು ದಾಖಲಾಗಿದ್ದು, ಸಿಸಿಬಿ, ಆರ್ಥಿಕ ಅಪರಾಧ ದಳ, ಬೆಂಗಳೂರು ನಗರದಲ್ಲಿ ತನಿಖೆಯಲ್ಲಿ ಇರುತ್ತದೆ.

ಈ ಪ್ರಕರಣದ ಆರೋಪಿಗಳಾದ ಶ್ರೀಕಂಠ.ಎಂ.ಎಸ್, ಸತೀಶ್.ಎಂ.ಎಸ್, ಮತ್ತು ದೀಪಕ್.ಕೆ.ಆರ್, ಹೆಸರಿನಲ್ಲಿರುವ ಸ್ಥಿರ ಮತ್ತು ಚರಾ ಆಸ್ತಿಗಳನ್ನು ಸ್ವಾಧೀನ ಪಡಿಸಿಕೊಂಡು, ಬಡ್ಸ್ ಕಾಯಿದೆ-2019ಯಂತೆ ಕ್ರಮ ಜರುಗಿಸಬೇಕಾಗಿರುವುದರಿಂದ ಇವರುಗಳ ಹೆಸರಿನಲ್ಲಿರುವ ಸ್ಥಿರ ಮತ್ತು ಚರಾ ಆಸ್ತಿಗಳ ಬಗ್ಗೆ ಮಾಹಿತಿ ತಿಳಿಸಿದಲ್ಲಿ ಮಾಹಿತಿದಾರರ ಹೆಸರನ್ನು ಗೌಪ್ಯವಾಗಿರಸಲಾಗುವುದು. ಹಾಗೂ ಈ ಆರೋಪಿಗಳ ಬಳಿ ಹಣ ಹೂಡಿಕೆ ಮಾಡಿ ಹಣಕಳೆದುಕೊಂಡಿರುವವರು ಇದ್ದಲ್ಲಿ ಈ ಕೆಳಕಂಡ ಅಧಿಕಾರಿಯವರಿಗೆ ಮಾಹಿತಿ ನೀಡಲು ಕೋರಿದೆ.

ಸಹಿ/- ಸಂತೋಷ್ ರಾಮ್.ಆರ್, ಪೊಲೀಸ್ ಇನ್ಸ್‌ಪೆಕ್ಟರ್,
ಆರ್ಥಿಕ ಅಪರಾಧ ದಳ, ಸಿಸಿಬಿ, ಬೆಂಗಳೂರು.
ದೂ: 08022943152, ಮೊ: 9480801562

ಬೆಳಗಾವಿ ಮಹಾನಗರ ಪಾಲಿಕೆ

ಸುಭಾಷನಗರ, ಬೆಳಗಾವಿ – 590016
Email : itstaff_ulb_belgaum@yahoo.com. Website : www.belgaumcity.mrc.gov.in

ಗುತ್ತಿಗೆ ಸಂಖ್ಯೆ:ಮನಪಾ/ಲೋ.ಶಾ/ಕಾಅ/ಘವನಿ/ಟಿಎನ್‌ಡಿ/ಇಪ್ರೋ-03/2024-25 ದಿನಾಂಕ: 09-07-2024

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್)

ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999 – 2000 ಪ್ರಕಾರ ಆಕ್ಟ್ 2000 ನಿಯಮದಂತೆ ಸ್ವಚ್ಛ ಭಾರತ ಮಿಷನ್ – 2.0 ಯೋಜನೆಯಡಿ ಮಂಜೂರಾದ Disposal of Legacy Waste ಕಾಮಗಾರಿಗೆ ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **12-08-2024 ರಂದು ಇರುತ್ತದೆ**. ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್: https://www.kppp.karnataka.gov.in ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಆಯುಕ್ತರು
ಮಹಾನಗರ ಪಾಲಿಕೆ, ಬೆಳಗಾವಿ

ವಾಸಾಸಂಇ/ಬೆಳಗಾವಿ/360/ಅಡ್ವರ್ಟೋ/2024-25

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು

ನಂ. 30, ಪ್ರಸನ್ನಕುಮಾರ ಬ್ಲಾಕ್, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು-560009
ವೆಬ್: www.kshec.karnataka.gov.in | ದೂ. ಸಂ.: 080-22341395

No.: KSHEC/06/Outsource staff/2024-25 & KSHEC/07/Cleaning and Maintenance2024-25 Date: 09.07.2024

ಟೆಂಡರ್ ಅಧಿಸೂಚನೆ

2024-25ನೇ ಸಾಲಿನ ಅವಧಿಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಹೊರಗುತ್ತಿಗೆ ಸಿಬ್ಬಂದಿ ಏಜೆನ್ಸಿಯನ್ನು ನೇಮಿಸಲು ಮತ್ತು ಪರಿಷತ್ತಿನ ಕಟ್ಟಡದ ಸ್ವಚ್ಛತೆ ಮತ್ತು ಗಾರ್ಡನ್ ನಿರ್ವಹಣೆಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿಲಕೋಟೆ ಮೂಲಕ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನ್ನು ಸಂಪರ್ಕಿಸಬಹುದಾಗಿದೆ.

ಸಹಿ/-
ಕಾರ್ಯನಿರ್ವಾಹಕ ನಿರ್ದೇಶಕರು,

ವಾಸಾಸಂಇ/ವಾ.ಪ್ರ/ಜಿಎ/857/2024-25

ಪುರಸಭೆ ಕಾರ್ಯಾಲಯ, ನವಲಗುಂದ

ಕ್ರಸಂ.: ಪುಸನ/ಎಸ.ಬಿ.ಎಂ 1.0/ಎಸ್.ಎಫ್.ಸಿ.ಕು.ನಿ.ಸ.ಪ/23-24/ಟೆಂಡರ್/ವಹಿ/2024-25 ದಿನಾಂಕ: 11-07-2024

ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಮುಖ್ಯಾಧಿಕಾರಿಗಳು, ಪುರಸಭೆ ನವಲಗುಂದ ಇವರಿಂದ ನವಲಗುಂದ ಪುರಸಭೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000 ಪ್ರಕಾರ ಆ್ಯಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಮುಖಾಂತರ ದ್ವಿ-ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

(1) ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಚಾಲ್ತಿಗೆ ಬರುವ ದಿನಾಂಕ: **11-07-2024**. (2) ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **25-07-2024**. (3) ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ: **as per kppp portal.** (4) ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಅ. ನಂ.	ಕಾಮಗಾರಿಯ / ಇಂಡೆಂಟ್ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಅನುದಾನ
1	DMA/2024-25/EL/WORKINDENT21419	12.21	ಎಸ್.ಬಿ.ಎಂ.1.0
2	DMA/2024-25/OW/WORKINDENT21500	3.00	ಎಸ್.ಎಫ್.ಸಿಕು.ನಿಸ.ಪ 2023-24
3	DMA/2024-25/OW/WORKINDENT21499	1.12	ಎಸ್.ಎಫ್.ಸಿಕು.ನಿಸ.ಪ 2023-24

ಸೂಚನೆ : ಯಾವುದೇ ತಿದ್ದುಪಡಿ ಅಥವಾ ಬದಲಾವಣೆಯನ್ನು ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ತಿಳಿಸಲಾಗುತ್ತದೆ.

ಸಹಿ/- ಶ್ರೀ ವೆಂಕಟೇಶ ನಾಗನೂರ, ಮುಖ್ಯಾಧಿಕಾರಿಗಳು
ಪುರಸಭೆ, ನವಲಗುಂದ

ವಾಸಾಸಂಇ/ಧಾರವಾಡ/156/ ಅಡ್ವರ್ಟೋ/2024-25

ನೆಫ್ರೋ-ಯುರಾಲಜಿ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ ನೋಂದಣಿ ಸಂ-1052/03-04)
ವಿಕ್ಟೋರಿಯ ಆಸ್ಪತ್ರೆ ಆವರಣ, ಬೆಂಗಳೂರು-560 002. ದೂ:080-26700527
ಇ-ಮೇಲ್: nephrourology.institute@gmail.com ವೆಬ್‌ಸೈಟ್: www.nephrourology.karnataka.gov.in

ಸಂಖ್ಯೆ:INU/TND/DDS/01/2024-25 ದಿನಾಂಕ: 11.07.2024

ಪ್ರಕಟಣೆ (ಕೆಪಿಪಿಪಿ ವಿಧಾನದ ಮೂಲಕ)

ನೆಫ್ರೋ-ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು-560 002. ಇಲ್ಲಿಗೆ ಈ ಕೆಳಗೆ ನಮೂದಿಸಿರುವ ವಿಷಯಗಳಿಗೆ ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ.

1) Procurement of Drugs, Disposables, Sutures and Misc., Items RC-I.
2) Procurement of Dialysis Items for Kranthiveera Sangolli Rayanna Dialysis Center, Govindarajanagar.
3) Procurement of Drugs, Disposables, Sutures and Misc., Items Institute of Nephro-Urololgy Unit, Mysuru.

Last Date for Online Submission of Tender is 10.08.2024 at 5.30 P.M

1) Procurement of Lab Consumables and Chemical Reagents (CALL 3).
2) Pest Control Service.
3) Electrical Maintenance (Call -2).

Last Date For Online Submission of Tender is 26.07.2024 at 5.30 P.M

ಟೆಂಡರ್‌ಗೆ ಸಂಬಂಧಪಟ್ಟಂತೆ, ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ https://kppp.karnataka.gov.in ದಲ್ಲಿ ಪಡೆದುಕೊಳ್ಳಬಹುದು.

ಸೂಚನೆ:- ಈ ಟೆಂಡರ್‌ಗೆ ಸಂಬಂಧಪಟ್ಟಂತೆ, ಮುಂದಿನ ಪ್ರಕ್ರಿಯೆಗಳ ಬಗ್ಗೆ (further information and announcements) ತಿಳಿದುಕೊಳ್ಳಲು ನಮ್ಮ ಸಂಸ್ಥೆಯ ಅಂತರ್ಜಾಲ https://nephrourology.karnataka.gov.in/ ದಲ್ಲಿ ವೀಕ್ಷಿಸಬಹುದು.

ಸಹಿ/-ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಪೋಷಕರ ಪತ್ತೆಗಾಗಿ ಪ್ರಕಟಣೆ

ಈ ಭಾವಚಿತ್ರದಲ್ಲಿರುವ ಸುಮಾರು ಮೂರು ತಿಂಗಳ ಹೆಣ್ಣು ಮಗುವು ದಿನಾಂಕ:07-07-2024ರಂದು ತಿಪಟೂರು ತಾಲ್ಲೂಕಿನ ಹೆಡಗರಹಳ್ಳಿ ಜನತಾ ಕಾಲೋನಿ ಸಮೀಪದ ಮಾರನವಮಿ ಮಂಟಪದ ಹತ್ತಿರ ಸಂಜೆ 6-30 ಗಂಟೆಗೆ ದೊರೆತಿದ್ದು, ಸದರಿ ಮಗುವು ಕಂದು ಬಣ್ಣ, ದುಂಡು ಮುಖವುಳ್ಳದ್ದಾಗಿದ್ದು, ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿರುತ್ತದೆ. ಸದರಿ ಮಗುವಿನ ಪೋಷಕರು ಯಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ **ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲಭವನ, ಎಂ.ಜಿ ರಸ್ತೆ, ತುಮಕೂರು ದೂರವಾಣಿ ಸಂಖ್ಯೆ: 0816-2956699** ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ:ತುಮಕೂರು
ದಿನಾಂಕ: 09.07.2024

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/134/KSMCA/2024-25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಮೈಸೂರು ವಿಭಾಗ: ಮೈಸೂರು

ಸಂ: ಕರಾಸಾ/ಕಾನಿಅ/ಮೈ/ಕಿಅ/148/2024-25 ದಿನಾಂಕ:10.07.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 01/2024-25
(ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ)

ಕರ್ನಾಟಕ ಲೋಕೋಪಯೋಗಿ ಇಲಾಖೆ/ ಸಿ.ಪಿ.ಡಬ್ಲ್ಯೂಡಿ ನಲ್ಲಿ ನೋಂದಾಯಿತ-ರಾಗಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಗಿನ ಕಾಮಗಾರಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರಕಟಣೆ ಸಂ.01ಕ್ಕೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

ಕ್ರ. ಸಂ	ಕಾಮಗಾರಿ ಹೆಸರು	ಟೆಂಡರಿಗಿಟ್ಟ ಮೊತ್ತ ರೂ (ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ ರೂ.ಗಳಲ್ಲಿ
1	ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು ಬಸರಾಳುವಿನಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸುವುದು. (2ನೇಕರೆ)	126.26	2,00,000/-

1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 22.07.2024. 2) ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ವಿವರಗಳನ್ನು ದಿನಾಂಕ: 11.07.2024ರ ನಂತರ ಪಡೆದುಕೊಳ್ಳಬಹುದು. 3) ಹೆಚ್ಚಿನ ಮಾಹಿತಿಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಕ.ರಾ.ರ.ಸಾ.ನಿಗಮ ಮೈಸೂರು, ನೆಲ್ಸನ್ ಮಂಡೇಲ ರಸ್ತೆ, ಬನ್ನಿಮಂಟಪ, ಮೈಸೂರು ಇಲ್ಲಿ ಕಚೇರಿ ದಿನಗಳಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ದೂರವಾಣಿ ಸಂಖ್ಯೆ: 0821-2498828.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕ.ರಾ.ರ.ಸಾ.ನಿ. ಕಾಮಗಾರಿ ವಿಭಾಗ, ಮೈಸೂರು.

ವಾಸಾಸಂಇ/ವಾಪ್ರ/ಜಿಎ/894/2024-25

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ

ಮಂಡ್ಯ ಜಿಲ್ಲೆ-571401
ದೂರವಾಣಿ ಸಂಖ್ಯೆ: 08232-224027
ಇ-ಮೇಲ್ ವಿಳಾಸ: dho.mandya@gmail.com

ಸಂಖ್ಯೆ:/ಸರಬ/48/2023-24 ದಿನಾಂಕ:10.07.2024

ಅಲ್ಪಾವಧಿ ಟೆಂಡರ್ (ಕಾಲ್-4) ಪ್ರಕಟಣೆ

ವಿಷಯ:- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿಯ ಅಧೀನದಲ್ಲಿ ಬರುವ ಸಮುದಾಯ ಆರೋಗ್ಯ ಕೇಂದ್ರಗಳಿಗೆ 2024-25 ನೇ ಸಾಲಿಗೆ 24 ಮಂದಿ ನಾನ್ ಕ್ಲಿನಿಕಲ್ ಸ್ವಚ್ಛತಾ ಕಾರ್ಮಿಕರನ್ನು ಹೊರಗುತ್ತಿಗೆ ಮೂಲಕ ಪಡೆಯಲು ಅಲ್ಪಾವಧಿ ಟೆಂಡರ್ (ಕಾಲ್-4) ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ:- (1)ಆಯುಕ್ತರು ಆಕುಕ ಸೇವೆಗಳ ಆಯುಕ್ತಾಲಯ ಬೆಂಗಳೂರು ಇವರ ಸುತ್ತೋಲೆ ದಿ:13.01.2020 ರಂತೆ. (2)ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ರವರು ಇದೇ ಕಡತದ ಕಂಡಿಕೆ 50 ರಲ್ಲಿ ಅನುಮೋದಿಸಿರುವ ದಿನಾಂಕ:06.06.2024

ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ರವರ ಅನುಮೋದನೆಯಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಮಂಡ್ಯ ರವರ ಅಧೀನದ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಗ್ರೂಪ್ ಡಿ ಹುದ್ದೆಗಳಲ್ಲಿ "24 ಸಂಖ್ಯೆ ನಾನ್ ಕ್ಲಿನಿಕಲ್ ಸ್ವಚ್ಛತಾ ಕಾರ್ಮಿಕರ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯಲು" ಹೊರಗುತ್ತಿಗೆ ಏಜೆನ್ಸಿ ಸಂಸ್ಥೆಗಳ ಮೂಲಕ ಮಾನವ ಸಂಪನ್ಮೂಲ ಏಜೆನ್ಸಿಯಿಂದ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP)1999 ನಿಯಮಗಳು 2000 ರ ಪ್ರಕಾರ E-Procurement ಮೂಲಕ ಅಲ್ಪಾವಧಿ ಟೆಂಡರ್ (ಕಾಲ್-4) ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ವಿಳಾಸ http://eproc.karnataka.gov.in ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಇ-ಪೋರ್ಟಲ್‌ನಲ್ಲಿ ಕಾಣಿಸಿದ ನಿಬಂಧನೆಗಳು ಟೆಂಡರ್ ಇ.ಎಂ.ಡಿ ಮೊತ್ತ ಹಾಗೂ ಇತರ ವಿವರಗಳನ್ನು ಗಮನಿಸಿ ಕ್ರಮವಹಿಸುವುದು. ಟೆಂಡರ್ ದಿನಾಂಕಗಳ ವಿವರ ಈ ಕೆಳಕಂಡಂತೆ ಇರುತ್ತದೆ. ಮುಂದಿನ ಯಾವುದೇ ಬದಲಾವಣೆಗಳು ಇದ್ದಲ್ಲಿ ಇ-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

(1) ಟೆಂಡರ್‌ನ್ನು ಇ-ಪೋರ್ಟಲ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ : **10.07.2024 ರಿಂದ**. (2) ಇ-ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : **20.07.2024 ಸಂಜೆ 5.30 ರವರೆಗೆ.** (3) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **22.07.2024 ಬೆಳಿಗ್ಗೆ 11:00 ಗಂಟೆಗೆ ನಂತರ.** (4) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ: **23.07.2024 ರಂದು ಆರ್ಥಿಕ ಲಕೋಟೆಯನ್ನು ತೆರೆಯಲಾಗುವುದು.** (5) ಟೆಂಡರಿನ ಅಂದಾಜು ಮೊತ್ತ. : **ರೂ.79,00,000/-(ಎಪ್ಪತ್ತೊಂಬತ್ತು ಲಕ್ಷ ರೂಗಳು).** (6) ಟೆಂಡರ್‌ಗೆ ನಿಗಧಿಪಡಿಸಿದ ಇ.ಎಂ.ಡಿ. (2.5%) : **ರೂ.1,97,500/ (ಒಂದು ಲಕ್ಷದ ತೊಂಬತ್ತೇಳು ಸಾವಿರದ ಐದು ನೂರ ರೂ ಗಳು).** (7) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿ, ಮಂಡ್ಯ ಇಮೇಲ್: dho.mandya@gmail.com ದೂರವಾಣಿ: 08232-224027**

ಸಹಿ/-ಜಿಲ್ಲಾ ಆರೋಗ್ಯ ಮತ್ತು ಕುಟುಂಬ,
ಕಲ್ಯಾಣಾಧಿಕಾರಿಗಳು, ಮಂಡ್ಯ

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/161/2024-25

ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 32, ಡಾ. ಬಾಬು ಜಗಜೀವನ ರಾಂ ಲಿಡ್‌ಕರ್ ಭವನ, ಮಿಲ್ಲರ್ಸ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಂಗಳೂರು-560 052.
ದೂರವಾಣಿ ಸಂಖ್ಯೆ: 919535168765/080-22288895/22288897 ಇ-ಮೇಲ್: lidkar2018@gmail.com

ಟೆಂಡರ್ ಸಂಖ್ಯೆ: ಲಿಡ್‌ಕರ್/ಆಡಳಿತ/ಲೇಖನಾ ಸಾಮಗ್ರಿ/ಸಿಆರ್-36/2024-25 ದಿನಾಂಕ.11.07.2024

ಅಲ್ಪಾವಧಿ -ಟೆಂಡರ್ ಪ್ರಕಟಣೆ Call-2 Tender Number:Lidkar/2023-24/IND0009/Call-2

ನಿಗಮದ ಕೇಂದ್ರ ಕಛೇರಿಗೆ ಲೇಖನಾ ಸಾಮಗ್ರಿಗಳನ್ನು **Competent Authority** ಯಿಂದ ನೋಂದಾಯಿಸಲ್ಪಟ್ಟ ಸರಬರಾಜುದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರಕಟಣೆ ದಿನಾಂಕ:11.07.2024 ಹಾಗೂ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ. 25.07.2024 ಮಧ್ಯಾಹ್ನ 2.00 ಗಂಟೆಗೆ ಮತ್ತು ದಿನಾಂಕ.29.07.2024 ಸಂಜೆ 4.00 ಗಂಟೆಗೆ ತಾಂತ್ರಿಕ ಬಿಡ್ ತೆರೆಯಲಾಗುವುದು. ಇ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದ್ದು, ಅವಶ್ಯಕವಿರುವ ವಿವರಗಳನ್ನು ವೆಬ್‌ಸೈಟ್ : https://eproc.karnataka.gov.in ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳಸಹಿದಾರರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು
(ವಾಣಿಜ್ಯ & ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)

DIPR/CP/863/Zen/2024-25

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಯಚೂರು.

ಕಛೇರಿ:235306 E-Maill.Id-apmcraichur@rediffmail.com, apmcrcr@gmail.com

ಕ್ರ.ಸಂ: ಕೃಉಮಾಸ/ರಾ/ವಾಕ್ರಿಯೋ/ 336 /2024-25 ದಿನಾಂಕ: 09-07-2024

-: ಸಂಕ್ಷಿಪ್ತ ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ:-

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಯಚೂರು ವತಿಯಿಂದ ಕರ್ನಾಟಕ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಸಮಿತಿಯ 2023-24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾದ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ ಹಾಗೂ ನಿಯಮಗಳು 1999-2000 ರನ್ವಯ Standard Tender Document - KW-3 ಪ್ರಕಾರ ಇ-ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಎರಡು ಟೆಂಡರ್ ಡಾಕ್ಯೂಮೆಂಟ್ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

1) **ಕಾಮಗಾರಿಯ ಹೆಸರು:** ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2023-24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾದ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ. **ಶೆಡ್ಯೂಲ್-ಬಿ ಮೊತ್ತ (ರೂ.ಗಳಲ್ಲಿ):** 69,86,866/-. **ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):** 1,39,737/-. **ಕಾಮಗಾರಿಯ ಕಾಲಾವಧಿ (ಮಳೆಗಾಲ ಹೊರತುಪಡಿಸಿ):** 90 ದಿನಗಳು (ಮಳೆಗಾಲ ಹೊರತುಪಡಿಸಿ) **ಇ-ಪ್ರೋಸೆಸ್ಸಿಂಗ್ ಫೀ:** ಇ-ಪ್ರೋಕ್ಯೂರ್ ಮೆಂಟ್ KW-3 ನಂತೆ.**ಅರ್ಹ ಗುತ್ತಿಗೆದಾರರ ವರ್ಗ:** ದರ್ಜೆ-2 ಮತ್ತು ಮೇಲ್ಪಟ್ಟು

ವೇಳಾಪಟ್ಟಿ :1) ಟೆಂಡರ್ ಪೂರ್ವಭಾವಿ ಸಭೆ ಸಮಿತಿಯ ಕಛೇರಿಯಲ್ಲಿ ದಿನಾಂಕ:24-07-2024 ಬೆಳಿಗ್ಗೆ 11:00 2) ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೋರ್ಟನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 25-07-2024 ಸಾಯಂಕಾಲ 4:00 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29-07-2024 ಬೆಳಿಗ್ಗೆ 11:00 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 08-08-2024 ಬೆಳಿಗ್ಗೆ 11:00

ಹೆಚ್ಚಿನ ಮಾಹಿತಿಗಾಗಿ ಸಮಿತಿಯ ಕಾರ್ಯಾಲಯದಿಂದ ಹಾಗೂ ಇ-ಪ್ರೊಕ್ಯೂರಮೆಂಟ್ ಸಹಾಯವಾಣಿ 080-22485867 ಮತ್ತು ಕಾರ್ಯದರ್ಶಿ, ಕೃ.ಉ.ಮಾ.ಸ. ರಾಯಚೂರು (ಸಹಾಯವಾಣಿ 08532-25501216ನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಯಚೂರು.

ಸಹಿ/- ಅಧ್ಯಕ್ಷರು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಯಚೂರು.

DIP/RCR/94/KSMC&A/93/2024-25

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ / CHAMUNDESHWARI ELECTRICITY SUPPLY CORPORATION LIMITED

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-2544963

(A Government of Karnataka Undertaking)
Corporate Office,
CESC, Mysuru-570017
Web Site: www.cescmysore.karnataka.gov.in
E-mail ID:gmproj@cescmysore.org

Company Identity Number[CIN]:- U40109KA2004SGC035177

ಸಂ: ಚಾವಿಸನಿನಿ/ಪ್ರವ್ಯ(ಯೋ)/ಉಪ್ರವ್ಯ-1/ಸಪ್ರವ್ಯ-1/2024-25/7187-88 ದಿನಾಂಕ: 10.07.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಆಹ್ವಾನಿಸಿದೆ.

ಕಾಮಗಾರಿ ವಿವರ	ವಿಚಾರಣಾ ಸಂಖ್ಯೆ
ಚಾವಿಸನಿನಿ ವ್ಯಾಪ್ತಿಯ ಹಾಡಿಗಳಲ್ಲಿ ವಾಸವಿರುವ 179 ಸಂಖ್ಯೆಯ ವಿದ್ಯುತ್ ರಹಿತ ಕುಟುಂಬಗಳಿಗೆ ಪ್ರಧಾನ ಮಂತ್ರಿ – ಜನ್‌ಮನ್ ಯೋಜನೆಯ ಹೊಸ ಸೌರಶಕ್ತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸುವುದು ಮತ್ತು 5 ವರ್ಷಗಳ ನಿರ್ವಹಣೆ ಮಾಡುವುದು.	CESC/Pr-1/ 2024-25/033

ಸದರಿ ಕಾಮಗಾರಿ ಮತ್ತು ಟೆಂಡರ್‌ನ ವಿವರಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.in ನಲ್ಲಿ ದಿನಾಂಕ: 10.07.2024 ಅಥವಾ ನಂತರ ಪಡೆಯಬಹುದಾಗಿರುತ್ತದೆ. ಕೆಪಿಪಿ ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ +91-8046010000/ 8068948777 ಗೆ ಅಥವಾ ಇ-ಮೇಲ್ ವಿಳಾಸ support@eprochelpdesk.com ಗೆ ಸಂಪರ್ಕಿಸಬಹುದಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/- ಪ್ರಧಾನ ವ್ಯವಸ್ಥಾಪಕರು, ಯೋಜನೆಗಳು, ಚಾವಿಸನಿನಿ, ಮೈಸೂರು

DIPR/DDMYS-249/KSMCA-174/2024-25

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು

ಸಂ. ಕಾನಿಅ/ಗ್ರಾನೀಸ&ನೈ/ವಿರಾ/ತಾ.ಶಾ/ಎಎಒ-2024-25/ಇ-ಟೆಂಡರ/ ದಿನಾಂಕ:08-07-2024

ಇ-ಪ್ರೋಕ್ಯೂರಮೆಂಟ ಅಲ್ಪಾವಧಿ ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ಇವರು KW-1,2, 3 & 4 (Standard Bid Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ ಇಂಜಿನೀಯರಿಂಗ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ-ಗುತ್ತಿಗೆ ಕುರಿತು ಇ-ಪ್ರೋಕ್ಯೂರಮೆಂಟ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ KKRDB, MVS O&M &Jal Jeevan Mission(JJM) ಯೋಜನೆಯಡಿಯ ಕೇಂದ್ರ & ರಾಜ್ಯ (90%) ಮತ್ತು ಸಮುಧಾಯ ವಂತಿಕೆ (10%) ಅನುದಾನದಡಿಯಲ್ಲಿ ರಾಯಚೂರು ಜಿಲ್ಲೆಯ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ ಐಟಂವಾರು ಟರ್ನ ಕೀ ಆಧಾರದ ಮೇಲೆ ಇ-ಟೆಂಡರ ಆಹ್ವಾನಿಸಲಾಗಿದೆ.

1] E-Payment/NEFT ಮುಖಾಂತರ ಅರ್ಜಿ ಸ್ವೀಕರಿಸುವ ದಿನಾಂಕ : 09-07-2024 2] ಶೆಡ್ಯೂಲಗಳನ್ನು Online ನಲ್ಲಿ ಬಿಡುವ ದಿನಾಂಕ : 09-07-2024 3] ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 23-07-2024 ಸಂಜೆ 4:30 ಗಂಟೆವರೆಗೆ 4] ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 24-07-2024 ಸಂಜೆ 5:30ಗಂಟೆ ಸಾಧ್ಯವಿದ್ದಲ್ಲಿ 5] ಆರ್ಥಿಕ ಬಿಡ್ ತೆರೆಯುವ ದಿನಾಂಕ : 25-07-2024 ಸಂಜೆ 5:30ಗಂಟೆಗೆ ಸಾಧ್ಯವಿದ್ದಲ್ಲಿ

Indent Nos.:- Raichur: 8253

ಕಾಮಗಾರಿಗಳ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ https://kppp.karnataka.gov.in/ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ನೀ.ಸ &ನೈ ವಿಭಾಗ, ರಾಯಚೂರು.

DIP/RCR/87/KSMC&A/86/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಸತ್ತ ಮೇಲೆ ಮಲಗೋದು ಇದ್ದೇ ಇದೆ. ಎದ್ದಿದ್ದಾಗ ಏನನ್ನಾದರೂ ಸಾಧಿಸು.

-ಶಂಕರ್ ನಾಗ್

‘ಮುಡಾ’ ನಿವೇಶನ ಹಗರಣ ನಿಷ್ಪಕ್ಷಪಾತ ತನಿಖೆ ಅಗತ್ಯ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರ ರೂಪದಲ್ಲಿ ನಿವೇಶನ ಹಂಚಿಕೆ ಮಾಡಿರುವಲ್ಲಿ ದೊಡ್ಡ ಮಟ್ಟದಲ್ಲಿ ಅಕ್ರಮ ನಡೆದಿದೆ ಎಂಬ ಆರೋಪವು ಹೆಚ್ಚು ಸದ್ದು ಮಾಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಭೂಪರಿಹಾರ ರೂಪದಲ್ಲಿ ಹಂಚಿಕೆ ಮಾಡಬೇಕಾಗಿದ್ದ ಎರಡು ನಿವೇಶನಗಳ ಬದಲು 14 ನಿವೇಶನಗಳನ್ನು ನೀಡಲಾಗಿದೆ ಎಂಬುದು ವಿರೋಧ ಪಕ್ಷಗಳ ಆರೋಪ. ಮಲ್ಲಿಕಾರ್ಜುನ ಸ್ವಾಮಿ ಅವರು ಖರೀದಿಸಿದ್ದ 3 ಎಕರೆ 16 ಗುಂಟೆ ಜಮೀನನ್ನು ತಮ್ಮ ತಂಗಿ ಪಾರ್ವತಿಯವರಿಗೆ ದಾನ ರೂಪದಲ್ಲಿ ನೀಡಿದ್ದರು. ‘ಮಲ್ಲಿಕಾರ್ಜುನ ಸ್ವಾಮಿ ಖರೀದಿಸುವ ಮೊದಲೇ ಈ ಜಮೀನು ಮುಡಾ ಸ್ವಾಧೀನದಲ್ಲಿತ್ತು. ಕಂದಾಯ ದಾಖಲೆಗಳಲ್ಲಿ ಮುಡಾ ಹೆಸರಿನಲ್ಲಿದ್ದ ಜಮೀನನ್ನು ಖರೀದಿ ಮಾಡಲು ಹೇಗೆ ಸಾಧ್ಯ’ ಎಂಬುದು ಬಿಜೆಪಿ ವಾದ. ಇದಕ್ಕೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, ‘ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಈ ಹಂಚಿಕೆ ಆಗಿದೆ. ಆ ಪಕ್ಷದವರೇ ಮುಡಾ ಸದಸ್ಯರಾಗಿದ್ದರು. ಕಾನೂನು ಪ್ರಕಾರವೇ ಹಂಚಿಕೆ ನಡೆದಿದೆ. ನಿವೇಶನ ವಾಪಸ್ ಕೊಡಲು ನಾವು ತಯಾರಿದ್ದು, ಜಮೀನಿನ ಮೌಲ್ಯ ಹಾಗೂ ಬಡ್ಡಿ ಸೇರಿ ₹62 ಕೋಟಿ ಕೊಡಲಿ’ ಎಂಬ ಸವಾಲನ್ನೂ ಹಾಕಿದ್ದಾರೆ. ನಿವೇಶನ ಹಂಚಿಕೆಯಂತಹ ಪ್ರಕರಣಗಳಲ್ಲಿ ಕಾನೂನಿನ ಪರಿಮಿತಿಯ ಆಚೆಗೆ ನುಸುಳುವ ಚಾಳಿ ಅನೂಚಾನವಾಗಿ ನಡೆಯುತ್ತಲೇ ಇದೆ. ನಗರ ಪ್ರದೇಶಗಳು ವಿಸ್ತರಣೆಗೊಳ್ಳುತ್ತಾ ಹೋದಂತೆ ನಿವಾಸಿಗಳಿಗೆ ಸೂರು ಕಟ್ಟಿಕೊಳ್ಳಲು ನಿವೇಶನ ಕಲ್ಪಿಸಲು ಪ್ರಾಧಿಕಾರಗಳನ್ನು ರಚಿಸಲಾಯಿತು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು (ಬಿಡಿಎ) ಬಿಟ್ಟು ಉಳಿದ 30ಕ್ಕೂ ಹೆಚ್ಚು ಪ್ರಾಧಿಕಾರಗಳ ನಡಾವಳಿ, ಭೂಸ್ವಾಧೀನ, ನಿವೇಶನ ಅಭಿವೃದ್ಧಿ ಮತ್ತು ಹಂಚಿಕೆಗೆ ಸಂಬಂಧಿಸಿ ನಿರ್ದಿಷ್ಟ ನಿಯಮಗಳಿವೆ. ನಗರ ಪ್ರದೇಶಗಳು ಬೇಕಾಬಿಟ್ಟಿ ವಿಸ್ತರಣೆಯಾಗುವ ಬದಲು ಯೋಜಿತ ಮತ್ತು ಸಕಲ ಸೌಲಭ್ಯವಿರುವ ಬಡಾವಣೆಗಳನ್ನು ನಿರ್ಮಿಸುವುದು ಪ್ರಾಧಿಕಾರದ ಹೊಣೆ. ಉದ್ದೇಶಿತ ಆಶಯ ಮರೆತ ಪ್ರಾಧಿಕಾರಗಳು ನಗರ ಯೋಜನೆಯ ಬಗ್ಗೆ ಕಾಳಜಿ ವಹಿಸದೇ ಭೂವ್ಯವಹಾರ ಹಾಗೂ ಭೂದಂಧೆಗೆ ಇಳಿದಿದ್ದರಿಂದಾಗಿ ಅವು ಅಕ್ರಮಗಳ ಕೂಪಗಳಾಗಿವೆ. ರಿಯಲ್ ಎಸ್ಟೇಟ್ ಸಂಸ್ಥೆಗಳಿಗೂ ಪ್ರಾಧಿಕಾರಗಳಿಗೂ ವ್ಯತ್ಯಾಸವೇ ಕಾಣಿಸದಂತಾಗಿದೆ. ಸರ್ಕಾರದ ಉಸ್ತುವಾರಿಯಲ್ಲಿರುವ ಪ್ರಾಧಿಕಾರಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ಆಯಾ ಕಾಲದ ಆಡಳಿತ ಪಕ್ಷಗಳೇ ನೇಮಕ ಮಾಡುತ್ತವೆ. ಶಾಸಕರೂ ಸದಸ್ಯರಾಗಿರುತ್ತಾರೆ. ಕಾಂಗ್ರೆಸ್, ಬಿಜೆಪಿ ಅಥವಾ ಜೆಡಿಎಸ್ ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ಪ್ರಾಧಿಕಾರಗಳ ಅಧ್ಯಕ್ಷ ಅಥವಾ ಸರ್ಕಾರಿ ಅಧಿಕಾರಿಯಾಗಿರುವ ಆಯುಕ್ತರು, ಆಡಳಿತ ಪಕ್ಷದ ನಾಯಕರ ಮರ್ಜಿಗೆ ತಕ್ಕಂತೆ ಕೆಲಸ ಮಾಡುತ್ತಾ ಬಂದಿರುವುದು ರಹಸ್ಯವೇನಲ್ಲ. ಆಡಳಿತ ಪಕ್ಷದಲ್ಲಿದ್ದವರು ತಪ್ಪು ಮಾಡಿದಾಗ ವಿರೋಧ ಪಕ್ಷದಲ್ಲಿದ್ದವರು ಅಬ್ಬರಿಸಿ ಹೋರಾಟ ಮಾಡುತ್ತಾರೆ; ವಿರೋಧ ಪಕ್ಷದಲ್ಲಿದ್ದವರು, ಮುಂದೊಂದು ದಿನ ಚುನಾವಣೆಯಲ್ಲಿ ಗೆದ್ದು ಆಡಳಿತದ ಚುಕ್ಕಾಣಿ ಹಿಡಿದಾಗ ಹಿಂದಿನವರು ಮಾಡಿದ ತಪ್ಪನ್ನೇ ಮಾಡುತ್ತಾರೆ.

ಪ್ರಭಾವಿಗಳಿಗೆ ಅನುಕೂಲ ಮಾಡಿಕೊಡುವುದಕ್ಕೆ ಪ್ರಾಧಿಕಾರಗಳ ವ್ಯಾಪ್ತಿ ಸೀಮಿತವಾದಂತಿದೆ

ಬೆಂಗಳೂರಿನ ಅರ್ಕಾವತಿ ಬಡಾವಣೆಯಲ್ಲಿ ರೀ-ಡೂ ಹೆಸರಿನಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದ್ದ ಬಿಜೆಪಿ, ಸದನದ ಒಳಗೆ ಮತ್ತು ಹೊರಗೆ ಹೋರಾಟ ನಡೆಸಿತ್ತು. ಆಗ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ, ನ್ಯಾಯಮೂರ್ತಿ ಕೆಂಪಣ್ಣ ನೇತೃತ್ವದಲ್ಲಿ ತನಿಖಾ ಆಯೋಗ ರಚಿಸಿದ್ದರು. ‘ಆಪರೇಷನ್ ಕಮಲ’ ನಡೆಸಿದ ಬಿಜೆಪಿ, ರಾಜ್ಯದಲ್ಲಿ ಅಧಿಕಾರ ಹಿಡಿಯಿತು. ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ರೀ-ಡೂ ಫಲಾನುಭವಿಗಳಾಗಿದ್ದವರು ‘ಆಪರೇಷನ್ ಕಮಲ’ದ ಫಲವುಂಡು, ಬಿಜೆಪಿ ಸೇರಿ ಸಚಿವರೂ ಆಗಿಬಿಟ್ಟರು. ಹೀಗೆ, ಹಗರಣದ ಪಾಲುದಾರರು ಎನ್ನಲಾದವರು ಎಲ್ಲೆಡೆಯೂ ಸಲ್ಲುವವರಾಗಿರುತ್ತಾರೆ. ಏಕೆಂದರೆ, ಈ ಮಾದರಿಯ ಹಗರಣಗಳಲ್ಲಿ ಚುನಾಯಿತ ಪ್ರತಿನಿಧಿಗಳು, ರಾಜಕಾರಣಿಗಳು, ಅವರ ಹಿಂಬಾಲಕರು, ಅಧಿಕಾರಿಗಳು, ಮಧ್ಯವರ್ತಿಗಳಿಗಷ್ಟೇ ಲಾಭವಾಗುತ್ತಿದೆ. ನಿವೇಶನ ಪಡೆಯಲು ಕೂಡಿಟ್ಟ ದುಡ್ಡನ್ನು ಪ್ರಾಧಿಕಾರಕ್ಕೆ ಕಟ್ಟಿದವರು ದಶಕಗಳಿಂದ ಕಾಯುತ್ತಲೇ ಇದ್ದಾರೆ. ಬಹುತೇಕರಿಗೆ ನಿವೇಶನವೇ ಸಿಕ್ಕಿಲ್ಲ. ಬಡಾವಣೆ ನಿರ್ಮಾಣಕ್ಕಾಗಿ ಭೂಸ್ವಾಧೀನ, ಪರಿಹಾರ, ಡಿನೋಟಿಫೈ, ನಿರ್ಮಾಣಗೊಂಡ ಬಳಿಕ ನಿವೇಶನ ಹಾಗೂ ಬದಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮಗಳು ನಡೆಯುತ್ತಲೇ ಇವೆ. ಉಳ್ಳವರ ಹೊಟ್ಟೆಯನ್ನು ಮತ್ತಷ್ಟು ತುಂಬಿಸುವುದಕ್ಕೆ, ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವವರಿಗೆ ಲಾಭ ಮಾಡಿಕೊಡುವುದಕ್ಕೆ ಪ್ರಾಧಿಕಾರಗಳ ಕಾರ್ಯವ್ಯಾಪ್ತಿ ಸೀಮಿತವಾದಂತಿದೆ. ಈಗ ಮುಖ್ಯಮಂತ್ರಿ ಕುಟುಂಬದವರ ವಿರುದ್ಧವೇ ಆರೋಪ ಎದುರಾಗಿದೆ. ಅಳ್ಳಕವಾದ ನಿಯಮಗಳು ಹಾಗೂ ರಾಜಕೀಯ ಕೂಗಾಟದ ಆಚೆಗೆ ಸತ್ಯ ಇರುತ್ತದೆ. ಬಿಡಿಎ ಸೇರಿದಂತೆ ಎಲ್ಲ ಪ್ರಾಧಿಕಾರಗಳಲ್ಲಿ ಕಳೆದ 25 ವರ್ಷಗಳಲ್ಲಿ ನಡೆದಿರಬಹುದಾದ ಅಕ್ರಮ, ಹಗರಣಗಳ ಬಗ್ಗೆ ನ್ಯಾಯಾಂಗ ಅಥವಾ ಲೋಕಾಯುಕ್ತ ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸುವ ಅವಕಾಶ ಸರ್ಕಾರಕ್ಕೆ ಸಿಕ್ಕಿದೆ. ಕಾಲಮಿತಿಯಲ್ಲಿ ತನಿಖೆಯನ್ನು ಪೂರ್ಣಗೊಳಿಸುವ ಜತೆಗೆ ಭೂಸ್ವಾಧೀನ, ಪರಿಹಾರ ನಿಗದಿ, ನಿಜವಾದ ಭೂಮಾಲೀಕರಿಗೆ ಪರಿಹಾರ ಸಿಗುವಂತೆ ನೋಡಿಕೊಳ್ಳಲು, ನಿವೇಶನ ಹಂಚಿಕೆಯಲ್ಲಿ ಪಾರದರ್ಶಕತೆ ತರಲು ಈಗಲಾದರೂ ಕ್ರಮ ವಹಿಸಬೇಕಿದೆ. ಮುಡಾ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳು ಸರಣಿಯೋಪಾದಿಯಲ್ಲಿ ಹೊರಬರುತ್ತಿವೆ. ಮುಖ್ಯಮಂತ್ರಿ ಕುಟುಂಬದ ವಿರುದ್ಧ ಬಂದಿರುವ ಆರೋಪವೂ ಸೇರಿದಂತೆ ಮುಡಾಗೆ ಸಂಬಂಧಿಸಿದ ಎಲ್ಲ ದೂರುಗಳ ಬಗ್ಗೆಯೂ ನಿಷ್ಪಕ್ಷಪಾತ ತನಿಖೆ ಆಗಬೇಕಿದೆ. ಸತ್ಯ ಹೊರಬರಬೇಕಿದೆ.

ದಿನದ ಟ್ವೀಟ್

ಯಾರೂ ಲೋಪರಹಿತರಲ್ಲ

ಷೇರುಗಳನ್ನು ಮಾರಿ, ಲಾಭವನ್ನು ಯಾವಾಗ ಕೈಗೆತ್ತಿಕೊಳ್ಳಬೇಕು ಎಂಬುದನ್ನು ಯಾರೂ ಕಲಿಸಲು ಆಗದು. ನಿಮ್ಮ ಅನುಭವ ಮಾತ್ರ ಇಲ್ಲಿ ನೆರವಿಗೆ ಬರುತ್ತದೆ. ಇದರಲ್ಲಿ, ದಶಕಗಳ ಅನುಭವ ಹೊಂದಿರುವವರು ಸೇರಿದಂತೆ ಯಾರೂ ಲೋಪರಹಿತರಲ್ಲ.

ವಿವೇಕ್, ಹೂಡಿಕೆದಾರ

ಕಿಡಿನುಡಿ

ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಗೆ ಕೇಂದ್ರ ಸರ್ಕಾರ ಮುಂದಾಗಿದೆ. ಜನಸಂಖ್ಯೆ ಆಧಾರದಲ್ಲಿ ಕ್ಷೇತ್ರ ಪುನರ್ ವಿಂಗಡಣೆ ನಡೆದರೆ ದಕ್ಷಿಣ ಭಾರತದ ರಾಜ್ಯಗಳಿಗೆ ರಾಜಕೀಯವಾಗಿ ಅನ್ಯಾಯವಾಗಲಿದೆ. ಕುಟುಂಬ ಕಲ್ಯಾಣ ಯೋಜನೆ, ಜನಸಂಖ್ಯಾ ನಿಯಂತ್ರಣವನ್ನು ಸಮರ್ಪಕವಾಗಿ ಜಾರಿಗೊಳಿಸಿದ್ದು ತಪ್ಪಾಯಿತೇ ಎಂಬ ಭಾವನೆ ಮೂಡುತ್ತಿದೆ.

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 12-7-1999

- **ಲೋಕಸಭೆಗೆ ಐದು ಹಂತದಲ್ಲಿ ಚುನಾವಣೆ**

ನವದೆಹಲಿ, ಜುಲೈ 11 (ಪಿಟಿಐ, ಯುಎನ್‌ಐ)– ಜಮ್ಮು ಮತ್ತು ಕಾಶ್ಮೀರವೂ ಸೇರಿದಂತೆ ದೇಶದಾದ್ಯಂತ ಐದು ಹಂತಗಳಲ್ಲಿ ಸೆಪ್ಟೆಂಬರ್ 4ರಿಂದ ಅಕ್ಟೋಬರ್ 1ರವರೆಗೆ ಲೋಕಸಭೆಗೂ, ಇದರ ಜತೆಯಲ್ಲೇ ಕರ್ನಾಟಕ, ಆಂಧ್ರಪ್ರದೇಶ ಹಾಗೂ ಸಿಕ್ಕಿಂ ರಾಜ್ಯಗಳ ವಿಧಾನಸಭೆಗಳಿಗೂ ಚುನಾವಣೆ ನಡೆಯಲಿದೆ.

ಕರ್ನಾಟಕ ವಿಧಾನಸಭೆಗೆ ಎರಡು ಹಂತಗಳಲ್ಲಿ ಸೆಪ್ಟೆಂಬರ್ 4 ಹಾಗೂ 11ರಂದು ಮತದಾನವಾಗಲಿದೆ. ದೇಶದಾದ್ಯಂತ ಲೋಕಸಭೆಗೆ ಸೆಪ್ಟೆಂಬರ್ 4, 11, 17, 24 ಹಾಗೂ ಅಕ್ಟೋಬರ್ 1ರಂದು ಮತದಾನವಾಗಲಿದ್ದು, ಎಲ್ಲ ಮತಗಳ ಎಣಿಕೆಯು ಅಕ್ಟೋಬರ್ ಐದು ಹಾಗೂ ಆರರಂದು ನಡೆಯಲಿದೆ.

- **ದಳದಲ್ಲಿ ಒಗ್ಗಟ್ಟು ಮೂಡಿಸಲು ಶರದ್ ತೀವ್ರ ಯತ್ನ**

ಬೆಂಗಳೂರು, ಜುಲೈ 11– ನಾಯಕರಲ್ಲಿನ ವೈಯಕ್ತಿಕ ದ್ವೇಷ-ವೈಷಮ್ಯ ಚಿವುಟಿ ಹಾಕಿ ಜುಲೈ 14ರ ರಾಜ್ಯ ಘಟಕದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪಕ್ಷದ ಶಕ್ತಿ ಸಾಮರ್ಥ್ಯ ಹಾಗೂ ಒಗ್ಗಟ್ಟಿನ ಪ್ರದರ್ಶನ ಆಗಬೇಕು ಎನ್ನುವ ದಿಕ್ಕಿನಲ್ಲಿ ಜನತಾದಳದ ರಾಷ್ಟ್ರೀಯ ಅಧ್ಯಕ್ಷ ಶರದ್ ಯಾದವ್ ಅವರು ಮುಖಂಡರೊಡನೆ ಮಾತುಕತೆ ನಡೆಸುವ ಮೂಲಕ ಸತತ ಪ್ರಯತ್ನ ನಡೆಸಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 12-7-1974

- **ಸುಗ್ರೀವಾಜ್ಞೆಗಳ ಬಗೆಗೆ ಪ್ರಧಾನಿ ಸಮರ್ಥನೆ**

ಬೆಂಗಳೂರು, ಜುಲೈ 11– ಕೆಲಸಗಾರರ ದೀರ್ಘಾವಧಿ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ ಅವರ ಹೆಚ್ಚಿನ ಆದಾಯದ ಕೆಲಭಾಗದ ಚಲಾವಣೆಯನ್ನು ಸ್ತಂಭನಗೊಳಿಸಲಾಗಿದೆಯೆಂದು ಪ್ರಧಾನಿ ಇಂದಿರಾ ಗಾಂಧಿ ಸುಗ್ರೀವಾಜ್ಞೆಗಳನ್ನು ಇಂದು ಇಲ್ಲಿ ಸಮರ್ಥಿಸಿದರು. ಹೆಚ್ಚಿನ ವೇತನ ಮತ್ತು ಭತ್ಯದ ಒಂದು ಭಾಗವನ್ನು ಠೇವಣಿ ಇಡುವುದರಿಂದ ಕೆಲಸಗಾರರ ಸಾಮಾನ್ಯ ವೇತನ, ಭತ್ಯ ಏರಿಕೆಗೆ ಆತಂಕವಿಲ್ಲವೆಂದು ಸ್ಪಷ್ಟಪಡಿಸಿದರು.

- **ಕಲಬೆರಕೆ: ಈಗ ಸೋಪಿನ ಸರದಿ**

ನವದೆಹಲಿ, ಜುಲೈ 11– ಕಲಬೆರಕೆಯಲ್ಲಿ ಈಗ ಸೋಪಿನ ಸರದಿ. ಇತ್ತೀಚೆಗೆ ಮಾರುಕಟ್ಟೆಯಲ್ಲಿ ಕಲಬೆರಕೆ ಸೋಪು ಕಂಡುಬಂದಿದ್ದು ಇದರಿಂದ ಬಳಕೆದಾರರಿಗೆ ಚರ್ಮರೋಗ ಕಾಣಿಸಿಕೊಂಡಿದೆ. ಅಲ್ಲದೆ ಸರ್ಕಾರದ ಬೊಕ್ಕಸಕ್ಕೂ ನಷ್ಟ ಉಂಟಾಗಿದೆಯೆಂದು ಭಾರತ ಬಳಕೆದಾರರ ಮಂಡಳಿ ನಡೆಸಿದ ಸಮೀಕ್ಷೆಯಿಂದ ತಿಳಿದುಬಂದಿದೆ.

ಪರೀಕ್ಷೆಯ ಸಂದರ್ಭದಲ್ಲಿ ‘ಏನೂ ಹೆದರಬೇಡ’ ಎನ್ನುವುದರಿಂದ ಉಪಯೋಗವಿಲ್ಲ

ಈಗಿನಿಂದಲೇ ಪರೀಕ್ಷಾ ಸಿದ್ಧತೆ ನಡೆಸೋಣವೇ?

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಹೊಸ ಶೈಕ್ಷಣಿಕ ವರ್ಷ ಶುರುವಾಗಿ ಒಂದು ತಿಂಗಳು ಕಳೆದಿದೆ. ಪರೀಕ್ಷಾ ಸಿದ್ಧತೆಗೆ ಸಂಬಂಧಿಸಿ ಆಗುವ ಎಡವಟ್ಟುಗಳನ್ನು ಈಗಿನಿಂದಲೇ ಸರಿಪಡಿಸಿಕೊಳ್ಳಬೇಕಾದ ಅಗತ್ಯವಿದೆ. ನಮ್ಮ ಶಾಲಾ ವ್ಯವಸ್ಥೆಯಲ್ಲಿ, ಪರೀಕ್ಷೆಗೆ ಒಂದು ತಿಂಗಳೋ, ಹದಿನೈದು ದಿನಗಳೋ ಬಾಕಿ ಇರುವಾಗ ವಿದ್ಯಾರ್ಥಿಗಳಿಗೆ ‘ಪರೀಕ್ಷಾ ತರಬೇತಿ’ ಎನ್ನುವ ಕಾರ್ಯಾಗಾರಗಳು ಪ್ರತಿ ವರ್ಷವೂ ನಡೆಯುತ್ತವೆ. ಇದೊಂದು ಪ್ರಹಸನದಂತೆ ಇರುತ್ತದೆ. ಏಕೆಂದರೆ ಪರೀಕ್ಷಾ ಸನ್ನದ್ಧತೆಯು ಶೈಕ್ಷಣಿಕ ವರ್ಷದ ಪ್ರಾರಂಭದಿಂದ ನಡೆಯಬೇಕಾದದ್ದು ಎಂಬುದು ಎಲ್ಲರಿಗೂ ಗೊತ್ತಿರುತ್ತದೆ. ಹೀಗಿದ್ದರೂ ಪ್ರಾರಂಭದಲ್ಲಿ ಈ ಯಾವ ಬಗೆಯ ತರಬೇತಿಗಳೂ ಸಾಮಾನ್ಯವಾಗಿ ನಡೆಯುವುದಿಲ್ಲ.

‘ಪರೀಕ್ಷೆ ಬಂತು, ಓದಿ ಓದಿ’ ಎಂದು ವಿದ್ಯಾರ್ಥಿಗಳಿಗೆ ಹೇಳಲಾಗುತ್ತದೆ. ಆದರೆ ಓದಲು ಉತ್ತೇಜನ ನೀಡಬೇಕಾದ್ದು ಯಾರಿಗೆ ಎಂದು ಯೋಚಿಸುವುದು ಕಡಿಮೆ. ಯಾವ ವಿದ್ಯಾರ್ಥಿಯು ಓದಿ ಗಳಿಸಬೇಕಾದ ವಿಷಯ ಜ್ಞಾನವನ್ನು ಹೊಂದಿರುವುದಿಲ್ಲವೋ ಅಂತಹ ವಿದ್ಯಾರ್ಥಿಗೆ ಮಾತ್ರ ಓದಲು ಉತ್ತೇಜನದ ಅಗತ್ಯವಿರುತ್ತದೆ. ಅದಾಗಲೇ ವಿಷಯ ಜ್ಞಾನ ಇರುವ ವಿದ್ಯಾರ್ಥಿಗಳಿಗೆ ಓದಲು ಉತ್ತೇಜಿಸುವ ಕಾರ್ಯಕ್ರಮಗಳ ಅಗತ್ಯ ಇರುವುದಿಲ್ಲ. ಆದರೆ ಇಡೀ ವರ್ಷ ಪಾಠ ಕೇಳಿಯೂ ವಿಷಯ ಜ್ಞಾನ ಬೆಳೆಯದ ವಿದ್ಯಾರ್ಥಿಗಳು ಇರುತ್ತಾರೆ. ಪಾಠಗಳನ್ನು ಕೇಳಿಸಿಕೊಳ್ಳುವುದರಲ್ಲಿ, ಕೇಳಿಸಿಕೊಂಡದ್ದನ್ನು ಗ್ರಹಿಸುವುದರಲ್ಲಿ ಅವರು ದೌರ್ಬಲ್ಯ ಹೊಂದಿರುತ್ತಾರೆ. ಅಂತಹ ವಿದ್ಯಾರ್ಥಿಗಳ ನಿಜವಾದ ಸಮಸ್ಯೆ ಪಾಠವನ್ನು ಕೇಳಿಸಿಕೊಳ್ಳದೇ ಇರುವುದು. ಅಂತಹ ವಿದ್ಯಾರ್ಥಿಗಳನ್ನು ಗುರುತಿಸಿ ಪಾಠಗಳನ್ನು ಕೇಳಿಸಿಕೊಳ್ಳಲು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲೇ ಉತ್ತೇಜಿಸಬೇಕು. ಈ ಕೆಲಸದಲ್ಲಿ ಅಧ್ಯಾಪಕರು, ಪೋಷಕರು ಮತ್ತು ಸಮುದಾಯದಲ್ಲಿ ವಿಶೇಷ ಆಸಕ್ತಿ ಕಾಣಿಸುವುದಿಲ್ಲ.

ತರಗತಿಯಲ್ಲಿ ಪಾಠವನ್ನು ಕೇಳಿಸಿಕೊಳ್ಳದೆ ಇದ್ದಾಗಲೂ ಪರೀಕ್ಷೆ ಹತ್ತಿರ ಬಂದಾಗ ಓದುವ ಮೂಲಕ ಪಠ್ಯ ವಸ್ತುವನ್ನು ಗ್ರಹಿಸಲು ಸಾಧ್ಯವಿದೆ. ಈ ನೆಲೆಯಲ್ಲಿ, ‘ಪರೀಕ್ಷೆಗಾಗಿ ಓದು’ ಎಂದು ಉತ್ತೇಜಿಸುವುದು ಸರಿ. ಆದರೆ ವ್ಯವಸ್ಥಿತ ಶಿಕ್ಷಣದಲ್ಲಿ ಪಾಠ ಪುಸ್ತಕವನ್ನು ಓದುವ ಉದ್ದೇಶ ‘ಗ್ರಹಿಕೆ’ ಅಲ್ಲ; ಅದರ ಉದ್ದೇಶ ‘ದೃಢೀಕರಣ’. ಪಠ್ಯ ಬೋಧನೆಯಲ್ಲೇ ಪಠ್ಯದ ವಸ್ತುವಿನ ಗ್ರಹಿಕೆ ನಡೆದಿರುತ್ತದೆ, ಅದರ ದೃಢೀಕರಣ ಮಾಡಿಕೊಳ್ಳುವುದಕ್ಕಾಗಿ ಓದಬೇಕಾಗುತ್ತದೆ. ಪಾಠ ಕೇಳಿಸಿಕೊಳ್ಳದ ವಿದ್ಯಾರ್ಥಿಗಳಲ್ಲಿ ‘ಗ್ರಹಿಕೆ’ಯೇ ಆಗಿರುವುದಿಲ್ಲ. ಆದ್ದರಿಂದ ಅಂತಹ ವಿದ್ಯಾರ್ಥಿಗಳು ಓದಿನ ಮೂಲಕವೇ ಗ್ರಹಿಕೆಯನ್ನೂ, ದೃಢೀಕರಣವನ್ನೂ ಮಾಡಿಕೊಳ್ಳುವ ದುಪ್ಪಟ್ಟು ಶ್ರಮ ಹಾಕಬೇಕಾಗುತ್ತದೆ.

ಪರೀಕ್ಷೆಯ ಸಂದರ್ಭದಲ್ಲಿ ಈ ಎರಡು ಕೆಲಸಗಳನ್ನು ಮಾಡುವುದು ವಿದ್ಯಾರ್ಥಿಗಳ ಪರೀಕ್ಷಾ ದಕ್ಷತೆಯನ್ನು ದುರ್ಬಲಗೊಳಿಸುತ್ತದೆ. ಅಂದರೆ ಅಂತಹ ವಿದ್ಯಾರ್ಥಿಗಳು ಪಡೆಯಬಹುದಾದ ಅಂಕಗಳ ಪ್ರಮಾಣ ಕುಸಿಯುತ್ತದೆ ಎನ್ನುವುದು ಸ್ಪಷ್ಟ. ‘ಚೆನ್ನಾಗಿ ಓದಿದರೆ ಒಳ್ಳೆಯ ಅಂಕಗಳು ಬರುತ್ತವೆ’ ಎನ್ನುವ ನಂಬಿಕೆ ಪರೀಕ್ಷಾ ಸಂದರ್ಭದಲ್ಲಿ ಓದನ್ನು ಪ್ರಾರಂಭಿಸುವವರ ಮಟ್ಟಿಗೆ ನಂಬಿಕೆಯಾಗಿಯಷ್ಟೇ ಉಳಿಯುತ್ತದೆ. ಆದ್ದರಿಂದ ವಿದ್ಯಾರ್ಥಿಗಳನ್ನು ಓದಲು ಉತ್ತೇಜಿಸಬೇಕಾದದ್ದು ಪಾಠ ಬೋಧನೆ ನಡೆಯುತ್ತಿರುವ ಸಂದರ್ಭದಲ್ಲೇ ವಿನಾ ಪಾಠ ಬೋಧನೆ ಪೂರ್ಣಗೊಂಡ ಬಳಿಕವಲ್ಲ.

ಬದಲಾಗಿರುವ ಶೈಕ್ಷಣಿಕ ಸಂದರ್ಭದಲ್ಲಿ ವಿದ್ಯಾರ್ಥಿಗಳ ಬರವಣಿಗೆಯ ಸಮಸ್ಯೆಯ ಬಗ್ಗೆ ಹೆಚ್ಚು ಚರ್ಚೆ ಆಗಿಲ್ಲ. ಪಂಡಿತ ಪರಂಪರೆಯ ಶೈಲಿಯೇ ಮುಖ್ಯವಲ್ಲ, ವ್ಯಾಕರಣ ಕಲಿಸುವುದೇ ಪ್ರಧಾನವಲ್ಲ, ವಿದ್ಯಾರ್ಥಿಯ ಸಾಮರ್ಥ್ಯ ವೃದ್ಧಿ ಬಹಳ ಪ್ರಧಾನವಾದದ್ದು ಎಂಬ ಚಿಂತನೆಯ ಹಿನ್ನೆಲೆಯಲ್ಲಿ ನಡೆದ ಶೈಕ್ಷಣಿಕ ಸುಧಾರಣೆಗಳು ಪ್ರಾಥಮಿಕ ಹಂತದಲ್ಲಿ ಹಲವು ವಿದ್ಯಾರ್ಥಿಗಳ ವಾಕ್ಯರಚನಾ ಕೌಶಲದ ಮೇಲೆ ಋಣಾತ್ಮಕ ಪರಿಣಾಮ ಉಂಟುಮಾಡಿವೆ. ಅವರಿಗೆ ವಿಷಯ ಜ್ಞಾನ ಇರುತ್ತದೆ. ಆದರೆ ಗೊತ್ತಿರುವ ವಿಷಯವನ್ನು ವಾಕ್ಯ ರೂಪದಲ್ಲಿ ಹೇಳಲು ಗೊತ್ತಾಗುವುದಿಲ್ಲ. ಆದರೆ ಪರೀಕ್ಷೆಯಲ್ಲಿ ವಾಕ್ಯ ರಚಿಸಿ, ಬರೆದೇ ಹೇಳಬೇಕಾಗಿರುತ್ತದೆ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ತಮಗೆ ಗೊತ್ತಿರುವುದನ್ನು ಮೌಖಿಕವಾಗಿ ಹೇಳಲಿಕ್ಕಾಗಲಿ, ಹಾವಭಾವಗಳಿಂದ ಹೇಳಲಿಕ್ಕಾಗಲಿ ಅವಕಾಶ ಇಲ್ಲ. ಬರೆದೇ ಹೇಳಬೇಕು. ಅಂದರೆ ವಿದ್ಯಾರ್ಥಿಗಳಲ್ಲಿ ಬರವಣಿಗೆಯ ಕೌಶಲ, ಅದಕ್ಕೆ ಅಗತ್ಯವಾದ ಶಬ್ದ ಭಂಡಾರ ಚೆನ್ನಾಗಿ ಇರಲೇಬೇಕಾಗುತ್ತದೆ. ಪ್ರಾಥಮಿಕ ಶಿಕ್ಷಣದಲ್ಲಿ ಇದು ಆಗಿಲ್ಲದೆ ಇದ್ದರೆ ಪ್ರೌಢ ಶಿಕ್ಷಣಕ್ಕೆ ಬಂದು ಪಬ್ಲಿಕ್ ಪರೀಕ್ಷೆ ಎದುರಿಸುವಾಗ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕುತ್ತಾರೆ.

ಅಂಥವರಿಗೆ ಪ್ರಶ್ನೋತ್ತರಗಳನ್ನು ಕಂಠಪಾಠ ಮಾಡುವುದು ಅನಿವಾರ್ಯವಾಗುತ್ತದೆ. ಕಂಠಪಾಠ ಮಾಡಿರದ ಪ್ರಶ್ನೆಗಳು ಪರೀಕ್ಷೆಯಲ್ಲಿ ಬಂದಾಗ ಉತ್ತರ ಬರೆಯಲು ಗೊತ್ತಾಗುವುದಿಲ್ಲ. ಕಂಠಪಾಠ ಮಾಡಿದ ಉತ್ತರಕ್ಕೆ ಬೇಕಾದ ಪ್ರಶ್ನೆ ಬಂದಾಗಲೂ ನೆನಪಿರಿಸಿಕೊಂಡ ವಾಕ್ಯಗಳಲ್ಲಿ ಒಂದು ವಾಕ್ಯ ಮರೆತುಹೋದರೆ ಮುಂದಿನದನ್ನು ಬರೆಯಲು ಆಗುವುದಿಲ್ಲ. ಕಂಠಪಾಠ ಮಾದರಿಯಲ್ಲಿ ವಿದ್ಯಾರ್ಥಿಗಳು ನಿರ್ದಿಷ್ಟ ಪ್ರಶ್ನೆಗೆ ನಿರ್ದಿಷ್ಟ ಉತ್ತರವನ್ನು ಕಲಿತಿರುತ್ತಾರೆ. ಅದೇ ಪ್ರಶ್ನೆಯನ್ನು ಕೊಂಚ ಭಿನ್ನ ಸ್ವರೂಪದಲ್ಲಿ ಕೇಳಿದರೆ ಯಾವ ಉತ್ತರ ಬರೆಯಬೇಕೆಂದು ಗೊತ್ತಾಗುವುದಿಲ್ಲ. ಈ ಸಮಸ್ಯೆ ನಿವಾರಣೆಯಾಗಬೇಕಾದರೆ ವಾಕ್ಯ ರಚನಾ ಸಾಮರ್ಥ್ಯವೇ ವಿದ್ಯಾರ್ಥಿಗಳಲ್ಲಿ ಬೆಳೆಯಬೇಕು. ಇದಾಗಬೇಕಾದದ್ದು ಕೂಡ ಬೋಧನೆ ಮತ್ತು ಕಲಿಕೆಯ ಸಂದರ್ಭದಲ್ಲೇ ವಿನಾ ಪಾಠಗಳು ಪೂರ್ಣಗೊಂಡ ಬಳಿಕ ಅಲ್ಲ.

ಕೆಲವು ವಿದ್ಯಾರ್ಥಿಗಳಲ್ಲಿ ಪರೀಕ್ಷೆಯು ಒಂದು ರೀತಿಯ ಖಿನ್ನತೆ, ಭಯದ ಮನೋಭಾವ ನಿರ್ಮಿಸುತ್ತದೆ. ಈ ಸಮಸ್ಯೆಯನ್ನು ವಿದ್ಯಾರ್ಥಿಗಳು ಸೃಷ್ಟಿಸಿದ್ದಲ್ಲ. ಪರೀಕ್ಷೆಯೂ ಸೃಷ್ಟಿಸಿದ್ದಲ್ಲ. ಇಡೀ ಶಿಕ್ಷಣ ವ್ಯವಸ್ಥೆಯೇ ಸೃಷ್ಟಿಸಿದ ಸಮಸ್ಯೆ ಇದು. ಸಾರ್ವತ್ರಿಕವಾಗಿ ‘ಪರೀಕ್ಷೆ ಬಹಳ ಮುಖ್ಯ’ ಎಂಬ ಭಾವನೆ ಸಮಾಜದಲ್ಲಿದೆಯೇ ವಿನಾ ‘ಕಲಿಕೆ ಬಹಳ ಮುಖ್ಯ, ಆದ್ದರಿಂದ ಕಲಿಕಾ ಪ್ರಕ್ರಿಯೆಯಲ್ಲಿ ಶಿಸ್ತುಬದ್ಧವಾಗಿ ಪಾಲ್ಗೊಳ್ಳಬೇಕು’ ಎಂಬ ಭಾವನೆ ಇಡೀ ಸಮಾಜದಲ್ಲಿ ಇಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ಕೂಡ ಕಲಿಕಾ ಪ್ರಕ್ರಿಯೆಯನ್ನು ಲಘುವಾಗಿಯೂ ಪರೀಕ್ಷಾ ಪ್ರಕ್ರಿಯೆಯನ್ನು ಗಂಭೀರವಾಗಿಯೂ ತೆಗೆದುಕೊಳ್ಳುತ್ತಾರೆ.

ಕಲಿಕಾ ಪ್ರಕ್ರಿಯೆಯನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಆಗ ಪರೀಕ್ಷೆಯನ್ನು ಲಘುವಾಗಿ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಕೆಲವು ವಿದ್ಯಾರ್ಥಿಗಳು ಈ ರೀತಿ ಇರುತ್ತಾರೆ. ಪಾಠ ಬೋಧನೆಯನ್ನು ಸಮರ್ಪಕವಾಗಿ ಕೇಳಿಸಿಕೊಂಡು ಆಯಾ ದಿನ ಅಥವಾ ಆಯಾ ವಾರದಲ್ಲೇ ಪಾಠ ಪುಸ್ತಕವನ್ನು ಓದಿ ಕಲಿಕಾ ದೃಢೀಕರಣ ಮಾಡಿಕೊಂಡಿರುತ್ತಾರೆ. ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷಾ ಭಯ, ಆತಂಕಗಳು ಇರುವುದಿಲ್ಲ. ಆದರೆ ಇಂಥವರ ಸಂಖ್ಯೆ ಬಹಳ ಕಡಿಮೆ. ಆದ್ದರಿಂದ ಕಲಿಕಾ ಪ್ರಕ್ರಿಯೆಗೆ ಮಹತ್ವ ನೀಡಿದಾಗ, ವಿದ್ಯಾರ್ಥಿಗಳಲ್ಲಿ ಪರೀಕ್ಷೆಯ ಸಂದರ್ಭದಲ್ಲಿ ಉಂಟಾಗುವ ಅನೇಕ ಮಾನಸಿಕ ಮತ್ತು ಭಾವನಾತ್ಮಕ ಸಮಸ್ಯೆಗಳನ್ನು ನಿವಾರಿಸಬಹುದು ಎಂಬುದು ಪೋಷಕರು ಮತ್ತು ಅಧ್ಯಾಪಕರಿಗೆ ಗೊತ್ತಿರಬೇಕು. ಕಲಿಕೆಯ ಪ್ರಕ್ರಿಯೆಗೆ ವಿದ್ಯಾರ್ಥಿಗಳನ್ನು ತೊಡಗಿಸಿದಾಗ, ವ್ಯಕ್ತಿ ಭಿನ್ನತೆಯ ನೆಲೆಯಲ್ಲಿ ಪರಿಶೀಲಿಸಿ ಮಾರ್ಗದರ್ಶನ ಮಾಡಬೇಕಾಗುತ್ತದೆ. ಈ ಕಾರ್ಯವೂ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯ ಜೊತೆ ನಡೆಯಬೇಕು. ಶೈಕ್ಷಣಿಕ ವರ್ಷಾಂತ್ಯದಲ್ಲಲ್ಲ. ಪರೀಕ್ಷಾ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿ ಖಿನ್ನತೆ, ಆತಂಕ, ಭಯ ಉಂಟಾಗುವುದಕ್ಕೆ, ಕಲಿಕೆಯಿಂದ ಬಂದಿರಬೇಕಾದ ಆತ್ಮವಿಶ್ವಾಸ ಬಂದಿಲ್ಲದಿರುವುದು ಕೂಡ ಬಹುಮಟ್ಟಿಗೆ ಕಾರಣವಾಗಿರುತ್ತದೆ.

ಪರೀಕ್ಷೆಯ ಸಂದರ್ಭದಲ್ಲಿ, ‘ಏನೂ ಹೆದರಬೇಡ’ ಎಂದು ಧೈರ್ಯ ಕೊಡುವುದರಿಂದ ಉಪಯೋಗವಿಲ್ಲ. ಆ ಧೈರ್ಯ ವಿದ್ಯಾರ್ಥಿಗಳ ವ್ಯಕ್ತಿತ್ವದಲ್ಲೇ ಬೆಳೆದುಬರುವಂತೆ ಮಾಡಬೇಕು. ಆದ್ದರಿಂದ ಇದು ಕೂಡ ಶೈಕ್ಷಣಿಕ ವರ್ಷಾರಂಭದಿಂದ ಮಾಡಬೇಕಾದ ಸಿದ್ಧತೆ. ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಉತ್ತಮಪಡಿಸುವುದು ಪರೀಕ್ಷೆಯ ಸಂದರ್ಭದ ಔಪಚಾರಿಕ ಉಪದೇಶ, ತರಬೇತಿಯನ್ನು ಅವಲಂಬಿಸಿಲ್ಲ ಎನ್ನುವುದು ಇಡೀ ಶಾಲಾ ವ್ಯವಸ್ಥೆಗೆ ಮೊದಲು ಅರ್ಥವಾಗಬೇಕು. ಆದರೆ ಸ್ಥಾಪಿತ ಮನೋಭಾವವು ವೈಚಾರಿಕ ಸ್ಪಷ್ಟತೆಯನ್ನು ಬೇಗ ಪಡೆಯುವುದಿಲ್ಲ. ಆದ್ದರಿಂದ ಅಂತಹ ವೈಚಾರಿಕ ಸ್ಪಷ್ಟತೆ ಬರುವ ತನಕವೂ ಇದನ್ನು ಪದೇ ಪದೇ ಹೇಳುತ್ತಾ ಇರಬೇಕಾಗುತ್ತದೆ.

ಚುರುಮುರಿ

ಪವರ್ ಮ್ಯಾನ್!

● ಬಿ.ಎನ್. ಮಲ್ಲೇಶ್

‘ಲೇ ತೆಪರ, ಸರ್ಕಾರ ಪವರ್‌ಮ್ಯಾನ್‌ಗಳನ್ನ ನೇಮಕ ಮಾಡ್ಕಂತತಿ ಅಂತ ಪೇಪರ್‌ನಲ್ಲಿ ಬಂದೇತಪ, ಹಂಗಂದ್ರೆ ಯಾರು?’ ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

‘ಹಂಗಂದ್ರೆ ಲೈನ್‌ಮ್ಯಾನ್‌ಗಳು ಕಣಲೆ, ಕರೆಂಟ್ ಆಫೀಸ್‌ನೋರು...’

‘ಓ... ಅವರಾ? ಓಕೆ ಓಕೆ...’

‘ಅಲ್ಲ, ಎಲ್ಲದ್ಕೂ ಬರೀ ಮ್ಯಾನ್ ಯಾಕೆ? ಪವರ್‌ಮ್ಯಾನ್, ಫೈರ್‌ಮ್ಯಾನ್, ವಾಚ್‌ಮ್ಯಾನ್, ಪೋಸ್ಟ್‌ಮ್ಯಾನ್ ಅಂತ... ವುಮನ್ ಅಂತ ಯಾಕಿಲ್ಲ?’ ಮಂಜಮ್ಮ ತಕರಾರು ತೆಗೆದಳು.

‘ಅದೂ... ಸುಮ್ನೆ ಹೆಸರಿಗಷ್ಟೇ ನಾವು ಮಂಜಮ್ಮ, ಎಲ್ಲ ನಿಮ್ದೇ...’ ಗುಡ್ಡೆ ನಕ್ಕ.

‘ಏನೋ ಹಂಗಂದ್ರೆ?’

‘ಈಗ ನಾವು ಹೆಸರಿಗಷ್ಟೇ ಪವರ್‌ಮ್ಯಾನು, ಪವರ್ ಎಲ್ಲ ನಿಮ್ಮತ್ರನೇ ಇರೋದು. ನಾವು ಹೆಸರಿಗಷ್ಟೇ ಫೈರ್‌ಮ್ಯಾನು, ಫೈರ್ ಪೂರಾ ನಿಮ್ಮತ್ರನೇ ಇರೋದು...’

‘ಆಹಾ ಮಳ್ಳ, ನೈಸ್ ಹೊಡಿಯೋದ್ರಲ್ಲಿ ಎಕ್ಸ್‌ಪರ್ಟು...’ ಮಂಜಮ್ಮಗೆ ಖುಷಿ.

‘ಬರೀ ಹೆಣ್ಮಕ್ಕಳು ಮಾತ್ರ ಪವರ್‌ಫುಲ್ ಅಲ್ಲ ಗುಡ್ಡೆ, ಹೆಣ್ಣು ಸೊಳ್ಳೆಗಳೂ ಪವರ್‌ಫುಲ್ಲೇ... ರಾಜ್ಯದ ತುಂಬಾ ಡೆಂಗಿ ಬರಾಕೆ ಅವೇ ಕಾರಣ...’ ಕೊಟ್ರೇಶಿ ಕೊಕ್ಕೆ ಹಾಕಿದ.

‘ಕೊಟ್ರ, ಬ್ಯಾಡ ನೋಡೂ...’ ಮಂಜಮ್ಮ ಸೌಟು ತೋರಿಸಿದಳು.

‘ಶಾಂತಿ ಶಾಂತಿ... ಮೊನ್ನೆ ನಮ್ ಮೋದಿ ಸಾಹೇಬ್ರು ಪುಟಿನ್ ಭೇಟಿ ಮಾಡಾಕೆ ರಷ್ಯಾಕ್ಕೆ ಹೋಗಿದ್ರಲ್ಲ, ವಾಪಸ್ ಬಂದ್ರಾ?’ ಗುಡ್ಡೆ ಮಾತು ಬದಲಿಸಿದ.

‘ಬಂದಿರ್ಬೇಕು, ನಿಂದೇನರೆ ಕೆಲ್ಸ ಇತ್ತಾ?’

‘ಹಂಗಲ್ಲ, ಅವ್ರು ಪುಟಿನ್ ಭೇಟಿ ಮಾಡಾಕೆ ಏಕೆ ಹೋಗಬೇಕಿತ್ತು? ನಮ್ಮ ಊರ ತುಂಬಾ ಪುಟ್-ಇನ್‌ಗಳಿದ್ರಲ್ಲ ಅಂತ...’

‘ಏನೋ ಹಂಗಂದ್ರೆ?’

‘ಹೇಳ್ತೀನಿ... ಈಗ ಪುಟ್ ಇನ್ ಅಂದ್ರೆ ಏನು? ಹಂಗಂದ್ರೆ ಒಳಕ್ಕೆ ಹಾಕು ಅಂತ. ಈ ಕಾಮಗಾರಿ, ಸಪ್ಲೈ, ನಿಗಮಗಳಲ್ಲಿ ಕೋಟಿ ಕೋಟಿ ರೊಕ್ಕ ಒಳಕ್ಕೆ ಹಾಕೋ ಪುಟ್-ಇನ್‌ಗಳು ನಮ್ಮಲ್ಲಿ ಇಷ್ಟೊಂದು ಮಂದಿ ಇರುವಾಗ ನಮ್ಮ ಸಾಹೇಬ್ರು ಅಲ್ಲಿಗ್ಯಾಕೆ ಹೋದ್ರು ಅಂತ...’ ಗುಡ್ಡೆ ತರಲೆ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಒಳ್ಳೆಯತನಕ್ಕೆ ಜಾಗ ಖಾಲಿ ಇದೆ

ಕಾಲ ಸರಿದಂತೆ ಮನುಷ್ಯ ತಿಳಿವಳಿಕೆ, ನಡವಳಿಕೆಗಳಲ್ಲಿ ಉತ್ತಮನಾಗಬೇಕಿತ್ತು, ಸುಸಂಸ್ಕೃತನೂ ವಿವೇಕಿಯೂ ಸಜ್ಜನನೂ ಆಗಿ ಬದಲಾಗಬೇಕಿತ್ತು. ಆದರೆ...

● ಸತೀಶ್ ಜಿ.ಕೆ. ತೀರ್ಥಹಳ್ಳಿ

ಮನುಷ್ಯ ಬುದ್ಧಿ ಬಲದೊಟ್ಟಿಗೆ ಭಾವಪರಿಧಿಯನ್ನು ವಿಸ್ತರಿಸಿಕೊಂಡಾಗಲಷ್ಟೇ ತನ್ನೊಟ್ಟಿಗಿರುವ ಇತರ ಜೀವಸಮೂಹಗಳಿಂದ ಭಿನ್ನವಾಗಿ ಉಳಿಯಬಲ್ಲ. ಜೀವಪರವಾಗಿ ಬದುಕುವ ಮೂಲಕ ತನ್ನ ಅಲ್ಪಾವಧಿಯ ಜೀವಿತವನ್ನೂ ಸ್ಮರಣೀಯ ಮತ್ತು ಸಾರ್ಥಕಗೊಳಿಸಲು ಆತನಿಗೆ ಸಾಧ್ಯ. ತೆಂಗಿನ ಗರಿಯೊಂದು ಉದುರಿಹೋದ ನಂತರವೂ ಮರದಲ್ಲಿ ತನ್ನದೊಂದು ಗುರುತನ್ನು ಉಳಿಸಿಹೋಗುವ ಹಾಗೆ.

ಸಮಾಜವು ಅದೆಷ್ಟೇ ಅಧೋಗತಿಯ ಕಡೆ ಚಲಿಸುತ್ತಿದ್ದರೂ ಕೆಲವರ ಜೀವದಯೆ ಮತ್ತು ನಿಸ್ವಾರ್ಥ ಸೇವಾ ತುಡಿತಗಳೇ ಸಮಾಜದ ಅಂತಃಕರಣವನ್ನು ಇನ್ನೂ ಹಸಿಯಾಗಿ ಕಾಪಿಟ್ಟಿವೆ. ಕುಮಟಾದ ಗೃಹಿಣಿ ಆಶಾ ಅವರು ತಮ್ಮ ಮನೆಯನ್ನೇ ವೃದ್ಧಾಶ್ರಮವಾಗಿಸಿಕೊಂಡು, ಬಾಳಿನಂಚಿನಲ್ಲಿರುವ ಜೀವಗಳ ಆರೈಕೆ-ಶುಶ್ರೂಷೆಯಲ್ಲಿ ತೊಡಗಿಕೊಂಡಿದ್ದಾರೆ. ಅನು ಎಂಬ ಯುವತಿಯೊಬ್ಬರು ತಮ್ಮದೊಂದು ತಂಡದೊಟ್ಟಿಗೆ ಊರೂರು ಸುತ್ತುತ್ತಾ ಸರ್ಕಾರಿ ಶಾಲಾ ಕಟ್ಟಡಗಳಿಗೆ ಸುಣ್ಣಬಣ್ಣ ಬಳಿದು, ಗೋಡೆಗಳನ್ನು ಚಿತ್ರಗಳ ಮೂಲಕ ಸಿಂಗರಿಸುತ್ತಾ ರಾಜ್ಯದಾದ್ಯಂತ ಸಂಚರಿಸುತ್ತಿದ್ದಾರೆ. ಇಂಥ ನಿದರ್ಶನಗಳು ನ್ಯಾಯ-ನೀತಿ, ದಯೆ-ಕರುಣೆ, ಪ್ರೀತಿ-ಸ್ಫೂರ್ತಿಗಳೆಲ್ಲ ಕಳೆದುಹೋಗುತ್ತಿರುವ ಕಾಲಘಟ್ಟದ ಓಯಸಿಸ್‌ಗಳಂತೆ ಎಂದು ಭಾವಿಸಬೇಕಾಗುತ್ತದೆ.

‘ಕತ್ತಲನ್ನು ಶಪಿಸುತ್ತಾ ಕೂರುವುದಕ್ಕಿಂತ ಮೂಲೆಯಲ್ಲಿ ಮೊಂಬತ್ತಿಯೊಂದನ್ನು ಹಚ್ಚಿಡುವುದು ಮೇಲು’ ಎನ್ನುವ ಮಾತಿಗೆ ಅನ್ವರ್ಥವಾಗಿ ನಮ್ಮ ನಡುವಿನ ಬಹಳಷ್ಟು ಮನಸ್ಸುಗಳು ಬಡಮಕ್ಕಳಿಗೆ ಉಚಿತವಾಗಿ ಅನ್ನ, ಆಶ್ರಯ, ಶಿಕ್ಷಣ ನೀಡುವ ಮೂಲಕ ಅವರಿಗೊಂದು ಬಾಳು ಕಟ್ಟಿಕೊಡುವ ಕೆಲಸದಲ್ಲಿ ನಿರತವಾಗಿವೆ. ಅನೇಕರು ಪರಿಸರ ಕಾಳಜಿಯೊಂದಿಗೆ ನಿರಂತರವಾಗಿ ಜನಜಾಗೃತಿ ಮೂಡಿಸಲು ಶ್ರಮಿಸುತ್ತಿದ್ದಾರೆ. ಬೆದರಿಕೆ, ಜೀವಭಯ, ಕಿರುಕುಳಗಳ ನಡುವೆಯೂ ಅನ್ಯಾಯ, ಭ್ರಷ್ಟಾಚಾರದ ವಿರುದ್ಧ ಸಮರ ಸಾರಿರುವ ಅನೇಕರು ನಮ್ಮ ನಡುವಿದ್ದಾರೆ.

ಜಾತಿ-ಧರ್ಮಗಳ ಹೆಸರಲ್ಲಿ ಒಡೆದ ಮನೆಯಾಗಿರುವ ಸಮಾಜವನ್ನು ಸಹ್ಯಗೊಳಿಸುವ ಪ್ರಯತ್ನವನ್ನು ಮತ್ತು ಮಾನವೀಯ ಪ್ರಪಂಚಕ್ಕೆ ಕಳಂಕವಾಗಿರುವ ಅಸ್ಪೃಶ್ಯತೆಯಿಂದ ಸಮಾಜವನ್ನು ಮುಕ್ತಿಗೊಳಿಸುವ ಧ್ಯೇಯದೊಂದಿಗೆ ಹಲವರು ಬಾಳುತ್ತಿದ್ದಾರೆ. ಮತ್ತೆ ಕೆಲವರು ಶೋಷಿತರ ಮೇಲೆ ಹೇರಲಾಗುತ್ತಿರುವ ಮತಮೌಢ್ಯಗಳ ವಿರುದ್ಧ ಜನಜಾಗೃತಿ ಮೂಡಿಸುವ ಮತ್ತು ವೈಜ್ಞಾನಿಕ ಹಾಗೂ ವೈಚಾರಿಕ ಅರಿವು ಹೆಚ್ಚಿಸುವ ಕಾಯಕದಲ್ಲಿ ತೊಡಗಿದ್ದಾರೆ. ಮದ್ಯಪಾನ, ಧೂಮಪಾನ, ಮಾದಕ ಪದಾರ್ಥಗಳ ವ್ಯಸನ, ಜೂಜುಗಳನ್ನು ನಿರ್ಮೂಲಗೊಳಿಸುವ ಪ್ರಯತ್ನವನ್ನೂ ಹತ್ತಾರು ಸಂಘ–ಸಂಸ್ಥೆಗಳು ನಿರಂತರವಾಗಿ ಜಾರಿಯಲ್ಲಿ ಇಟ್ಟಿವೆ. ಇಂಥ ಹಿಡಿಕಾಳಜಿಗಳೇ ಜೀವಜಗತ್ತನ್ನು ಪೊರೆಯಲು ಬೇಕಾಗುವ ತಾಯ್ತನದ ಮಾದರಿಗಳಲ್ಲವೇ?

ಸಮಾಜದಲ್ಲಿ ಸಾಕ್ಷರತೆ ಕಮ್ಮಿ ಇದ್ದ ಕಾಲದಲ್ಲಿ ಸಾತ್ವಿಕತೆ ಇತ್ತು. ನೈತಿಕತೆ ಮತ್ತು ಪ್ರಾಮಾಣಿಕತೆಗೆ ಮನಸ್ಸುಗಳು ಹಂಬಲಿಸುತ್ತಿದ್ದವು. ಆಗ ದೇವರ ಮೇಲೆ ಭಯ-ಭಕ್ತಿ ಇದ್ದವು. ಸುಳ್ಳು, ಮೋಸ, ಆಲಸ್ಯ, ಅಧರ್ಮದ ನಡೆಗಳ ಬಗೆಗೊಂದು ಅಂಜಿಕೆ ಇತ್ತು. ಸಾರ್ವಜನಿಕ ಜೀವನದಲ್ಲಿ ಲಜ್ಜೆಗೆ ಮಹತ್ವವಿತ್ತು. ಆಗಿನ ಬಹುತೇಕ ತಪ್ಪು, ಮೋಸ, ಅಪರಾಧಗಳಿಗೆ ಜನಸಾಮಾನ್ಯರ ಅಜ್ಞಾನ, ಅನಕ್ಷರತೆಗಳಷ್ಟೇ ಕಾರಣವಾಗುತ್ತಿದ್ದವು. ಕಾಲ ಸರಿದಂತೆಲ್ಲಾ ಮನುಷ್ಯ ತನ್ನ ತಿಳಿವಳಿಕೆ ಮತ್ತು ನಡವಳಿಕೆಗಳಲ್ಲಿ ಉತ್ತಮನಾಗಬೇಕಿತ್ತು, ಸುಸಂಸ್ಕೃತನೂ ವಿವೇಕಿಯೂ ಸಜ್ಜನನೂ ಆಗಿ ಬದಲಾಗಬೇಕಿತ್ತು. ಆದರೆ ಆಗಿದ್ದೇನು?

ವಿದ್ಯಾವಂತರ ಸಂಖ್ಯೆಯು ಹೆಚ್ಚಾದಂತೆಲ್ಲ, ಆಧುನಿಕತೆಯ ವೃದ್ಧಿ ಸಾಧ್ಯವಾಯಿತು. ಆದರೆ ಸಮಾಜವು ಅನೀತಿಯತ್ತ, ದುಷ್ಟತನದತ್ತ ವಾಲುತ್ತಿರುವ ವಿಷಾದಕರ ವಿದ್ಯಮಾನಗಳಿಗೆ ನಾವೆಲ್ಲ ಸಾಕ್ಷಿಯಾಗಬೇಕಾಯಿತು. ಗುಡಿ, ಚರ್ಚು, ಮಸೀದಿಗಳು ಹೆಚ್ಚಿದವಾದರೂ ಸಮಾಜದಲ್ಲಿ ನೆಮ್ಮದಿ, ಶಾಂತಿ, ಸಾಮರಸ್ಯದ ಜಾಗದಲ್ಲಿ ಬೆಳೆಯುತ್ತಿರುವುದು ಸಣ್ಣತನ, ಅಸಹನೆ, ಅಪನಂಬಿಕೆ, ವಿಭಜಕ ಮನಃಸ್ಥಿತಿ! ವಿಪರ್ಯಾಸವೆಂದರೆ ಇವತ್ತಿನ ಬಹುತೇಕ ಭ್ರಷ್ಟರು, ಮೋಸಗಾರರು, ಅಕ್ರಮ ದಂಧೆಗಳಲ್ಲಿ ಭಾಗಿಯಾದವರು ದೈವಶಕ್ತಿಯಲ್ಲಿ ಅಪಾರ ನಂಬಿಕೆ, ಶ್ರದ್ಧೆಯುಳ್ಳವರು!

ಹಾಗಾದರೆ ಅದೇ ಜನ ತಮ್ಮ ಆಲೋಚನೆ ಮತ್ತು ನಡವಳಿಕೆಯಲ್ಲಿ ದುಷ್ಟತನವನ್ನು ಅಳವಡಿಸಿಕೊಂಡಿದ್ದಾದರೂ ಹೇಗೆ ಎಂಬುದು ಯಕ್ಷಪ್ರಶ್ನೆ. ಪ್ರಸ್ತುತ ಎಲ್ಲ ಒಳ್ಳೆಯತನಗಳ ಸಂಕೇತವೆಂದು ನಂಬುವ ದೇವರು, ಧರ್ಮಗಳಿಗೆ ವಿರುದ್ಧವಾದ ನಡವಳಿಕೆಗಳೇ ಸಮಾಜದಲ್ಲಿ ಹೆಚ್ಚಾಗಲು ಆತ್ಮವಂಚಕ ಪ್ರವೃತ್ತಿ ಕಾರಣ.

ಬಗೆಬಗೆಯ ಧಾರ್ಮಿಕ ಆಚರಣೆಗಳು ತೋರಿಕೆಗಳಾಗುತ್ತಿವೆಯೇ ಹೊರತು ಸಜ್ಜನಿಕೆ-ಸನ್ನಡತೆಗೆ, ಸೇವಾ ಮನೋಭಾವಕ್ಕೆ, ಮಾನವೀಯತೆಯ ವಿಕಾಸಕ್ಕೆ ಒದಗುತ್ತಿಲ್ಲ.

ಶಿವರಾಮ ಕಾರಂತರು ಹೇಳಿದಂತೆ ‘ಕೈಮುಗಿದು ಕೇಳಲೇನಿದೆ.. ಬದುಕೇ ಒಂದು ಉಡುಗೊರೆಯಾದ ಮೇಲೆ...’ ಆದ್ದರಿಂದ ಆಸಕ್ತಿ-ಅವಕಾಶಗಳಿರುವ, ಸಮಾಜಮುಖಿ ಕನಸು ಕಟ್ಟಿಕೊಂಡಿರುವ, ಜೀವಪರ-ಜನಪರವಾಗಿ ಮಿಡಿಯುವ ಕೆಲವೇ ಕೆಲವರು ಆಸ್ಥೆ ವಹಿಸಿ ತೊಡಗಿಕೊಂಡರೂ ಲೋಕದಲ್ಲಿ ಮಾನವೀಯತೆಯ ಬನಿ ಪೂರ್ತಿ ಬತ್ತಿ ಹೋಗದಂತೆ ಉಳಿಸಬಹುದು. ಅದಾಗಲಿ ಎಂಬುದೇ ಕನವರಿಕೆ.

ವಾಚಕರ ವಾಣಿ

ಬಿಹಾರದ ಸೇತುವೆಗಳೇಕೆ ದುರ್ಬಲ?

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಉತ್ತಮ ಆಡಳಿತಗಾರ ಎಂದು ಪರಿಗಣಿಸಲಾಗಿದೆ... ಆದರೂ ಅವರ ರಾಜ್ಯದಲ್ಲಿ ಸೇತುವೆಗಳು ದುರ್ಬಲವಾಗಿವೆ. ಮೂರು ವಾರಗಳ ಅವಧಿಯಲ್ಲಿ 13 ಸೇತುವೆಗಳು ಅಲ್ಲಿ ಕುಸಿದಿವೆ ಅಂದರೆ ಕಾಮಗಾರಿ ಅದೆಷ್ಟು ಗುಣಮಟ್ಟದ್ದಾಗಿದೆ ಎಂಬುದು ಅರಿವಾಗುತ್ತದೆ.

ನಮ್ಮ ಉತ್ತರ ಕನ್ನಡ ಜಿಲ್ಲೆಯ ಮಂಜಗುಣಿ ಮತ್ತು ಕಡವಾಡ ಊರಿನಲ್ಲಿ ತಲಾ ಅಂದಾಜು ₹30 ಕೋಟಿ ವೆಚ್ಚದಲ್ಲಿ ಸೇತುವೆ ಕಟ್ಟಲಾಗಿದೆ. ಸೇತುವೆ ಕೆಲಸ ಎಂದೋ ಮುಗಿದಿದೆ. ಆದರೆ ಅವಕ್ಕೆ ಕೂಡು ರಸ್ತೆಯೇ ಇಲ್ಲ. ಅವು ಕೆಲವೇ ಜನರಿಗೆ ಮತ್ತು ದ್ವಿಚಕ್ರ ವಾಹನಗಳಿಗೆ ಸಹಾಯಕವಾಗಿವೆಯೇ ವಿನಾ ಬೃಹತ್ ವಾಹನಗಳಿಗೆ ಅಲ್ಲ. ಕೂಡು ರಸ್ತೆಯ ಕೆಲಸವು ಹಣದ ಕೊರತೆಯಿಂದ ನಿಂತಿದೆ. ಒಳ್ಳೆಯ ಬೆಲೆಗೆ ದನ ಖರೀದಿಸಿದವನಿಗೆ, ಚಿಕ್ಕ ದಾಂಬು (ದನಕ್ಕೆ ಕಟ್ಟುವ ಬಳ್ಳಿ) ಇಲ್ಲದಂತಾಗಿದೆ!

ಚಂದ್ರಕಾಂತ ನಾಮಧಾರಿ, ಅಂಕೋಲಾ

ಸತ್ಯಾಂಶ ಬಯಲು: ಧೈರ್ಯ ತೋರುವರೇ?

‘ಅಧಿಕಾರಿಗಳ ವರ್ಗಾವಣೆ ಎಂಬುದು ಎಲ್ಲ ಸರ್ಕಾರಗಳಲ್ಲಿಯೂ ದಂಧೆಯೇ ಆಗಿದೆ’ ಎಂದು ಹೇಳಿ (ಪ್ರ.ವಾ., ಜುಲೈ 11) ಕಟು ವಾಸ್ತವವೊಂದನ್ನು ಮುಖ್ಯಮಂತ್ರಿಯ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಅವರು ಅನಾವರಣಗೊಳಿಸಿದ್ದಾರೆ. ಕೆಲವು ಆಯಕಟ್ಟಿನ ಹುದ್ದೆಗಳಿಗಾಗಿ ‘ಇಷ್ಟು’ ಅವಧಿಗೆ ‘ಇಂತಿಷ್ಟು’ ಎಂಬುದು ನಿಗದಿ ಆಗಿರುತ್ತದೆ.

ಈ ವರ್ಗಾವಣೆ ದಂಧೆಯು ಬಹಳ ಆಳವಾಗಿ ಬೇರುಬಿಟ್ಟಿದೆ. ಸಚಿವರಾಗಿ ಸೇವೆ ಸಲ್ಲಿಸಿದ ಅನುಭವ ಇರುವವರು ಅಥವಾ ನಿವೃತ್ತ ಹಿರಿಯ ಅಧಿಕಾರಿಗಳಲ್ಲಿ ಯಾರಾದರೂ ತಮ್ಮ ಅಧಿಕಾರಾವಧಿಯ ಅನುಭವ ಕಥನ ಬರೆದು, ಈ ದಂಧೆಯ ಸತ್ಯಾಂಶ ಬಯಲು ಮಾಡುವ ಧೈರ್ಯ ತೋರಿಯಾರೇ?

ವೆಂಕಟೇಶ್ ಮುದಗಲ್, ಕಲಬುರಗಿ

‘ಸುಪ್ರೀಂ’ ತೀರ್ಪು ಶ್ಲಾಘನೀಯ...

ವಿಚ್ಛೇದನ ಪಡೆದ ಮುಸ್ಲಿಂ ಮಹಿಳೆಯರು ಪತಿಯಿಂದ ಜೀವನಾಂಶ ಪಡೆಯಲು ಅರ್ಹರು ಎಂಬ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಮೆಚ್ಚುಗೆಗೆ ಅರ್ಹ. ವಿಚ್ಛೇದನ ವಿಚಾರದಲ್ಲಿ ಮುಸ್ಲಿಂ ಮಹಿಳೆಯರು ಅನುಭವಿಸುತ್ತಿರುವ ತಾರತಮ್ಯಕ್ಕೆ ಈ ತೀರ್ಪು ತೆರೆ ಎಳೆದಿದೆ. ಧರ್ಮನಿರಪೇಕ್ಷ ಭಾರತದಲ್ಲಿ ಜಾತಿ, ಧರ್ಮ, ಲಿಂಗ ಮೀರಿ ಸರ್ವರಿಗೂ ಸಮಾನ ನ್ಯಾಯ ದೊರಕುತ್ತದೆ ಎಂಬುದಕ್ಕೆ ಇದೊಂದು ನಿದರ್ಶನ.

ಚೇತನ್ ಕಾಶಿಪಟ್ಣ, ಉಜಿರೆ

‘ಗ್ಯಾರಂಟಿ’ ಬಗ್ಗೆ ಟೀಕೆ ಸಲ್ಲದು

‘ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದಾಗಿ ಜನರಲ್ಲಿ ಶ್ರಮ ಮನೋಭಾವ ಮಾಯವಾಗುತ್ತಿದೆ’ ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ಶ್ರೀಗಳು ನೀಡಿದ ಹೇಳಿಕೆ (ಪ್ರ.ವಾ., ಜುಲೈ 11) ಒಪ್ಪುವಂಥದ್ದಲ್ಲ. ಶ್ರಮಪಡುವ ಮನೋಭಾವದ ಬಗ್ಗೆ ಸ್ವಾಮೀಜಿ ಅಭಿಪ್ರಾಯ ಒಪ್ಪುವುದಾದರೆ ಎಲ್ಲ ಧಾರ್ಮಿಕ ಸಂಸ್ಥೆಗಳ ಮುಖ್ಯಸ್ಥರು, ಮಠಾಧೀಶರು ಪೀಠವನ್ನು ತ್ಯಜಿಸಿ ಕೃಷಿಯಲ್ಲಿಯೋ, ಮತ್ತೊಂದು ಕ್ಷೇತ್ರದಲ್ಲಿಯೋ ಶ್ರಮಿಕರಾಗಿ ದುಡಿಯಲಿ ಎಂದು ಬಯಸಬೇಕಾಗುತ್ತದೆ. ಗ್ಯಾರಂಟಿ ಯೋಜನೆಗಳು ಎಲ್ಲ ಧರ್ಮ, ಜಾತಿ, ಸಮುದಾಯಗಳ ಜನರಿಗೆ ತಲುಪುತ್ತಿವೆ. ಗ್ಯಾರಂಟಿ ಯೋಜನೆಗಳು ಕಷ್ಟದ ಬದುಕಿನಲ್ಲಿ ಸಂಜೀವಿನಿಯಂತೆ ಕೆಲಸ ಮಾಡುತ್ತಿವೆ.

ಗ್ಯಾರಂಟಿ ಸೌಲಭ್ಯಗಳು ಬಂದಮಾತ್ರಕ್ಕೆ ಬಡವರು ದುಡಿಯುವುದನ್ನು ನಿಲ್ಲಿಸಿ ಮನೆಯಲ್ಲಿ ಕೂರುವುದಿಲ್ಲ. ಈ ಯೋಜನೆಗಳಿಂದ ಕೃಷಿ ಕಾರ್ಯಕ್ಕೆ ಕೂಲಿಕಾರರು ಸಿಗುವುದಿಲ್ಲ, ಪ್ರಬಲ ಜಾತಿಗಳ ಬಡವರಿಗೆ ಯೋಜನೆಗಳು ತಲುಪುತ್ತಿಲ್ಲ ಎಂಬ ಅಭಿಪ್ರಾಯ ಸತ್ಯಕ್ಕೆ ದೂರ. ಗ್ಯಾರಂಟಿ ಯೋಜನೆಗಳು ಜಾತಿ ಆಧಾರಿತವಾಗಿ ಜಾರಿಯಲ್ಲಿದ್ದರೆ ಅದನ್ನು ವಸ್ತುನಿಷ್ಠವಾಗಿ ವಿವರಿಸಿ, ಯಾವ ಜಾತಿಗಳಿಗೆ ಸೌಲಭ್ಯ ಸಿಗುತ್ತಿಲ್ಲ ಎಂಬುದನ್ನು ಸರ್ಕಾರದ ಗಮನಕ್ಕೆ ತರುವ ಪ್ರಯತ್ನವನ್ನು ಸ್ವಾಮೀಜಿ ಮಾಡಲಿ.

ಸಮಸ್ಯೆಗಳಿಗೆಲ್ಲ ಗ್ಯಾರಂಟಿ ಯೋಜನೆಗಳನ್ನೇ ದೂರುವುದು ಬಡವರು, ಶ್ರಮಿಕರು ಹಾಗೂ ಮಹಿಳೆಯರನ್ನು ಅವಮಾನಿಸುವುದರ ಜೊತೆಗೆ ಅವರ ಬಗೆಗಿನ ತಾತ್ಸಾರ ಹಾಗೂ ಅಸಹನೆಯ ಮನೋಭಾವವನ್ನು ತೋರಿಸುತ್ತದೆ. ಯಾವುದೇ ಸರ್ಕಾರದ ಯಾವುದೇ ಯೋಜನೆಯನ್ನು ಟೀಕಿಸುವ ಮುನ್ನ ತಾರತಮ್ಯರಹಿತ ಸಮಾಜ ನಿರ್ಮಾಣದ ದೃಷ್ಟಿಯಿಂದ ಆ ಯೋಜನೆಗಳ ಪರಿಣಾಮದ ಬಗ್ಗೆ ಯೋಚಿಸಬೇಕು.

ಸೋಮಲಿಂಗಪ್ಪ ಬೆಣ್ಣಿ, ಗುಳದಳ್ಳಿ, ಕೊಪ್ಪಳ ಜಿಲ್ಲೆ

ಮರುನಾಮಕರಣ: ರಾಜಕಾರಣಿಗಳ ಪ್ರತಿಷ್ಠೆಯಾಗದಿರಲಿ

ಜನಪ್ರತಿನಿಧಿಗಳು ತಾವು ಪ್ರತಿನಿಧಿಸುವ ಕ್ಷೇತ್ರಕ್ಕೆ ತಾವೇ ಅಧಿಪತಿ ಎಂಬಂತೆ ನಡೆದುಕೊಳ್ಳುವುದು ಒಪ್ಪುವಂಥದ್ದಲ್ಲ. ಇದಕ್ಕೆ ನಿದರ್ಶನವೆಂದರೆ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡುವುಕ್ಕೆ ಪಣ ತೊಡುವುದು ಹಾಗೂ ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬಂದು, ಆ ಹೆಸರನ್ನು ಕಿತ್ತೆಸೆಯುವುದಾಗಿ ಹೇಳಿಕೆ ಕೊಡುವುದು. ಇಲ್ಲಿ ರಾಜಕಾರಣಿಗಳ ಪ್ರತಿಷ್ಠೆ ಕಾಣುತ್ತದೆಯೇ ಹೊರತು ಅಭಿವೃದ್ಧಿಗೆ ತಾ ಮುಂದು ನಾ ಮುಂದು ಎಂಬ ಸೌಹಾರ್ದಯುತ ಪೈಪೋಟಿ ಕಾಣುತ್ತಿಲ್ಲ.

ಜನರ ಪರವಾಗಿ ಅಧಿಕಾರ ನಡೆಸಬೇಕಾದವರಿಗೆ ಇಂಥ ವರ್ತನೆಗಳು ತಕ್ಕುದಲ್ಲ. ರಾಮನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಪರಿಗಣಿಸಿದ ನಂತರ ಜನರು ಜಿಲ್ಲೆಗೆ ಹೊಂದಿಕೊಂಡಿದ್ದಾರೆ. ಈಗ ಅಗತ್ಯವಿರುವುದು ಜಿಲ್ಲೆಯ ಅಭಿವೃದ್ಧಿಗೆ ಯೋಜನೆಗಳ ಬಗ್ಗೆ ಚಿಂತನೆ. ಮರು ನಾಮಕರಣದಿಂದ ಅಭಿವೃದ್ಧಿಯಾಗುತ್ತದೆ ಎಂಬುದು ಹುಸಿ ನಂಬಿಕೆ. ಒಂದು ವೇಳೆ ಮರುನಾಮಕರಣ ಆದರೆ ಸರ್ಕಾರದ ಎಲ್ಲ ದಾಖಲೆಗಳಲ್ಲಿ ಹೆಸರು ಬದಲಾಗಬೇಕು. ಇದಕ್ಕೆ ಬೇಕಾಗುವ ಸಮಯ, ಜನರ ತೆರಿಗೆ ಹಣ ಹಾಗೂ ಮಾನವ ಸಂಪನ್ಮೂಲವನ್ನು ಗಣನೆಗೆ ತೆಗೆದುಕೊಂಡರೆ ಮರುನಾಮಕರಣದಿಂದ ಪ್ರಯೋಜನವೇನಿಲ್ಲ ಅನ್ನಿಸುತ್ತದೆ.

ಜಿ. ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹೆಣ್ಣುಮಕ್ಕಳ ಉತ್ಪಾದಕತೆಗೆ ಪೆಟ್ಟು ಕೃಷಿ, ಕೈಗಾರಿಕೆಗಳಿಗೆ ಹೊಡೆತ

ನೀರಿನ ಬರ ಆರ್ಥಿಕತೆಗೆ ಗರ

2 ಲಕ್ಷ ದೇಶದಲ್ಲಿ ಪ್ರತಿ ವರ್ಷ ಕಲುಷಿತ ನೀರು ಸೇವನೆಯಿಂದ ಸಾಯುತ್ತಿರುವ ಜನರ ಸಂಖ್ಯೆ

220 ಕೋಟಿ ಶುದ್ಧ ಕುಡಿಯುವ ನೀರಿನಿಂದ ವಂಚಿತವಾದ ಜಗತ್ತಿನ ಜನಸಂಖ್ಯೆ

ಮನುಷ್ಯರು ನೀರು ಇಲ್ಲದೇ ಬದುಕಲಾರರು, ನಿಜ. ಆದರೆ, ಬಳಕೆಗೆ ಬೇಕಾದ ನೀರು ಸಂಗ್ರಹಿಸಲು ಬದುಕುವುದೇ ಜೀವನದ ದೊಡ್ಡ ಕೆಲಸವೂ ಆಗಬಾರದು. ಜಾಗತಿಕ ಮಟ್ಟದಲ್ಲಿ ಕುಟುಂಬದ ನೀರಿನ ಬಳಕೆಯ ಅಗತ್ಯವನ್ನು ಪೂರೈಸುವ ಹೊಣೆಯನ್ನು ಮಹಿಳೆಯರಿಗೆ ಹೊರಿಸಲಾಗಿದೆ. ಅವರ ಆಯಸ್ಸಿನ ಬಹು ಮುಖ್ಯ ಭಾಗ ನೀರಿಗಾಗಿ ಪರದಾಡುವುದರಲ್ಲಿಯೇ ಸವೆದುಹೋಗುತ್ತಿದೆ. ಇದು ಆರ್ಥಿಕತೆಯ ಮೇಲೆ ಪ್ರಭಾವ ಬೀರುತ್ತಿದೆ. ಬೆಳೆಯುತ್ತಿರುವ ಭಾರತದ ಆರ್ಥಿಕತೆಗೆ ನೀರೇ ದೊಡ್ಡ ಆತಂಕವಾಗಿದೆ.

ಪ್ರಜಾವಾಣಿ ವಾರ್ತೆ

ವ್ಯಕ್ತಿಯೊಬ್ಬನಿಗೆ ಪ್ರತಿ ದಿನ ಕುಡಿಯಲು ಕನಿಷ್ಠ 3ರಿಂದ 4 ಲೀಟರ್ ನೀರಿನ ಅಗತ್ಯವಿದೆ ಹಾಗೂ ನಿತ್ಯದ ಅಗತ್ಯಗಳನ್ನು ಪೂರೈಸಿಕೊಳ್ಳಲು ಕೊನೆಯ ಪಕ್ಷ 40 ಲೀಟರ್ ನೀರು ಬೇಕಾಗುತ್ತದೆ. ಇಷ್ಟು ನೀರನ್ನು ಸಂಗ್ರಹಿಸುವುದು ಜಗತ್ತಿನ ಮಹಿಳೆಯರ ಪಾಲಿಗೆ ಮಹಾ ಕಷ್ಟದ ಕೆಲಸವಾಗಿದೆ.

ವಿಶ್ವಸಂಸ್ಥೆಯು 20230ರೊಳಗೆ ಸಾಧಿಸಬೇಕಾದ ಸುಸ್ಥಿರ ಅಭಿವೃದ್ಧಿ ಗುರಿಗಳ (ಎಸ್‌ಡಿಜಿ) ಪೈಕಿ ಆರನೆಯ ಗುರಿ ಶುದ್ಧ ನೀರು ಮತ್ತು ಶುಚಿತ್ವಕ್ಕೆ ಸಂಬಂಧಿಸಿದ್ದು. ಎಲ್ಲರಿಗೂ ಶುದ್ಧ ನೀರಿನ ನಿರಂತರ ಲಭ್ಯತೆ ಮತ್ತು ಶುಚಿತ್ವ ನಿರ್ವಹಣೆಗೆ ಅಗತ್ಯವಾದ ಸೌಲಭ್ಯಗಳನ್ನು ಕಲ್ಪಿಸುವುದು ಇದರ ಉದ್ದೇಶ. ಈ ಗುರಿ ಸಾಧನೆಯ ವಿಚಾರದಲ್ಲಿ ಜಾಗತಿಕ ಮಟ್ಟದಲ್ಲಾಗಲಿ ಅಥವಾ ಭಾರತದ ಮಟ್ಟದಲ್ಲಾಗಲಿ ಆಶಾದಾಯಕ ಬೆಳವಣಿಗೆ ಕಂಡುಬರುತ್ತಿಲ್ಲ.

ಎಸ್‌ಡಿಜಿ 6ರ ವಿಚಾರದಲ್ಲಿ ಜಾಗತಿಕ ಮಟ್ಟದಲ್ಲಿ ಆಗಿರುವ ಬೆಳವಣಿಗೆಯನ್ನು ಪರಿಶೀಲಿಸುವ ಜಂಟಿ ಕಾರ್ಯಕ್ರಮವನ್ನು (ಡಬ್ಲ್ಯುಎಎಸ್‌ಎಚ್ 2020–22) ವಿಶ್ವ ಆರೋಗ್ಯ ಸಂಸ್ಥೆ ಮತ್ತು ವಿಶ್ವಸಂಸ್ಥೆಯ ಮಕ್ಕಳ ನಿಧಿ (ಯುನಿಸೆಫ್) ಹಾಕಿಕೊಂಡಿತ್ತು. ನೀರು ಸಂಗ್ರಹಣೆಯ ವಿಚಾರದಲ್ಲಿ ಜಾಗತಿಕ ಮಟ್ಟದಲ್ಲಿ ವ್ಯಾಪಕವಾಗಿ ಲಿಂಗ ತಾರತಮ್ಯ ಅನುಸರಿಸಲಾಗುತ್ತಿದೆ ಎನ್ನುವ ಅಂಶದತ್ತ ಈ ಅಧ್ಯಯನ ವರದಿಯು ಬೊಟ್ಟು ಮಾಡಿದೆ. ಮನೆ ಬಳಕೆಯ ನೀರನ್ನು ಸಂಗ್ರಹಿಸುವ ಕೆಲಸವನ್ನು ಹೆಚ್ಚಾಗಿ ನಿಭಾಯಿಸುತ್ತಿರುವುದು ಹೆಣ್ಣುಮಕ್ಕಳು. ಜತೆಗೆ, ಮನೆಯ ಹೊರಗೆ ಹೆಣ್ಣುಮಕ್ಕಳು ಶೌಚಾಲಯ ಬಳಸುವುದೂ ಸೇರಿದಂತೆ ಹಲವು ಸಂದರ್ಭಗಳಲ್ಲಿ ನೈರ್ಮಲ್ಯದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬ ವಿಚಾರದ ಬಗ್ಗೆ ಬೆಳಕು ಚೆಲ್ಲಿದೆ. ನೀರು ಸಂಗ್ರಹದ ಕಾಯಕವು ಮಹಿಳೆಯರ ಸಾಮರ್ಥ್ಯವನ್ನು ಕಸಿಯುತ್ತಿದೆ ಎಂದು ವರದಿ ವಿಶ್ಲೇಷಿಸಿದೆ.

ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ನೀರು ಸಂಗ್ರಹಕ್ಕಾಗಿ ಹೆಣ್ಣುಮಕ್ಕಳು ದೂರದ ಹಾದಿಯನ್ನು ಕ್ರಮಿಸುತ್ತಿದ್ದು, ಈ ದಿಸೆಯಲ್ಲಿ ಇಡುವ ಪ್ರತಿ ಹೆಜ್ಜೆಯೂ ಆಕೆಯನ್ನು ಶಿಕ್ಷಣದಿಂದ, ಆಟದಿಂದ, ರಕ್ಷಣೆಯಿಂದ ವಂಚಿತರನ್ನಾಗಿಸುತ್ತಿದೆ ಎಂದು ಹೇಳಿದೆ. ನೀರಿನ ಕೊರತೆಯು ಮಹಿಳೆಯರ ಖಾಸಗಿತನ, ಘನತೆ ಮತ್ತು ರಕ್ಷಣೆಗೆ ಕಂಟಕವಾಗಿದೆ.

ಜಗತ್ತಿನ 22 ದೇಶಗಳಲ್ಲಿ ನಡೆಸಿದ ಅಧ್ಯಯನದ ಪ್ರಕಾರ, ಸುಮಾರು 50 ಕೋಟಿ ಮಂದಿಯು ಶೌಚಾಲಯವನ್ನು ಇತರ ಕುಟುಂಬಗಳೊಂದಿಗೆ ಹಂಚಿಕೊಳ್ಳುತ್ತಿದ್ದಾರೆ. 220 ಕೋಟಿ ಮಂದಿಗೆ (ಪ್ರತಿ ನಾಲ್ವರಲ್ಲಿ ಒಬ್ಬರಿಗೆ) ಈಗಲೂ ಮನೆಯಲ್ಲಿ ಶುದ್ಧ ಕುಡಿಯುವ ನೀರು ಲಭ್ಯವಿಲ್ಲ; 350 ಕೋಟಿ ಮಂದಿಗೆ (ಪ್ರತಿ ಐವರಲ್ಲಿ ಇಬ್ಬರಿಗೆ) ಸುರಕ್ಷಿತ ನೈರ್ಮಲ್ಯ ವ್ಯವಸ್ಥೆಯಿಲ್ಲ. 200 ಕೋಟಿ ಮಂದಿ (ಪ್ರತಿ ನಾಲ್ವರಲ್ಲಿ ಒಬ್ಬರು) ಮನೆಯಲ್ಲಿ ಸೋಪು ಬಳಸಿ ಕೈ ತೊಳೆಯುವ ಸಾಮರ್ಥ್ಯ ಪಡೆದಿಲ್ಲ.

ಭಾರತದ ಬೆಳವಣಿಗೆಗೆ ನೀರಿನ ಅಡ್ಡಿ

ಭಾರತದ ಪರಿಸ್ಥಿತಿ ಭಿನ್ನವಾಗಿಯೇನೂ ಇಲ್ಲ. ದೇಶದಲ್ಲಿ ಕುಟುಂಬದ ಬಳಕೆಗಾಗಿ ನೀರು ಸಂಗ್ರಹಿಸುವುದೇ ಮಹಿಳೆಯರ ಮುಖ್ಯ ಕಸುಬಾಗಿದೆ. ಗ್ರಾಮೀಣ ಪ್ರದೇಶದ ಜನ ಮತ್ತು ನಗರದ ಬಡವರ ಮಟ್ಟಿಗೆ ಇದು ದೊಡ್ಡ ಸಮಸ್ಯೆಯಾಗಿದೆ. ಪ್ರತಿನಿತ್ಯ ಹೆಣ್ಣುಮಕ್ಕಳು ಹಲವು ಮೈಲಿ ನಡೆದುಹೋಗಿ ನೀರು ತಂದು ಕುಟುಂಬದ ಅಗತ್ಯಗಳನ್ನು ಪೂರೈಸುತ್ತಿದ್ದಾರೆ. ಮನೆಕೆಲಸ ಭಾರತದ ಮಹಿಳೆಯರ ಮುಖ್ಯ ಕೆಲಸವಾಗಿದ್ದರೆ, ಅನೇಕ ಕುಟುಂಬಗಳ ಮಹಿಳೆಯರ ದಿನದ ಐದಾರು ಗಂಟೆ ನೀರು ಸಂಗ್ರಹಣೆಯಲ್ಲಿಯೇ ಕಳೆದುಹೋಗುತ್ತಿದೆ. ಅದಕ್ಕಾಗಿ ಮಹಿಳೆಯರು ಅಪಾರ ಶ್ರಮವನ್ನೂ ವ್ಯಯಿಸಬೇಕಿದೆ. ಬೇರೆ ಉದ್ಯೋಗ ಮಾಡಲು ಅವರಿಗೆ ಸಮಯ ಹಾಗೂ ಸಾಮರ್ಥ್ಯವೇ ಉಳಿಯುತ್ತಿಲ್ಲ.

2023 ಎಸ್‌ಬಿಐ ಇಕೋವ್ರಾಪ್ ವರದಿಯ ಪ್ರಕಾರ, ಭಾರತದ ಆರ್ಥಿಕತೆಗೆ ವೇತನರಹಿತ ಮಹಿಳೆಯರ ಕೊಡುಗೆ ₹22.7 ಲಕ್ಷ ಕೋಟಿ. ಇದರಲ್ಲಿ ಗ್ರಾಮೀಣ ಮಹಿಳೆಯರ ಪಾಲು ₹14.7 ಲಕ್ಷ ಕೋಟಿ ಆಗಿದ್ದರೆ, ನಗರದ ಮಹಿಳೆಯರ ಪಾಲು ₹8.0 ಲಕ್ಷ ಕೋಟಿ ಆಗಿದೆ. ಇದು ಜಿಡಿಪಿಯ ಶೇ 7.5ರಷ್ಟು ಎಂದು ವರದಿ ತಿಳಿಸಿದೆ.

ಅಂತರರಾಷ್ಟ್ರೀಯ ಆರ್ಥಿಕ ಸಂಶೋಧನೆ ಮತ್ತು ವಿಶ್ಲೇಷಣಾ ಸಂಸ್ಥೆಯಾದ ಮೂಡೀಸ್ ಪ್ರಕಾರ, ರಾಜಕಾರಣ ಮತ್ತು ಬಡ್ಡಿ ದರಗಳಿಗಿಂತಲೂ ಹೆಚ್ಚಾಗಿ ನೀರಿನ ಬಿಕ್ಕಟ್ಟು ಪ್ರವರ್ಧಮಾನಕ್ಕೆ ಬರುತ್ತಿರುವ ಭಾರತದ ಆರ್ಥಿಕತೆಗೆ ದೊಡ್ಡ ಅಡ್ಡಿಯಾಗಲಿದೆ.

ಜಗತ್ತಿನ ಅತಿ ಹೆಚ್ಚು ಜನಸಂಖ್ಯೆಯ ದೇಶವಾಗಿರುವ ಭಾರತದಲ್ಲಿ ನೀರಿನ ಸಮಸ್ಯೆ ದಶಕಗಳಿಂದಲೂ ಇದೆ. ಆದರೆ, ಜಾಗತಿಕ ತಾಪಮಾನ ಏರಿಕೆಯ ಜತೆಜತೆಯಲ್ಲೇ ನೀರಿನ ಬವಣೆಯೂ ಹೆಚ್ಚುತ್ತಿದೆ. ದೇಶದ ರಾಜಧಾನಿ ದೆಹಲಿಯಿಂದ ಹಿಡಿದು, ಸಿಲಿಕಾನ್ ಸಿಟಿ ಎಂದೇ ಹೆಸರಾಗಿರುವ ಬೆಂಗಳೂರಿನವರೆಗೆ ಬಹುತೇಕ ನಗರಗಳಲ್ಲಿ ನೀರಿನ ತೀವ್ರ ಕೊರತೆ ಇದೆ. ಈ ಬಾರಿಯ ಬೇಸಿಗೆಯಲ್ಲಿ ಬೆಂಗಳೂರು ಹಿಂದೆಂದೂ ಇಲ್ಲದ ರೀತಿಯಲ್ಲಿ ನೀರಿನ ಸಮಸ್ಯೆಯನ್ನು ಎದುರಿಸಿತು.

ನೀರಿನ ಕೊರತೆಯು ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡಲ್ಲೂ ವ್ಯಾಪಕವಾಗಿದ್ದು, ಜನರ ದೈನಿಕ ಬದುಕನ್ನು ಕಂಗೆಡಿಸುತ್ತಿದೆ. ಕೃಷಿ ಉತ್ಪಾದನೆ ಮತ್ತು ಕೈಗಾರಿಕೆಗಳ ಕಾರ್ಯಾಚರಣೆಗೆ ಅಡ್ಡಿ ಉಂಟುಮಾಡುತ್ತಿದ್ದು, ಆಹಾರದ ಹಣದುಬ್ಬರಕ್ಕೆ ಕಾರಣವಾಗುತ್ತಿದೆ. ಜತೆಗೆ, ಉದ್ಯಮಗಳ ಆದಾಯ ಖೋತಾ ಆಗಲು ಕಾರಣವಾಗುತ್ತಿದ್ದು, ರೈತರು ಮತ್ತು ಕಾರ್ಮಿಕರು ಸಂಕಷ್ಟ ಎದುರಿಸುವಂತಾಗಿದೆ. ಸಾಮಾಜಿಕ ಅಶಾಂತಿಗೂ ಕಾರಣವಾಗುತ್ತಿದೆ. ಸರ್ಕಾರದ ಮಾಹಿತಿಯ ಪ್ರಕಾರ, ಕಲುಷಿತ ನೀರಿನ ಸೇವನೆಯಿಂದ ಪ್ರತಿವರ್ಷ 2 ಲಕ್ಷ ಮಂದಿ ಸಾಯುತ್ತಿದ್ದಾರೆ. ಇದರಿಂದ ಜನ ಮತ್ತು ದೇಶದ ಆರ್ಥಿಕತೆ ನಲುಗುವಂತಾಗಿದೆ.

ಭಾರತದಲ್ಲಿ ಜಗತ್ತಿನಲ್ಲೇ ಅತಿ ಹೆಚ್ಚು ಅಂತರ್ಜಲ ಬಳಕೆ (ಶೇ 66) ಇದ್ದು, ಅದನ್ನು ಶೇ 50ಕ್ಕಿಂತಲೂ ಕಡಿಮೆ ಮಟ್ಟಕ್ಕೆ ಇಳಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ಜತೆಗೆ ದೇಶದಲ್ಲಿ 785 ಜಿಲ್ಲೆಗಳ ಪೈಕಿ ಪ್ರತಿ ಜಿಲ್ಲೆಯಲ್ಲಿಯೂ 75 ಕೆರೆಗಳ ಪುನರುಜ್ಜೀವನಕ್ಕೆ ಪ್ರಧಾನಿ ನರೇಂದ್ರ ಮೋದಿ ಕಾರ್ಯಕ್ರಮ ರೂಪಿಸಿದ್ದಾರೆ. ಈ ದಿಸೆಯಲ್ಲಿ ಈಗಾಗಲೇ ಕೆಲಸ ಆರಂಭವಾಗಿದ್ದು, 83,000 ಕೆರೆಗಳ ಅಭಿವೃದ್ಧಿ ಕೆಲಸ ನಡೆಯುತ್ತಿದೆ. ಇದರಿಂದ ಅಂತರ್ಜಲ ಮಟ್ಟ ಹೆಚ್ಚಳವಾಗುತ್ತದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ.

ಆಧಾರ: ರಾಯಿಟರ್ಸ್, ವಿಶ್ವ ಆರೋಗ್ಯ ಸಂಸ್ಥೆ, ಯುನಿಸೆಫ್, ಜಲಜೀವನ್ ಮಿಷನ್ ವೆಬ್‌ಸೈಟ್, ಬಿಬಿಸಿ

- **180** ಕೋಟಿ ಮನೆಯ ಬಳಿ ನೀರಿನ ಸೌಲಭ್ಯ ಇಲ್ಲದ ಕುಟುಂಬಗಳು
- ಪ್ರತಿ **10**ರಲ್ಲಿ **7** ಕುಟುಂಬಗಳ ಹೆಣ್ಣುಮಕ್ಕಳಿಗೆ ನೀರು ಸಂಗ್ರಹದ ಜವಾಬ್ದಾರಿ
- ಪ್ರತಿ **10**ರಲ್ಲಿ **3** ಕುಟುಂಬಗಳ ಗಂಡುಮಕ್ಕಳಿಗೆ ನೀರು ಸಂಗ್ರಹದ ಜವಾಬ್ದಾರಿ
- **7%** ನೀರು ಸಂಗ್ರಹವೇ ಕಾಯಕವಾಗಿರುವ 15 ವರ್ಷದ ಕೆಳಗಿನ ಹೆಣ್ಣುಮಕ್ಕಳು
- **4%** ನೀರು ಸಂಗ್ರಹವೇ ಕಾಯಕವಾಗಿರುವ 15 ವರ್ಷದ ಕೆಳಗಿನ ಗಂಡುಮಕ್ಕಳು
- **14** ಲಕ್ಷ ನೀರಿನ ಕೊರತೆಯಿಂದ ಪ್ರತಿವರ್ಷ ಸಾವಿಗೀಡಾಗುತ್ತಿರುವವರ ಸಂಖ್ಯೆ

ಜಲ ಜೀವನ್ ಮಿಷನ್ ನಲ್ಲಿ ಇರಲಿ, ನೀರು ಬರಲಿ

2019ರ ಸ್ವಾತಂತ್ರ ದಿನಾಚರಣೆಯ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಜಲ ಜೀವನ್ ಮಿಷನ್ ಯೋಜನೆ ಆರಂಭಿಸಿದ್ದರು. 2024ರ ಒಳಗೆ ದೇಶದ ಗ್ರಾಮೀಣ ಪ್ರದೇಶದ ಪ್ರತಿ ಮನೆಗೂ ನಲ್ಲಿ ಸಂಪರ್ಕ ನೀಡಿ, ನೀರು ಪೂರೈಸುವುದು ಯೋಜನೆಯ ಗುರಿ ಎಂದು ಪ್ರಕಟಿಸಿದ್ದರು. ನೀರು ಪೂರೈಕೆಯ ಜತೆಗೆ ನೀರಿನ ಮೂಲಗಳ ರಕ್ಷಣೆ, ಮಳೆ ನೀರು ಸಂಗ್ರಹ ಇತ್ಯಾದಿಗಳ ಕಡೆಗೂ ಗಮನ ಹರಿಸುವುದು ಯೋಜನೆಯ ಭಾಗವಾಗಿತ್ತು. ಮೋದಿ ಅವರ ಮಹತ್ವಾಕಾಂಕ್ಷೆಯ ಈ ಯೋಜನೆಯನ್ನು ಕೇಂದ್ರ ಜಲ ಶಕ್ತಿ ಇಲಾಖೆ ಅನುಷ್ಠಾನ ಮಾಡುತ್ತಿದೆ.

ಕೇಂದ್ರ ಸರ್ಕಾರದ ಅಧಿಕೃತ ಮಾಹಿತಿಯ ಪ್ರಕಾರ, 19.31 ಕೋಟಿ ಕುಟುಂಬಗಳ ಪೈಕಿ ಇದುವರೆಗೆ 14.96 ಕೋಟಿ ಕುಟುಂಬಗಳಿಗೆ ನಲ್ಲಿ ನೀರಿನ ಸಂಪರ್ಕ ನೀಡಲಾಗಿದೆ. ಸರ್ಕಾರದ ಪ್ರಕಾರ, ಯೋಜನೆಯಲ್ಲಿ ಶೇ 77.48 ಪ್ರಗತಿ ಸಾಧಿಸಲಾಗಿದೆ. ಸಮರ್ಪಕ ರೀತಿಯಲ್ಲಿ ಅನುಷ್ಠಾನಕ್ಕೆ ಬಂದರೆ, ಇದು ನಿಜಕ್ಕೂ ಉತ್ತಮ ಯೋಜನೆಯೇ. ಆದರೆ, ಯೋಜನೆಯ ಅನುಷ್ಠಾನದ ಬಗ್ಗೆ ಹಲವು ಆಕ್ಷೇಪಣೆಗಳು, ಆರೋಪಗಳು ಕೇಳಿಬಂದಿವೆ. ನಲ್ಲಿ ಸಂಪರ್ಕ ನೀಡಲಾಗಿದ್ದರೂ, ಅವುಗಳಲ್ಲಿ ನೀರು ಬರುತ್ತಿಲ್ಲ ಎನ್ನುವ ವ್ಯಾಪಕ ದೂರುಗಳಿವೆ.

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ನೀರಿನ ಕೊರತೆ ನಿರಂತರ

ಭಾರತದ 142 ಕೋಟಿ ಜನರಿಗೆ ಮಳೆಗಾಲದ ಕೃಷಿಯೇ ಮುಖ್ಯ ಆಸರೆ. ಲಭ್ಯ ನೀರಿನ ಪೈಕಿ ಶೇ 80ಕ್ಕೂ ಹೆಚ್ಚಿನ ಪಾಲು ಭತ್ತ, ಗೋಧಿ, ಕಬ್ಬು ಬೆಳೆಗಳಿಗೆ ಬಳಕೆಯಾಗುತ್ತಿದೆ. ತೀವ್ರವಾದ ಹವಾಮಾನ ವೈಪರೀತ್ಯಗಳು ಮುಂಗಾರು ಮಳೆಯ ಮೇಲೆ ಪರಿಣಾಮ ಬೀರುತ್ತಿರುವುದು ಒಂದೆಡೆ ಇದ್ದರೆ, ನಗರೀಕರಣದಿಂದ ಕೃಷಿ ಯೋಗ್ಯ ಭೂಮಿ ಕಡಿಮೆ ಆಗುತ್ತಿರುವುದು ಮತ್ತೊಂದೆಡೆ ನಡೆಯುತ್ತಿದೆ. ಹೀಗಾಗಿ ಉತ್ತಮ ಮಳೆ ಸುರಿದರೂ ಹೆಚ್ಚಿನ ನೀರು ಸಮುದ್ರ ಸೇರುತ್ತಿದೆ.

ಭಾರತದ ಸದ್ಯದ ತಲಾ ವಾರ್ಷಿಕ ನೀರಿನ ಲಭ್ಯತೆ 1,486 ಕ್ಯುಬಿಕ್ ಮೀಟರ್ ಇದ್ದು, ಜನಸಂಖ್ಯೆಯ ಹೆಚ್ಚಳದಿಂದ 2031ರ ವೇಳೆಗೆ ಇದು 1,367 ಕ್ಯುಬಿಕ್ ಮೀಟರ್‌ಗೆ ಕುಸಿಯಲಿದೆ. 2011ರಿಂದಲೂ ದೇಶದ ತಲಾ ನೀರಿನ ಲಭ್ಯತೆ 1,700 ಕ್ಯುಬಿಕ್ ಮೀಟರ್‌ಗಿಂತ ಕಡಿಮೆ ಇದ್ದು, ಇದನ್ನು 'ನೀರಿನ ಕೊರತೆ' ಎಂದು ವರ್ಗೀಕರಿಸಲಾಗಿದೆ.

ಈ ಹಿಂದೆ ನೀರಿನ ವಿಚಾರದಲ್ಲಿ, ಬರಗಾಲದ ವರ್ಷ ಮತ್ತು ಸಹಜ ಮಳೆಯ ವರ್ಷ ಎಂಬ ಪರಿಗಣನೆ ಇತ್ತು. ಈಗ ಪ್ರತಿ ವರ್ಷ ನೀರಿನ ಬಿಕ್ಕಟ್ಟು ಸಾಮಾನ್ಯ ಆಗಿದ್ದು, ವರ್ಷದಿಂದ ವರ್ಷಕ್ಕೆ ಅದರ ತೀವ್ರತೆ ಹೆಚ್ಚುತ್ತಿದೆ.

ಮನೆಬಳಕೆಯ ಶೇ 90ರಷ್ಟು ನೀರನ್ನು ಶುದ್ಧೀಕರಿಸಬಹುದು ಎಂದು ತಜ್ಞರು ಹೇಳುತ್ತಾರೆ. ಆದರೆ, ಬೆಳೆಯುತ್ತಿರುವ ಜನಸಂಖ್ಯೆಗೆ ತಕ್ಕಂತೆ ನೀರು ಪೂರೈಕೆ ಮತ್ತು ಅದನ್ನು ಶುದ್ಧೀಕರಣ ಮಾಡುವ ವ್ಯವಸ್ಥೆ ರೂಪಿಸುವಲ್ಲಿ ಸರ್ಕಾರಗಳು ವಿಫಲವಾಗಿವೆ. ಹೀಗಾಗಿ ಮನೆಬಳಕೆಯ ಮಲಿನ ನೀರು ಹರಿದು ನದಿಗಳ ಒಡಲು ಸೇರುವಂತಾಗಿದೆ.

ಸಿನಿ ಬಿಟ್ಸ್

'ರಾಕ್ಷಸ' ಸಿನಿಮಾ ಪೋಸ್ಟರ್

'ರಾಕ್ಷಸ'ನಾದ ಪ್ರಜ್ವಲ್ ದೇವರಾಜ್

ಸ್ಯಾಂಡಲ್‌ವುಡ್‌ನ ಡೈನಾಮಿಕ್ ಪ್ರಿನ್ಸ್ ಸಾಲು ಸಾಲು ಸಿನಿಮಾಗಳನ್ನು ಮಾಡುತ್ತಿದ್ದಾರೆ. 'ಮಾಫಿಯಾ' ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿರುವ ಪ್ರಜ್ವಲ್ ದೇವರಾಜ್ ಇತ್ತೀಚೆಗಷ್ಟೇ 'ಕರಾವಳಿ' ಸಿನಿಮಾ ಸೆಟ್ ಪ್ರವೇಶಿಸಿದ್ದರು. ಇದೀಗ 'ರಾಕ್ಷಸ' ಎಂಬ ಸಿನಿಮಾವನ್ನು ಸದ್ದಿಲ್ಲದೇ ಪೂರ್ಣಗೊಳಿಸಿದ್ದಾರೆ.

ಹಾರಾರ್ ಸಿನಿಮಾ ಮೂಲಕವೇ ಖ್ಯಾತಿ ಗಳಿಸಿರುವ ನಿರ್ದೇಶಕ ಲೋಹಿತ್ 'ರಾಕ್ಷಸ' ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಪ್ರಜ್ವಲ್ ಜನ್ಮದಿನದ ಪ್ರಯುಕ್ತ ಚಿತ್ರದ ಫಸ್ಟ್‌ಲುಕ್ ರಿಲೀಸ್ ಆಗಿದೆ. ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡ ಸದ್ಯ ಪ್ರಚಾರ ಕಾರ್ಯ ಆರಂಭಿಸಿದೆ. ಸುಮಾರು 55 ದಿನಗಳ ಕಾಲ ಚಿತ್ರೀಕರಣ ಮಾಡಲಾಗಿದ್ದು, ಸಂಪೂರ್ಣ ಶೂಟಿಂಗ್ ರಾಮೋಜಿ ರಾವ್ ಫಿಲಂ ಸಿಟಿಯಲ್ಲಿ ನಡೆದಿದೆ. ಮೊದಲ ಬಾರಿಗೆ ಹಾರಾರ್ ಟೈಂಲೂಪ್ ಜಾನರ್‌ನಲ್ಲಿ ಲೋಹಿತ್ ಈ ಕಥೆ ಹೆಣೆದಿದ್ದಾರೆ.

ಪ್ರಜ್ವಲ್ ಜೊತೆಯಾಗಿ ಅರುಣ್ ರಾಥೋಡ್, ಶ್ರೀಧರ್, ಗೌತಮ್, ಸೋಮಶೇಖರ್, ವಿಹಾನ್ ಕೃಷ್ಣ ಜಯಂತ್ ನಟಿಸಿದ್ದಾರೆ. ಶಾನ್ವಿ ಎಂಟರ್‌ಪ್ರೈಸಸ್ ಅಡಿಯಲ್ಲಿ ಸಿನಿಮಾ ನಿರ್ಮಾಣವಾಗಿದ್ದು, ನೋಬಿನ್ ಪೌಲ್ ಸಂಗೀತ ನಿರ್ದೇಶನ, ಜೇಬಿನ್ ಪಿ ಜೋಕಬ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಕಮರ್ಷಿಯಲ್ ಚಿತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಪ್ರಜ್ವಲ್ ಇದೇ ಮೊದಲ ಬಾರಿಗೆ ಹಾರಾರ್ ಲುಕ್‌ನಲ್ಲಿ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ. ಪ್ರಜ್ವಲ್ ನಟನೆಯ 'ಮಾಫಿಯಾ', 'ಚೀತಾ', 'ಕರಾವಳಿ', 'ಗಣ' ಹೀಗೆ ಸಾಲು ಸಾಲು ಸಿನಿಮಾಗಳು ಬಿಡುಗಡೆಗೆ ಸಜ್ಜಾಗುತ್ತಿವೆ.

ಹೊರಬಂತು 'ಕೆಂಡ' ಟ್ರೇಲರ್

ಚಿತ್ರತಂಡ

ಈಗಾಗಲೇ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಸದ್ದು ಮಾಡಿರುವ 'ಕೆಂಡ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸಹದೇವ್ ಕೆಲವಡಿ ನಿರ್ದೇಶಿಸಿ, ರೂಪಾ ರಾವ್ ನಿರ್ಮಿಸಿರುವ ಚಿತ್ರ ಜುಲೈ 26ರಂದು ತೆರೆಗೆ ಬರಲಿದೆ.

'ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ಯುವಕನೋರ್ವ ಪರಿಸ್ಥಿತಿಗಳ ಸೆಳವಿಗೆ ಸಿಕ್ಕು ಭೂಗತ ಲೋಕದ ತೆಕ್ಕೆಗೆ ಬೀಳುವ ಕಥೆ ಇಲ್ಲಿದೆ. ಹಾಗಂತ ಇದು ಸಿದ್ಧ ಸೂತ್ರಗಳ ಸುತ್ತ ಗಿರಕಿ ಹೊಡೆಯುವ ಕಥೆಯಲ್ಲ. ಕೈಗೆ, ಮೈ ಮನಸಿಗೆ ಮೆತ್ತಿಕೊಂಡ ರಕ್ತದ ಕಲೆಗಳನ್ನ ಕಲಾತ್ಮಕವಾಗಿ ತೋರಿಸಲು ಯತ್ನಿಸಿದ್ದೇವೆ. ಸುಡುವ ಕ್ರೌರ್ಯವನ್ನು ಸೂಕ್ಷ್ಮ ಸಂವೇದನೆಯ ಒಳಗಣ್ಣಿನಿಂದ ನೋಡಲು ಸಾಧ್ಯವೇ ಎಂಬ ಆಲೋಚನೆ ಚಿತ್ರದಲ್ಲಿ ಕಾಣುತ್ತದೆ' ಎಂದರು ನಿರ್ದೇಶಕರು.

ಅಮೇಯುಕ್ತಿ ಸ್ಟುಡಿಯೋಸ್ ಬ್ಯಾನರಿನಡಿಯಲ್ಲಿ ರೂಪಾ ರಾವ್ ನಿರ್ಮಾಣ ಮಾಡಿದ್ದಾರೆ. ರಿತ್ವಿಕ್ ಕಾಯ್ಕಿಣಿ ಸಂಗೀತ ನಿರ್ದೇಶನ, ಪ್ರದೀಪ್ ನಾಯಕ್ ಸಂಕಲನ, ಲಕ್ಷ್ಮಿಕಾಂತ್ ಜೋಶಿ ಕಲಾ ನಿರ್ದೇಶನವಿರುವ ಈ ಚಿತ್ರದಲ್ಲಿ ಬಿ.ವಿ ಭರತ್, ಪ್ರಣವ್ ಶ್ರೀಧರ್, ವಿನೋದ್ ಸುಶೀಲ, ಗೋಪಾಲಕೃಷ್ಣ ದೇಶಪಾಂಡೆ, ಸಚಿನ್ ಶ್ರೀನಾಥ್, ಬಿಂದು ರಕ್ಷಿದಿ ಮುಂತಾದವರ ತಾರಾಗಣವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಬೀದಿ ಬದಿಯ ಅಂಗಡಿಯೊಂದನ್ನು ಬುಲ್ಡೋಜರ್ ಕಿತ್ತೊಗೆಯುವ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅದು ಆಂಧ್ರ ಪ್ರದೇಶದ ವಿಡಿಯೊ ಎಂದು ಪ್ರತಿಪಾದನೆ ಮಾಡಲಾಗುತ್ತಿದೆ. ಹಿಂದಿನ ವೈ.ಎಸ್.ಜಗನ್‌ಮೋಹನ್ ರೆಡ್ಡಿ ಸರ್ಕಾರವು ₹10 ಸಾವಿರ ಕೊಟ್ಟು ಅಂಗಡಿ ತೆರೆಯಲು ನೆರವಾದರೆ, ಈಗಿನ ಚಂದ್ರಬಾಬು ನಾಯ್ಡು ಸರ್ಕಾರ ಬೀದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸುತ್ತಿದೆ ಎಂದು ಪ್ರಚಾರ ಮಾಡುತ್ತಾ ವಿಡಿಯೊ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊ ಅನ್ನು ಇನ್‌ವಿಡ್ ಟೂಲ್ ಸರ್ಚ್‌ಗೆ ಒಳಪಡಿಸಿ, ನಂತರ ಗೂಗಲ್ ಲೆನ್ಸ್ ಮೂಲಕ ಪರಿಶೀಲನೆ ನಡೆಸಿದಾಗ, ಇದು ತಮಿಳುನಾಡಿನ 'ನ್ಯೂಸ್ ನೇತ್ರ' ಮಾಧ್ಯಮದ ಅಧಿಕೃತ ಇನ್‌ಸ್ಟಾಗ್ರಾಮ್ ಖಾತೆಗೆ ಸಂಪರ್ಕ ನೀಡಿತು. ವಿಡಿಯೊ ಕೆಳಗೆ, 'ತಮಿಳುನಾಡಿನಲ್ಲಿ ಬೀದಿ ಬದಿ ಅಂಗಡಿ ಧ್ವಂಸ. ಜನರಿಂದ ಸರ್ಕಾರದ ತರಾಟೆ' ಎಂದು ಬರೆಯಲಾಗಿತ್ತು. ಇದೇ ವಿಡಿಯೊ ಅನ್ನು 'ಇಂಡಿಯಾ ಟುಡೇ' ಕೂಡ ಅಪ್‌ಲೋಡ್ ಮಾಡಿದೆ. ಅಸಲಿ ವಿಚಾರ ಏನೆಂದರೆ, ಇದು ಚೆನ್ನೈನ ತಾಂಬರಂನಲ್ಲಿ ನಡೆದಿರುವ ಘಟನೆಯಾಗಿದ್ದು, ಬೀದಿ ಬದಿ ಅಂಗಡಿಯ ಧ್ವಂಸ ಪ್ರಕರಣವಾಗಿದೆ. ಕೆಲವರು ಸಾಮಾಜಿಕ ಜಾಲತಾಣದಲ್ಲಿ ಪ್ರತಿಪಾದಿಸುತ್ತಿರುವಂತೆ ವಿಡಿಯೊ ಆಂಧ್ರ ಪ್ರದೇಶದ್ದು ಅಲ್ಲ.

ಗುಂಡಣ್ಣ

ನುಡಿ ಬೆಳಗು

ಪ್ರೊ.ಎಂ.ಕೃಷ್ಣೇಗೌಡ

ನಾಕು ಜನ ಏನಂತಾರೊ...

'ಏಯ್, ಏನ್ ಮಾತು ಅಂತ ಆಡ್ತಿಯ? ನಾಕು ಜನ ಕೇಳಿದೋರು ಏನಂತಾರೆ?'

'ಥೂ ನಿಮ್ಮ, ಯಾಕ್ ಹಿಂಗೆ ಕಚ್ಚಾಡ್ತೀರೋ, ನಾಕು ಜನ ಏನಂತಾರೆ ಗೊತ್ತ?'

'ಏಯ್, ಇದೇನು ಬಟ್ಟೆ ಅಂತ ಹಾಕಿದೀಯೋ? ನಾಕು ಜನ ನೋಡಿದ್ರೆ ಅಷ್ಟೆ'

'ಮದುವೆ ಆದಮೇಲೆ ಏರುಪೇರು, ಉದ್ದತುಂಡ ಇದ್ದೇ ಇರುತ್ತಪ್ಪಾ, ಅನುಸರಿಸ್ಕೊಂಡ್ ಹೋಗ್ಬೇಕು. ನಾಕು ಜನ ನೋಡಿ ಭಲೆ ಭಲೆ ಅನ್ನಬೇಕು'

'ಬಾಳ್ವೆ ಮಾಡಿದ್ರೆ ನಾಕು ಜನ, ಬಾ ಇತ್ತ ಅಂತಾರೆ. ಕೆಟ್ರೆ ಛೀ ಥೂ ಅಂತಾರೆ ಗೊತ್ತಾ?'

'ಮಾನ ಮರ್ಯಾದಿ ಹೋದ ಮೇಲೆ ಬದುಕಿದ್ರೂ ಒಂದೇ, ಸತ್ರೂ ಒಂದೇ. ನಾಕು ಮಂದಿ ಆಡ್ಕೊಳ್ಳೋ ಹಂಗಾದ್ರೆ ಅದೊಂದು ಬಾಳಾ? ಬದುಕಾ?'

-ಇಂಥಾ ಮಾತುಗಳನ್ನು ಕೇಳಿಕೊಂಡೇ ಬೆಳೆದದ್ದು ನಮ್ಮ ತಲೆಮಾರು. 'ನಾಕು ಜನ' ಅಂದರೆ ಯಾರು? ಅವರು ನಾಲ್ಕೇ ಜನ ಅಲ್ಲ. ನಮ್ಮ ಸಮಾಜದಲ್ಲಿ ನಮ್ಮಂತೆಯೇ ಬದುಕುತ್ತಿರುವ ಜನ. ಅವರು ಯಾರೋ 'ನಾಕು ಜನ' ಅಂದಾಗ ಆ ನಾಲ್ಕು ಜನಗಳಲ್ಲಿ ನಾವೂ ಇರುತ್ತಿದ್ದೆವು. ನಮ್ಮನ್ನು ಅವರು, ಅವರನ್ನು ನಾವು ಒಪ್ಪಿಕೊಳ್ಳುವಂತೆ ಬದುಕಬೇಕೆನ್ನುವುದು ಈ ಮಾತುಗಳ ಧ್ವನ್ಯರ್ಥ.

ಅದಾದ ಮೇಲೆ ನಮಗೆ ಅಕ್ಷರ, ವಿದ್ಯೆ, ವೈಚಾರಿಕತೆ, ಸ್ವಾತಂತ್ರ್ಯ, ಹಕ್ಕು, ದುಡ್ಡು, ಇತ್ಯಾದಿ ಏನೇನೋ ಸಿಕ್ಕಿದವು. ಹೊಸ ಹೊಸ ಮಾತು, ನೀತಿ ಕಲಿತೆವು. ಅದಾದ ಮೇಲೆ ನಾವು ಕೇಳೋ ಮಾತುಗಳೂ ಬದಲಾದವು.

'ನೋಡಿ, ನನ್ನ ಲೈಫ್ ನನ್ನದು. ನಾನು ನನ್ನಿಷ್ಟ ಬಂದ ಹಾಗೆ ಬದುಕ್ತೀನಿ. ಐ ಡೋಂಟ್ ಕೇರ್ ಫಾರ್ ಪೀಪಲ್".

'ನಾನು ಹೀಗೇ ಡ್ರೆಸ್ ಮಾಡ್ಕೊಳ್ಳೋದು, ಅದು ನನ್ನ ರೈಟ್. ನಿನಗೆ ಇಷ್ಟ ಆಗದೇ ಇದ್ರೆ ನನ್ನನ್ನ ನೋಡಬೇಡ ಅಷ್ಟೆ'.

'ನಾನು ಬದುಕ್ತಾ ಇರೋದು ನನಗಾಗಿ. ನನ್ನ ಬದುಕಿನ ಬಗ್ಗೆ ಕಮೆಂಟ್ ಮಾಡೋಕೆ ಯಾರಿಗೂ ಹಕ್ಕಿಲ್ಲ'.

'ನಾನು ಏನ್ ಮಾಡ್ತಾ ಇದೀನಿ ಅಂತ ನನಗೊತ್ತು. ನಾನು ಯಾರಿಂದ್ಲೂ ಪಾಠ ಕಲೀಬೇಕಾಗಿಲ್ಲ'.

'ಮದುವೆ ಆದಮೇಲೆ ನಾನು ಯಾಕ್ರೀ ಚೇಂಜ್ ಆಗಬೇಕು? ನಾನು ಈಗ ಹೇಗಿದ್ದೀನೋ ಆಗಲೂ ಹಾಗೇ ಇರೋನು. ಆ್ಯಕ್ಸೆಪ್ಟ್ ಮಾಡ್ಕೊಂಡು ಇದ್ರೆ ಇರಲಿ. ಇಲ್ಲದಿದ್ರೆ ಲೆಟ್ ಅಸ್ ಬ್ರೇಕ್, ಅಷ್ಟೆ'.

'ಅಪ್ಪ, ಅಮ್ಮ, ಎಲ್ಲಾ ಬುದ್ಧಿ ನೀವೇ ಹೇಳಿಕೊಡಬೇಡಿ. ನಾನೇ ತಪ್ಪು ಮಾಡಿ ನಾನೇ ಪಾಠ ಕಲೀತೀನಿ ಬಿಡಿ'

-ಇವು ಈಗಿನ ಮಾತುಗಳು.

ಯಾವುದು ಸರಿ? ಯಾವುದು ತಪ್ಪು? ನಮ್ಮ ತಲೆಮಾರಿನವರಿಗೆ ನಾವೇ ಸರಿ ಅನ್ನಿಸುತ್ತದೆ. ಈಗಿನವರಿಗೆ ಇದೇ ಸರಿ ಅನ್ನಿಸುತ್ತದೆ. ಸರಿತಪ್ಪುಗಳು ಸಾರ್ವಕಾಲಿಕವಲ್ಲ, ಸಾಂದರ್ಭಿಕವಾದುವು. ನಮ್ಮ ಬದುಕು ಬೇರೊಬ್ಬರಿಗೆ ಒಳ್ಳೆಯ ಉದಾಹರಣೆಯಾದರೆ ನಾವು ಸರಿ. ಅದು ಬೇರೊಬ್ಬರಿಗೆ ಎಚ್ಚರಿಕೆ ಅನ್ನುವಂತಾದರೆ ನಾವು ತಪ್ಪು.

ನನಗೆ ಹಾಗನ್ನಿಸುತ್ತದೆ. 'ನಾಕು ಜನ' ಏನಂತಾರೊ...

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜುಲೈ 12, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಷಷ್ಠಿ ಗಂ. 12-33 **ನಕ್ಷತ್ರ:** ಉತ್ತರಫಲ್ಗುನಿ ಗಂ. 16-09 **ಯೋಗ:** ಪರಿಘ ಗಂ. 29-15 **ಕರಣ:** ತೈತಿಲ ಗಂ. 12-33, ಮಿಥುನ ಮಾಸದ 27 ನೇ ದಿನ, ಮಳೆನಕ್ಷತ್ರ: ಪುನರ್ವಸು 2.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-14 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 05 ಮೊಹರಮ್
ದಿನ ವಿಶೇಷ : ವಿವಸ್ವತ್ ಸಪ್ತಮಿ, ಅದೃಷ್ಟ ಸಂಖ್ಯೆ : 9, 10

ಮೇಷ: ಜೀವನದ ಪ್ರಮುಖ ಘಟ್ಟವೊಂದರಲ್ಲಿ ಅನಾರೋಗ್ಯದಿಂದಾಗಿ ಸರಿಯಾದ ರೀತಿಯಲ್ಲಿ ಕ್ಷಣವನ್ನು ಅನುಭವಿಸಲು ಆಗುವುದಿಲ್ಲ. ಹರಿತವಾದ ಮಾತುಗಳು ತಾಯಿಯ ಮನಸ್ಸನ್ನು ನೋಯಿಸುವ ಸಾಧ್ಯತೆ ಇದೆ.

ವೃಷಭ: ಅತ್ಯಂತ ಆತ್ಮೀಯರಿಂದಲೇ ಭೂಮಿಯ ವಿಷಯದಲ್ಲಿ ಮೋಸ ಹೋಗುವ ಸಾಧ್ಯತೆ ಇದೆ. ಮಗಳಿಂದ ಶುಭ ಸುದ್ದಿ ತಿಳಿಯುವಿರಿ. ಇಲ್ಲ ಸಲ್ಲದ ವಿಷಯಗಳಲ್ಲಿ ತಲೆ ಹಾಕಲು ಹೋಗದಿರುವುದು ಕ್ಷೇಮ.

ಮಿಥುನ: ಕ್ರೂರ ಅಧಿಕಾರಿಗಳ ವಿರುದ್ಧ ತಿರುಗಿಬೀಳುವಲ್ಲಿ ಪ್ರಮುಖ ಪಾತ್ರ ವಹಿಸುವಿರಿ. ಹೊಸ ಮನೆ ಕೆಲಸಗಳ ಜವಾಬ್ದಾರಿ ನಿಮ್ಮದಾಗಿ ಮಾಡಿಕೊಳ್ಳುತ್ತಿರುವ ಕಾರಣ ಬಿಡುವಿಲ್ಲದ ದುಡಿಮೆಯ ದಿನಗಳು ನಿಮ್ಮದಾಗಲಿದೆ.

ಕರ್ಕಾಟಕ: ಭಾಗ್ಯವಂತರಾದ ನಿಮಗೆ ಹೊಸ ಯೋಜನೆಯು ಸುಲಭವೆನಿಸಲಿದೆ. ಹಲವು ದಿನಗಳ ಬಳಿಕ ಕುಟುಂಬದ ಹಿರಿಯ ವ್ಯಕ್ತಿಗಳನ್ನು ಭೇಟಿಯಾಗಿ ಆಶೀರ್ವಾದ ಪಡೆದುಕೊಳ್ಳುವಿರಿ.

ಸಿಂಹ: ಬದಲಾವಣೆಯ ಅಲೆಯನ್ನು ನಿರೀಕ್ಷಿಸುತ್ತಿರುವ ನೀವು ಉತ್ತಮ ರೀತಿ ನೀತಿಗಳನ್ನು ಅಳವಡಿಸಿಕೊಳ್ಳುವಿರಿ. ತಮ್ಮನ ಮಕ್ಕಳ ಮದುವೆಯಲ್ಲಿ ಅತ್ಯಂತ ಹೆಚ್ಚಿನ ಓಡಾಟ ನಡೆಸುವಿರಿ.

ಕನ್ಯಾ: ಮನೆಯ ಕಟ್ಟಡದ ದುರಸ್ತಿ ಕಾರ್ಯಗಳು ಅನಿವಾರ್ಯ. ಔಷಧ ಮಾರಾಟಗಳಲ್ಲಿ ಸಂಪಾದನೆ ಹೆಚ್ಚಲಿದೆ. ಕೆಲವು ವ್ಯಕ್ತಿಗಳ ದ್ವೇಷದ ಕೃತ್ಯಗಳ ಫಲವಾಗಿ ನೀವು ಸಂಕಷ್ಟವನ್ನು ಅನುಭವಿಸಬೇಕಾಗುತ್ತದೆ.

ತುಲಾ: ಹಿರಿಯರಲ್ಲಿ ನಿಮ್ಮ ತಪ್ಪಿಲ್ಲದಿದ್ದರೂ ವಯಸ್ಸಿಗೆ ಬೆಲೆ ಕೊಟ್ಟು ಕ್ಷಮೆಯನ್ನು ಕೇಳಿ. ಕಾರ್ಯ ಕಲಾಪಗಳ ಒತ್ತಡದಲ್ಲಿ ಸ್ನೇಹಿತರ ವರ್ಗಕ್ಕೆ ಸಮಯ ನೀಡಬೇಕಾಗುತ್ತದೆ. ಸಾಧು ಸಂತರ ದರ್ಶನ ಮಾಡುವಿರಿ.

ವೃಶ್ಚಿಕ: ಈ ಹಿಂದೆ ನಡೆದ ದುರ್ಘಟನೆ ಮತ್ತೆ ಮರುಕಳಿಸದಂತೆ ಎಚ್ಚರ ವಹಿಸುವುದು ಸೂಕ್ತ. ಸಂಗಾತಿಯ ಜತೆ ನೀವಂದುಕೊಂಡ ಖುಷಿಯ ಸಮಯ ಕಳೆಯುವ ಅವಕಾಶ ದೊರೆಯುವುದು. ಸಂತೋಷ ನೆಮ್ಮದಿ ಇರಲಿದೆ.

ಧನು: ದೇವರ ಆಭರಣ ತಯಾರಿಕೆ ಅಥವಾ ದೇವಾಲಯದ ಕೆಲಸದ ಗುತ್ತಿಗೆದಾರರಿಗೆ ಹೊಸ ಗುತ್ತಿಗೆ ಸಿಗುವ ಸಂಭವಗಳಿವೆ. ಸೋದರ ಮಾವನ ಮನೆಯ ಕಾರ್ಯಕ್ರಮದಲ್ಲಿ ಭಾಗವಹಿಸುವಿರಿ.

ಮಕರ: ಸವಾಲನ್ನು ಎದುರಿಸುವ ಶಕ್ತಿ ಮತ್ತು ಸಾಮರ್ಥ್ಯ ಅಭಿವೃದ್ಧಿ ಆಗುವುದು. ಈ ದಿನದ ಕಾರ್ಯಗಳನ್ನು ಮೊದಲೇ ನಿಶ್ಚಯಿಸಿಕೊಂಡು ಕ್ರಮ ಪ್ರಕಾರವಾಗಿ ಮಾಡುವುದು ಉತ್ತಮ. ನಂಜು ಉಂಟಾಗುತ್ತದೆ.

ಕುಂಭ: ಸಮಯವನ್ನು ಯಾಚಿಸುತ್ತಿರುವುದರಿಂದ ಸ್ವಂತ ಕೆಲಸಗಳು ನಿಧಾನ ಗತಿಯಲ್ಲಿ ಸಾಗಲಿವೆ. ಮಗಳಿಗೆ ಹೆಸರಿಡುವ ವಿಷಯವಾಗಿ ಹಲವಾರು ಚರ್ಚೆ ಆಗುತ್ತದೆ. ಉದ್ಯೋಗದಿಂದ ಒಳ್ಳೆಯ ಅನುಭವ ಸಿಗಲಿದೆ.

ಮೀನ: ತಂದೆ, ತಾಯಿ ಅಥವಾ ಕುಟುಂಬದ ಹಿರಿಯರ ಆರೋಗ್ಯದ ಬಗ್ಗೆ ತಪಾಸಣೆ ಅಗತ್ಯವೆನಿಸಲಿದೆ. ಮಿತ್ರವರ್ಗದಿಂದ ದುಃಖದ ಸಮಾಚಾರ ಕೇಳಬೇಕಾಗಬಹುದು. ದೀರ್ಘ ಪ್ರಯಾಣ ಮುಗಿಸಿ ಮರಳಲಿದ್ದೀರಿ.

ಪದಬಂಧ 5739

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
- 2.ಅನುಕೂಲ ಸಂದರ್ಭವಿದು (4)
- 5.ಮಿತಿ ಮೀರಿದ ಸಿಟ್ಟು (3)
- 6.ವಾಸ್ತವ ಸಂಗತಿಯಿದು (4)
- 7.ಮರ್ಯಾದೆಯುಳ್ಳ ಉಡುಗೊರೆ! (4)
- 8.ತಲೆಯಲ್ಲಿರಿಸಿಕೊಂಡಿರುವ ಅಡುಗೆಯ ಪಾತ್ರೆ (3)
- 9.ಈಕೆ ವಿದ್ಯಾಧಿದೇವತೆ (4)
- 12.ವರ ಪಡೆದಿರುವ ಬೇಡ (4)
- 14.ಅರಳೆಯ ಸಮೀಪ! (3)
- 15.ಮಣಿಹಾರ ಧರಿಸಿರುವ ಚಕ್ರವರ್ತಿನಿ (4)

ಮೇಲಿಂದ ಕೆಳಕ್ಕೆ
- 1.ವಿಭಜಿಸಲು ಸಾಧ್ಯವಿಲ್ಲದ್ದು (4)
- 2.ಅವಶ್ಯವಿಲ್ಲದ ಖರ್ಚು (4)
- 3.ವಶಕ್ಕೆ ಸಿಕ್ಕಿರುವ ಹೆಣ (2)
- 4.ಈತ ಬುದ್ಧಿಯಿಲ್ಲದವನು (4)
- 7.ಅಬಲೆ ಬೀಸಿದ ಜಾಲ (2)
- 8.ತರಗತಿಯಲ್ಲಿರುವ ಸಮೂಹ (2)
- 9.ಒಳ್ಳೆಯ ಭಾವನೆ (4)
- 10.ಹಣಕ್ಕಾಗಿ ನಡೆದಿರುವ ಉಗ್ರ ಹೊಡೆದಾಟ (4)
- 11.ಮನಸ್ಸಿನ ಬಯಕೆ (4)
- 13.ತಿರುವು ಮುರುವಾಗಿರುವ ವೃಕ್ಷ (2)



5738ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸೆರೆಮನೆ 3.ತೊಡಪು 5.ಗುಲಾಮ 7.ಛಳುಕು 8.ವಿಶ್ವಾಸಘಾತ 11.ರುಮಾಲು 12.ನಿಗಮ 15.ಗುದಾಮು 16.ಪರೀಕ್ಷಕ

ಮೇಲಿಂದ ಕೆಳಕ್ಕೆ: 1.ಸೆರಗು 2.ನೆನೆ 3.ತೊಡಕು 4.ಪುಡಿಗಾಸು 6.ಮನವಿ 7.ಛಡಸವಾಲು 9. ತರ್ಜನಿ 10.ಹುಸಿನಗು 11.ರುಸುಮು 13.ಮಣಕ 14.ಕೋಪ

ಸುಡೊಕು 6124

	4			5		7		2
		3	6		7			
		7		3		6		9
	6			1		8		7
7		9	5				1	
	8			9		3		5
	7		3		1			
5							7	3
	3		9		5		6	8

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6123 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ಷೇರುಪೇಟೆ ವಹಿವಾಟು 27



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,324
ಇಂದಿನ ಅಂತ್ಯ	24,315
▼	8
ದಿನದ ಕನಿಷ್ಠ	24,193

ವಿನಿಮಯ ದರ

$ ಡಾಲರ್	83.53
£ ಪೌಂಡ್	107.64
€ ಯುರೊ	90.66
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹565
12 ಕ್ಕೆ	₹76
ಮೈಸೂರು	
100ಕ್ಕೆ	₹570

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1530 (1520)
ಸೋಯಾ (ರಿಫೈನ್ಡ್)	₹965 (965)
ಸೂರ್ಯಕಾಂತಿ (ರಿಫೈನ್ಡ್)	₹965 (965)
ಪಾಮೋಲಿನ್	₹907 (903)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಕಿ.ಗ್ರಾ)
₹300-469
ದ್ವಿತಳಿ (ಕಿ.ಗ್ರಾ)
₹266-598

ಮಾರುಕಟ್ಟೆ ಧಾರಣೆ (₹ಗಳಲ್ಲಿ)

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	1400-1450
ನಡುಗೋಲು	1500-1550
ರಾಶಿ	1650-1700
ರಾಶಿ ಉತ್ತಮ	1800-1850
ಹರಕಿದ್ದು	2200-2300
ಹಸಿರು ಸಾಧಾರಣ	2000-2100
ಹಸಿರು ಉತ್ತಮ	2400-2450
ಹಸಿರು ಅತಿ ಉತ್ತಮ	2700-2800
ಕಾಳು ಮೆಣಸು	640
ಬಂಟ್ವಾಳ (ಅಡಿಕೆ)	
ಕೋಕ	18000-28500
ಹೊಸತು	28500-38500
ಹಳತು	38500-46500
ಕುಮಟ	
ಚಿಪ್ಪು	21219-29009
ಕೋಕ	10209-27769
ಹಳೆಚಾಲಿ	35969-39569
ಹೊಸಚಾಲಿ	30869-36211
ಸಾಗರ	
ಬಿಳಿಗೋಟು	10009-26009
ಚಾಲಿ	20002-33819
ಕೋಕ	10569-27899
ಕೆಂಪುಗೋಟು	16899-32699
ರಾಶಿ	35899-51609
ಸಿಪ್ಪೆಗೋಟು	8001-18409
ಶಿವಮೊಗ್ಗ	
ಬೆಟ್ಟೆ	40032-53289
ಗೊರಬಲು	16000-34406
ರಾಶಿ	27009-51169
ಸರಕು	51700-85796
ಶಿರಸಿ	
ಬೆಟ್ಟೆ	34899-39009
ಬಿಳಿಗೋಟು	22570-29890
ಚಾಲಿ	33699-37099
ಕೆಂಪುಗೋಟು	21899-23899
ರಾಶಿ	43109-48289
ಯಲ್ಲಾಪುರ	
ಬಿಳಿಗೋಟು	21899-30900
ಚಾಲಿ	31382-35555
ಕೋಕ	8899-26099
ಕೆಂಪುಗೋಟು	24899-32626
ರಾಶಿ	44869-51689
ತಟ್ಟಿಬೆಟ್ಟೆ	34806-43409

ಮುಂಬೈ ಧಾರಣೆ

ಶೇಂಗಾ	
11-07-2024	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1540 (1530)
ಒಂದು ವಾರದ ಡೆಲಿವರಿ	1535 (1525)
ಸೋಯಾ ಕಚ್ಚಾ	925 (912)
ಪಾಮ್ ವಾರದ ಡೆಲಿವರಿ	905 (901)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (915)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹72,450 (72,350)
ಬೆಳ್ಳಿ ಕೆ.ಜಿ ₹92,850 (91,700)
ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹203
ಆರ್‌ಎಸ್‌ಎಸ್-5 ₹195.50
ಗುಡ್ ಲಾಟ್ ₹182.50
(ಪ್ರತಿ ಕೆ.ಜಿಗೆ)

ಸರ್ಕಾರಿ ಇ–ಮಾರುಕಟ್ಟೆ: ಪ್ರಸಕ್ತ ಆರ್ಥಿಕ ವರ್ಷದಲ್ಲಿ ಅಗ್ರ ಸ್ಥಾನಕ್ಕೇರುವ ನಿರೀಕ್ಷೆ

ಜಿಇಎಂ ದಾಖಲೆ ವಹಿವಾಟು

ನವದೆಹಲಿ (ಪಿಟಿಐ): ಸರ್ಕಾರದ ಇ-ಮಾರುಕಟ್ಟೆ ಪೋರ್ಟಲ್ (ಜಿಇಎಂ) ಮೂಲಕ 2024–25ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಸರಕು ಮತ್ತು ಸೇವೆಗಳ ವಹಿವಾಟು ಮೌಲ್ಯವು ₹1.24 ಲಕ್ಷ ಕೋಟಿ ದಾಟಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದ ಅಂತ್ಯಕ್ಕೆ ಈ ಪೋರ್ಟಲ್ ವಿಶ್ವದ ಅತಿದೊಡ್ಡ ಆನ್‌ಲೈನ್ ವೇದಿಕೆಯಾಗಲಿದೆ ಎಂದು ಹೇಳಿದೆ.

ಸರ್ಕಾರಿ ಕಚೇರಿಗಳು, ಸಾರ್ವಜನಿಕ ವಲಯದ ಉದ್ದಿಮೆಗಳು ಆನ್‌ಲೈನ್ ಮೂಲಕ ಸರಕು ಮತ್ತು ಸೇವೆಗಳನ್ನು ಪಡೆಯಲು ಅನುಕೂಲ ಆಗುವಂತೆ 2016ರ ಆಗಸ್ಟ್ 9ರಂದು ಈ ಪೋರ್ಟಲ್ ಸ್ಥಾಪಿಸಲಾಗಿದೆ. ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ, ದಕ್ಷತೆ ಮತ್ತು ವೇಗ ಹೆಚ್ಚಿಸಲು ಇದನ್ನು ರೂಪಿಸಲಾಗಿದೆ.

‘ಹಿಂದಿನ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಖರೀದಿ ಮೌಲ್ಯ ₹52,670 ಕೋಟಿ ಇತ್ತು. ಇದಕ್ಕೆ ಹೋಲಿಸಿದರೆ ಶೇ 136ರಷ್ಟು ಬೆಳವಣಿಗೆ ದಾಖಲಿಸಿದೆ’ ಎಂದು ಜಿಇಎಂ ಸಿಇಒ ಪ್ರಶಾಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

> **ಕೊನೆಯ ಹಂತದಲ್ಲಿರುವ ಮಾರಾಟಗಾರರಿಗೂ ಅನುಕೂಲ ಕಲ್ಪಿಸಬೇಕಿದೆ. ಇದಕ್ಕಾಗಿ ಸಾರ್ವಜನಿಕ ಖರೀದಿಯನ್ನು ಮತ್ತಷ್ಟು ಸರಳೀಕರಣಗೊಳಿಸಲಾಗುವುದು**
> **ಪ್ರಶಾಂತ್ ಕುಮಾರ್ ಸಿಂಗ್**
> ಸಿಇಒ, ಸರ್ಕಾರಿ ಇ–ಮಾರುಕಟ್ಟೆ

ಸದ್ಯ ದಕ್ಷಿಣ ಕೊರಿಯಾದ ಕೆಒಎನ್‌ಇಪಿಎಸ್ ವಿಶ್ವದ ಅತಿದೊಡ್ಡ ಆನ್‌ಲೈನ್ ಖರೀದಿ ವೇದಿಕೆಯಾಗಿದೆ. ಜಿಇಎಂ ಎರಡನೇ ಸ್ಥಾನದಲ್ಲಿದೆ. ಸಿಂಗಪುರದ ಜಿಬಿಜ್ ವೇದಿಕೆಯು ಮೂರನೇ ಸ್ಥಾನದಲ್ಲಿದೆ.

ಕೇಂದ್ರ ಸಾರ್ವಜನಿಕ ವಲಯದ ಉದ್ದಿಮೆಗಳು ಖರೀದಿಸಿರುವ ಸರಕುಗಳ ಮೌಲ್ಯವು ₹1 ಲಕ್ಷ ಕೋಟಿ ದಾಟಿದೆ. ಕಲ್ಲಿದ್ದಲು, ರಕ್ಷಣೆ, ಪೆಟ್ರೋಲಿಯಂ ಮತ್ತು ಅನಿಲ ಸಚಿವಾಲಯಗಳು ಈ ಪಟ್ಟಿಯಲ್ಲಿ ಮುಂಚೂಣಿಯಲ್ಲಿವೆ ಎಂದು ತಿಳಿಸಿದ್ದಾರೆ.

2023–24ನೇ ಆರ್ಥಿಕ ವರ್ಷದಲ್ಲಿ ಈ ಪೋರ್ಟಲ್‌ನಲ್ಲಿ ಖರೀದಿ ಮೌಲ್ಯವು ₹4 ಲಕ್ಷ ಕೋಟಿ ದಾಟಿತ್ತು.

‘ಪೋರ್ಟಲ್‌ನಲ್ಲಿ ವಹಿವಾಟು ಹೆಚ್ಚಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ಜಿಇಎಂ ಸಹಾಯಕ ಯೋಜನೆ ರೂಪಿಸಲು ನಿರ್ಧರಿಸಲಾಗಿದೆ. ಈ ಯೋಜನೆಯಡಿ ದೇಶದಾದ್ಯಂತ ತರಬೇತಿ ಮತ್ತು ಮಾನ್ಯತೆ ಪಡೆದ 6 ಸಾವಿರದಿಂದ 7 ಸಾವಿರ ಸಹಾಯಕರನ್ನು ನಿಯೋಜಿಸಲಾಗುವುದು’ ಎಂದು ಪ್ರಶಾಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಬೈಡನ್‌ಗೆ ಭಾರತ ಮೂಲದವರ ಬೆಂಬಲ ಕುಸಿತ

ವಾಷಿಂಗ್ಟನ್ (ಪಿಟಿಐ): ‘2020ರ ಅಧ್ಯಕ್ಷೀಯ ಚುನಾವಣೆಗೆ ಹೋಲಿಸಿದರೆ 2024ರಲ್ಲಿ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರನ್ನು ಬೆಂಬಲಿಸುವ ಭಾರತ ಮೂಲದ ಅಮೆರಿಕನ್ನರ ಸಂಖ್ಯೆಯಲ್ಲಿ ಶೇ 19ರಷ್ಟು ಕುಸಿತ ಆಗಿದೆ’ ಎಂಬ ಸಂಗತಿ ಏಷ್ಯನ್–ಅಮೆರಿಕ (ಎಎವಿಎಸ್) ಮತದಾನದ ದ್ವೈವಾರ್ಷಿಕ ಸಮೀಕ್ಷೆಯಲ್ಲಿ ಕಂಡುಬಂದಿದೆ. ಏಷ್ಯನ್–ಅಮೆರಿಕದ ಮತದಾರರನ್ನು ಒಳಗೊಂಡು ನಡೆಸಿದ ದೀರ್ಘಕಾಲದ ಸಮೀಕ್ಷೆ ಇದಾಗಿದೆ.

ಏಷ್ಯನ್ ಹಾಗೂ ಪೆಸಿಫಿಕ್ ಐಸ್‌ಲ್ಯಾಂಡರ್ ಅಮೆರಿಕನ್ ವೋಟ್ (ಎಪಿಐಎವೋಟ್) ಏಷ್ಯಾ–ಅಮೆರಿಕನ್ ಅಡ್ವಾನ್ಸಿಂಗ್ ಜಸ್ಟೀಸ್ (ಎಎಜೆಸಿ) ಈ ಸಮೀಕ್ಷೆ ನಡೆಸಿದ್ದವು.

ಕಮಲಾ ಪರ ಅಚಲ ನಿಲುವು: ಅಮೆರಿಕದ ಮೊದಲ ಉಪಾಧ್ಯಕ್ಷೆಯಾಗಿ ಆಯ್ಕೆಯಾದ ಭಾರತೀಯ ಮೂಲದ ಕಮಲಾ ಹ್ಯಾರಿಸ್ ಪರ ಏಷ್ಯನ್–ಅಮೆರಿಕನ್ನರು ಶೇ 54ರಷ್ಟು ಒಲವು ಹೊಂದಿದ್ದು, ಶೇ 38ರಷ್ಟು ಮಂದಿ ಮರು ಆಯ್ಕೆಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಬಜೆಟ್: ಅರ್ಥಶಾಸ್ತ್ರಜ್ಞರ ಜತೆ ಮೋದಿ ಚರ್ಚೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಅರ್ಥಶಾಸ್ತ್ರಜ್ಞರ ಜೊತೆಗೆ ಬಜೆಟ್ ಪೂರ್ವ ಸಮಾಲೋಚನೆ ನಡೆಸಿದರು.

ಲೋಕಸಭೆಯಲ್ಲಿ ಜುಲೈ 23ರಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, 2024–25ನೇ ಆರ್ಥಿಕ ಸಾಲಿನ ಪೂರ್ಣ ಬಜೆಟ್ ಮಂಡಿಸಲಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಅರ್ಥಶಾಸ್ತ್ರಜ್ಞರು ಸರ್ಕಾರಕ್ಕೆ ಹಲವು ಸಲಹೆಗಳನ್ನು ನೀಡಿದರು.

ನೀತಿ ಆಯೋಗದ ಉಪಾಧ್ಯಕ್ಷ ಸುಮನ್ ಬೆರಿ, ಸಚಿವೆ ನಿರ್ಮಲಾ, ಯೋಜನಾ ಸಚಿವ ರಾವ್ ಇಂದ್ರಜಿತ್ ಸಿಂಗ್, ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್, ಅರ್ಥಶಾಸ್ತ್ರಜ್ಞರಾದ ಸುರ್ಜಿತ್ ಭಲ್ಲಾ, ಅಶೋಕ್ ಗುಲಾಟಿ, ಹಿರಿಯ ಬ್ಯಾಂಕರ್ ಕೆ.ವಿ. ಕಾಮತ್ ಪಾಲ್ಗೊಂಡಿದ್ದರು.

ಈಗಾಗಲೇ, ಸೀತಾರಾಮನ್ ಅವರು ವಿವಿಧ ವಲಯದ ಪ್ರಮುಖರು, ಅರ್ಥಶಾಸ್ತ್ರಜ್ಞರು ಮತ್ತು ಕೈಗಾರಿಕಾ ವಲಯದ ಪ್ರತಿನಿಧಿಗಳ ಜೊತೆಗೆ ಸಮಾಲೋಚನೆ ನಡೆಸಿದ್ದಾರೆ.

ಸರ್ಕಾರವು ಬಜೆಟ್‌ನಲ್ಲಿ ಜನಸಾಮಾನ್ಯರ ಮೇಲಿನ ತೆರಿಗೆ ಹೊರೆಯನ್ನು ಕಡಿಮೆ ಮಾಡಬೇಕಿದೆ. ಚಿಲ್ಲರೆ ಹಣದುಬ್ಬರದ ಏರಿಕೆಗೆ ಕಡಿವಾಣ ಹಾಕಲು ಅಗತ್ಯ ಕ್ರಮಕೈಗೊಳ್ಳುವ ಮೂಲಕ ಆರ್ಥಿಕತೆ ಬೆಳವಣಿಗೆಗೆ ಒತ್ತು ನೀಡಬೇಕಿದೆ ಎಂದು ಒತ್ತಾಯಿಸಿದ್ದಾರೆ.

2023–24ನೇ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿಯು ಶೇ 8.2ರಷ್ಟು ಪ್ರಗತಿ ಕಂಡಿದೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು, ನವದೆಹಲಿಯಲ್ಲಿ ಗುರುವಾರ ಅರ್ಥಶಾಸ್ತ್ರಜ್ಞರ ಜೊತೆಗೆ ಬಜೆಟ್ ಪೂರ್ವ ಸಮಾಲೋಚನೆ ನಡೆಸಿದರು –ಪಿಟಿಐ ಚಿತ್ರ

ಸುದ್ದಿ 2 ನಿಮಿಷ

ಸದ್ಯಕ್ಕೆ ರೆಪೊ ದರ ಕಡಿತವಿಲ್ಲ: ಗವರ್ನರ್ ಶಕ್ತಿಕಾಂತ ದಾಸ್

ನವದೆಹಲಿ (ಪಿಟಿಐ): ‘ಚಿಲ್ಲರೆ ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಳ್ಳುವುದು ಆರ್‌ಬಿಐನ ಗುರಿಯಾಗಿದೆ. ಹಣದುಬ್ಬರದ ಈಗಿನ ಸ್ಥಿತಿಯನ್ನು ಅವಲೋಕಿಸಿದರೆ ರೆಪೊ ದರ ಕಡಿತದ ಬಗ್ಗೆ ನಿರ್ಧಾರ ಕೈಗೊಳ್ಳುವುದು ಅಪಕ್ವ ಎನಿಸುತ್ತದೆ’ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರವು ನಿಗದಿತ ಪಥದತ್ತ ಸಾಗಬೇಕಿದೆ. ಆಗಷ್ಟೇ ರೆಪೊ ದರ ಕಡಿತಗೊಳಿಸುವ ಬಗ್ಗೆ ನಮಗೆ ವಿಶ್ವಾಸ ಮೂಡುತ್ತದೆ ಎಂದು ಸಿಎನ್‌ಬಿಸಿ–ಟಿ.ವಿ 18ಕ್ಕೆ ನೀಡಿದ ಸಂದರ್ಶನದಲ್ಲಿ ಅವರು ಸ್ಪಷ್ಟಪಡಿಸಿದ್ದಾರೆ.

‘ಹಣದುಬ್ಬರವನ್ನು ನಿಯಂತ್ರಿಸುವ ಪ್ರಕ್ರಿಯೆ ಸಾಗಿದೆ. ಆದರೆ, ನಿಗದಿತ ಗುರಿಯಲ್ಲಿ ನಿಯಂತ್ರಿಸುವುದು ಕಷ್ಟಕರವಾಗಿದೆ’ ಎಂದಿದ್ದಾರೆ.

ಹಣದುಬ್ಬರವು ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಶೇ 4.9, ಎರಡನೇ ತ್ರೈಮಾಸಿಕದಲ್ಲಿ ಶೇ 3.8, ಮೂರನೇ ತ್ರೈಮಾಸಿಕದಲ್ಲಿ ಶೇ 4.6ರಷ್ಟು ಹಾಗೂ ನಾಲ್ಕನೇ ತ್ರೈಮಾಸಿಕದಲ್ಲಿ ಶೇ 4.5ರಷ್ಟು ದಾಖಲಾಗಲಿದೆ ಎಂದು ಆರ್‌ಬಿಐ ಅಂದಾಜಿಸಿದೆ.

ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಹಣದುಬ್ಬರವು ಇಳಿಕೆಯ ಪಥದಲ್ಲಿ ಸಾಗಿದೆ. ಆದರೆ, ಆಹಾರ ಪದಾರ್ಥಗಳ ಬೆಲೆ ಏರಿಕೆಯು ಹಣದುಬ್ಬರ ಇಳಿಕೆಗೆ ಸವಾಲಾಗಿದೆ. ಬೇಳೆ ಕಾಳು ಮತ್ತು ತರಕಾರಿಗಳ ಬೆಲೆಯು ಎರಡಂಕಿ ದಾಟಿದೆ.

‘2023–24ನೇ ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯು ಸದೃಢವಾಗಿದೆ. ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿಯೂ ಇದೇ ಸ್ಥಿತಿ ಮುಂದುವರಿಯುವ ಸಾಧ್ಯತೆಯಿದೆ’ ಎಂದು ಹೇಳಿದ್ದಾರೆ.

ವಾಹನ ಬಿಡಿಭಾಗ ಉದ್ಯಮದ ಬೆಳವಣಿಗೆ ಮಂದಗತಿ: ಐಸಿಆರ್‌ಎ

ಮುಂಬೈ (ಪಿಟಿಐ): ಕೆಂಪು ಸಮುದ್ರದ ಬಿಕ್ಕಟ್ಟು ವಾಹನ ಬಿಡಿಭಾಗಗಳ ಉದ್ಯಮದ ಮೇಲೆ ಪರಿಣಾಮ ಬೀರಿದೆ. ಹಾಗಾಗಿ, ಪ್ರಸಕ್ತ ಹಣಕಾಸು ವರ್ಷದಡಿ ಭಾರತದಲ್ಲಿ ಈ ಉದ್ಯಮದ ಬೆಳವಣಿಗೆಯು ಮಂದಗತಿಯಲ್ಲಿ ಇರಲಿದೆ ಎಂದು ಕ್ರೆಡಿಟ್ ರೇಟಿಂಗ್ ಏಜೆನ್ಸಿ ಐಸಿಆರ್‌ಎ ಗುರುವಾರ ಅಂದಾಜಿಸಿದೆ.

ಕೆಂಪು ಸಮುದ್ರದ ಬಿಕ್ಕಟ್ಟಿನಿಂದಾಗಿ ಸರಕು ಸಾಗಣೆಗೆ ಅಡ್ಡಿಯಾಗಿದೆ. ಕಂಟೇನರ್‌ಗಳಲ್ಲಿ ಸಾಗಣೆ ವೆಚ್ಚವು ಕಳೆದ ವರ್ಷಕ್ಕೆ ಹೋಲಿಸಿದರೆ 2ರಿಂದ 3 ಪಟ್ಟು ಏರಿಕೆಯಾಗಿದೆ. ಸಾಗಣೆ ಅವಧಿಯೂ ಎರಡು ವಾರಗಳಷ್ಟು ಹೆಚ್ಚಾಗಿದೆ ಎಂದು ಹೇಳಿದೆ.

ಭಾರತದಿಂದ ಉತ್ತರ ಅಮೆರಿಕ ಮತ್ತು ಯುರೋಪ್‌ಗೆ ಮೂರನೇ ಎರಡರಷ್ಟು ವಾಹನದ ಬಿಡಿ ಭಾಗಗಳನ್ನು ರಫ್ತು ಮಾಡಲಾಗುತ್ತದೆ. ಮೂರನೇ ಒಂದು ಭಾಗದಷ್ಟು ಆಮದು ಪ್ರಕ್ರಿಯೆಯು ಕೆಂಪು ಸಮುದ್ರದ ಮಾರ್ಗವಾಗಿಯೇ ನಡೆಯುತ್ತದೆ ಎಂದು ತಿಳಿಸಿದೆ. 2023–24ನೇ ಹಣಕಾಸು ವರ್ಷದಲ್ಲಿ ಭಾರತದ ವಾಹನ ಬಿಡಿಭಾಗಗಳ ಉದ್ಯಮವು ಶೇ 14ರಷ್ಟು ಬೆಳವಣಿಗೆ ದಾಖಲಿಸಿತ್ತು. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇ 5ರಿಂದ 7ರಷ್ಟು ಇಳಿಕೆಯಾಗುವ ನಿರೀಕ್ಷೆಯಿದೆ ಎಂದು ತಿಳಿಸಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕ
ಬಸವನಗುಡಿ ಬೆಂಗಳೂರು – 560 004

ಪ್ರಕಟಣೆ

ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕ (ರಿ) ನ್ಯಾಷನಲ್ ಹೈಸ್ಕೂಲ್ ಆವರಣ, ಬಸವನಗುಡಿ, ಬೆಂಗಳೂರು– 04. ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ 4 ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಗುರುತಿಸಲಾದ 1 ಬೋಧಕೇತರ ಬ್ಯಾಕ್‌ಲಾಗ್ ಹುದ್ದೆಗೆ ಪರಿಶಿಷ್ಟ ಪಂಗಡದ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರ ಸಂ.	ಹುದ್ದೆಯ ಹೆಸರು	ಹುದ್ದೆಯ ಸಂಖ್ಯೆ	ಮೀಸಲಾತಿ
1.	ಬೆರಳಚ್ಚುಗಾರರು	01	ಪರಿಶಿಷ್ಟ ಪಂಗಡ

ಅರ್ಹತೆ: ಅಭ್ಯರ್ಥಿಗಳು ದ್ವಿತೀಯ ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುವ ಸೀನಿಯರ್ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. (ಕನ್ನಡ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದು ಖಡ್ಡಾಯವಾಗಿದೆ). ವಯೋಮಿತಿ 18 – 40 ವರ್ಷಗಳು. ಈ ಹುದ್ದೆಯು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಾತ್ರ ಮೀಸಲಿದ್ದು, ಇತರೆ ವರ್ಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಂತಿಲ್ಲ. ಅಭ್ಯರ್ಥಿಗಳನ್ನು ಶೈಕ್ಷಣಿಕ ವಿದ್ಯಾರ್ಹತೆ ಮತ್ತು ವಯೋಮಿತಿ ಆಧಾರದ ಮೇಲೆ ಮಾತ್ರ ಆಯ್ಕೆ ಮಾಡಲಾಗುವುದು. ಯಾವುದೇ ಸಂದರ್ಶನ ಇರುವುದಿಲ್ಲ.
ಅಭ್ಯರ್ಥಿಗಳು ಎ4 ಅಳತೆಯ ಖಾಲಿ ಹಾಳೆಯಲ್ಲಿ ತಮ್ಮ ಹೆಸರು, ಹುಟ್ಟಿದ ದಿನಾಂಕ, ಪ್ರವರ್ಗ, ವಿದ್ಯಾರ್ಹತೆ, ಜಾತಿ ಪ್ರಮಾಣ ಪತ್ರ ಮತ್ತು ಅನುಭವ ಇದ್ದಲ್ಲಿ ಸೂಕ್ತ ದೃಢೀಕೃತ ಪತ್ರಗಳೊಂದಿಗೆ ವಿಳಾಸ ಮತ್ತು ದೂರವಾಣಿ ಸಂಖ್ಯೆ ಇತರೆ ಸೂಕ್ತ ಮಾಹಿತಿಗಳೊಂದಿಗೆ ಅರ್ಜಿಯನ್ನು ದ್ವಿಪ್ರತಿಯಲ್ಲಿ ಈ ಜಾಹೀರಾತು ಪ್ರಕಟಣೆಗೊಂಡ 10 ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ದಿನಾಂಕ 22.07.2024 ನಂತರ ಸಲ್ಲಿಕೆಯಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹಾಗೆಯೇ ಒಂದು ಪ್ರತಿಯನ್ನು ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಕಾಳಿದಾಸ ರಸ್ತೆ, ಬೆಂಗಳೂರು – 560 009 ಈ ಕಛೇರಿಗೆ ಅಂಚೆ ಮುಖಾಂತರ ಅಥವಾ ಖುದ್ದಾಗಿ ಮೇಲೆ ತಿಳಿಸಲಾದ ಅವಧಿಯೊಳಗೆ ಸಲ್ಲಿಸತಕ್ಕದ್ದು.

ಸಹಿ/– ಕಾರ್ಯದರ್ಶಿಗಳು
ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕ,
ನ್ಯಾಷನಲ್ ಹೈಸ್ಕೂಲ್ ಆವರಣ, ಬಸವನಗುಡಿ, ಬೆಂಗಳೂರು–04.

Wanted

ವರ್ಕ್ ಫ್ರಮ್ ಹೋಮ್, ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. 15,000–43,500/– ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

ಪ್ರವಾಸ

Travel

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ ವಿಮಾನ/ ರೈಲು ಎಸಿ ಬಸ್ಸಿನಲ್ಲಿ 08.09.2024 23.09.2024 ಚಾರ್‌ಧಾಮ್ ಪ್ರವಾಸ. 14.09.2024 22.09.2024 ಅಯೋಧ್ಯಾ,ಕಾಶಿ ಬುದ್ಧಗಯಾ. 21.09.2024 29.09.2024 ನೇಪಾಳ ಮುಕ್ತಿನಾಥ ಪೋಕ್ರಾ,ಲುಂಬಿನಿ.15.09.2024 26.09.2024 ದ್ವಾರಕಾ ಸೋಮನಾಥ್ ನಿಷ್ಕಳಂಕ ಮಹಾದೇವ ಓಂಕಾರೇಶ್ವರ್ ಮಹಾಕಾಳೇಶ್ವರ ದಕ್ಷಿಣ ಮತ್ತು ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 8431888138 7204173686

★ಶ್ರೀಶ್ರೇಯಸ್ ಟೂರ್ಸ್★ 05.08.2024 8ದಿಗಳು ಅಹೋಬಲಂ ನವನಾರಸಿಂಹ, ನವನಂದಿ,ಶ್ರೀಶೈಲಂ, ಹೈದರಾಬಾದ್,ರಾಮೋಜಿ, ಅಲಂಪುರ,ಮಂತ್ರಾಲಯ. 21.08.2024 10ದಿನಗಳು ಅಖಂಡ ಕೇರಳ ರಾಜ್ಯಪ್ರವಾಸ. 14.10.2024 15ದಿನಗಳು ಉತ್ತರಕಾಂಡ ವಿಶೇಷ ಓಂಪರ್ವತ ಆದಿಕೈಲಾಸ್,ನೈನಿತಾಲ್ ಬೀಮ್ ತಾಲ್, ಔಗೇಶ್ವರ,ಭಾಗೇಶ್ವರ, ಮುಕ್ತೇಶ್ವರ.9743351212, 7676804971

14 ದಿನಗಳ ಚಾರ್ಧಾಮ್ ಪ್ರವಾಸ 14.09.2024. 10ದಿನಗಳ ರಾಜಸ್ಥಾನ ಪ್ರವಾಸ 19.10.2024. 5ದಿನಗಳ ಥೈಲ್ಯಾಂಡ್ ಪ್ರವಾಸ 08.10.2024. 14ದಿನಗಳ ಕಾಶ್ಮೀರ,ಹಿಮಾಚಲ ಪ್ರವಾಸ 20.12.24. Twite Holidays ಸಂಪರ್ಕಿಸಿ: 8088559962/ 9611801143.

10 ದಿನಗಳ ಕಾಂಬೋಡಿಯಾ, ವಿಯೆಟ್ನಾಂ. 7 ದಿನಗಳ ಶ್ರೀಲಂಕಾ ಮತ್ತು 6 ದಿನಗಳ ದುಬೈ. ಭಟ್ ಟ್ರಾವೆಲ್ಸ್: 9844037295/ 9844166555

ಉದ್ಯೋಗಾವಕಾಶ

General

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000- 17,000. 8951315839, 9141634619

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6364468422 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಟಿಸಿಎಸ್‌ಗೆ ₹12 ಸಾವಿರ ಕೋಟಿ ಲಾಭ

ಮುಂಬೈ (ಪಿಟಿಐ): ದೇಶದ ಅತಿದೊಡ್ಡ ಸಾಫ್ಟ್‌ವೇರ್ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್), 2024–25ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ₹12,040 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹11,074 ಕೋಟಿ ಲಾಭ ಗಳಿಸಲಾಗಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 8.7ರಷ್ಟು ಏರಿಕೆಯಾಗಿದೆ ಎಂದು ಕಂಪನಿಯು ಗುರುವಾರ ತಿಳಿಸಿದೆ.

ಐ.ಟಿ ವಲಯದ ಇನ್ಫೊಸಿಸ್, ವಿಪ್ರೊ, ಎಚ್‌ಸಿಎಲ್ ಟೆಕ್ ಕಂಪನಿಗಳಿಗೆ ಪ್ರತಿಸ್ಪರ್ಧಿಯಾಗಿರುವ ಟಿಸಿಎಸ್‌ನ ತ್ರೈಮಾಸಿಕ ಕಾರ್ಯಾಚರಣೆ ವರಮಾನದಲ್ಲೂ ಶೇ 5.4ರಷ್ಟು ಹೆಚ್ಚಳವಾಗಿದೆ. ಒಟ್ಟು ₹62,613 ಕೋಟಿ ವರಮಾನ ಗಳಿಸಿದೆ.

ಆದರೆ, ಮಾರ್ಚ್ ತ್ರೈಮಾಸಿಕಕ್ಕೆ ಹೋಲಿಸಿದರೆ ನಿವ್ವಳ ಲಾಭದಲ್ಲಿ ಶೇ 3.1ರಷ್ಟು ಇಳಿಕೆಯಾಗಿದೆ.

‘ಪ್ರಸಕ್ತ ಆರ್ಥಿಕ ವರ್ಷದ ಆರಂಭದಲ್ಲಿಯೇ ಕೈಗಾರಿಕೆ ಮತ್ತು ಮಾರುಕಟ್ಟೆ ವಲಯದಲ್ಲಿ ಉತ್ತಮ ಬೆಳವಣಿಗೆ ದಾಖಲಿಸಲಾಗಿದೆ’ ಎಂದು ಟಿಸಿಎಸ್ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಕೆ. ಕೃತಿವಾಸನ್ ತಿಳಿಸಿದ್ದಾರೆ.

‘ಕಂಪನಿಯು ವಿಶ್ವದಾದ್ಯಂತ ತನ್ನ ಪಾಲುದಾರರ ಜೊತೆಗೆ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಲು ಮುಂದಾಗಿದೆ. ಹೊಸ ತಂತ್ರಜ್ಞಾನದ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಒತ್ತು ನೀಡಲಿದೆ. ಜೊತೆಗೆ, ತಂತ್ರಜ್ಞಾನಕ್ಕೆ ಸಂಬಂಧಿಸಿದ ಹೊಸ ಅನ್ವೇಷಣೆಗಳಿಗೆ ಹೆಚ್ಚಿನ ಬಂಡವಾಳ ಹೂಡಿಕೆ ಮಾಡಲಿದೆ’ ಎಂದು ಹೇಳಿದ್ದಾರೆ.

‘ಫ್ರಾನ್ಸ್‌ನಲ್ಲಿ ಎ.ಐ ಆಧಾರಿತ ಟಿಸಿಎಸ್ ಪೇಸ್‌ಪೋರ್ಟ್ ಮತ್ತು ಅಮೆರಿಕದಲ್ಲಿ ಇಂಟರ್‌ನೆಟ್ ಆಫ್ ಥಿಂಗ್ಸ್ ಲ್ಯಾಬ್ ತೆರೆಯಲಿದೆ. ಲ್ಯಾಟಿನ್ ಅಮೆರಿಕ, ಕೆನಡಾ ಮತ್ತು ಯುರೋಪ್‌ನಲ್ಲಿ ಕಂಪನಿಯ ವಿತರಣಾ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ’ ಎಂದು ವಿವರಿಸಿದ್ದಾರೆ.

‘ಜೂನ್ ತ್ರೈಮಾಸಿಕದಲ್ಲಿ ವಾರ್ಷಿಕ ವೇತನ ಏರಿಕೆಯ ನಡುವೆಯೂ ಕಂಪನಿಯ ಕಾರ್ಯಾಚರಣೆಯು ಸದೃಢವಾಗಿದೆ’ ಎಂದು ಮುಖ್ಯ ಹಣಕಾಸು ಅಧಿಕಾರಿ ಸಮೀರ್ ಸೆಕ್ಸಾರಿಯಾ ತಿಳಿಸಿದ್ದಾರೆ.

ಪ್ರತಿ ಷೇರಿಗೆ ₹10 ಮಧ್ಯಂತರ ಲಾಭಾಂಶ ನೀಡುವುದಾಗಿ ಕಂಪನಿಯು ಪ್ರಕಟಿಸಿದೆ.

ಕಾರ್ಖಾನೆ ಕಾಯಕಲ್ಪಕ್ಕೆ ಅಭಯ

ವಿಶಾಖಪಟ್ಟಣ ಉಕ್ಕು ಕಾರ್ಖಾನೆಗೆ ಕೇಂದ್ರ ಸಚಿವ ಎಚ್‌ಡಿಕೆ ಭೇಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಶಾಖಪಟ್ಟಣ ಉಕ್ಕು ಕಾರ್ಖಾನೆಗೆ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಾರ್ಖಾನೆಯ ಕಾರ್ಯ ಚಟುವಟಿಕೆ, ವಿಸ್ತಾರ, ವಿಭಾಗವಾರು ಮಾಹಿತಿಯನ್ನು ಕಂಪನಿಯ ಅಧ್ಯಕ್ಷ ಅತುಲ್ ಭಟ್ ಅವರು ಸಚಿವರಿಗೆ ನೀಡಿದರು. ಬಳಿಕ ಕಬ್ಬಿಣ ಅದಿರು ಸಂಸ್ಕರಣೆ ಹಾಗೂ ಉಕ್ಕು ತಯಾರಿಕಾ ವಿಭಾಗಗಳಿಗೆ ಭೇಟಿ ನೀಡಿದ ಸಚಿವರು, ತಾಂತ್ರಿಕ ವಿಭಾಗದ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿದರು. ಕಾರ್ಖಾನೆಯ ಆಡಳಿತ ಕಚೇರಿಯಲ್ಲಿ ಕಾರ್ಖಾನೆಯ ಆಗುಹೋಗುಗಳು, ವಹಿವಾಟು, ಲಾಭ ನಷ್ಟ, ಉತ್ಪಾದನೆ, ಕಾರ್ಯನಿರ್ವಹಣೆಯ ಕ್ಷಮತೆ, ಅದಿರು ಪೂರೈಕೆ, ಕಾರ್ಮಿಕರ ಕುರಿತಾದ ಅಂಶಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು.

‘ಈ ಕಂಪನಿಯನ್ನು ಉಳಿಸಲೇಬೇಕು. ಕೇಂದ್ರ ಸರ್ಕಾರವೇ ನಿರ್ವಹಣಾ ಬಂಡವಾಳ ನೀಡಲಿ ಅಥವಾ ಭಾರತೀಯ ಉಕ್ಕು ಪ್ರಾಧಿಕಾರದಲ್ಲಿ ವಿಲೀನ ಮಾಡಲಿ’ ಎಂದು ಜನಪ್ರತಿನಿಧಿಗಳು ಒತ್ತಾಯಿಸಿದರು. ‘ಯಾವುದೇ ಕಾರಣಕ್ಕೂ ಕಾರ್ಖಾನೆಯನ್ನು ಖಾಸಗಿಯವರಿಗೆ ಕೊಡಬಾರದು, ಸರ್ಕಾರವೇ ನಡೆಸಬೇಕು ಎಂದು ಕಾರ್ಮಿಕ ಮುಖಂಡರು ಆಗ್ರಹಿಸಿದರು.

ವಿಶಾಖಪಟ್ಟಣ ಉಕ್ಕು ಕಾರ್ಖಾನೆಗೆ ಎಚ್.ಡಿ.ಕುಮಾರಸ್ವಾಮಿ ಭೇಟಿ ನೀಡಿ ಪರಿಶೀಲನೆ ನಡೆಸಿದರು

‘ಸಚಿವನಾಗಿ ಅಧಿಕಾರ ವಹಿಸಿಕೊಂಡ ನಂತರ ಈ ಕಂಪನಿ ಬಗ್ಗೆ ಸರಣಿ ಸಭೆಗಳನ್ನು ನಡೆಸಿದ್ದೇನೆ. ಉನ್ನತ ಅಧಿಕಾರಿಗಳು, ಸಾಲ ನೀಡಿರುವ ಬ್ಯಾಂಕರ್‌ಗಳ ಜತೆ ಮಾತುಕತೆ ನಡೆಸಿದ್ದೇನೆ. ಸಚಿವನಾಗಿ ಅಧಿಕಾರ ವಹಿಸಿಕೊಂಡ ಒಂದು ತಿಂಗಳ ಒಳಗಾಗಿ ಕಾರ್ಖಾನೆಗೆ ಭೇಟಿ ನೀಡಿದ್ದೇನೆ’ ಎಂದು ಕುಮಾರಸ್ವಾಮಿ ಹೇಳಿದರು.

‘ಆತ್ಮನಿರ್ಭರ್ ಭಾರತ್, ಮೇಕ್ ಇನ್ ಇಂಡಿಯಾ ಮೂಲಕ ಈ ಕಂಪನಿಯನ್ನು ಪುನಶ್ಚೇತನ ಮಾಡುವ ಬಗ್ಗೆ ಪ್ರಯತ್ನ ಮಾಡಲಾಗುವುದು. ವಾರ್ಷಿಕ 300 ದಶಲಕ್ಷ ಟನ್ ಉಕ್ಕು ಉತ್ಪಾದಿಸುವ ಗುರಿಯನ್ನು ಪ್ರಧಾನಿಯವರು ನೀಡಿದ್ದಾರೆ. ಆ ಗುರಿ ಮುಟ್ಟುವ ಹಾದಿಯಲ್ಲಿ ಈ ಕಾರ್ಖಾನೆ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂಬ ವಿಶ್ವಾಸವಿದೆ ಎಂದು ಸಚಿವರು ಹೇಳಿದರು.

ಬಾಹ್ಯಾಕಾಶದಿಂದ ಹಿಂದಿರುಗುವ ವಿಶ್ವಾಸ ವ್ಯಕ್ತಪಡಿಸಿದ ಸುನೀತಾ

ಕೇಪ್ ಕೆನವೆರಲ್ (ಎಪಿ): ಎರಡು ವಾರಗಳ ಹಿಂದೆಯೇ ಭೂಮಿಗೆ ಹಿಂದಿರುಗಬೇಕಿದ್ದ ನಾಸಾ ಪೈಲಟ್‌ಗಳಾದ, ಭಾರತೀಯ ಮೂಲದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರು ಬೋಯಿಂಗ್‌ನ ಬಾಹ್ಯಾಕಾಶ ನೌಕೆ ಸಹಾಯದಿಂದ ಸುರಕ್ಷಿತವಾಗಿ ಹಿಂತಿರುಗುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಕ್ಷೆಯಿಂದ ಬುಧವಾರ ಮೊದಲ ಸುದ್ದಿಗೋಷ್ಠಿ ನಡೆಸಿದ ಪೈಲಟ್‌ಗಳು, ‘ಕಕ್ಷೆಯಲ್ಲಿ ಥ್ರಸ್ಟರ್ (ಸಣ್ಣ ರಾಕೆಟ್ ಎಂಜಿನ್) ಪರೀಕ್ಷೆ ಪೂರ್ಣಗೊಂಡ ಬಳಿಕ ಭೂಮಿಗೆ ಮರಳುವ ನಿರೀಕ್ಷೆಯಿದೆ’ ಎಂದು ಹೇಳಿದ್ದಾರೆ.

ಕಕ್ಷೆಯಲ್ಲಿ ಹೆಚ್ಚಿನ ಅವಧಿ ಕಳೆಯಬೇಕಾದ ಪರಿಸ್ಥಿತಿ ಕುರಿತು ಪೈಲಟ್‌ಗಳು ದೂರದೆ, ಬಾಹ್ಯಾಕಾಶ ನಿಲ್ದಾಣದ ಸಿಬ್ಬಂದಿಗೆ ಸಹಾಯ ಮಾಡುತ್ತಾ ಆನಂದ ದಿಂದ ಇರುವುದಾಗಿ ತಿಳಿಸಿದ್ದಾರೆ.

ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್

‘ನಮಗೆ ಯಾವುದೇ ತೊಂದರೆಯಿಲ್ಲ. ಬಾಹ್ಯಾಕಾಶ ನೌಕೆಯು ನಮ್ಮನ್ನು ಮನೆಗೆ ಕರೆತರುತ್ತದೆ ಎಂಬ ವಿಶ್ವಾಸವಿದೆ’ ಎಂದು ಸುನೀತಾ ವಿಲಿಯಮ್ಸ್ ಸುದ್ದಿಗಾರರಿಗೆ ತಿಳಿಸಿದರು.

ಹೀಲಿಯಂ ಸೋರಿಕೆ ಮತ್ತು ಥ್ರಸ್ಟರ್‌ನಲ್ಲಿನ ವೈಫಲ್ಯದಿಂದಾಗಿ ಅಂತರ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಅವರು ಹಿಂದಿರುಗುವುದು ತಡವಾಗುತ್ತಿದೆ. ಅವರು ಜುಲೈ ಅಂತ್ಯದ ವೇಳೆಗೆ ಹಿಂದಿರುಗಬಹುದು ಎಂದು ನಾಸಾ ಅಧಿಕಾರಿಗಳು ತಿಳಿಸಿದ್ದಾರೆ.

ಬ್ರಿಟನ್: ಭಗವದ್ಗೀತೆ, ಬೈಬಲ್ ಹೆಸರಿನಲ್ಲಿ ಭಾರತ ಮೂಲದವರ ಪ್ರಮಾಣ ವಚನ

ಲಂಡನ್ (ಪಿಟಿಐ): ಬ್ರಿಟನ್ ಸಂಸತ್ತಿಗೆ ಆಯ್ಕೆಯಾಗಿರುವ ಕನ್ಸರ್ವೇಟಿವ್ ಪಕ್ಷದ ಸಂಸದೆ, ಭಾರತ ಮೂಲದ ಶಿವಾನಿ ರಾಜಾ ಮತ್ತು ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದ ರಿಷಿ ಸುನಕ್ ಅವರು ‘ಭಗವದ್ಗೀತೆ’ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

‘ಲೀಸೆಸ್ಟರ್ ಈಸ್ಟ್ ಕ್ಷೇತ್ರವನ್ನು ಪ್ರತಿನಿಧಿಸಿ ಸಂಸತ್ತಿನಲ್ಲಿ ಆಯ್ಕೆಯಾಗಿರುವುದಕ್ಕೆ ಹೆಮ್ಮೆಯಾಗುತ್ತಿದೆ’ ಎಂದು ಗುಜರಾತ್ ಮೂಲದ ಉದ್ಯಮಿ ಶಿವಾನಿ ಹೇಳಿದ್ದಾರೆ.

‘ಕಾನೂನಿನ ಪ್ರಕಾರ ಗೌರವಾನ್ವಿತ ಕಿಂಗ್ ಚಾರ್ಲ್ಸ್ ಮತ್ತು ಅವರ ಉತ್ತರಾಧಿಕಾರಿಗಳಿಗೆ ನಿಷ್ಠಳಾಗಿ ಇರುತ್ತೇನೆ ಎಂದು ನಾನು ಸರ್ವಶಕ್ತ ದೇವರ ಮೇಲೆ ಪ್ರಮಾಣ ಮಾಡುತ್ತೇನೆ. ದೇವರೇ... ನನಗೆ ನೆರವಾಗು’ ಎಂದು ಪತ್ಯವನ್ನು ಬಲಗೈಯಲ್ಲಿ ಹಿಡಿದುಕೊಂಡು ಪ್ರಮಾಣ ವಚನ ಸ್ವೀಕರಿಸಿದರು.

ಬ್ರಿಟಿಷ್ ಸಿಖ್ ಸಂಸದರಾದ ತಾನ್ ಢೇಸಿ, ಗುರಿಂದರ್ ಸಿಂಗ್ ಜೋಸನ್, ಹರಪ್ರೀತ್ ಉಪ್ಪಲ್, ಸತ್ವೀರ್ ಕೌರ್ ಮತ್ತು ವಾರಿಂದರ್ ಸಿಂಗ್ ಜಸ್ ಅವರು ಸಿಖ್ ಧರ್ಮಗ್ರಂಥಗಳ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಸೇನೆಯಲ್ಲಿ ಭಾರತೀಯರು ಸಮಸ್ಯೆಗೆ ಶೀಘ್ರ ಪರಿಹಾರ: ರಷ್ಯಾ

ನವದೆಹಲಿ (ರಾಯಿಟರ್ಸ್): ಭಾರತೀಯರನ್ನು ವಂಚಿಸಿ ಅವರನ್ನು ರಷ್ಯಾ ಸೇನೆಯಲ್ಲಿ ಸೇರಿಸುವ ಮತ್ತು ಉಕ್ರೇನ್ ವಿರುದ್ಧ ಯುದ್ಧದಲ್ಲಿ ಹೋರಾಡಲು ಕಳಿಸುವ ಸಮಸ್ಯೆಗೆ ಶೀಘ್ರವೇ ಪರಿಹಾರ ಕಂಡುಕೊಳ್ಳಲು ರಷ್ಯಾ ಬದ್ಧವಾಗಿದೆ ಎಂದು ರಷ್ಯಾದ ರಾಯಭಾರಿ ಕಚೇರಿಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಸಮಸ್ಯೆ ಕುರಿತು ರಷ್ಯಾ ಇದೇ ಮೊದಲ ಬಾರಿಗೆ ಪ್ರತಿಕ್ರಿಯಿಸಿದೆ. ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಮಾತುಕತೆ ನಡೆಸಿದ್ದರು. ಸುಳ್ಳು ಮಾಹಿತಿ ಮೇರೆಗೆ ರಷ್ಯಾ ಸೇನೆ ಸೇರಿರುವ ಭಾರತೀಯರ ಬಿಡುಗಡೆ ಕುರಿತ ವಿಷಯ ಮಾತುಕತೆಯ ಕೇಂದ್ರಬಿಂದುವಾಗಿತ್ತು.

ಭಾರತೀಯರನ್ನು ಶೀಘ್ರವೇ ಬಿಡುಗಡೆಗೊಳಿಸುವ ಕುರಿತು ರಷ್ಯಾ ಭರವಸೆ ನೀಡಿದೆ ಎಂದು ಮೋದಿ ಜೊತೆಗಿದ್ದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಸಮಸ್ಯೆ ಪರಿಹರಿಸಲು ಭಾರತ ಮತ್ತು ರಷ್ಯಾ ಸಮನ್ವಯ ಸಾಧಿಸುತ್ತಿವೆ. ಭಾರತೀಯರನ್ನು ರಷ್ಯಾಕ್ಕೆ ಕಳುಹಿಸಿರುವ ಏಜೆಂಟರುಗಳು ಇರುವುದು ಭಾರತದಲ್ಲಿ. ಹೀಗಾಗಿ ಈ ಕುರಿತು ರಷ್ಯಾ, ಭಾರತ ಎರಡೂ ಕಡೆ ತನಿಖೆ ನಡೆಯಬೇಕು’ ಎಂದು ಭಾರತದಲ್ಲಿರುವ ರಷ್ಯಾ ರಾಯಭಾರ ಕಚೇರಿ ಅಧಿಕಾರಿ ರೋಮನ್ ಬಬುಶ್ಕಿನ್ ಬುಧವಾರ ತಿಳಿಸಿದರು. ಈವರೆಗೆ 10 ಭಾರತೀಯರನ್ನು ರಷ್ಯಾದಿಂದ ಕರೆತರಲಾಗಿದ್ದು, ಮಾನವ ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ಬಂಧಿಸಿದೆ.

ದಬ್ಬಾಳಿಕೆ ನೀತಿ ಮೂಲಕ ಬೆದರಿಕೆ ಆರೋಪ • ರಷ್ಯಾಕ್ಕೆ ಸಹಕಾರ ನಿಲ್ಲಿಸಲು ನಿರ್ಣಯ

ಚೀನಾ ‘ಪ್ರಭಾವ’, ನ್ಯಾಟೊ ಕಳವಳ

ವಾಷಿಂಗ್ಟನ್ (ಪಿಟಿಐ): ರಷ್ಯಾ ಮತ್ತು ಚೀನಾ ನಡುವಣ ಬಾಂಧವ್ಯ ಬಲಗೊಳ್ಳುತ್ತಿದೆ. ಉಕ್ರೇನ್ ವಿರುದ್ಧದ ರಷ್ಯಾದ ಸಮರದಲ್ಲಿ ‘ನಿರ್ಣಾಯಕ ಪಾತ್ರ’ ವಹಿಸಲು ಚೀನಾ ಮುಂದಾಗುತ್ತಿದೆ. ಈ ಬೆಳವಣಿಗೆಗಳ ಕುರಿತು 32 ರಾಷ್ಟ್ರಗಳ ಸದಸ್ಯತ್ವದ ಮೈತ್ರಿಕೂಟ ‘ನ್ಯಾಟೊ’ ತೀವ್ರ ಕಳವಳ ವ್ಯಕ್ತಪಡಿಸಿದೆ.

ಉತ್ತರ ಅಂಟ್ಲಾಟಿಕ್ ಮಂಡಳಿಯ (ಎನ್‌ಎಸಿ) 75ನೇ ವಾರ್ಷಿಕೋತ್ಸವ ಕಾರ್ಯಕ್ರಮಕ್ಕಾಗಿ ಇಲ್ಲಿ ಸೇರಿದ್ದ ನ್ಯಾಟೊ ಸದಸ್ಯ ರಾಷ್ಟ್ರಗಳ ಮುಖಂಡರು ಈ ವಿಷಯ ಚರ್ಚಿಸಿದ್ದು, ಜಂಟಿ ಹೇಳಿಕೆಯನ್ನೂ ಬಿಡುಗಡೆ ಮಾಡಿದ್ದಾರೆ.

‘ಚೀನಾದ ಮಹತ್ವಾಕಾಂಕ್ಷೆ ಮತ್ತು ದಬ್ಬಾಳಿಕೆಯ ನೀತಿಗಳು ನಮ್ಮ ಹಿತಾಸಕ್ತಿ, ಭದ್ರತೆ, ಮೌಲ್ಯಗಳಿಗೆ ಸವಾಲು ಒಡ್ಡುತ್ತಿವೆ. ರಷ್ಯಾ–ಚೀನಾ ಸಂಬಂಧ ಗಟ್ಟಿಯಾಗುತ್ತಿರುವುದು ನಿಯಮಾಧಾರಿತ ಅಂತರ ರಾಷ್ಟ್ರೀಯ ವ್ಯವಸ್ಥೆ ಬದಲಿಸುವ ಯತ್ನವೂ ಆಗಿದೆ’ ಎಂದು ಇಲ್ಲಿ ನಡೆದ ಮುಖಂಡರ ಶೃಂಗಸಭೆ ನಿರ್ಣಯವನ್ನು ಅಂಗೀಕರಿಸಿದೆ.

‘ಸದ್ಯ ರಷ್ಯಾಕ್ಕೆ ಚೀನಾ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದೆ. ಜೊತೆಗೆ ‘ಗಡಿಯಿಲ್ಲದ’ ಪಾಲುದಾರಿಕೆ ಚಟುವಟಿಕೆಗಳಿಂದ ಉಕ್ರೇನ್ ವಿರುದ್ಧದ ಯುದ್ಧದಲ್ಲಿ ‘ನಿರ್ಣಾಯಕ ಪಾತ್ರ’ ವಹಿಸಲೂ ಮುಂದಾಗುತ್ತಿದೆ. ಇದು, ರಷ್ಯಾ ತನ್ನ ನೆರೆ ರಾಷ್ಟ್ರಗಳ ಮೇಲೆ ಹೆಚ್ಚಿನ ಬೆದರಿಕೆಯೊಡ್ಡಲು ಕಾರಣವಾಗಿದೆ’ ಎಂದೂ ನ್ಯಾಟೊ ಆತಂಕಪಟ್ಟಿದೆ.

ಉಕ್ರೇನ್‌ನ ಮೇಲೆ ರಷ್ಯಾ ಪೂರ್ಣ-ಪ್ರಮಾಣದಲ್ಲಿ ದಾಳಿ ನಡೆಸಿರುವುದು ಯೂರೋಪ್–ಅಟ್ಲಾಂಟಿಕ್ ವಲಯದಲ್ಲಿ ಶಾಂತಿ, ಭದ್ರತೆಯ ವಾತಾವರಣವನ್ನು ಛಿದ್ರಗೊಳಿಸಿದೆ ಎಂದು ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ಇದಕ್ಕೂ ಮುನ್ನ ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟಾಲ್ಟೆನ್‌ಬರ್ಗ್, ‘ನ್ಯಾಟೊ ಮೈತ್ರಿಕೂಟವು ಇಂಡೊ–ಪೆಸಿಫಿಕ್ ವಲಯದ ಜೊತೆಗಿನ ಪಾಲುದಾರಿಕೆಗೆ ಬದ್ಧವಾಗಿದೆ. ಉಕ್ರೇನ್‌ಗೆ ಬೆಂಬಲವು ಮುಂದುವರಿಯಲಿದೆ. ಅದು ಭದ್ರತೆ ಹಿತಾಸಕ್ತಿಯ ರಕ್ಷಣೆಯಾಗಿದೆ’ ಎಂದು ಹೇಳಿದರು.

ನಿರ್ಣಾಯಕ ಪಾತ್ರ ಹೇಳಿಕೆ ತಳ್ಳಿಹಾಕಿದ ಚೀನಾ

ಬೀಜಿಂಗ್ (ಎ.ಪಿ): ‘ಉಕ್ರೇನ್ ಯುದ್ಧದಲ್ಲಿ ‘ನಿರ್ಣಾಯಕ ಪಾತ್ರ’ ವಹಿಸುತ್ತಿದೆ’ ಎಂಬ ‘ನ್ಯಾಟೊ’ ಹೇಳಿಕೆಯನ್ನು ಚೀನಾ ತಳ್ಳಿಹಾಕಿದೆ. ಈ ರೀತಿಯ ಆರೋಪದಿಂದ ಏಷ್ಯಾದಲ್ಲಿ ಗೊಂದಲ ಮೂಡಿಸಬಾರದು’ ಎಂದು ಹೇಳಿದೆ.

‘ಉಕ್ರೇನ್ ಯುದ್ಧದಲ್ಲಿ ಚೀನಾದ ಪಾತ್ರವನ್ನು ನ್ಯಾಟೊ ಉತ್ಪ್ರೇಕ್ಷಿಸಿ ಹೇಳುತ್ತಿದೆ. ಇದು, ಒಳ್ಳೆಯ ನಡೆಯಲ್ಲ’ ಎಂದು ಚೀನಾದ ವಿದೇಶಾಂಗ ಸಚಿವಾಲಯ ಪ್ರತಿಕ್ರಿಯಿಸಿದೆ. ‘ರಷ್ಯಾದ ಜೊತೆಗಿನ ವ್ಯಾಪಾರ ಕಾನೂನುಬದ್ಧವಾಗಿದೆ. ವಿಶ್ವ ವ್ಯಾಪಾರ ಸಂಘಟನೆಯ ನಿಯಮಗಳಿಗೆ ಪೂರಕವಾಗಿದೆ’ ಎಂದು ವಕ್ತಾರ ಲಿನ್ ಸಮರ್ಥಿಸಿಕೊಂಡಿದ್ದಾರೆ.

ಹಿಂದೂ ವಿವಾಹ ಅನೂರ್ಜಿತಗೊಳಿಸಿದ ಅಲಹಾಬಾದ್ ಹೈಕೋರ್ಟ್ ಅಭಿಮತ

‘ಸಂಪ್ರದಾಯ ಮುಖ್ಯ; ಪ್ರಮಾಣಪತ್ರವಲ್ಲ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕೌಟುಂಬಿಕ ನ್ಯಾಯಾಲಯದ ಆದೇಶ ರದ್ದು
- ಹೈಕೋರ್ಟ್‌ನ ಲಖನೌ ಪೀಠದಿಂದ ತೀರ್ಪು

ನವದೆಹಲಿ: ವಿಧಿಬದ್ಧವಾದ ಆಚರಣೆಗಳ ಅನುಸಾರ ಹಿಂದೂ ವಿವಾಹ ನಡೆಯದೇ ಇದ್ದಾಗ, ವಿವಾಹ ನೋಂದಣಿ ಪ್ರಮಾಣ-ಪತ್ರಕ್ಕೆ ಯಾವುದೇ ಮಹತ್ವ ಇಲ್ಲ ಎಂದು ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠ ತೀರ್ಪು ನೀಡಿದೆ.

ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ರಾಜನ್ ರಾಯ್ ಮತ್ತು ಓಂಪ್ರಕಾಶ್ ಶುಕ್ಲಾ ಅವರಿದ್ದ ವಿಭಾಗೀಯ ಪೀಠವು, ವಿಧಿಬದ್ಧವಾಗಿ ನಡೆಯದ ಕಾರಣ ಮದುವೆ ಅನೂರ್ಜಿತ ಎಂದು ಘೋಷಿಸಿದೆ.

ವಿವಾಹ ನೋಂದಣಿ ಪ್ರಮಾಣ-ಪತ್ರವನ್ನು ಪುರಾವೆಯಾಗಿ ಪರಿಗಣಿಸಿ ತನ್ನ ಮದುವೆಯನ್ನು ಮಾನ್ಯ ಮಾಡಿ ಕೌಟುಂಬಿಕ ನ್ಯಾಯಾಲಯ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಮಹಿಳೆ ಅರ್ಜಿ ಸಲ್ಲಿಸಿದ್ದರು.

‘ನಾನು ಮತ್ತು ನನ್ನ ತಾಯಿ ‘ಧರ್ಮ ಗುರು’ ಒಬ್ಬರ ಅನುಯಾಯಿಗಳಾಗಿ-ದ್ದೆವು. ಅವರು ಕೆಲ ಖಾಲಿ ಕಾಗದಗಳ ಮೇಲೆ ನಮ್ಮ ಸಹಿ ಪಡೆದಿದ್ದರಲ್ಲದೇ, ನಮ್ಮಿಬ್ಬರನ್ನು ತಮ್ಮ ಧಾರ್ಮಿಕ ಸಂಸ್ಥೆಯ ಸದಸ್ಯರನ್ನಾಗಿ| ಮಾಡಲು ಬಯಸಿದ್ದರು’ ಎಂದು ಮಹಿಳೆ ಅರ್ಜಿಯಲ್ಲಿ ಹೇಳಿದ್ದಾರೆ.

‘ಆರ್ಯ ಸಮಾಜವೊಂದ ರಲ್ಲಿ ನಿಮ್ಮ ಮಗಳನ್ನು ಮದುವೆಯಾ-ಗಿದ್ದೇನೆ. ಮದುವೆಯ ನೋಂದಣಿಯೂ ಆಗಿದೆ ಎಂಬುದಾಗಿ ಧರ್ಮ ಗುರು ನನ್ನ ತಂದೆಗೆ ತಿಳಿಸಿದ್ದರು’ ಎಂದು ಮಹಿಳೆ ಅರ್ಜಿಯಲ್ಲಿ ವಿವರಿಸಿದ್ದಾರೆ.

‘ಕಾಗದಪತ್ರಗಳಿಗೆ ಮೋಸದಿಂದ ನನ್ನ ಸಹಿ ಪಡೆಯಲಾಗಿದೆ. ಹೀಗಾಗಿ ನನ್ನ ಮದುವೆ ಅನೂರ್ಜಿತ ಎಂಬುದಾಗಿ ಘೋಷಿಸಬೇಕು’ ಎಂದು ಮಹಿಳೆ ಕೌಟುಂಬಿಕ ನ್ಯಾಯಾಲಯದ ಮೊರೆ ಹೋಗಿದ್ದರು. ಪ್ರತಿವಾದಿಯೂ ಕೂಡ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ‘ನನ್ನ ವೈವಾಹಿಕ ಹಕ್ಕುಗಳನ್ನು ರಕ್ಷಿಸಬೇಕು’ ಎಂದು ಕೋರಿದ್ದರು.

ಕೌಟುಂಬಿಕ ನ್ಯಾಯಾಲಯವು ಮಹಿಳೆಯ ಅರ್ಜಿಯನ್ನು ತಿರಸ್ಕರಿಸಿತ್ತಲ್ಲ-ದೇ, ‘ಧರ್ಮ ಗುರು’ವಿನ ಅರ್ಜಿಯನ್ನು ಮಾನ್ಯ ಮಾಡಿ ಆದೇಶಿಸಿತ್ತು.

ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಹಿಳೆಯು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ‘ಹಿಂದೂ ಸಂಪ್ರದಾಯ–ಆಚರಣೆಗಳ ಪ್ರಕಾರ ಮದುವೆಯನ್ನು ನೆರವೇರಿಸಲಾಗಿದೆ ಎಂಬುದನ್ನು ಸಾಬೀತುಪಡಿಸುವ ಜವಾಬ್ದಾರಿ ‘ಧರ್ಮ ಗುರು’ವಿನ ಮೇಲಿದೆ. ಆದರೆ, ಅದನ್ನು ಸಾಬೀತುಪಡಿಸುವಲ್ಲಿ ಅವರು ವಿಫಲರಾಗಿರುವ ಕಾರಣ ಈ ಮದುವೆ ಅನೂರ್ಜಿತ’ ಎಂದು ತೀರ್ಪು ನೀಡಿದೆ.

ಮದುವೆಯು ವಿಧಿಬದ್ಧವಾಗಿ ನಡೆಯದೇ ಇರುವಾಗ ಆರ್ಯ ಸಮಾಜ ನೀಡಿರುವ ವಿವಾಹ ನೋಂದಣಿ ಪ್ರಮಾಣಪತ್ರಕ್ಕೆ ಯಾವುದೇ ಮಹತ್ವ ಇಲ್ಲ ಎಂದೂ ಹೈಕೋರ್ಟ್ ಹೇಳಿದೆ.

ನ್ಯಾಯಾಂಗ ವೇತನ ಆಯೋಗದ ಶಿಫಾರಸು ಜಾರಿ ವಿಳಂಬ; 16 ರಾಜ್ಯಗಳಿಗೆ ಸಮನ್ಸ್

ನವದೆಹಲಿ (ಪಿಟಿಐ): ನ್ಯಾಯಾಂಗ ಅಧಿಕಾರಿಗಳಿಗೆ ಪಿಂಚಣಿ, ನಿವೃತ್ತಿ ಸೌಲಭ್ಯಗಳ ಸಂಬಂಧ 2ನೇ ರಾಷ್ಟ್ರೀಯ ನ್ಯಾಯಾಂಗ ವೇತನ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸದ 16 ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆಯ ಕಾರ್ಯದರ್ಶಿಗಳಿಗೆ ಸುಪ್ರೀಂ ಕೋರ್ಟ್ ಸಮನ್ಸ್ ಜಾರಿ ಮಾಡಿದೆ.

ಶಿಫಾರಸುಗಳ ಜಾರಿಗೆ ನಿರಾಸಕ್ತಿ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ‘ಶಿಫಾರಸು ಮಾಡಿರುವ ಸೌಲಭ್ಯಗಳನ್ನು ಹೇಗೆ ಪಡೆಯಬೇಕು ಎಂಬುದು ನಮಗೆ ಗೊತ್ತಿದೆ’ ಎಂದು ಅಭಿಪ್ರಾಯ ವ್ಯಕ್ತಪಡಿಸಿತು.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ, ಮನೋಜ್ ಮಿಶ್ರಾ ಅವರಿದ್ದ ಪೀಠವು, ‘ನಾವು ಅವರನ್ನು (ಅಧಿಕಾರಿಗಳು) ಜೈಲಿಗೆ ಕಳುಹಿಸುತ್ತಿಲ್ಲ. ಅವರು ಖುದ್ದು ಹಾಜರಿದ್ದು ಪ್ರಮಾಣಪತ್ರ ಸಲ್ಲಿಸಲಿ. ರಾಜ್ಯಗಳಿಗೆ ಏಳು ಅವಕಾಶಗಳನ್ನು ನೀಡಲಾಗಿದ್ದರೂ ಹಲವು ರಾಜ್ಯಗಳು ಶಿಫಾರಸುಗಳನ್ನು ಜಾರಿಗೊಳಿಸಿಲ್ಲ’ ಎಂದು ಪೀಠ ಹೇಳಿತು.

ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ಛತ್ತೀಸಗಢ, ದೆಹಲಿ, ಅಸ್ಸಾಂ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಿಜೋರಾಂ, ಹಿಮಾಚಲ ಪ್ರದೇಶ, ಕೇರಳ, ಮೇಘಾಲಯ, ಮಧ್ಯಪ್ರದೇಶ, ತಮಿಳುನಾಡು, ಮಣಿಪುರ, ಒಡಿಶಾ, ರಾಜಸ್ಥಾನದ ರಾಜ್ಯಗಳ ಮುಖ್ಯ ಕಾರ್ಯದರ್ಶಿ ಮತ್ತು ಹಣಕಾಸು ಇಲಾಖೆಯ ಕಾರ್ಯದರ್ಶಿಗಳು ಖುದ್ದು ಆಗಸ್ಟ್ 23ರಂದು ಹಾಜರಾಗಬೇಕಾಗಿದೆ. ವಿಫಲವಾದಲ್ಲಿ ನ್ಯಾಯಾಂಗ ನಿಂದನೆ ಕ್ರಮ ಜರುಗಿಸಬೇಕಾಗುತ್ತದೆ ಎಂದು ಪೀಠ ಎಚ್ಚರಿಸಿತು.

ಬಣ್ಣದ ಕೊಡೆ

ಗುರುವಾರ ಮುಂಬೈನಲ್ಲಿ ಸುರಿದ ಮಳೆಯಿಂದ ರಕ್ಷಣೆ ಪಡೆಯಲು ಜನರು ಕೊಡೆ ಹಿಡಿದು ನಿಂತಿದ್ದರು – ಪಿಟಿಐ ಚಿತ್ರ

ಸಂಜಯ್ ಸಿಂಗ್‌ಗೆ ಜಾಮೀನು

ಸುಲ್ತಾನ್‌ಪುರ, ಉತ್ತರ ಪ್ರದೇಶ (ಪಿಟಿಐ): 2021ರಲ್ಲಿ ಕೋವಿಡ್ ನಿಯಮಗಳನ್ನು ಉಲ್ಲಂಘಿಸಿದ್ದ ಪ್ರಕರಣದಲ್ಲಿ ಎಎಪಿ ರಾಜ್ಯಸಭೆ ಸಂಸದ ಸಂಜಯ್ ಸಿಂಗ್ ಅವರಿಗೆ ಇಲ್ಲಿಯ ಜನಪ್ರತಿನಿಧಿ ನ್ಯಾಯಾಲಯವು ಗುರುವಾರ ಜಾಮೀನು ಮಂಜೂರು ಮಾಡಿತು.

ಜಿಲ್ಲಾ ಪಂಚಾಯತ್ ಚುನಾವಣೆ ವೇಳೆ ಹಸನ್‌ಪುರ ಗ್ರಾಮದ ಎಎಪಿ ಅಭ್ಯರ್ಥಿ ಸಲ್ಮಾ ಬೇಗಂ ಪರ ಪ್ರಚಾರ ನಡೆಸಿದ್ದ ಸಂಜಯ್ ಅವರು, ಕೋವಿಡ್ ನಿಯಮಗಳನ್ನು ಉಲ್ಲಂಘಿಸಿ ಸಭೆ ಆಯೋಜಿಸಿದ್ದರು ಎಂದು ಆರೋಪಿಸಿ 2021ರ ಏಪ್ರಿಲ್‌ನಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು.

ವಿಚಾರಣೆಗೆ ಹಾಜರಾಗುವಂತೆ ಅವರಿಗೆ ಹಲವಾರು ಬಾರಿ ಸಮನ್ಸ್ ನೀಡಿದ್ದರೂ ಅವರು ಹಾಜರಾಗಿರಲಿಲ್ಲ. ಆ ಬಳಿಕ, ಅವರ ವಿರುದ್ಧ ಜಾಮೀನು ರಹಿತ ವಾರಂಟ್ ಜಾರಿ ಮಾಡಲಾಗಿತ್ತು.

ಗುರುವಾರ ನ್ಯಾಯಾಲಯಕ್ಕೆ ಹಾಜರಾಗಿದ್ದ ಸಂಜಯ್ ಅವರಿಂದ ₹20 ಸಾವಿರ ಬಾಂಡ್ ಇರಿಸಿಕೊಂಡು ವಿಶೇಷ ಮ್ಯಾಜಿಸ್ಟ್ರೇಟ್ ಶುಭಂ ವರ್ಮ ಅವರು ಜಾಮೀನು ಮಂಜೂರು ಮಾಡಿದರು ಎಂದು ಅವರ ಪರ ವಕೀಲರು ತಿಳಿಸಿದರು.

ಪ್ರಕರಣದ ಮುಂದಿನ ವಿಚಾರಣೆಯನ್ನು ನ್ಯಾಯಾಲಯವು ಜುಲೈ15ಕ್ಕೆ ನಿಗದಿಪಡಿಸಲಾಗಿದೆ.

ಹಾಥರಸ್ ಕಾಲ್ತುಳಿತ: ಇಂದು ವಿಚಾರಣೆ

ನವದಹಲಿ (ಪಿಟಿಐ): ಉತ್ತರ ಪ್ರದೇಶದ ಹಾಥರಸ್‌ನಲ್ಲಿ 121 ಮಂದಿಯ ಸಾವಿಗೆ ಕಾರಣವಾದ ಕಾಲ್ತುಳಿತ ಘಟನೆ ಕುರಿತ ತನಿಖೆಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಐವರ ಸಮಿತಿ ರಚಿಸಬೇಕು ಎಂದು ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ನಡೆಸಲಿದೆ.

ಜುಲೈ 2ರಂದು ಸಂಭವಿಸಿದ ಹಾಥರಾಸ್ ಕಾಲ್ತುಳಿತ ಕುರಿತ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯ-ಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ-ಮತ್ತು ಮನೋಜ್ ಮಿಶ್ರಾ ಅವರಿರುವ ಪೀಠ ವಿಚಾರಣೆ ನಡೆಸಲಿದೆ.

ಅಹಮದಾಬಾದ್ ‘ನಕಲಿ ಆಸ್ಪತ್ರೆ’ಗೆ ಬೀಗ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ನಕಲಿ ಸರ್ಕಾರಿ ಕಚೇರಿ ಮತ್ತು ನಕಲಿ ಟೋಲ್ ಪ್ಲಾಜಾ ನಂತರ ಗುಜರಾತ್‌ನ ಅಹಮದಾಬಾದ್ ಜಿಲ್ಲೆಯಲ್ಲಿ ಇದೀಗ ‘ನಕಲಿ’ ಆಸ್ಪತ್ರೆಯೊಂದನ್ನು ಪತ್ತೆಹಚ್ಚಿ, ಬೀಗ ಜಡಿಯಲಾಗಿದೆ.

ಅಹಮದಾಬಾದ್‌ನ ಜಿಲ್ಲಾ ಆರೋಗ್ಯಾಧಿಕಾರಿ ನೇತೃತ್ವದ ಅಧಿಕಾರಿಗಳ ತಂಡವು ಬವ್ಲಾ ತಾಲ್ಲೂಕಿನ ‘ಅನನ್ಯಾ ಮಲ್ಟಿ ಸ್ಪೆಶಾಲಿಟಿ’ ಆಸ್ಪತ್ರೆಯ ಮೇಲೆ ದಾಳಿ ನಡೆಸಿದೆ. ಬೇರೆ ವೈದ್ಯರ ಹೆಸರಿನಲ್ಲಿ ನೋಂದಾಯಿಸಲಾಗಿರುವ ಆಸ್ಪತ್ರೆಯನ್ನು ‘ನಕಲಿ’ ವೈದ್ಯರ ತಂಡ ನಡೆಸುತ್ತಿರುವುದು ಕಂಡುಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆಸ್ಪತ್ರೆಯನ್ನು ಮೊಹರು ಮಾಡಲಾಗಿದ್ದು, ತನಿಖೆ ಮುಂದುವರಿದಿದೆ.

ಚರ್ಮ, ಇಎನ್‌ಟಿ, ಯುರಾಲಜಿ ಸೇರಿದಂತೆ ಒಟ್ಟು ಹತ್ತು ವಿಭಾಗಗಳು ಈ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು ಎಂದು ಮೂಲಗಳು ಹೇಳಿವೆ.

ಆಸ್ಪತ್ರೆಗೆ ಸಂಬಂಧಿಸಿದ ವಿಡಿಯೊವೊಂದು ಈಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಅದರ ಆಧಾರದಲ್ಲಿ ಕ್ರಮ ಕೈಗೊಳ್ಳಲಾಗಿದೆ. ಆಸ್ಪತ್ರೆಯಲ್ಲಿ ಮೃತಪಟ್ಟ ಬಾಲಕಿಯೊಬ್ಬಳ ಕುಟುಂಬದವರು ಈ ವಿಡಿಯೊ ಮಾಡಿದ್ದರು.

ಬಾಲಕಿಯನ್ನು ಆಸ್ಪತ್ರೆಗೆ ದಾಖಲಿಸಿದಾಗ ಆಕೆಯ ಆರೋಗ್ಯ ಸ್ಥಿತಿ ಗಂಭೀರವಾಗಿರಲಿಲ್ಲ ಎಂದು ಕುಟುಂಬದವರು ತಿಳಿಸಿದ್ದಾರೆ. ಆಸ್ಪತ್ರೆಗೆ ದಾಖಲಾದ ಬಳಿಕ ಆಕೆಯ ಸ್ಥಿತಿ ಹದಗೆಟ್ಟಿದೆ. ಬಾಲಕಿಯನ್ನು ಸಮೀಪದ ಸರ್ಕಾರಿ ಆಸ್ಪತ್ರೆಗೆ ದಾಖಲಿಸುವಂತೆ ಮೆಹುಲ್ ಎಂಬ ಹೆಸರಿನ ‘ನಕಲಿ’ ವೈದ್ಯ ಸೂಚಿಸಿದ್ದಾರೆ.

ಹಲವು ಬಾರಿ ಮನವಿ ಮಾಡಿದರೂ ಆಸ್ಪತ್ರೆಯವರು ಬಾಲಕಿಯ ವೈದ್ಯಕೀಯ ವರದಿಯನ್ನು ನೀಡಿಲ್ಲ. ಚಿಕಿತ್ಸೆಗೆ ₹1.5 ಲಕ್ಷ ಬಿಲ್ ಮಾಡಿದ್ದಾರೆ ಎಂದು ಕುಟುಂಬದ ಸದಸ್ಯರು ದೂರಿದ್ದಾರೆ.

ಸಂಕ್ಷಿಪ್ತ ಸುದ್ದಿ

ಇ.ಡಿ.ಗೆ ಉತ್ತರಿಸಲು ಕೇಜ್ರಿವಾಲ್‌ಗೆ ಮತ್ತೆ ಕಾಲಾವಕಾಶ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಜತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು ತಮಗೆ ನೀಡಿರುವ ಸಮನ್ಸ್‌ಗಳನ್ನು ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ದೆಹಲಿ ಹೈಕೋರ್ಟ್ ಸೆ.9 ರಂದು ನಡೆಸಲಿದೆ.

ನ್ಯಾಯಮೂರ್ತಿ ಪ್ರತಿಭಾ ಎಂ.ಸಿಂಗ್ ನೇತೃತ್ವದ ಪೀಠವು ಇ.ಡಿ ಸಲ್ಲಿಸಿರುವ ಉತ್ತರಕ್ಕೆ ಪ್ರತಿಕ್ರಿಯೆ ನೀಡಲು ಎಎಪಿ ನಾಯಕನಿಗೆ ಇನ್ನೂ ನಾಲ್ಕು ವಾರಗಳ ಕಾಲಾವಕಾಶ ನೀಡಿದೆ.

ಕೇಜ್ರಿವಾಲ್ ಪರ ವಾದ ಮಂಡಿಸಿದ ವಕೀಲರು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಸ್ಥಿತಿಯಲ್ಲಿ ಕೆಲವು ಬದಲಾವಣೆಗಳು ಉಂಟಾಗಿರುವುದರಿಂದ ಪ್ರತಿಕ್ರಿಯೆ ಸಲ್ಲಿಸಲು ಹೆಚ್ಚಿನ ಸಮಯ ನೀಡುವಂತೆ ಕೋರಿದರು.

ಸಿಸೋಡಿಯಾ ಅರ್ಜಿ ವಿಚಾರಣೆ: ಹಿಂದೆ ಸರಿದ ಜಡ್ಜ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣ ಸಂಬಂಧ ಬಂಧನದಲ್ಲಿರುವ ಎಎಪಿ ನಾಯಕ, ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರ ಜಾಮೀನು ಅರ್ಜಿಗಳ ವಿಚಾರಣೆಯಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಗುರುವಾರ ಹಿಂದೆ ಸರಿದಿದ್ದಾರೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಸಂಜಯ್ ಕರೋಲ್ ಹಾಗೂ ಸಂಜಯ್ ಕುಮಾರ್ ಅವರಿದ್ದ ಪೀಠವು ಈ ಅರ್ಜಿಯ ವಿಚಾರಣೆ ನಡೆಸುತ್ತಿತ್ತು. ಸಿಬಿಐ ಹಾಗೂ ಇ.ಡಿ ದಾಖಲಿಸಿರುವ ಪ್ರಕರಣಗಳಲ್ಲಿ ಸಿಸೋಡಿಯಾ ಅವರು ಜಾಮೀನು ಅರ್ಜಿಗಳನ್ನು ಸಲ್ಲಿಸಿದ್ದರು. ಈಗ ಈ ಅರ್ಜಿಗಳ ವಿಚಾರಣೆಯನ್ನು ಬೇರೊಂದು ಪೀಠ ನಡೆಸಲಿದೆ.

ವಿಚಾರಣೆಯು ಆರಂಭವಾ-ಗುತ್ತಿದ್ದಂತೆಯೇ ನ್ಯಾಯಮೂರ್ತಿ ಖನ್ನಾ ಅವರು, ‘ವೈಯಕ್ತಿಕ ಕಾರಣಗಳಿಂದ ಸಂಜಯ್ ಕುಮಾರ್ ಅವರು ಈ ವಿಚಾರಣೆಯಿಂದ ಹಿಂದೆ ಸರಿಯುತ್ತಿದ್ದಾರೆ’ ಎಂದರು.

‘ಮತ್ತೊಂದು ಪೀಠವು ಜುಲೈ 15ಕ್ಕೆ ಜಾಮೀನು ಅರ್ಜಿಗಳ ವಿಚಾರಣೆಯನ್ನು ನಡೆಸಲಿದೆ’ ಎಂದು ಪೀಠವು ಹೇಳಿತು.

ಯಾಸೀನ್ ವಿರುದ್ಧದ ಪ್ರಕರಣ: ಹಿಂದೆ ಸರಿದ ಜಡ್ಜ್

ನವದೆಹಲಿ (ಪಿಟಿಐ): ಪ್ರತ್ಯೇಕತಾವಾದಿ ನಾಯಕ ಯಾಸೀನ್ ಮಲಿಕ್‌ಗೆ ಉಗ್ರರಿಗೆ ಹಣಕಾಸಿನ ನೆರವು ನೀಡಿದ ಪ್ರಕರಣ-ದಲ್ಲಿ ಗಲ್ಲು ಶಿಕ್ಷೆ ವಿಧಿಸುವಂತೆ ಕೋರಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಸಲ್ಲಿಸಿದ್ದ ಅರ್ಜಿಯ ವಿಚಾರಣೆಯಿಂದ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಅಮಿತ್ ಶರ್ಮಾ ಅವರು ಗುರುವಾರ ಹಿಂದೆ ಸರಿದಿದ್ದಾರೆ.

ನ್ಯಾಯಮೂರ್ತಿ ಪ್ರತಿಭಾ ಸಿಂಗ್ ನೇತೃತ್ವದ ವಿಭಾಗೀಯ ಪೀಠವು ಈ ಅರ್ಜಿಯ ವಿಚಾರಣೆ ನಡೆಸುತ್ತಿತ್ತು. ಅಮಿತ್ ಶರ್ಮಾ ಹಿಂದೆ ಸರಿದ ಕಾರಣ ಮತ್ತೊಂದು ಪೀಠ ಆ.9ರಂದು ವಿಚಾರಣೆ ಕೈಗೆತ್ತಿಕೊಳ್ಳಲಿದೆ’ ಎಂದು ನ್ಯಾ. ಪ್ರತಿಭಾ ಸಿಂಗ್ ತಿಳಿಸಿದರು.

ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಶಿಪ್

ಬಸವನಗುಡಿ ಈಜು ಕೇಂದ್ರಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಬಸವನಗುಡಿ ಈಜು ಕೇಂದ್ರವು ಗುರುವಾರ ಮುಕ್ತಾಯವಾದ ಎನ್‌ಆರ್‌ಜೆ ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಒಟ್ಟು 1683 ಅಂಕಗಳೊಂದಿಗೆ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ಡಾಲ್ಫಿನ್ ಅಕ್ವಾಟಿಕ್ಸ್ (1023 ಅಂಕ) ರನ್ನರ್ಸ್ ಅಪ್ ಸ್ಥಾನ ಪಡೆಯಿತು.

ಗುಂಪು 1 ಮತ್ತು 2ರಲ್ಲಿ ಬಿಎಸಿ ಬಾಲಕರ ಮತ್ತು ಬಾಲಕಿಯರ ತಂಡಗಳು ಸಮಗ್ರ ಪ್ರಶಸ್ತಿ ಗೆದ್ದರೆ, ಗುಂಪು 3ರಲ್ಲಿ ಡಾಲ್ಫಿನ್ ಬಾಲಕರ ಮತ್ತು ಬಾಲಕಿಯರ ತಂಡಗಳು ಅಗ್ರಸ್ಥಾನ ಪಡೆದವು.

ಎಂಎಸ್‌ಸಿಯ ಚಿಂತನ್ ಎಸ್. ಶೆಟ್ಟಿ ಮತ್ತು ಬಿಎಸಿಯ ಎಸ್. ದರ್ಶನ್ ಅವರು ತಲಾ 30 ಅಂಕಗಳೊಂದಿಗೆ ಬಾಲಕರ (ಗುಂಪು 1ಎ) ವೈಯಕ್ತಿಕ ಪ್ರಶಸ್ತಿ ಹಂಚಿಕೊಂಡರು. ಡಾಲ್ಫಿನ್ ಅಕ್ವಾಟಿಕ್ಸ್‌ನ ಮಾನವಿ ವರ್ಮಾ 36 ಅಂಕಗಳೊಂದಿಗೆ ಬಾಲಕಿಯರ ಪ್ರಶಸ್ತಿ ಜಯಿಸಿದರು.

ಎನ್‌ಆರ್‌ಜೆ ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಪಡೆದ ಆತಿಥೇಯ ಬಸವನಗುಡಿ ಈಜು ಕೇಂದ್ರದ ತಂಡ –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಫಲಿತಾಂಶ: ಬಾಲಕರು: 12-14 ವರ್ಷ: 4x200 ಮೀ. ಫ್ರೀಸ್ಟೈಲ್ ರಿಲೆ: ಬಿಎಸಿ ತಂಡ ‘ಎ’ (8ನಿ. 51.72ಸೆ). 2ಎ: 400 ಮೀ. ಫ್ರೀಸ್ಟೈಲ್: ರಿಷಿತ್ ರಂಗನ್ (ಬಿಎಸಿ, 4ನಿ. 23.19ಸೆ). 2ಬಿ: 400 ಮೀ. ಫ್ರೀಸ್ಟೈಲ್: ಶರಣ್ ಎಸ್. (ಮತ್ಸ್ಯ, 4ನಿ.24.16ಸೆ). 2ಸಿ: 400 ಮೀ. ಫ್ರೀಸ್ಟೈಲ್: ಜಸ್ ಸಿಂಗ್ (ಎಸಿಇ, 4ನಿ.48.24ಸೆ). 2ಎ: 200 ಮೀ. ಬ್ರೆಸ್ಟ್ ಸ್ಟ್ರೋಕ್: ಯಶ್ ಎಚ್. ಪಾಲ್ (ಬಿಎಸಿ, 2 ನಿ. 38.89ಸೆ). 2ಬಿ: 200 ಮೀ. ಬ್ರೆಸ್ಟ್ ಸ್ಟ್ರೋಕ್: ಆರವ್ ಜೆ. (ಬಿಎಸಿ, 2ನಿ. 47.81ಸೆ). 2ಸಿ: 200ಮೀ ಬ್ರೆಸ್ಟ್ ಸ್ಟ್ರೋಕ್: ಚೇತನ್ ನಾಗರಾಜ ಗಣಪ (ಎನ್‌ಎಸಿ, 2 ನಿ. 49.86ಸೆ). 2ಎ: 100 ಮೀ. ಬಟರ್‌ಫ್ಲೈ: ಸಮರ್ಥ ಗೌಡ ಬಿ.ಎಸ್. (ಬಿಎಸಿ, 59.63ಸೆ). 2ಬಿ:100 ಮೀ. ಬಟರ್‌ಫ್ಲೈ: ಸುಬ್ರಹ್ಮಣ್ಯ ಜೀವಾಂಶ್ ಎಂ. (ಡಾಲ್ಫಿನ್, 1 ನಿ.04.74ಸೆ). 2ಸಿ: 100 ಮೀ. ಬಟರ್‌ಫ್ಲೈ: ವೇದಾಂತ್ ಮಿಸಾಲೆ (ಎಸ್‌ಸಿಬಿ, 1ನಿ.08.20ಸೆ). 2ಎ: 200 ಮೀ. ಬ್ಯಾಕ್‌ಸ್ಟ್ರೋಕ್: ಸಮರ್ಥ ಗೌಡ ಬಿ.ಎಸ್. (ಬಿಎಸಿ, 2ನಿ. 13.59ಸೆ). 2ಬಿ: 200 ಮೀ.ಬ್ಯಾಕ್‌ಸ್ಟ್ರೋಕ್: ಅದ್ವೈತ ವಿ.ಎಂ. (ಬಿಎಸಿ, 2ನಿ.22.37ಸೆ). 2ಸಿ: 200 ಮೀ. ಬ್ಯಾಕ್‌ಸ್ಟ್ರೋಕ್: ಕ್ರಿಶ್ ಎಸ್. (ಬಿಎಸಿ, 2ನಿ.37.32ಸೆ). 2ಎ: 50 ಮೀ. ಫ್ರೀಸ್ಟೈಲ್: ವೇದಾಂತ್ ಮೆಹ್ರಾ (ಡಾಲ್ಫಿನ್, 26.63ಸೆ). 2ಬಿ: 50 ಮೀ. ಫ್ರೀಸ್ಟೈಲ್: ಗರಪತಿ ಭಾರದ್ವಾಜ್ (ಗೋಲ್ಡನ್, 27.83ಸೆ). 2ಸಿ: 50 ಮೀ. ಫ್ರೀಸ್ಟೈಲ್: ನಿಖಿಲ್ ತೇಜ್ ರೆಡ್ಡಿ (ಬಿಎಸಿ, 29.30ಸೆ).

ಬಾಲಕಿಯರು: 12-14 ವರ್ಷ: 4x200 ಮೀ. ಫ್ರೀಸ್ಟೈಲ್ ರಿಲೆ: ಬಿಎಸಿ ತಂಡ ‘ಎ’ (9ನಿ.36.71ಸೆ). 2ಎ: 400 ಮೀ.ಫ್ರೀಸ್ಟೈಲ್: ನೈಶಾ (ಬಿಎಸಿ, 4 ನಿ.43.52ಸೆ). 2ಬಿ: 400 ಮೀ. ಫ್ರೀಸ್ಟೈಲ್: ಮೀರಾ ನಂಬಿಯಾರ್ (ಡಾಲ್ಫಿನ್ (5ನಿ. 05.16ಸೆ). 2ಸಿ: 400 ಮೀ. ಫ್ರೀಸ್ಟೈಲ್: ಸುಮನ್ವಿ ವಿ. (ಡಿಕೆವಿ, 5ನಿ.01. 29ಸೆ). 2ಎ: 200 ಮೀ. ಬ್ರೆಸ್ಟ್ ಸ್ಟ್ರೋಕ್: ಟಿಸ್ಯಾ ಸೋನಾರ್ (ಮತ್ಸ್ಯ, 2ನಿ.56.22ಸೆ). 2ಬಿ: 200 ಮೀ. ಬ್ರೆಸ್ಟ್ ಸ್ಟ್ರೋಕ್: ಸ್ಪರ್ಶಾ ಎಸ್. ಹರೀಶ (ಮತ್ಸ್ಯ, 3ನಿ.08.12ಸೆ). 2ಸಿ: 200 ಮೀ. ಬ್ರೆಸ್ಟ್ ಸ್ಟ್ರೋಕ್: ಮಾನ್ಯಾ ಆರ್. ವಾಧ್ವಾ (ಪಿಎಂಎಸ್‌ಸಿ, 3ನಿ.05. 06ಸೆ). 2ಎ: 100 ಮೀ. ಬಟರ್‌ಫ್ಲೈ: ಟಿಸ್ಯಾ ಸೋನಾರ್ (ಮತ್ಸ್ಯ;1ನಿ.11.03ಸೆ). 2ಬಿ: 100 ಮೀ. ಬಟರ್‌ಫ್ಲೈ: ತ್ರಿಷಾ ಸಿಂಧು (ಗ್ಲೋಬಲ್, 1ನಿ.08.98ಸೆ). 2ಸಿ: 100 ಮೀ. ಬಟರ್‌ಫ್ಲೈ: ಮಾನ್ಯಾ ಆರ್. ವಾಧ್ವಾ (ಪಿಎಂಎಸ್‌ಸಿ, 1ನಿ.13.01ಸೆ). 2ಎ: 200 ಮೀ.ಬ್ಯಾಕ್‌ಸ್ಟ್ರೋಕ್: ನೈಶಾ (ಬಿಎಸಿ, 2 ನಿ.26.06ಸೆ). 2ಬಿ: 200 ಮೀ. ಬ್ಯಾಕ್‌ಸ್ಟ್ರೋಕ್: ಮೀರಾ ನಂಬಿಯಾರ್ (ಡಾಲ್ಫಿನ್ (2ನಿ.38.47ಸೆ). 2ಸಿ: 200 ಮೀ. ಬ್ಯಾಕ್‌ಸ್ಟ್ರೋಕ್: ಸುಮೇಧಾ ವಿ. (ಡಿಕೆವಿ, 2ನಿ.40.14ಸೆ). 2ಎ: 50 ಮೀ.ಫ್ರೀಸ್ಟೈಲ್: ಫಣೀಂದ್ರನಾಥ ಚರಿತಾ (ಎಲೀಟ್, 28.03ಸೆ). 2ಬಿ: 50 ಮೀ.ಫ್ರೀಸ್ಟೈಲ್: ತ್ರಿಷಾ ಸಿಂಧು (ಗ್ಲೋಬಲ್, 29.10ಸೆ). 2ಸಿ: 50 ಮೀ.ಫ್ರೀಸ್ಟೈಲ್: ಔನಾ ಪಿ. ಆಳ್ವ (ಬಿಎಸ್‌ಎ, 30.57ಸೆ).

ತಂಡ ಚಾಂಪಿಯನ್‌ಶಿಪ್: ಬಾಲಕರು: ಗುಂಪು 1: ಬಿಎಸಿ (411). ಗುಂಪು 2: ಬಿಎಸಿ (232). ಗುಂಪು 3: ಡಾಲ್ಫಿನ್ (106). **ಬಾಲಕಿಯರು:** ಗುಂಪು 1: ಬಿಎಸಿ (389). ಗುಂಪು 2: ಬಿಎಸಿ (465). ಗುಂಪು 3: ಡಾಲ್ಫಿನ್ (125).

ವೈಯಕ್ತಿಕ ಚಾಂಪಿಯನ್‌ಶಿಪ್: ಬಾಲಕರು: ಗುಂಪು 1ಎ: ಚಿಂತನ್ ಎಸ್. ಶೆಟ್ಟಿ (ಎಂಎಸ್‌ಸಿ, 30 ಅಂಕ), ಎಸ್. ದರ್ಶನ್ (ಬಿಎಸಿ, 30). ಗುಂಪು 1ಬಿ: ಮೊನೀಶ್ ಪಿ.ವಿ. (ಬಿಎಸಿ, 35). 2ಎ: ಸಮರ್ಥ ಗೌಡ (ಬಿಎಸಿ, 50). 2ಬಿ: ಶರಣ್ ಎಸ್. (ಮತ್ಸ್ಯ, 35), 2ಸಿ: ಜಸ್ ಸಿಂಗ್ (ಎಸಿಇ, 35). **ಬಾಲಕಿಯರು:** ಗುಂಪು 1ಎ: ಮಾನವಿ ವರ್ಮಾ (ಡಾಲ್ಫಿನ್, 36). 1ಬಿ: ಶ್ರೀ ಚರಣಿ ತುಮು (ಗ್ಲೋಬಲ್, 40). 2ಎ: ನೈಶಾ (ಎನ್‌ಎಸಿ, 40). 2ಬಿ: ತ್ರಿಶಾ ಸಿಂಧು (ಗ್ಲೋಬಲ್, 35). ಮಾನ್ಯಾ ಆರ್. ವಾಧ್ವಾ (ಪಿಎಂಎಸ್‌ಸಿ, 33).

ಸೇರ್ಪಡೆಗೆ ಮುನ್ನವೇ ಸೌಲಭ್ಯಕ್ಕೆ ಬೇಡಿಕೆ

ವಿವಾದಿತ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ವರ್ಗಾವಣೆ

ಪ್ರಜಾವಾಣಿ ವಾರ್ತೆ

ತನಿಖೆಗೆ ಏಕಸದಸ್ಯ ಸಮಿತಿ

2023ನೇ ಕೇಡರ್‌ನ ಐಎಎಸ್ ಪ್ರೊಬೇಷನರಿ ಅಧಿಕಾರಿ ಡಾ.ಪೂಜಾ ಖೇಡ್ಕರ್ ಅವರ ಪ್ರಕರಣದ ತನಿಖೆಗಾಗಿ ಕೇಂದ್ರ ಸರ್ಕಾರ ಏಕ ಸದಸ್ಯ ಸಮಿತಿಯನ್ನು ರಚಿಸಿದೆ. ಕೇಂದ್ರ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ದರ್ಜೆಯ ಅಧಿಕಾರಿ ನೇತೃತ್ವದ ಸಮಿತಿಯು, ಪೂಜಾ ವಿರುದ್ಧ ಕೇಳಿಬಂದಿರುವ ಆರೋಪಗಳ ಕುರಿತು ತನಿಖೆ ನಡೆಸಲಿದೆ. ಸಮಿತಿ ಎರಡು ವಾರದಲ್ಲಿ ವರದಿಯನ್ನು ಸಲ್ಲಿಸಲಿದೆ.

ಮುಂಬೈ: ವಿವಾದಿತ ಐಎಎಸ್ ಪ್ರೊಬೇಷನರಿ ಅಧಿಕಾರಿ ಡಾ.ಪೂಜಾ ಖೇಡ್ಕರ್ ಅವರನ್ನು ಪುಣೆಯಿಂದ ವರ್ಗಾವಣೆ ಮಾಡಿದ್ದು, ಗುರುವಾರ ವಾಶೀಂನಲ್ಲಿ ಸಹಾಯಕ ಜಿಲ್ಲಾಧಿಕಾರಿ ಆಗಿ ಅಧಿಕಾರ ವಹಿಸಿಕೊಂಡರು.

ನಕಲಿ ಜಾತಿ ಪ್ರಮಾಣಪತ್ರ ಸಲ್ಲಿಕೆ ಆರೋಪ, ಸೌಲಭ್ಯಗಳ ದುರ್ಬಳಕೆ ಕುರಿತ ನಡೆಯಿಂದ ವಿವಾದಕ್ಕೆ ಒಳಗಾಗಿದ್ದ ಪೂಜಾ, 2023ನೇ ಬ್ಯಾಚ್‌ನ ಅಧಿಕಾರಿ. ಯುಪಿಎಸ್‌ಸಿ ಪರೀಕ್ಷೆಯಲ್ಲಿ 821ನೇ ರ್‍ಯಾಂಕ್ ಗಳಿಸಿದ್ದರು.

ಪ್ರೊಬೇಷನರಿ ಅಧಿಕಾರಿ ವಿರುದ್ಧದ ಪ್ರಕರಣವನ್ನು ಮಹಾರಾಷ್ಟ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಇನ್ನೊಂದೆಡೆ, ಪ್ರಧಾನಮಂತ್ರಿಯವರ ಸಚಿವಾಲಯ ಮತ್ತು ಕೇಂದ್ರ ಆಡಳಿತ ಸೇವೆಯ ಅಧಿಕಾರಿಗಳಿಗೆ ತರಬೇತಿ ನೀಡುವ ಮಸ್ಸೂರಿಯಲ್ಲಿರುವ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ಅಕಾಡೆಮಿಯ ವರದಿಯನ್ನು ಕೇಳಿವೆ.

ಒಬಿಸಿ ಮತ್ತು ಭಾಗಶಃ ಅಂಗವೈಕಲ್ಯ (ಪಿಡಬ್ಲ್ಯುಬಿಡಿ) ಕೋಟಾದಡಿ ಡಾ.ಪೂಜಾ ಖೇಡ್ಕರ್ ಐಎಎಸ್ ಹುದ್ದೆಗೆ ಆಯ್ಕೆ ಯಾಗಿದ್ದರು. ಇವರ ತಂದೆ ದಿಲೀಪ್ ಖೇಡ್ಕರ್ ಅವರು ಮಹಾರಾಷ್ಟ್ರ ಸರ್ಕಾರದ ನಿವೃತ್ತ ಅಧಿಕಾರಿ.

ದಿಲೀಪ್ ಖೇಡ್ಕರ್ ಅವರು ವಂಚಿತ ಬಹುಜನ ಅಘಾಡಿ ಪಕ್ಷದ ಅಭ್ಯರ್ಥಿಯಾಗಿ ಮಹಾರಾಷ್ಟ್ರದ ಅಹ್ಮದ್‌ನಗರ ಕ್ಷೇತ್ರದಿಂದ ಲೋಕಸಭೆ ಚುನಾವಣೆಗೂ ಇತ್ತೀಚೆಗೆ ಸ್ಪರ್ಧಿಸಿದ್ದರು.

ತಮ್ಮ ನೇಮಕಕ್ಕೆ ಸಂಬಂಧಿಸಿದಂತೆ ಎದ್ದಿರುವ ವಿವಾದ ಕುರಿತು ಪ್ರತಿಕ್ರಿಯಿಸಲು ಡಾ.ಪೂಜಾ ಗುರುವಾರ ನಿರಾಕರಿಸಿದರು. ವಾಶೀಂನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರಿಗೆ ಅವರು, ‘ಈ ವಿಷಯ ಕುರಿತು ಮಾತನಾಡುವ ಅಧಿಕಾರ ನನಗಿಲ್ಲ’ ಎಂದಷ್ಟೇ ಪ್ರತಿಕ್ರಿಯಿಸಿದರು.

ಆರ್‌ಟಿಐ ಕಾರ್ಯಕರ್ತ ವಿಜಯ್ ಕುಂಭಾರ್, ಡಾ. ಪೂಜಾ ವಿರುದ್ಧ ಹಲವು ಆರೋಪ ಮಾಡಿದ್ದರು. ವಿವಾದವು ಜಟಿಲಗೊಂಡಂತೆ ಪುಣೆಯ ಪೊಲೀಸ್ ಕಮಿಷನರ್ ಅಮಿತೇಶ್ ಕುಮಾರ್ ಅವರು, ಕ್ರಮ ಜರುಗಿಸುವ ಭರವಸೆ ನೀಡಿದ್ದರು.ಪುಣೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಮೊದಲೇ ಪ್ರತ್ಯೇಕ ಕ್ಯಾಬಿನ್ ಬೇಕು, ಸಿಬ್ಬಂದಿ ನಿಯೋಜಿಸಬೇಕು ಎಂದು ಒತ್ತಾಯಿಸಿದ್ದರು ಎಂಬ ಆರೋಪವೂ ಪೂಜಾ ವಿರುದ್ಧ ಕೇಳಿಬಂದಿತ್ತು.

ಅಪರ ಪ್ರಾದೇಶಿಕ ಆಯುಕ್ತರು ಹಾಗೂ ಸಕ್ಷಮ ಪ್ರಾಧಿಕಾರಿಗಳು

ಪ್ರಾದೇಶಿಕ ಆಯುಕ್ತರ ಕಛೇರಿ. 2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು–27

ದೂ: 080 080- 22109670 ಇ–ಮೇಲ್: : rcb27bangalore@gmail.com

ಸಂಖ್ಯೆ: ಕೆ.ಪಿ.ಐ.ಡಿ/ಸಿ.ಎ/ಎಸ್.ಎಮ್.ಎನ್/09/2023–24 ದಿನಾಂಕ: 11–07–2024

ಸಾರ್ವಜನಿಕ ಪ್ರಕಟಣೆ

“ಎಸ್.ಎಮ್.ಎನ್. ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ವಿಜಯಪುರ” ದೂಷಿತ ಸಂಸ್ಥೆಯ ಠೇವಣಿದಾರರು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ (ಕೆ.ಪಿ.ಐ.ಡಿ.ಎಫ್.ಇ) ಕಾಯ್ದೆ 2004 ರ ಕಲಂ 7(2) ರ ಅನ್ವಯ ಠೇವಣಿದಾರರಿಂದ ಕ್ಲೇಮ್ ಅರ್ಜಿಗಳನ್ನು ಆಹ್ವಾನಿಸಲು ಸಾರ್ವಜನಿಕ ತಿಳುವಳಿಕೆ.

ಕ್ಲೇಮ್ ಅರ್ಜಿಗಳನ್ನು **ಮಹಾನಗರ ಪಾಲಿಕೆ ವಿಜಯಪುರ, ಹಳೇ ಕಟ್ಟಡ ಜಲನಗರ, ಬಾಗಲಕೋಟ ರಸ್ತೆ, ವಿಜಯಪುರ.** ಕಛೇರಿಯಲ್ಲಿ ಠೇವಣಿದಾರರು/ಅಧಿಕೃತ ಪ್ರತಿನಿಧಿ/ನಾಮಿನಿದಾರರಿಗೆ ವಿತರಿಸಲಾಗುವುದು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಅಧಿಕೃತ ಗುರುತಿನ ಚೀಟಿ ಹಾಗೂ ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್/ಎಂ.ಓ.ಯು) ಮತ್ತು ಅಧಿಕೃತ ಪತ್ರ /ಪಿ.ಒ.ಎ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿ ಕ್ಲೇಮ್ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ.

ಕ್ಲೇಮ್ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ:	22-07-2024	10:00 A.M
ಕ್ಲೇಮ್ ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ	21-08-2024	05:30 P.M

ಹಾಜರು ಪಡಿಸಬೇಕಾದ ದಾಖಲೆಗಳು: 1. ಮೂಲ ಐಡಿ–ಆಧಾರ್, ಪ್ಯಾನ್/ಎಪಿಕ್(EPIC) ಹಾಗೂ ನಕಲು ಪ್ರತಿಗಳು ದೃಢೀಕರಣಕ್ಕಾಗಿ. 2. ಬ್ಯಾಂಕ್ ಮ್ಯಾನೇಜರ್‌ನಿಂದ ದೃಢೀಕರಿಸಿದ ಪಾಸ್ ಬುಕ್ ಪ್ರತಿಗಳು ಹೂಡಿಕೆಯ 2 ತಿಂಗಳ ಮುಂಚಿತವಾಗಿನಿಂದ ಇಲ್ಲಿಯವರಿಗೆ. 3. KYC ಮಾಹಿತಿಯು ನಮೂದಾಗಿರುವ ಪಾಸ್‌ಬುಕ್‌ನ ಮುಖ ಪುಟದ ಪ್ರತಿ. 4. ಮೂಲ ಬಾಂಡ್‌ಗಳು/ಒಪ್ಪಂದಗಳು / ನೋಟರೈಸ್ಡ್ ಅಫಿಡವಿಟ್‌ಗಳು/ಕಂಪನಿಯಿಂದ ಪಡೆದ ಇತರೆ ದಾಖಲೆಗಳನ್ನು ಸಲ್ಲಿಸತಕ್ಕದ್ದು. 5. ಅಧಿಕೃತ ಪ್ರತಿನಿಧಿಯಾಗಿದ್ದಲ್ಲಿ ಜನರಲ್ ಪವರ್ ಆಫ್ ಅಟಾರ್ನಿ ಮತ್ತು ಶಾಸನಾತ್ಮಕ ಮೂಲ ದಾಖಲೆಗಳನ್ನು ಹಾಜರುಪಡಿಸಬೇಕು. 6. ದೃಢೀಕರಿಸಿದ ಸ್ಪಷ್ಟವಾದ ಜೆರಾಕ್ಸ್ ಪ್ರತಿಯನ್ನು ಒದಗಿಸಬೇಕು ಅಥವಾ ಸಂಬಂಧಪಟ್ಟ ಅಧಿಕಾರಿಯಿಂದ ದೃಢೀಕರಣಕ್ಕಾಗಿ ಮೂಲವನ್ನು ಜೆರಾಕ್ಸ್ ಪ್ರತಿಯೊಂದಿಗೆ ಒದಗಿಸಬೇಕು. Scans/WhatsApp ನಕಲುಗಳನ್ನು ಸ್ವೀಕರಿಸುವುದಿಲ್ಲ. 7. ದೂಷಿತ ಸಂಸ್ಥೆಯಿಂದ ನೀಡಿರುವ ಪಾಸ್ ಪುಸ್ತಕ

ಠೇವಣಿದಾರರು ಮರಣ ಹೊಂದಿದ್ದರೆ ಅಥವಾ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಅವರ ನಾಮ ನಿರ್ದೇಶಿತರು/ವಾರಸುದಾರರು ಅರ್ಜಿ ಸಲ್ಲಿಸುವಾಗ ಅದಕ್ಕೆ ಪುರಾವೆಯಾಗಿರುವ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ

ಕ್ರಮ ಸಂ.	ಠೇವಣಿದಾರರು/ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಠೇವಣಿದಾರರು (Depositors)	ಠೇವಣಿದಾರರು ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿ/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2	ನಾಮಿನಿದಾರರು (Nominees)	1. ಠೇವಣಿದಾರರ ಮರಣ ಪ್ರಮಾಣ ಪತ್ರ. 2. ವಂಶವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು). 3. ನಾಮಿನಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
3	ವಾರಸುದಾರರು (Legal heirs)	1. ಠೇವಣಿದಾರರ ಮರಣ ಪ್ರಮಾಣ ಪತ್ರ 2. ವಂಶ ವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು) 3. ನಿರ್ದಿಷ್ಟ ನಾಮಿನಿ (Nominee)ರವರ ಮರಣ ಪ್ರಮಾಣ ಪತ್ರ 4. ವಾರಸುದಾರರ ಪ್ರಮಾಣ ಪತ್ರ – ನ್ಯಾಯಾಲಯದ ಆದೇಶ 5. ವಾರಸುದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. 6. ಉಳಿದ ವಾರಸುದಾರಿಂದ ಅನುಮತಿ ಪತ್ರ (*Authorization from other legal heirs*)
4	ಪವರ್ ಆಫ್ ಅಟಾರ್ನಿ (Power of Attorney)	1. ಠೇವಣಿದಾರರು ಆಸ್ಪತ್ರೆಗೆ ದಾಖಲಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳು.(ಗಂಭೀರ ಆರೋಗ್ಯ ಸಮಸ್ಯೆ ಇರುವವರು). ವೈಧ್ಯಾಧಿಕಾರಿಗಳಿಂದ ವರದಿ ಪಡೆದು ಸಲ್ಲಿಸುವುದು. 2. ಹೊರ ದೇಶದಲ್ಲಿ ವಾಸಿಸುತ್ತಿರುವವರು Apostilled copy of citizen card+Passport 3. ಮೇಲಿನ ಕ್ರ. ಸಂ. 1 ಮತ್ತು 2 ಕ್ಕೆ ಸಂಬಂಧಪಟ್ಟವರು ಕಡ್ಡಾಯವಾಗಿ ವಕೀಲರಿಂದ Notarized Power of Attorney certificate ಸಲ್ಲಿಸತಕ್ಕದ್ದು. 4. **PoA**. ಹೊಂದಿರುವವರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
5	ಅಪ್ರಾಪ್ತ ಗಾರ್ಡಿಯನ್ (ಪೋಷಕರು)	1. ಠೇವಣಿದಾರರ ಮರಣ ಪತ್ರ. 2. ನಾಮಿನಿದಾರರ ಮರಣ ಪತ್ರ 3. ಗಾರ್ಡಿಯನ್ ನೇಮಕದ ದಾಖಲೆ. 4. ಸ್ವಯಂ ದೃಢೀಕೃತ ದಾಖಲೆ

ಕ್ಲೇಮು ಅರ್ಜಿಯನ್ನು ಸಲ್ಲಿಸುವ ಅರ್ಜಿದಾರರು ಪ್ರತಿ ಕಂಪನಿಯ ಹೂಡಿಕೆಗೆ ಸಂಬಂಧಿಸಿದ ಈ ಕೆಳಕಂಡ ಎಲ್ಲಾ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.

ಕ್ರ. ಸಂ.	ಠೇವಣಿದಾರರು/ ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಉಳಿತಾಯ ಠೇವಣಿಗಳು (Savings Deposit)	1.ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟದ (Front page) ನಕಲು. 2.ಬಾಂಡ್ ಪ್ರಮಾಣ ಪತ್ರ/ನಿಶ್ಚಿತ ಠೇವಣಿ ಪ್ರಮಾಣ ಪತ್ರ/ಇತರೆ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ(Transaction statement page in passbook of claimed amount) * ಠೇವಣಿದಾರರು/ನಾಮಿನಿದಾರರು/ವಾರಸುದಾರರು/**PoA**.ದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2	ನಿಶ್ಚಿತ ಠೇವಣಿಗಳು (Fixed Deposit other related Schemes)	1.ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟದ (Front page) ನಕಲು. 2.ಬಾಂಡ್ ಪ್ರಮಾಣ ಪತ್ರ/ನಿಶ್ಚಿತ ಠೇವಣಿ ಪ್ರಮಾಣ ಪತ್ರ/ಇತರೆ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ(Transaction statement page in passbook of claimed amount) * ಠೇವಣಿದಾರರು/ನಾಮಿನಿದಾರರು/ವಾರಸುದಾರರು/**PoA**.ದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
3	ಆವರ್ತ ಠೇವಣಿ (Recurring Deposit)	1. ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟದ (Front page) ನಕಲು 2. ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ(Transaction statement page in passbook of claimed amount) *ಠೇವಣಿದಾರರು/ನಾಮಿನಿದಾರರು/ವಾರಸುದಾರರು/**PoA**ದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
4	ಪೂರಕ ದಾಖಲೆಗಳು (Supporting documents)	1. ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟದ (Front page) ನಕಲು 2.ಠೇವಣಿದಾರರ ಹೆಸರು ನಮೂದಿಸಿ ರದ್ದು ಮಾಡಿರುವ ಚೆಕ್ ಪ್ರತಿ (Cancelled Cheque leaf) *ಠೇವಣಿದಾರರು/ನಾಮಿನಿದಾರರು/ವಾರಸುದಾರರು/**PoA**ದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
5	ಸಮೃದ್ಧಿ ಕ್ಯಾಶ್ ಸರ್ಟಿಫಿಕೇಟ್ & ಶ್ರೀ ಹರಿಪ್ರಿಯಾ ಕ್ಯಾಶ್ ಸರ್ಟಿಫಿಕೇಟ್ (Haripriya Cash Certificates & Samrudhi Cash Certificates)	1.ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟದ (Front page) ನಕಲು. 2.ಬಾಂಡ್ ಪ್ರಮಾಣ ಪತ್ರ/ನಿಶ್ಚಿತ ಠೇವಣಿ ಪ್ರಮಾಣ ಪತ್ರ/ಇತರೆ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ(Transaction statement page in passbook of claimed amount) * ಠೇವಣಿದಾರರು/ನಾಮಿನಿದಾರರು/ವಾರಸುದಾರರು/**PoA**.ದಾರರು ಮೇಲಿನ ದಾಖಲೆಗಳನ್ನು ನೋಟರಿ//ಪತ್ರಾಂಕಿತ ಅಧಿಕಾರಿಗಳು /ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

- ಕೆ.ಪಿ.ಐ.ಡಿ.ಎಫ್.ಇ ಕಾಯ್ದೆಯ ಕಲಂ 7(3)ರ ಅನ್ವಯ ಕ್ಲೇಮ್ ಅರ್ಜಿ ಸಲ್ಲಿಸುವುದಕ್ಕೆ ನಿಗದಿಪಡಿಸಿರುವ ಕಡೆಯ ದಿನಾಂಕದ ನಂತರ ಬರುವ ಯಾವುದೇ ಅರ್ಜಿಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಸ್ವೀಕರಿಸಲಾಗುವುದಿಲ್ಲ.
- ಸುಳ್ಳು ದಾಖಲೆಗಳ, ಆಧಾರವಿಲ್ಲದ ಸ್ವಯಂ–ಸೃಷ್ಟಿತ ಅರ್ಜಿಗಳನ್ನು ಸಲ್ಲಿಸಿದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದರೊಂದಿಗೆ ಅಂತಹ ಅರ್ಜಿದಾರರುಗಳ ವಿರುದ್ಧ ನಿಯಮಾನುಸಾರ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗುವುದು.
- ಅರ್ಜಿಗಳನ್ನು ಸಲ್ಲಿಸುವ ವಿಧಾನಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಅರ್ಜಿದಾರರು **ಅಪರ ಪ್ರಾದೇಶಿಕ ಆಯುಕ್ತರು ಹಾಗೂ ಸಕ್ಷಮ ಪ್ರಾಧಿಕಾರಿಗಳು, ಪ್ರಾದೇಶಿಕ ಆಯುಕ್ತರ ಕಛೇರಿ, 2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು–560027** ಕಛೇರಿಗೆ ಭೇಟಿ ನೀಡಿ ಅಥವಾ **rcb.karnataka.gov.in/ sploca.karnataka.gov.in** ವೆಬ್ ಸೈಟ್‌ನಿಂದ ಮಾಹಿತಿಯನ್ನು ಪಡೆಯುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ :080–22109670 ಯನ್ನು ಪೂರ್ವಾಹ್ನ 10.30 ರಿಂದ ಅಪರಾಹ್ನ 05.30ರವರೆಗೆ ಸಂಪರ್ಕಿಸಲು ಅವಕಾಶವಿರುತ್ತದೆ.
- ಅರ್ಜಿದಾರರು **“ಎಸ್.ಎಮ್.ಎನ್. ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ವಿಜಯಪುರ”** ಇದರಲ್ಲಿ ಒಂದಕ್ಕಿಂತ ಹೆಚ್ಚು ಹೂಡಿಕೆ ಮಾಡಿದ್ದಲ್ಲಿ, ಕಡ್ಡಾಯವಾಗಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಸಹಿ/–
ಸಕ್ಷಮ ಪ್ರಾಧಿಕಾರಿಗಳು,
ಎಸ್.ಎಮ್.ಎನ್. ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ವಿಜಯಪುರ
ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು

ವಾಸಾಸಂಇ/ವಾಪ್ರ/898/ಎಂಎಎ/24–25

ವಿಂಬಲ್ಡನ್: ಅತಿ ದೀರ್ಘಾವಧಿಯ ಮಹಿಳಾ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಸೋತ ವೆಕಿಚ್

ಫೈನಲ್‌ಗೆ ಪಾವೊಲಿನಿ, ಬಾರ್ಬೊರಾ

ಲಂಡನ್ (ರಾಯಿಟರ್ಸ್): ಏಳನೇ ಶ್ರೇಯಾಂಕದ ಜಾಸ್ಮಿನ್ ಪಾವೊಲಿನಿ ಅವರು ಆಲ್ ಇಂಗ್ಲೆಂಡ್ ಕ್ಲಬ್ ಇತಿಹಾಸದಲ್ಲೇ ನಡೆದ ದೀರ್ಘಾವಧಿಯ ಮಹಿಳಾ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ 2–6, 6–4, 7–6 (8) ರಿಂದ ಕ್ರೊವೇಷ್ಯಾದ ಡೊನಾ ವೆಕಿಚ್ ಅವರನ್ನು ಸೋಲಿಸಿದರು. ವಿಂಬಲ್ಡನ್ ಫೈನಲ್ ತಲುಪಿದ ಇಟಲಿಯ ಮೊದಲ ಆಟಗಾರ್ತಿ ಎಂಬ ಶ್ರೇಯವೂ ಜಾಸ್ಮಿನ್ ಅವರದಾಯಿತು.

ಫೈನಲ್‌ನಲ್ಲಿ ಸ್ಥಾನ ಪಡೆಯಲು ಇಬ್ಬರ ನಡುವೆ ನಡೆದ ತೀವ್ರ ಹಣಾಹಣಿ ಪ್ರೇಕ್ಷಕರಿಗೆ ರಸದೌತಣ ನೀಡಿತು. 28 ವರ್ಷದ ಆಟಗಾರ್ತಿಯರಿಬ್ಬರು ಇಲ್ಲಿ ಹಿಂದೆಂದೂ ಈ ಹಂತಕ್ಕೆ ತಲುಪಿರಲಿಲ್ಲ.

ವೆಕಿಚ್ ಅವರಿಗೆ ಇದು ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಮೊದಲ ಸೆಮಿಫೈನಲ್. ಪಾವೊಲಿನಿ ಈ ಹಿಂದಿನ ವರ್ಷಗಳಲ್ಲಿ ಹುಲ್ಲಿನಂಕಣದಲ್ಲಿ ಒಂದೂ ಪಂದ್ಯ ಗೆದ್ದಿರಲಿಲ್ಲ. ಆದರೆ ಪಾವೊಲಿನಿ ಅವರಿಗೆ ಇದು ಸತತ ಎರಡನೇ ಗ್ರ್ಯಾನ್‌ಸ್ಲಾಮ್ ಫೈನಲ್. ಕಳೆದ ತಿಂಗಳು ಫ್ರೆಂಚ್ ಓಪನ್‌ನಲ್ಲೂ ಫೈನಲ್ ತಲುಪಿದ್ದರು.

ಗ್ರೌಂಡ್‌ಸ್ಟ್ರೋಕ್ ಮತ್ತು 'ಡ್ರಾಪ್ ಶಾಟ್'ಗಳ ಮಿಶ್ರಣದ ಮೂಲಕ ಕ್ರೊವೇಷ್ಯಾ ಆಟಗಾರ್ತಿ ಹೆಚ್ಚೇನೂ ಪ್ರಯಾಸವಿಲ್ಲದೇ ಮೊದಲ ಸೆಟ್ ತಮ್ಮದಾಗಿಸಿಕೊಂಡರು. ಐದು ಮತ್ತು ಏಳನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ್ದರು.

ಆದರೆ ಪಾವೊಲಿನಿ ಪ್ರೇಕ್ಷಕರ ಗುಂಪಿನಲ್ಲಿದ್ದ ಹೆಚ್ಚಿನ ಸಂಖ್ಯೆಯ ಇಟಾಲಿಯನ್ನರ ಹರ್ಷೋದ್ಗಾರಗಳ ಬೆಂಬಲದೊಡನೆ ಚೇತರಿಸಿಕೊಂಡರು. ಆಕ್ರಮಣಕಾರಿಯಾಗಿ ಆಡಿದ ಅವರು ಪದೇ ಪದೇ ನೆಟ್ ಬಳಿಯೂ ಧಾವಿಸಿ ವೆಕಿಚ್ ಅವರನ್ನು ಒತ್ತಡಕ್ಕೆ ಸಿಲುಕಿಸಿದರು. ಇದು ಫಲನೀಡಿ ಪಾವೊಲಿನಿ ಎರಡನೇ ಸೆಟ್ ಪಡೆದರು.

ನಿರ್ಣಾಯಕ ಸೆಟ್‌ನಲ್ಲಿ ಹಲವು ಬ್ರೇಕ್‌ಗಳಾದವು. ಅದರಲ್ಲೂ ವೆಕಿಚ್ ಪಂದ್ಯ ಬೆಳೆದಂತೆ ಬಳಲಿದ ಹಾಗೆ ಕಂಡರು. ಒಂದು ಗೇಮ್ ಅಂತೂ ಹತ್ತು ನಿಮಿಷಗಳನ್ನು ದೀರ್ಘವಾಯಿತು.

ಗೆಲುವಿನ ಸಂಭ್ರಮದಲ್ಲಿ ಜಾಸ್ಮಿನ್ ಪಾವೊಲಿನಿ —ಎಎಫ್‌ಪಿ ಚಿತ್ರ

ಇನ್ನೊಂದೆಡೆ ಪಾವೊಲಿನಿ ಲವಲವಿಕೆಯಿಂದ ಆಡತೊಡಗಿ 2 ಗಂಟೆ 51 ನಿಮಿಷಗಳ ದೀರ್ಘ ಪಂದ್ಯ ಗೆದ್ದುಕೊಂಡರು. ವಿಂಬಲ್ಡನ್‌ನಲ್ಲಿ ಈ ಹಿಂದಿನ ಅತಿ ದೀರ್ಘಾವಧಿಯ ಮಹಿಳಾ ಸಿಂಗಲ್ಸ್ ಪಂದ್ಯ ಸೆರೆನಾ ವಿಲಿಯಮ್ಸ್ ಮತ್ತು ಎಲೆನಾ ಡೆಮೆಂಟಿಯೇವಾ ಮಧ್ಯೆ 2009ರಲ್ಲಿ ನಡೆದಿತ್ತು. ಆ ಪಂದ್ಯ 2 ಗಂಟೆ 50 ನಿಮಿಷ ಸಾಗಿತ್ತು.

ರಿಬಾಕಿನಾಗೆ ಬಾರ್ಬೊರಾ ಆಘಾತ: 31ನೇ ಶ್ರೇಯಾಂಕದ ಬಾರ್ಬೊರಾ ಕ್ರೆಜಿಕೋವಾ ಮತ್ತೊಂದು ಸೆಮಿಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಎಲೆನಾ ರಿಬಾಕಿನಾ ಅವರಿಗೆ ಆಘಾತ ನೀಡಿ, ಪ್ರಶಸ್ತಿ ಸುತ್ತಿಗೆ ಮುನ್ನಡೆದರು. ಶನಿವಾರ ನಡೆಯುವ ಫೈನಲ್‌ನಲ್ಲಿ ಜಾಸ್ಮಿನ್ ಅವರನ್ನು ಎದುರಿಸಲಿದ್ದಾರೆ.

ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಝೆಕ್ ರಿಪಬ್ಲಿಕ್‌ನ ಬಾರ್ಬೊರಾ 3-6, 6-3, 6-4 ಸೆಟ್‌ಗಳಿಂದ ಕಜಕಸ್ತಾನದ ಆಟಗಾರ್ತಿಯನ್ನು ಸದೆಬಡಿದರು. 2022ರ ಚಾಂಪಿಯನ್ ರಿಬಾಕಿನಾ ಮೊದಲ ಸೆಟ್‌ನಲ್ಲಿ ಹಿಡಿತ ಸಾಧಿಸಿದ್ದರು. ಆದರೆ, ನಂತರದ ಸೆಟ್‌ಗಳಲ್ಲಿ ಬಾರ್ಬೊರಾ ಮೇಲುಗೈ ಸಾಧಿಸಿದರು. ಇವರಿಬ್ಬರ ಹೋರಾಟ ಎರಡು ಗಂಟೆ ಏಳು ನಿಮಿಷಗಳ ಕಾಲ ನಡೆಯಿತು.

28 ವರ್ಷದ ಬಾರ್ಬೊರಾ ಅವರಿಗೆ ಸಿಂಗಲ್ಸ್‌ನಲ್ಲಿ ಇದು ಎರಡನೇ ಗ್ರ್ಯಾನ್‌ಸ್ಲಾಮ್ ಫೈನಲ್ ಆಗಿದೆ. 2021ರಲ್ಲಿ ಅವರು ಫ್ರೆಂಚ್ ಓಪನ್ ಕಿರೀಟ ಮುಡಿಗೇರಿಸಿಕೊಂಡಿದ್ದರು.

ಇಂದು ಅಲ್ಕರಾಜ್, ಜೊಕೊವಿಚ್‌ಗೆ ಸವಾಲು

ಲಂಡನ್: ವಿಂಬಲ್ಡನ್ ಪುರುಷರ ಸಿಂಗಲ್ಸ್ ಫೈನಲ್ ತಲುಪಲು ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಮತ್ತು ಏಳು ಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಪೈಪೋಟಿಯಲ್ಲಿದ್ದಾರೆ.

ಆದರೆ ಸ್ಪೇನ್‌ನ ಅಲ್ಕರಾಜ್ ಇದಕ್ಕಾಗಿ ಸೆಮಿಫೈನಲ್‌ನಲ್ಲಿ ಐದನೇ ಶ್ರೇಯಾಂಕದ ಡೇನಿಯಲ್ ಮೆಡ್ವೆಡೇವ್ ಅವರ ಸವಾಲನ್ನು ಎದುರಿಸಬೇಕಾಗಿದೆ. ಕಳೆದ ವರ್ಷವೂ ಇವರಿಬ್ಬರು ಸೆಮಿಫೈನಲ್ ಎದುರಾಳಿಗಳಾಗಿದ್ದರು. ಆಗ ಅಲ್ಕರಾಜ್ ಸುಲಭ ಜಯ ಗಳಿಸಿದ್ದರು.

ಇನ್ನೊಂದು ಸೆಮಿಫೈನಲ್‌ನಲ್ಲಿ ಸರ್ಬಿಯಾದ ಜೊಕೊವಿಚ್ ಅವರ ಎದುರಾಳಿ ಇಟಲಿಯ ಲೊರೆಂಜೊ ಮುಸೆಟ್ಟಿ. 22 ವರ್ಷ ವಯಸ್ಸಿನ ಮುಸೆಟ್ಟಿ ಅವರಿಗೆ ಇದು ಮೊದಲ ಗ್ರ್ಯಾನ್‌ಸ್ಲಾಮ್ ಸೆಮಿಫೈನಲ್ ಆಗಿದೆ.

ಫೈನಲ್‌ಗೆ ಇಂಗ್ಲೆಂಡ್ ಲಗ್ಗೆ

ಕೊನೆ ಗಳಿಗೆಯ ಗೋಲು: ನೆದರ್ಲೆಂಡ್ಸ್ ತಂಡಕ್ಕೆ ಸೋಲು

ಡೋರ್ಟ್‌ಮುಂಡ್ (ಎಪಿ): 'ಇಂಜುರಿ ಟೈಮ್'ನಲ್ಲಿ ಸಬ್‌ಸ್ಟಿಟ್ಯೂಟ್ ಆಟಗಾರ ಓಲಿ ವಾಟ್ಕಿನ್ಸ್ ಗಳಿಸಿದ ಗೋಲಿನ ನೆರವಿನಿಂದ ಇಂಗ್ಲೆಂಡ್ ತಂಡ 2–1 ಗೋಲುಗಳಿಂದ ನೆದರ್ಲೆಂಡ್ಸ್ ತಂಡವನ್ನು ಸೋಲಿಸಿ ಯುರೋಪಿಯನ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ (ಯುರೊ 2024) ಸತತ ಎರಡನೇ ಬಾರಿ ಫೈನಲ್ ತಲುಪಿತು.

ಗರೆತ್ ಸೌತ್‌ಗೇಟ್ ತರಬೇತಿಯ ಇಂಗ್ಲೆಂಡ್ ತಂಡ ಬರ್ಲಿನ್‌ನಲ್ಲಿ ಭಾನುವಾರ ನಡೆಯುವ ಫೈನಲ್ ಪಂದ್ಯದಲ್ಲಿ ಸ್ಪೇನ್ ತಂಡವನ್ನು ಎದುರಿಸಲಿದೆ.

ಪಂದ್ಯ 1–1 ಡ್ರಾ ಆಗಿ ಹೆಚ್ಚುವರಿ ಅವಧಿಯತ್ತ ಸಾಗುವಂತೆ ಕಂಡಾಗಲೇ, 80ನೇ ನಿಮಿಷ ಆಟಕ್ಕಿಳಿದಿದ್ದ ವಾಟ್ಕಿನ್ಸ್, ಇನ್ನೊಬ್ಬ ಸಬ್‌ಸ್ಟಿಟ್ಯೂಟ್ ಕೋಲ್ ಪಾಮರ್ ಅವರಿಂದ ಪಡೆದ ಉತ್ತಮ ಪಾಸ್‌ನಲ್ಲಿ ಚೆಂಡನ್ನು ಸಮೀಪದಿಂದ ಬಲವಾಗಿ ಒದ್ದು ಗೋಲಿನ ಮೂಲೆಗೆ ಸೇರಿಸಿದರು.

ನಾಯಕ ಹ್ಯಾರಿ ಕೇನ್ ಬದಲು ವಾಟ್ಕಿನ್ಸ್ ಕಣಕ್ಕಿಳಿದಿದ್ದರು. ಅವರು ಈ ಕೂಟದಲ್ಲಿ ಎರಡನೇ ಬಾರಿ ಸಬ್‌ಸ್ಟಿಟ್ಯೂಟ್ ಆಗಿ ಆಡುವ ಅವಕಾಶ ಪಡೆದರು.

21 ವರ್ಷದ ಕ್ಸೇವಿ ಸೈಮನ್ಸ್ ಏಳನೇ ನಿಮಿಷ ನೆದರ್ಲೆಂಡ್ಸ್ ತಂಡಕ್ಕೆ ಮುನ್ನಡೆ ಒದಗಿಸಿದರು. ಅವರು 40 ಗಜ ದೂರದಿಂದ ಗೋಲು ಹೊಡೆದು ಗಮನ ಸೆಳೆದರು. ಆದರೆ 18ನೇ ನಿಮಿಷ ಇಂಗ್ಲೆಂಡ್ ಸಮ ಮಾಡಿಕೊಂಡಿತು. ಹ್ಯಾರಿ ಕೇನ್ 'ಪೆನಾಲ್ಟಿ' ಮೂಲಕ ಗೋಲು ಗಳಿಸಿದರು.

ವಿರಾಮದ ನಂತರ ಡಚ್ ಆಟಗಾರರು ಮೇಲುಗೈ ಸಾಧಿಸಿದರೂ, ಒಂದೂ ಅವಕಾಶ ಗೋಲಾಗಿ ಪರಿವರ್ತನೆ ಆಗಲಿಲ್ಲ.

ಇಂಗ್ಲೆಂಡ್ ಅಭಿಮಾನಿಗಳು ಈಗ ದೀರ್ಘ ಕಾಲದ ನಂತರ ಮೊದಲ ಪ್ರಮುಖ ಫುಟ್‌ಬಾಲ್ ಟ್ರೋಫಿಗಾಗಿ ತುದಿಗಾಲಲ್ಲಿ ಕಾಯುತ್ತಿದ್ದಾರೆ. 'ಇತಿಹಾಸ ನಿರ್ಮಾಣಕ್ಕೆ ಇನ್ನೊಂದೇ ಪಂದ್ಯ ಉಳಿದಿದೆ' ಎಂದು ನಾಯಕ ಕೇನ್ ಪ್ರತಿಕ್ರಿಯಿಸಿದ್ದಾರೆ.

1966ರಲ್ಲಿ ವಿಶ್ವಕಪ್ ಗೆದ್ದ ನಂತರ ಇಂಗ್ಲೆಂಡ್ ಯಾವುದೇ ಪ್ರಮುಖ ಪ್ರಶಸ್ತಿ ಗೆದ್ದಿಲ್ಲ. ಇಂಗ್ಲೆಂಡ್ ಒಮ್ಮೆಯೂ ಯುರೊ ಕಪ್ ಗೆದ್ದಿಲ್ಲ. ಕಳೆದ ಬಾರಿ (2021) ವೆಂಬ್ಲಿ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ಇಟಲಿಗೆ ಮಣಿದಿತ್ತು.

ಕೊನೆಗಳಿಗೆಯ ಗೋಲು ಗಳಿಸಿದ ವಾಟ್ಕಿನ್ಸ್ ಸಂಭ್ರಮ... ಎಪಿ/ಪಿಟಿಐ ಚಿತ್ರ

UEFA ಯುರೋ ಕಪ್ 2024 ಜರ್ಮನಿ

ನಾಲ್ಕನೇ ಒಲಿಂಪಿಕ್ಸ್ ಆಡಲಿರುವ ಹಾಕಿ ಆಟಗಾರ ಮನ್‌ಪ್ರೀತ್ ಸಿಂಗ್

'ನನ್ನ ಗಮನ ಒಲಿಂಪಿಕ್ಸ್ ಕಡೆಗಷ್ಟೇ'

ಬೆಂಗಳೂರು: ಭಾರತ ಹಾಕಿ ತಂಡದ ಮಾಜಿ ನಾಯಕ ಮನ್‌ಪ್ರೀತ್ ಸಿಂಗ್ ಅವರಿಗೆ ಸದ್ಯಕ್ಕೆ ನಿವೃತ್ತಿ ಯೋಚನೆ ಇಲ್ಲ. ಆದರೆ ಈ ತಿಂಗಳ ಕೊನೆಯಲ್ಲಿ ಪ್ಯಾರಿಸ್‌ನಲ್ಲಿ ಆರಂಭವಾಗುವ ಒಲಿಂಪಿಕ್ಸ್ ಅವರ ಪಾಲಿಗೆ ನಾಲ್ಕನೇಯದ್ದು. ಬಹುಶಃ ಕೊನೆಯದು ಎಂಬುದು ಅವರ ಮಾತಿನಲ್ಲಿ ವ್ಯಕ್ತವಾಗಿದೆ.

32 ವರ್ಷದ ಮನ್‌ಪ್ರೀತ್, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ತಂಡದ ನಾಯಕರಾಗಿದ್ದರು. ಆ ತಂಡ ಕಂಚಿನ ಪದಕವನ್ನು ಗೆಲ್ಲುವ ಮೂಲಕ ಒಲಿಂಪಿಕ್ಸ್ ಹಾಕಿಯಲ್ಲಿ 41 ವರ್ಷಗಳ ಪದಕದ ಬರ ನೀಗಿಸಿತ್ತು.

ಇದರ ಜೊತೆಗೆ ಮನ್‌ಪ್ರೀತ್ 2014 ಮತ್ತು 2022ರಲ್ಲಿ ಏಷ್ಯನ್ ಗೇಮ್ಸ್ ಚಿನ್ನ ಗೆದ್ದ ತಂಡದಲ್ಲಿ ಆಡಿದ್ದರು.

'ನಾಲ್ಕು ಒಲಿಂಪಿಕ್ಸ್‌ಗಳಲ್ಲಿ ಆಡುತ್ತೇನೆಂದು ನಾನೆಂದೂ ಭಾವಿಸಿರಲಿಲ್ಲ. ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿ ಪದಕ ಗೆಲ್ಲುವುದು ಪ್ರತಿಯೊಬ್ಬ ಕ್ರೀಡಾಪಟುಗಳ ಕನಸು. ನನ್ನನ್ನು ನಾನು ಅದೃಷ್ಟಶಾಲಿಯೆಂದು ಎಂದು ಪರಿಗಣಿಸುತ್ತೇನೆ' ಎಂದು ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

'ಇದು ನನ್ನ ಕೊನೆಯ ಒಲಿಂಪಿಕ್ಸ್ ಎಂದು ಯೋಚಿಸಿ ಪ್ಯಾರಿಸ್‌ಗೆ ಹೋಗುತ್ತಿದ್ದೇನೆ. ನಿವೃತ್ತಿ ಬಗ್ಗೆ ಯೋಚಿಸಿಲ್ಲ. ಸದ್ಯಕ್ಕೆ ನನ್ನೆಲ್ಲಾ ಗಮನ ಪ್ಯಾರಿಸ್ ಗೇಮ್ಸ್ ಮೇಲೆ ಕೇಂದ್ರಿತವಾಗಿದೆ' ಎಂದು ಅನುಭವಿ ಮಿಡ್‌ಫೀಲ್ಡರ್ ಹೇಳಿದರು.

2011ರಲ್ಲಿ ಮನ್‌ಪ್ರೀತ್ ತಮ್ಮ 19ನೇ ವಯಸ್ಸಿನಲ್ಲಿ ಭಾರತ ಸೀನಿಯರ್ ತಂಡಕ್ಕೆ ಪದಾರ್ಪಣೆ ಮಾಡಿದ್ದರು.

ಆದರೆ ಜಾಲಂಧರ್‌ನ ಮಿತಾಪುರ ಗ್ರಾಮದ ಮನ್‌ಪ್ರೀತ್ ಪಯಣ ಸುಖದಾಯಕವಾಗಿರಲಿಲ್ಲ. ಒಂದೆಡೆ ತೀವ್ರ ಬಡತನ. ಇನ್ನೊಂದೆಡೆ ಮಿಥ್ಯಾರೋಪಗಳು. ಟೋಕಿಯೊ ಒಲಿಂಪಿಕ್ಸ್ ನಂತರ ಭಾರತ ತಂಡದ ಮಾಜಿ ಕೋಚ್ ಸ್ಯೊರ್ಡ್ ಮರೈನ್ ಅವರು ಮನ್‌ಪ್ರೀತ್ ವಿರುದ್ಧ ಗಂಭೀರ ಆರೋಪ ಮಾಡಿದ್ದರು.

'2018ರ ಕಾಮನ್ವೆಲ್ತ್ ಗೇಮ್ಸ್ ವೇಳೆ ಮನ್‌ಪ್ರೀತ್ ಅವರು ಆಟಗಾರನೊಬ್ಬ ನಿಗೆ ಕಳಪೆಯಾಗಿ ಆಡುವಂತೆ ಹೇಳಿದ್ದರು. ತನ್ಮೂಲಕ ತಮ್ಮ ಸ್ನೇಹಿತರೊಬ್ಬನನ್ನು ತಂಡಕ್ಕೆ ಸೇರ್ಪಡೆಗೊಳಿಸುವ ಉದ್ದೇಶವನ್ನು ಅವರು ಹೊಂದಿದ್ದರು' ಎಂಬುದು ಮರೈನ್ ಆರೋಪವಾಗಿತ್ತು.

ಆದರೆ ಪುರುಷರ ಮತ್ತು ಮಹಿಳಾ ತಂಡಗಳು ಈ ಆರೋಪವನ್ನು ಜಂಟಿಯಾಗಿ ನಿರಾಕರಿಸಿದ್ದವು. ತಮ್ಮ ಕೃತಿಗೆ ಪ್ರಚಾರ ನೀಡುವ ತಂತ್ರ ಡಚ್ ಕೋಚ್ ಅವರದ್ದು ಎಂದು ಟೀಕಿಸಿದ್ದರು.

ಮನ್‌ಪ್ರೀತ್ ಅವರಿಗೆ ಮಾಜಿ ನಾಯಕ ಪರ್ಗತ್ ಸಿಂಗ್ ಆದರ್ಶಪ್ರಾಯ ಆಟಗಾರ. ಪರ್ಗತ್ ಕೂಡ ಮಿತಾಪುರದವರು.

ಹಾಲಿ ನಾಯಕ ಹರ್ಮನ್‌ಪ್ರೀತ್ ಸಿಂಗ್ ಜೊತೆ ಮನ್‌ಪ್ರೀತ್ ಸಿಂಗ್ —ಪಿಟಿಐ ಚಿತ್ರ

PARIS 2024

ಅಮೆರಿಕ, ಆಸ್ಟ್ರೇಲಿಯಾ ಹೆಚ್ಚಿದ ನಾರೀಶಕ್ತಿ

ಡೆನ್ವರ್ (ಎಪಿ): ಒಲಿಂಪಿಕ್ಸ್‌ಗೆ ತೆರಳುತ್ತಿರುವ ಪ್ರಬಲ ಅಮೆರಿಕ ತಂಡದಲ್ಲಿ ಸತತ ನಾಲ್ಕನೇ ಬಾರಿಯೂ ಮಹಿಳಾ ಕ್ರೀಡಾಪಟುಗಳ ಸಂಖ್ಯೆಯೇ ಹೆಚ್ಚು ಇದೆ.

ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್ ಸಮಿತಿ ಬುಧವಾರ ಪ್ಯಾರಿಸ್ ಕೂಟಕ್ಕೆ ಪ್ರಕಟಿಸಿದ 592 ಮಂದಿಯ ತಂಡದಲ್ಲಿ314 ಮಂದಿ ಮಹಿಳಾ ಸ್ಪರ್ಧಿಗಳಿದ್ದಾರೆ. 278 ಮಂದಿ ಪುರುಷರು.

ಅಮೆರಿಕ ಪಾಳೆಯದಲ್ಲಿ 66 ಒಲಿಂಪಿಕ್ ಚಾಂಪಿಯನ್ನರಿದ್ದಾರೆ. ಇವರೆಲ್ಲ ಒಟ್ಟು 110 ಚಿನ್ನದ ಪದಕಗಳ ಬೇಟೆಯಾಡಿದ್ದಾರೆ. ಮೂರರಿಂದ ಐದು ಒಲಿಂಪಿಕ್ಸ್‌ಗಳಲ್ಲಿ ಪಾಲ್ಗೊಂಡಿದ್ದಾರೆ.

ಈ ಬಾರಿಯೂ ಪದಕ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಅಮೆರಿಕವೇ ಫೆವರೀಟ್ ಆಗಿದೆ.

ಅತ್ಯಧಿಕ: ಒಲಿಂಪಿಕ್ಸ್‌ಗೆ ತೆರಳಿರುವ ಆಸ್ಟ್ರೇಲಿಯಾ ತಂಡದಲ್ಲಿ ಇದೇ ಮೊದಲ ಬಾರಿ ಮಹಿಳಾ ಸ್ಪರ್ಧಿಗಳ ಸಂಖ್ಯೆ ಹೆಚ್ಚು ಇದೆ. 460 ಕ್ರೀಡಾಪಟುಗಳಲ್ಲಿ 256 ಮಂದಿ (ಶೇ 56.6) ಮಹಿಳೆಯರಿದ್ದಾರೆ. ತಂಡದಲ್ಲಿರುವ ಕ್ರೀಡಾಪಟುಗಳ ಪೈಕಿ 231 ಮಂದಿಗೆ ಇದು ಮೊದಲ ಒಲಿಂಪಿಕ್ಸ್ ಆಗಿದೆ.

ಅದಿತಿಗೆ ಒಲಿಂಪಿಕ್ಸ್ ಪದಕ: ಕಪಿಲ್ ವಿಶ್ವಾಸ

ನವದೆಹಲಿ (ಪಿಟಿಐ): ಭಾರತದ ಗಾಲ್ಫ್ ಕ್ರೀಡಾಪಟು ಅದಿತಿ ಅಶೋಕ್ ಅವರು ಈಗ ತಮ್ಮ ವೃತ್ತಿಜೀವನದ ಎರಡನೇ ಒಲಿಂಪಿಕ್ಸ್‌ನಲ್ಲಿ ಕಣಕ್ಕಿಳಿಯುವ ಸಿದ್ಧತೆಯಲ್ಲಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕೂದಲೆಳೆಯ ಅಂತರದಲ್ಲಿ ಅವರಿಗೆ ಪದಕ ಕೈತಪ್ಪಿತ್ತು. ನಾಲ್ಕನೇ ಸ್ಥಾನ ಪಡೆದಿದ್ದರು. ಅದರಿಂದಾಗಿ ಈ ಬಾರಿ ಅವರ ಮೇಲೆ ನಿರೀಕ್ಷೆಯ ಭಾರ ಹೆಚ್ಚಿದೆ.

ಪ್ರೊಫೆಷನಲ್ ಗಾಲ್ಫ್ ಟೂರ್ ಆಫ್ ಇಂಡಿಯಾ (ಪಿಜಿಟಿಐ) ಅಧ್ಯಕ್ಷ, ಕ್ರಿಕೆಟ್ ದಂತಕಥೆ ಕಪಿಲ್ ದೇವ್ ಅವರೂ, 'ಅದಿತಿಯವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ತೋರಿದ್ದ ದಿಟ್ಟತನದ ಆಟವನ್ನು ಪ್ಯಾರಿಸ್‌ನಲ್ಲಿಯೂ ಮತ್ತೊಮ್ಮೆ ತೋರುವ ವಿಶ್ವಾಸ ನನಗಿದೆ. ಕ್ರಿಕೆಟರ್ಸ್ ಮತ್ತು ಗಾಲ್ಫರ್‌ಗಳಿಗೆ ಫಾರ್ಮ್ ಬಹಳ ಮುಖ್ಯ. ಅದಿತಿ ನೈಜ ಲಯದಲ್ಲಿ ಆಡಿದರೆ ಪದಕ ಜಯ ನಿಶ್ಚಿತ' ಎಂದಿದ್ದಾರೆ.

ಏಕದಿನ ಕ್ರಿಕೆಟ್ ವಿಶ್ವಕಪ್ ವಿಜೇತ ಭಾರತ ತಂಡದ ನಾಯಕರಾಗಿದ್ದ ಕಪಿಲ್ ಈಚೆಗಷ್ಟೇ ಪಿಜಿಟಿಐ ಅಧ್ಯಕ್ಷರಾಗಿ ನೇಮಕವಾಗಿದ್ದರು.

ಸೋಲಿನ ಸುಳಿಯಲ್ಲಿ ವೆಸ್ಟ್ಇಂಡೀಸ್

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ತಂಡವು ಲಾರ್ಡ್ಸ್‌ನಲ್ಲಿ ನಡೆಯುತ್ತಿರುವ ವೆಸ್ಟ್ ಇಂಡೀಸ್ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಗೆಲುವಿನ ಹೊಸ್ತಿಲಲ್ಲಿದೆ. ಇದು ಇಂಗ್ಲೆಂಡ್‌ನ ವೇಗಿ ಜೇಮ್ಸ್ ಆಂಡರ್ಸನ್ ಅವರಿಗೆ ವಿದಾಯದ ಪಂದ್ಯವಾಗಿದೆ.

ಮೊದಲ ಇನಿಂಗ್ಸ್‌ನಲ್ಲಿ 121 ರನ್‌ಗೆ ಕುಸಿದಿದ್ದ ವಿಂಡೀಸ್, ಗುರುವಾರ ಎರಡನೇ ದಿನದಾಟದ ಅಂತ್ಯಕ್ಕೆ ಎರಡನೇ ಇನಿಂಗ್ಸ್‌ನಲ್ಲಿ 79 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡು ಸೋಲಿನ ಸುಳಿಯಲ್ಲಿದೆ. ಇಂಗ್ಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 371 ಕಲೆ ಹಾಕಿದೆ. ಪ್ರವಾಸಿ ತಂಡವು ಇನಿಂಗ್ಸ್ ಸೋಲು ತಪ್ಪಿಸಲು ಇನ್ನೂ 171 ರನ್ ಗಳಿಸಬೇಕಿದೆ.

ಬ್ಯಾಡ್ಮಿಂಟನ್ ತಂಡಕ್ಕೆ ಪ್ರಕಾಶ್ ಪಡುಕೋಣೆ ಮೆಂಟರ್

ನವದೆಹಲಿ (ಪಿಟಿಐ): ದಿಗ್ಗಜ ಆಟಗಾರ ಪ್ರಕಾಶ್ ಪಡುಕೋಣೆ ಅವರು ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ 15 ಸದಸ್ಯರ ಭಾರತ ಬ್ಯಾಡ್ಮಿಂಟನ್ ತಂಡಕ್ಕೆ ಮೆಂಟರ್ ಆಗಿ ಪ್ಯಾರಿಸ್‌ಗೆ ಪಯಣಿಸಲಿದ್ದಾರೆ.

ಒಲಿಂಪಿಕ್ಸ್ ಜುಲೈ 26ಕ್ಕೆ ಆರಂಭವಾಗಲಿದೆ. ಆಲ್ ಇಂಗ್ಲೆಂಡ್ ಚಾಂಪಿಯನ್ ಆದ ದೇಶದ ಮೊದಲ ಆಟಗಾರ ಎನಿಸಿರುವ ಪಡುಕೋಣೆ 1991ರಲ್ಲಿ ನಿವೃತ್ತರಾಗಿದ್ದರು. 1992ರ ಬಾರ್ಸಿಲೋನಾ ಒಲಿಂಪಿಕ್ಸ್‌ನಲ್ಲಿ ಬ್ಯಾಡ್ಮಿಂಟನ್ ಸೇರ್ಪಡೆಗೊಂಡಿತ್ತು. ತಂಡದಲ್ಲಿ ಏಳು ಆಟಗಾರರಿದ್ದು, ಎಂಟು ಮಂದಿ ನೆರವು ಸಿಬ್ಬಂದಿ ಇದ್ದಾರೆ ಎಂದು ಮೂಲವೊಂದು ಪಿಟಿಐಗೆ ತಿಳಿಸಿದೆ.

ತಂಡದಲ್ಲಿರುವ ಪಿ.ವಿ. ಸಿಂಧು ಅವರಿಗೆ ಇದು ಮೂರನೇ ಒಲಿಂಪಿಕ್ಸ್.

ಶ್ರೀಲಂಕಾ–ಭಾರತ ಸರಣಿ 26ರಿಂದ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡವು ಇದೇ ತಿಂಗಳು ಪ್ರವಾಸಕ್ಕೆ ತೆರಳಲಿದೆ. ಶ್ರೀಲಂಕಾ ಎದುರು ಮೂರು ಟಿ20 ಹಾಗೂ ಏಕದಿನ ಪಂದ್ಯಗಳನ್ನು ಆಡಲಿದೆ.

ಪಲೆಕೆಲೆ ಮತ್ತು ಕೊಲಂಬೊದಲ್ಲಿ ಪಂದ್ಯಗಳು ಆಯೋಜನೆಗೊಂಡಿವೆ. ಪಲೆಕೆಲೆಯಲ್ಲಿ ಟಿ20 ಪಂದ್ಯಗಳು (ಜುಲೈ 26, 27 ಮತ್ತು 29) ಹಾಗೂ ಕೊಲಂಬೊದ ಆರ್. ಪ್ರೇಮದಾಸ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಏಕದಿನ ಪಂದ್ಯಗಳು (ಆಗಸ್ಟ್ 1, 4, 7) ನಡೆಯಲಿವೆ.

ಗೌತಮ್ ಗಂಭೀರ್

ನೂತನ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಕಾರ್ಯನಿರ್ವಹಿಸಲಿರುವ ಮೊದಲ ಸರಣಿ ಇದಾಗಲಿದೆ. ಲಂಕಾ ತಂಡಕ್ಕೂ ಹೊಸ ಕೋಚ್ ನೇಮಕವಾಗಿದ್ದು, ಸನತ್ ಜಯಸೂರ್ಯ ಕಾರ್ಯಾರಂಭ ಮಾಡಲಿದ್ದಾರೆ.

ಟಿ20 ತಂಡದ ನಾಯಕತ್ವ ತ್ಯಜಿಸಿದ ಹಸರಂಗ: ಭಾರತ ತಂಡದ ವಿರುದ್ಧ ಸದ್ಯದಲ್ಲೇ ಮೂರು ಪಂದ್ಯಗಳ ಟಿ20 ಸರಣಿ ಇರುವಂತೆಯೇ, ವನಿಂದು ಹಸರಂಗ ಅವರು ಶ್ರೀಲಂಕಾ ಚುಟುಕು ಕ್ರಿಕೆಟ್ ತಂಡದ ನಾಯಕತ್ವವನ್ನು ಗುರುವಾರ ತ್ಯಜಿಸಿದ್ದಾರೆ ಶ್ರೀಲಂಕಾ ಕ್ರಿಕೆಟ್ ಮಂಡಳಿ ತಿಳಿಸಿದೆ.

ಕೊಪಾ: ಫೈನಲ್‌ಗೆ ಕೊಲಂಬಿಯಾ

ಶಾರ್ಲೊಟ್, ಅಮೆರಿಕ (ಎಪಿ): ಜೆಫರ್ಸನ್ ಲೆರ್ಮಾ ಹೊಡೆದ ಏಕೈಕ ಗೋಲಿನ ಬಲದಿಂದ ಕೊಲಂಬಿಯಾ ತಂಡವು ಕೊಪಾ ಅಮೆರಿಕ ಫುಟ್ ಬಾಲ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಜಯಿಸಿತು.

ಇದರೊಂದಿಗೆ ಫೈನಲ್‌ನಲ್ಲಿ ಲಯೋನೆಲ್ ಮೆಸ್ಸಿಯ ಅರ್ಜೆಂಟೀನಾ ತಂಡವನ್ನು ಎದುರಿಸಲು ಸಿದ್ಧವಾಯಿತು. ಫ್ಲಾರಿಡಾದ ಮಿಯಾಮಿ ಗಾರ್ಡನ್‌ನಲ್ಲಿ ಭಾನುವಾರ ರಾತ್ರಿ ಫೈನಲ್ ನಡೆಯಲಿದೆ.

ಗುರುವಾರ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಕೊಲಂಬಿಯಾ ತಂಡವು 1–0 ಗೋಲಿನಿಂದ ಉರುಗ್ವೆ ಎದುರು ಗೆದ್ದಿತು.

ಕೊಲಂಬಿಯಾ ತಂಡದ ಜೆಫರ್ಸನ್ 39ನೇ ನಿಮಿಷದಲ್ಲಿ ಗೋಲು ಹೊಡೆಯುವ ಮೂಲಕ ಗೆಲುವಿನ ಕಾಣಿಕೆ ನೀಡಿದರು. 23 ವರ್ಷಗಳ ಹಿಂದೆ ಕೊಲಂಬಿಯಾ ತಂಡವು ಪ್ರಶಸ್ತಿ ಗೆದ್ದಿತ್ತು. ಅದಾದ ನಂತರ ಕೊಪಾ ಅಮೆರಿಕ ಟೂರ್ನಿಯ ಫೈನಲ್‌ಗೆ ಮತ್ತೊಮ್ಮೆ ಲಗ್ಗೆ ಹಾಕಿದೆ.

ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡವು 16ನೇ ಫೈನಲ್ ಮೇಲೆ ಕಣ್ಣಿಟ್ಟಿದೆ.

ಕೊಲಂಬಿಯಾ ತಂಡದ ಜೆಫರ್ಸನ್ ಲೆರ್ಮಾ ಸಂಭ್ರಮ —ಎಎಫ್‌ಪಿ ಚಿತ್ರ